
ಪ್ರೊ. ಹಿ. ಶಿ. ರಾಮಚಂದ್ರೇಗೌಡ

# ಪುರದ ಪುಣ್ಯ

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು ೫೬೦ ೦೦೨.

ದೂರವಾಣಿ : ೨೨೨೧೫೫೦೯

PURADA PUNYA : A collection of Folk Articles by Prof. Hi. Shi. Ramachandre Gowda, Chairman, Karnataka Janapada mathu Yakshagana Academy. Kannada Bhavana, J. C. Road, Bangalore 560 002. Published by: M. Muniraju, Registrar, Karnataka Janapada mathu Yakshagana Academy, Ban- galore - 560 002.

First Edition : 2004

Pages : XIII + 219

Copies : 1,000

ಮುಖಪುಟ ಚಿತ್ರ : ಗೋಪಾಲಗೌಡ

ಪ್ರಕಾಶಕರು ಎಂ. ಮುನಿರಾಜು

ರಿಜಿಸ್ಟ್ರಾರ್, ಕರ್ನಾಟಕ ಜಾನಪದ

ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ

ಬೆಂಗಳೂರು-೫೬೦ ೦೦೨.

೨೨೨೧೫೫೦೯

ಬೆಲೆ ರೂ. :೧೦೦-೦೦

ಮುದ್ರಕರು ನಿಯೋ ಸಿಸ್ಟಮ್ಸ್

ನಂ. ೯೫೩/ಎ, ೨ನೇ ಮುಖ್ಯರಸ್ತೆ

೪ನೇ ವಿಭಾಗ, ರಾಜಾಜಿನಗರ ಎಂಟ್ರನ್ಸ್

ಬೆಂಗಳೂರು - ೫೬೦ ೦೧೦.

ದೂರವಾಣಿ : ೩೦೬೧೨೦೨೮

| | ನಮ್ಮ ಹಣತೆ | ಪುಟ |
|---|---|---|
| ೧. | ಸಂಸ್ಕೃತಿ ಸೋರುತಿದೆ | ೧ |
| 9. | ನಮ್ಮ ಹಣತೆಗಳೇಕೆ ಉರಿಯುತ್ತಿಲ್ಲ | ೬ |
| ೩. | ತಾವಿನಿಂದ | ೪೪ |
| ೪. | ಪುರದ ಪುಣ್ಯ | ೫೭ |
| ೫. | ಬಹು ಸಂಸ್ಕೃತಿಯ ಚಿಂತನ ನೆಲೆಗಳು | ೭೬ |
| ೬. | ಅಲೆಮಾರಿಗಳು ಇರವು ಮತ್ತು ಅರಿವು | ೮೪ |
| ೭. | ಜನಪದ ನಾಯಕತ್ವ | ೧೦೧ |
| ೮. | ಜನರಿಗಾಗಿ ಪಾನೀಯ | ೧೧೬ |
| ೯. | ಆಧುನಿಕ ಸಂದರ್ಭದಲ್ಲಿ ಜನಪದ ದೇವತೆಗಳ ಅನಿವಾರ್ಯತೆ | ೧೨೫ |
| ೧೦. | ನಮ್ಮ ಮನೆಯೊಳಗೆ ಜ್ಞಾನದ ಸದ್ದು ಕೇಳುತ್ತಿದೆ | ೧೩೪ |
| ೧೧. | ಮಾನಸಿಕ ಸ್ವಾಸ್ಥ್ಯ ಮತ್ತು ಜನಪದ ಸಂಗೀತ | ೧೪೦ |
| ೧೨. | ನೋವು ಆದಾಗ 'ಅಮ್ಮಾ' | ೧೪೬ |
| ೧೩. | ಒಂದೆ ಚಿತ್ತದಿಂ ನೆನೆದು | ೧೫೩ |
| ೧೪. | ನಮ್ಮೂರು | ೧೫೯ |
| ೧೫. | ಜನಪದ ಕಾವ್ಯ ಮೀಮಾಂಸೆ | ೧೬೬ |
| ೧೬. | ಸಿನಿಮಾ ಮತ್ತು ಜಾನಪದ ಪರಿಕಲ್ಪನೆ ವಿಚಾರ ಸಂಕಿರಣ | ೧೭೩ |
| ೧೭. | ನಕಲಿ ಜನಪದ ಗೀತೆಗಳ ಕ್ಯಾಸೆಟ್ : ಸಂವಾದ | ೧೭೫ |
| ೧೮. | ಜಾನಪದ, ನಮ್ಮೊಳಗೇ ಇದೆ | ೧೮೦ |

೧೯. ಜಾನಪದವೆಂಬುದು ಮೆರವಣಿಗೆಯೆ ೧೮೨

III

೨೦. ಬಹುಮುಖ ಸಂಸ್ಕೃತಿ ಉತ್ಸವ 'ಏಕೆ ಹೇಗೆ? ೧೮೯

೨೧. ನಮ್ಮ ಮೂರು ವರ್ಷದ ಜಾನಪದ ನೀತಿ ೧೯೧

೨೨. ಜಾನಪದ : ಜ್ಞಾನ - ವಿಜ್ಞಾನ ಪ್ರಶಸ್ತಿಗಳ ಕುರಿತು ೧೯೬

೨೩. ನೀವೇನು ಹೇಳುವಿರಿ ೨೦೦

೨೪. ದೇವರೆ.......!!! ನಮಗೊಂದು ಒಳ್ಳೆಯ

ಮನಸ್ಸು ಕೊಡು ೨೦೫

೨೫. ಹಚ್ಚೆ : ಕಲೆ ಮತ್ತು ಉದ್ಯೋಗ ಕಮ್ಮಟ ೨೦೭

೨೬. ಆದಿ ದಿನೋತ್ಸವ ೨೧೧

೨೭. ಜಾನಪದ ಸೌಹಾರ್ದ : ಕಾರ್ಯಯೋಜನೆ ೨೧೩

IV

## ಇದ್ದವರು ಬದುಕುತ್ತಾರೆ

ನಿಲ್ಲಿಸಿ : ಕಳೆದು ಹೋಗಿದ್ದೇವೆ ಎಂಬ ಘೋಷಣೆಯನ್ನು.

ಜಾನಪದ ಪಳಯುಳಿಕೆ, ಜೀವಂತ ಪಳಯುಳಿಕೆ ಅಲ್ಲ.

ನಿಯಂತ್ರಿಸಿ : ಮೋಸಹೋದ ನಿಮ್ಮ ಮನಸ್ಸನ್ನು.

ನಾವು ಸಮಾಧಿಯ ಒಳಗಿಂದ ಮಾತನಾಡುತ್ತಿಲ್ಲ.

ನಿಧಾನಿಸಿ : ನಿಮ್ಮೊಳಗಿನ ಜ್ಞಾನಕ್ಕೆ ಧ್ವನಿ ಇದೆ.

ನಿವಾರಿಸಿ : ಜಾನಪದಕ್ಕೆ ಹೊದಿಸಿರುವ ಸೂತಕವನ್ನು.

ಇನ್ನೂ ಜಾನಪದವೆಂದರೆ ಜೀವಂತ ಪಳಯುಳಿಕೆ ಎಂದು

ಹೇಳಬೇಡಿ.

**ಜಾನಪದ ಸಮಜೀವನ, ಸಮರಸ ಜೀವನ, ಸರ್ವರಿಗೂ ಸಮಾನವಾದ ಸಾಮನ್ಯವೆಂಬ ಸಾರ್ವತ್ರಿಕ ಜೀವನ.**

ನಮ್ಮ ನಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿ ನಾವು ಬೀದಿಗೆ ಬಿದ್ದಿದ್ದೇವೆ. ನಮಗೆ ಆಕಾಶದಲ್ಲಿ ಹಾರಾಡುವ ವಿಮಾನ, ಗಗನಕ್ಕೆ ಹಾರಿಸಿದ ಉಪಗ್ರಹ, ಆಮದಾಗುವ ವಸ್ತುಗಳು ಫಾರಿನ್ ಎಂಬ ಶಕ್ತಿಗಳು ಕಾಣುತ್ತಿವೆ. ನಮ್ಮೊಳಗೆ ಉರಿಯುತ್ತಿರುವ ಹಣತೆ ಕಾಣುತ್ತಿಲ್ಲ. ನಮ್ಮ ಮುಖಗಳು ಬಹಿರ್ದೆಶೆಗೆ ಹೊರಟಿವೆ. ಬಾಯಿ ಅನ್ಯವನ್ನು ಮಾತಾಡುತ್ತಿದೆ. ಕಣ್ಣಿಗೆ ಕರ್ಣ, ಕರ್ಣದ ಕಣ್ಣು ದಾರಿಗೆ ಅಡ್ಡಲಾಗಿವೆ. ಮತ್ತೇನು 'ಪುರದ ಪುಣ್ಯಂ ಪುರುಷರೂಪಿಂದ ಪೋಗುತಿದೆ...' ಜನ ನಾಡ ಅಡವಿಯಲ್ಲಿ ನಾಚಿಕೆ ಬಿಟ್ಟಂತೆ ಅಲೆಯುತ್ತಿದ್ದಾರೆ.

ಒಳಕ್ಕೆ ಸರಿದರೆ; ಜಾತಿ ಎತ್ತಿ ಎದೆಗೆ ಒದೆಯುತ್ತಿದೆ. ಅಸ್ಪೃಶ್ಯತೆ ಸೃಜನಶೀಲತೆಯನ್ನು ಕೊಂದು ಕೂಗಿದೆ. ಎಲ್ಲರೆದೆಯಲ್ಲೂ ಅನುಮಾನ : ಈ ಪಕ್ಕದವನನ್ನು ನಂಬಬಹುದೆ ? ಅವರು ಇವರಲ್ಲಿ ನಮ್ಮವರು ಯಾರಿದ್ದಾರೆ ? ಬಿಡುಗಡೆಗೆ ಒಳದಾರಿಗಳೂ ಇಲ್ಲ. ಆಳದ ಪ್ರೀತಿಯೂ ಇಲ್ಲ. ಭೌತವಿಜ್ಞಾನ ನಮ್ಮನ್ನು ಹೊರಗಿನಿಂದ ಒಡೆದರೆ ಜಾತಿ ಜ್ಞಾನ ನಮ್ಮನ್ನು ಒಳಗಿನಿಂದ ಒಡೆದಿದೆ. ನಮ್ಮಲ್ಲಿ ಮನುಷ್ಯರು ಇಲ್ಲವಾಗುತ್ತಿದ್ದಾರೆ. ನಮ್ಮದೆಂಬ ಸಮಾಜ ಅಸ್ತಿತ್ವಕ್ಕೆ ಕೊಡುತ್ತಿಲ್ಲ.

ನಮ್ಮದೆಂಬ ಸಂಸ್ಕೃತಿ ನಮ್ಮನ್ನು ಕಾಡುತ್ತಿಲ್ಲ. ಅನ್ಯದ ಮಾತೇ ನಮ್ಮ ಮಾತು, ಅನ್ಯದ ಜ್ಞಾನವೆ ನಮ್ಮ ಜ್ಞಾನವಾಗಿ ನಮ್ಮ ಹಣತೆಗಳನ್ನು ಹತ್ತಿಸಿಕೊಳ್ಳಲಾಗಿಲ್ಲವಲ್ಲ ! ನಮ್ಮ ಪುಣ್ಯ ಏನೆಂದು ಹೇಳಿಕೊಳ್ಳೋಣ ? S

ಪಂಚಮರು ಶೂದ್ರರಿಗೆ, ಶೂದ್ರರು ಬ್ರಾಹ್ಮಣರಿಗೆ ಈ ಎಲ್ಲರೂ ಜಾಗತಿಕ ಪ್ರಭುಗಳಿಗೆ ತಮ್ಮ ಪುರ ಮತ್ತು ಪುಣ್ಯವನ್ನು ಕಳೆದುಕೊಂಡಿದ್ದಾರೆ. ವಶಿಷ್ಠ ಸಂಸ್ಕೃತಿಗೆ ಎದುರಾದ ಆ ವಿಶ್ವಾಮಿತ್ರ ಹಸುವಿಗೆ ಎದುರಾಗಿ ಎಮ್ಮೆಯನ್ನು ಸೃಷ್ಟಿಸಿದ ಎಂದು ನಮ್ಮ ಜನಪದರು ಒಂದು ಪುರಾಣ ಕಥೆ ಹೇಳುತ್ತಾರೆ. ನಾವು ಅಂಥ ಒಂದು ಕಥೆಯನ್ನಾದರೂ ಸೃಷ್ಟಿಸಿದ್ದೇವಾ ? ಹದಿನೆಂಟನೆಯ ಶತಮಾನದ 'ಆಧುನಿಕ'ವೆಂಬ ಪಾಶ್ಚಾತ್ಯ ಸೃಷ್ಟಿಸಿದ 'ಸಿದ್ಧ ಮತ್ತು ಕಚ್ಚ' 'ಉದ್ಯಮ ಮತ್ತು ಸಂಪನ್ಮೂಲ' 'ಉದ್ಯಮಪತಿ ಮತ್ತು ಶ್ರಮಿಕ', 'ಶಕ್ತಿ ಮತ್ತು ಜ್ಞಾನ', 'ಮಾರುಕಟ್ಟೆ ಮತ್ತು ಭೋಗ'.... ಎಂಬ ಆಳುವ ಮಹಾಮಾದರಿ ಚಿಂತನೆಗಳಿಗೆ ಒಂದಾದರೂ ನಮ್ಮ ಮಾದರಿಗಳನ್ನು ಎದುರು ನಿಲ್ಲಿಸಿದ್ದೇವಾ ? ಆ ಮಾದರಿಗಳನ್ನು ಆಮದು ಮಾಡಿಕೊಂಡಿದ್ದೇವೆ ಇಲ್ಲವೆ ನಕಲು ಮಾಡಿದ್ದೇವೆ.

ನಾವು ಸೃಜನಶೀಲರಾಗದ ಈ ಸಂಕಟಕ್ಕೆ 'ಪಾಪರ್ ಘೋಷಣೆ' ಮಾಡಿಕೊಂಡಂತೆ. ನಮ್ಮದೆಲ್ಲ ಪಳಿಯುಳಿಕೆ ಇಲ್ಲವೆ ಜೀವಂತ ಪಳಯುಳಿಕೆ, ಪ್ರಥಮ ಜಗತ್ತಿನ ಸೃಷ್ಟಿ ಜೀವಂತ ಎಂದು ಪಲಾಯನ ಮಾಡಿದ್ದೇವೆ. ಪ್ರಭು ಪ್ರಜೆಯನ್ನು, ಒಡೆಯ ಸೇವಕನನ್ನು, ಪ್ರಬಲ ದುರ್ಬಲನನ್ನು ಪಾಶ್ಚಾತ್ಯ ಪೌರಾತ್ಯನನ್ನು ಮತ್ತು ಅವನ ಉತ್ಪತ್ತಿಯನ್ನು ಹಳೆಯದು - ಅಜ್ಞಾನ ಎನ್ನದೆ ಅವನ ಸಂಪತ್ತು ಮತ್ತು ಶಕ್ತಿಯನ್ನು ವೃದ್ಧಿಸಿಕೊಳ್ಳಲು ಸಾಧ್ಯವೆ ? ಅಂದರೆ ನಮ್ಮ ಸೋಲನ್ನು ನಮ್ಮ ಅಜ್ಞಾನ ಎಂದು ಒಪ್ಪಿಕೊಂಡಿದ್ದೇವಲ್ಲ - ಈ ಹಣೆಬರಹಕ್ಕೆ ಏನೆನ್ನಬೇಕು ! ನಮ್ಮಲ್ಲಿ ಜಾತಿಯ ಹೆಸರಿನಲ್ಲಿ ಕೆಳಜಾತಿಯವನು, ಪಾಶ್ಚಾತ್ಯನಲ್ಲಿ ಜ್ಞಾನ ಮತ್ತು ಶಕ್ತಿಯ ಹೆಸರಿನಲ್ಲಿ ಇತರೆ ದೇಶಗಳ ಬದುಕು ಪಳಯುಳಿಕೆ ಎಂಬ ಬೌದ್ಧಿಕ ಫರ್ಮಾನನ್ನು ಹೂರಡಿಸಲಾಗಿದೆ. ಕೂಲಿಯವನಿಗೆ ಸಾರಾಯ ಅಮಲು ಹತ್ತಿಸಿ ಶ್ರೀಮಂತ ನೆಮ್ಮದಿಯಿಂದಿರುವಂತೆ ಜಾಗತಿಕ ಪ್ರಭು ಇತರ ದೇಶಗಳಿಗೆ ಭೌತ ವಸ್ತುಗಳ ಭ್ರಮೆ ಏರಿಸಿ ತಾನು ಲಾಭದಲ್ಲಿದ್ದಾನೆ. ಈ ಮಾತು ಹೇಳಿದ ತಕ್ಷಣ ಭೌತವಾದಿಗಳು ಈ ಮನುಷ್ಯ ಬಡವರ ಸುಖಸಾಧನಗಳನ್ನು ನಿರಾಕರಿಸುತ್ತಿದ್ದಾನೆ ಹಾಗೂ ಅಭೌತಿಕ ತತ್ವಗಳಲ್ಲಿ ಮುಳುಗಿಸುತ್ತಿದ್ದಾನೆ ಎಂದು ಆಕ್ರೋಶಗೊಳ್ಳಬಹುದು.

ಈ ಮೇಲಿನ ಪ್ರಶ್ನೆಗೆ ಉತ್ತರ ಕೊಡುವುದರೊಂದಿಗೆ ನನ್ನ ಜಾನಪದ ಚಿಂತನೆ ನಡೆಯುತ್ತದೆ. ಭೌತಿಕ ವಸ್ತು ವಿನ್ಯಾಸಗಳ ಶೋಧವಿಲ್ಲದ ಯಾವ ದೇಶವೂ ಮತ್ತೊಂದು ಶತಮಾನಕ್ಕೆ ದಾಟಲಾರದು. ಮಾನವನ ವಿಕಾಸವೆಂದರೆ ಅದು ಅವನು ಕಾಲಕಾಲಕ್ಕೆ ಶೋಧಿಸಿದ ತಂತ್ರಜ್ಞಾನದ ಆವಿಷ್ಕಾರವೇ ಆಗಿದೆ. ಅದನ್ನು ಮಾಡದವನು ಮತ್ತು ಪಡೆಯದವನು ವಿಕಾಸಪಥದಿಂದ ಹಿಂದೆ ಸರಿದು ಬುಡಕಟ್ಟು ಜೀವನದ ಕಡೆಗೆ ಮರಳಬೇಕಾಗುತ್ತದೆ. ಹಾಗೆಯೆ ಗಮನವಿಟ್ಟು ತಿಳಿಯಬೇಕಾದ ಅಂಶವೆಂದರೆ : ತಮ್ಮ ತಂತ್ರಜ್ಞಾನವನ್ನು ಎದುರಾಳಿಗಳಿಗೆ ಸೋತ ಸಿಂಧೂ ಸಂಸ್ಕೃತಿಯ ಜನ, ಲಂಕಾ ಸಂಸ್ಕೃತಿಯ ವಿಭೀಷಣ ನಮ್ಮ ಮುಂದೆ ಅವರ ಸಾಧನೆಯನ್ನೇನೂ ಬಿಟ್ಟು ಹೋಗಿಲ್ಲ. ಆಕರ್ಷಣೆಯ ಹಾಗೂ ಕೊಳ್ಳುವ ತಂತ್ರಜ್ಞಾನ ನಮ್ಮನ್ನು ಎಂದೂ ನೆಲೆ ನಿಲ್ಲಿಸಲಾರದು?

ಈಗ ನಮ್ಮ ವಸ್ತುಜ್ಞಾನ ಮತ್ತು ಶೋಧದ ಹುಡಕಾಟ ಆರಂಭವಾಗಬೇಕಿದೆ. ಹಾಗಿದ್ದಲ್ಲಿ ನಮ್ಮ ಮಧ್ಯೆ ವಸ್ತುಜ್ಞಾನ ಇರಲಿಲ್ಲವೆ ? ಅಂಥವರೆಲ್ಲರನ್ನೂ ಚಾರ್ವಕ ಹೆಸರಿನಿಂದ ಕರೆದು ಅವರನ್ನು ನಿರಾಕರಿಸಿದ ಇತಿಹಾಸ ನಮ್ಮಲ್ಲಿ ಇದೆಯಲ್ಲ, ಭಾರತದ ಆಸ್ತಿಕ-ನಾಸ್ತಿಕ ಪರಿಕಲ್ಪನೆಯ ಮಧ್ಯದ ಹೋರಾಟ ವರ್ಣ-ಜಾತಿ ಮಧ್ಯದ ಜಗಳ ಅಲ್ಲ ತಂತ್ರಜ್ಞಾನ ಶೋಧದ ವಿರುದ್ಧದ ದೊಡ್ಡ ಸಂಚು, ಎಲ್ಲರ ಸುಖದ ಭೌತಜ್ಞಾನದ ಶೋಧವನ್ನು ಹತ್ತಿಕ್ಕಿ ಕೆಲವರು ತಮ್ಮ ಮೂಲ ಸೌಕರ್ಯಗಳನ್ನು ಉಳಿಸಿಕೊಂಡ ಕಥೆ ಈಗ ಪುರಾಣವಾಗಿ ಹೋಗಿದೆ. ಬಹುಸಂಖ್ಯಾತರನ್ನು ಅಭಿವೃದ್ಧಿಯಿಂದ ವಂಚಿಸಿರುವುದೇ ಈ ಪುರಾಣ - ಪುಣ್ಯಕಥೆ. ಭೌತಿಕ ಜ್ಞಾನ ಜ್ಞಾನವೇ ಅಲ್ಲ ಎಂದು ಕೀರ್ತಿಸಿಕೊಂಡುದರ ಪರಿಣಾಮವಾಗಿ ಕೆಳ-ತಳವರ್ಗ ಅವಲಂಬಿಸಿದ್ದ ತಂತ್ರಜ್ಞಾನ ಶೈಶಾವಾವಸ್ಥೆಯಲ್ಲಿ ಉಳಿಯಬೇಕಾಯಿತು.

'ತಿಂದೂ ಉಂಡೂ ಗೆಂಡೆರೋಗ' ಎಂಬಂತೆ ನಮ್ಮ ಮಾರ್ಗದರ್ಶಿಯಾಗಿದ್ದ ವೈದಿಕ ಸಂಸ್ಕೃತಿ ಹೊಟ್ಟೆ ತುಂಬ ಗಡದ್ದಾಗಿ ಹೊಡೆದು ಬಟ್ಟಲು ತುಂಬ ಕಾಮ ಉಂಡು ಈ ಜಗತ್ತು ನಶ್ವರ, ಹೆಣ್ಣೆಂಬುದು ಮಾಯೆ ಎಂದಿತು. ಈಗ ಅನುಭವಿಸಿದ್ದು ಈಗಲೇ ಮಾಯೆ ಎಂದು ಹೇಳುವ ಸ್ವಯಂ ವಂಚನೆ ನಮ್ಮ ವಸ್ತುಪ್ರಜ್ಞೆ ಮತ್ತು ಜ್ಞಾನವನ್ನು ನಿರಾಕರಿಸಿತು. ನಮ್ಮ ಎದುರಿಗೆ ಇದ್ದ ವಸ್ತುಗಳು ನಮ್ಮವು ಎನಿಸಲಿಲ್ಲ. ಅನ್ವೇಷಣಾಶಿಲತೆ, ಚಿಗುರಲಿಲ್ಲ. ಸ್ಪರ್ಧೆ ಉಂಟಾಗಲಿಲ್ಲ, ನೈಪುಣ್ಯತೆ ಅರಳಲಿಲ್ಲ, ೬ ಉತ್ಪಾದನೆ ಹೆಚ್ಚಲಿಲ್ಲ. ಇರುವುದನ್ನೇ ಗೋರಿ ತಿಂದು, ಗೋರಿ ಕಟ್ಟಿಸಿಕೊಳ್ಳುವ ಕೆಲಸ ನಡೆಯಿತು.

ಪುರದ ಪುಣ್ಯ

ನಿಜದಲ್ಲಿ ನಿರ್ಬಂಧಗಳಿಲ್ಲದಿದ್ದರೆ ಎಲ್ಲ ಮನುಷ್ಯರೂ ಕ್ರಿಯಾಶೀಲರೆ. ಅನ್ವೇಷಣಶೀಲತೆ ತಗುಲಿಕೊಂಡರೆ ಅವರು ಯುಗಗಳನ್ನು ಬದಲಾಯಿಸಬಲ್ಲರು ಎಂಬುದಕ್ಕೆ ಇಂಗ್ಲೆಂಡಿನ ಇತಿಹಾಸ ಉತ್ತರಿಸಿದೆ. ಇಷ್ಟಕ್ಕೆಲ್ಲ ಪ್ರೇರಣೆ ಭೌತಿಕ ಜಗತ್ತಿನಲ್ಲಿ ವೈವಿಧ್ಯತೆಯಿಂದ ಕೂಡಿರುವ ವಸ್ತುಗಳು. ಪುರಾಣಗಳು ಕೂಡ ಭೌತಿಕ ಜೀವನದ ವಿಸ್ತರಣೆಯ ಕಥೆಗಳು, ಜ್ಞಾನ ವಸ್ತು ಆಧಾರಿತವೇ ಹೊರತು ಪುರಾಣ ಆಧಾರಿತವಲ್ಲ. ಪುರಾಣ ನಂಬಿಕೆಗೆ ಆಧಾರವಾದುದು. ಭೌತಿಕ ಜಗತ್ತು ತನಗೆ ತಾನೆ ಬಿದ್ದಿರುತ್ತದೆ. ಅದನ್ನು ಸಂಪತ್ತು, ಸಾಹಿತ್ಯ, ಕಲೆ, ಪುರಾಣ ಮತ್ತು ಜೀವನವನ್ನಾಗಿ ಮಾಡುವುದು ಅನ್ವೇಷಣಾಶೀಲ ಮನಸ್ಸು. ಇದೇ ತಂತ್ರಜ್ಞಾನ. ಇದರಲ್ಲಿ ಜೀವನೋಪಯೋಗಿ ಹಾಗೂ ಕಲೋಪಯೋಗಿ ಎಂಬ ಎರಡು ವಿಧದ ತಂತ್ರಜ್ಞಾನವಿದೆ.

ಭಾರತ ಕಲಾತ್ಮಕ ತಂತ್ರಜ್ಞಾನದಲ್ಲಿ ಮಹತ್ವದ್ದನ್ನು ಸಾಧಿಸಿದೆ. ನಮ್ಮ ದೇಶದ ಶಿಲ್ಪಕಲೆ ಅದಕ್ಕೊಂದು ಉತ್ತಮ ಉದಾಹರಣೆ. ಪಾಕದ ವಿಷಯದಲ್ಲಿ ಮೇಲು ಜಾತಿಯವರು ಮಾಡಿಕೊಂಡ ಶೋಧ ಕಡಿಮೆಯದಲ್ಲ, ಸಾಹಿತ್ಯ, ಸಂಗೀತ, ನೃತ್ಯ, ಪ್ರಕಾರಗಳಲ್ಲಿಯ ವಿಸ್ತರಣೆ ಹೇಳಿಕೊಳ್ಳುವಂತಿದೆ. ಆಹಾರ ಮತ್ತು ನೃತ್ಯದ ವಿಷಯದಲ್ಲಿ ಭಾರತದ ಬಹು ಸಂಸ್ಕೃತಿಗಳು ಬಹಳವನ್ನು ತಮ್ಮಲ್ಲಿ ಇಟ್ಟುಕೊಂಡಿವೆ. ನಮ್ಮ ಶಿಲ್ಪಕಲಾ ತಂತ್ರಜ್ಞಾನ ಮಾನವೀಯ ಮುಖಕ್ಕಿಂತ ದೈವಿಕ ಆರಾಧನೆಗೆ ಒತ್ತು ನೀಡಿದೆ. ಈ ದೈವ ಮತ್ತು ಶಿಲ್ಪಕಲೆ ಮೇಲು ಜಾತಿಯ ಉದ್ಯಮವಾಗಿ ವಿಸ್ತರಣೆಗೊಂಡುದರಿಂದಲೆ ಅದಕ್ಕೆ ಮಾನ್ಯತೆ ದೊರೆಯಿತು. ನಮ್ಮ ಶಿಲ್ಪದೇವಾಲಯಗಳು ಬೃಹತ್ ಮಾರುಕಟ್ಟೆಗಳೆ ಅಗಿದ್ದವು ಎಂಬುದನ್ನು ತಳ್ಳಿಹಾಕುವಂತಿಲ್ಲ. ಆದರೆ ಇವರ ಆಹಾರ ಶೋಧ ಮಾರುಕಟ್ಟೆಯಾಗಲಿಲ್ಲ ಎಂಬುದು ಆಶ್ಚರ್ಯ.

ಬ್ರಿಟಿಷ್ ಪೂರ್ವದ ಭಾರತವನ್ನು ಗಮನಿಸಿದರೆ ಅದು ಬೃಹತ್ ಕೃಷಿ ಕೈಗಾರಿಕಾ ರಾಷ್ಟ್ರ. ಅಲೆಮಾರಿ ಪಶುಪಾಲಕರನ್ನು ಹಳ್ಳಿಯಲ್ಲಿ ನೆಲೆಗೊಳಿಸಿದ ಉದ್ಯಮ ಇದು. ಮುಖ್ಯ ಮತ್ತು ಪೂರಕ ಕೈಗಾರಿಕೆಗಳು ಅನ್ಯೋನ್ಯವಾಗಿ ನಡೆದುಕೊಂಡು ಬಂದುದು ಈ ಉದ್ಯಮದ ವಿಶೇಷ. ಕೈಗಾರಿಕಾ ವೃತ್ತಿಗಳನ್ನು ಜಾತಿವೃತ್ತಿಗಳನ್ನಾಗಿ ಪರಿವರ್ತಿಸಿದ ನೀಚತನ ಈ ದೇಶದ ಧಾರ್ಮಿಕ ಯಜಮಾನಿಕೆಯನ್ನು ವಹಿಸಿಕೊಂಡಿದ್ದವರಿಗೆ ಸೇರುತ್ತದೆ. ಸಂಪತ್ತಿನ ಉಳಿತಾಯ ವೃತ್ತಿಗಳನ್ನು ಕನ್ಸಾಲಿಡೇಟ್ ಮಾಡುತ್ತದೆ ನಿಜ. - ಆದರೆ ಅವು ಜಾತಿಗಳಾಗದೆ ವರ್ಗಗಳೂ ಆಗಬಹುದು. ಭಾರತದಲ್ಲಿ ಆ ವೃತ್ತಿಗಳಿಗೆ ವರ್ಗಗಳಾಗುವ ಅವಕಾಶ ಸಿಗಲಿಲ್ಲ. ಈ ನಿಟ್ಟಿನಲ್ಲಿ ಕೃಷಿ ಒಡೆತನ ಮತ್ತು

ಕುಶಲಕರ್ಮಿಗಳ ತಂತ್ರಜ್ಞಾನ ಒಡೆತನ ಜಾತಿಗಳಲ್ಲಿ ಒಡೆದುಕೊಂಡು ಅನುತ್ಪಾದಕತೆಯ ಸಂಬಂಧಾತ್ಮಕತೆಯನ್ನು ಮುರಿದು ದುರ್ಬಲರಾದ ಕುಶಲಕರ್ಮಿ ಜ್ಞಾನಕ್ಕೆ ತನ್ನ ದೇಶದ ಜ್ಞಾನವನ್ನು ಪರ್ಯಾಯಗೊಳಿಸಿ ಅವರನ್ನು ಮೂಲೆಗೆ ತಳ್ಳಿತು. ಭೂಮಾಲಿಕತ್ವ ಬ್ರಿಟಿಷರಿಗೆ ಅನುಕೂಲವಾಗಿಯೇ ಪರಿಣಮಿಸಿತು. ಆದರೆ ಈ ಹೊತ್ತಿನ ಕೈಗಾರಿಕಾ ಉದ್ಯಮ ಗೃಹಕೈಗಾರಿಕೆಗಳನ್ನು ಬೆಳೆಯಗೊಡಲಿಲ್ಲ. ಅದು ಸುಪ್ರೀಂ ಸಂಸ್ಕೃತಿ, ಅದೊಂದೇ ಇರಬೇಕೆಂಬ ಹಟ. ಆದ್ದರಿಂದಲೆ ಇದನ್ನು ನಾವು ಮನೆಮುರುಕ ಸಂಸ್ಕೃತಿ ಎನ್ನುತ್ತೇವೆ.

ಸಂಬಂಧವನ್ನು ಕಟ್ಟದ, ಸಾಂಸ್ಕೃತಿಕ ವ್ಯಕ್ತಿತ್ವವನ್ನು ಬೆಳೆಸದ; ಸಂಬಂಧ ಶೋಷಣೆ ಮತ್ತು ಶಕ್ತಿ ರಾಜಕೀಯದ ರಾಕ್ಷಸರನ್ನು ಸೃಷ್ಟಿಸುತ್ತಿರುವ ಆಧುನಿಕ ಸಂಸ್ಕೃತಿಗೆ ಪರ್ಯಾಯವಾಗಿ ಜಾರ್ಜ್ ಬುಷ್ ಗಿಂತ ನೆಲ್ಸನ್ ಮಂಡೇಲ ಮುಖ್ಯವಾಗುವ ಸಾಂಸ್ಕೃತಿಕ ಮೆಲೆಯ ಅಭಿವೃದ್ಧಿ ತಂತ್ರಜ್ಞಾನವನ್ನು ಕಟ್ಟಿಕೊಳ್ಳುವುದು ಈ ಹೊತ್ತಿನ ತುರ್ತು ಅವಶ್ಯಕತೆಯಾಗಿದೆ. ನಾವು ವಿಶ್ವಮಾನವರು ಆಗಲೇಬೇಕಾಗಿರುವ ಅನಿವಾರ್ಯತೆ ಜಾಗತಿಕ ಶಾಂತಿಗಾಗಿ ಮತ್ತು ಜೀವಕುಲದ ಉಳಿವಿಗಾಗಿ, ದೇಶೀಯ ಆಗಬೇಕಾಗಿರುವ ಅವಶ್ಯಕತೆ ನಮ್ಮ ಮನೆಯ ಬಾಗಿಲುಗಳು ಅನ್ಯರಿಗಾಗಿ ತೆರೆದಿಟ್ಟಿರಬಾರದು ಎಂಬ ಕಾರಣಕ್ಕಾಗಿ, ಜಾಗತೀಕರಣ ಎಂಬ ವಿಶ್ವ ಮಾರುಕಟ್ಟೆ ವಿಶ್ವ ಮಾನವರನ್ನು ಸೃಷ್ಟಿಸಲಾರದು; ತನ್ನವೆಂಬ ವಸ್ತುಗಳನ್ನು ವಿಶ್ವದ ವಿಶ್ವಾಸದಲ್ಲಿ ಮಾರಾಟ ಮಾಡಿರುತ್ತದೆ, ಅಷ್ಟೆ. ಅವು ಮಾನವರ ಮಧ್ಯೆ ಅಸಹಜ ಪೈಪೋಟಿ ಮತ್ತು ಹೊಟ್ಟೆ ಬಾಕತನವನ್ನು ಹುಟ್ಟು ಹಾಕುತ್ತವೆ. ಸೃಜನಾತ್ಮಕ ಪೈಪೋಟಿ ಹುಟ್ಟಬೇಕಾದರೆ ಹೆಚ್ಚು ಜನ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾದಾಗ ಮಾತ್ರ. ಅದು ದೇಶೀಯ ನೆಲೆಯಲ್ಲಿ ತಂತ್ರಜ್ಞಾನ ಬೆಳೆದು ಹಂಚಿಕೆಯಾದಾಗ ಮಾತ್ರ ಸಾಧ್ಯವಾಗುತ್ತದೆ.

ದೇಶೀಯ ಜ್ಞಾನ-ವಿಜ್ಞಾನ ಎನ್ನುವುದೆ ಜಾನಪದ. ಇಲ್ಲಿಯ 'ಜ್ಞಾನ' ಎಂಬುದು ಕಲಾಜ್ಞಾನಕ್ಕೂ 'ವಿಜ್ಞಾನ' ಎಂಬುದು ಜನಪದರ ತಂತ್ರಜ್ಞಾನಕ್ಕೂ ಸಂಬಂಧಿಸಿವೆ. ಈ ಜ್ಞಾನ-ವಿಜ್ಞಾನ ಅಭಿವೃದ್ಧಿ ಹೊಂದುವುದರಿಂದ ಹೆಚ್ಚಿನವರ ನೈಪುಣ್ಯ ಉದ್ಯಮಶೀಲವಾಗುತ್ತದೆ. ಹೆಚ್ಚಿನವರು ಹೆಚ್ಚಿನ ಉತ್ಪತ್ತಿ, ವ್ಯಾಪಾರ ಮತ್ತು ಅನುಭೋಗದಲ್ಲಿ ಭಾಗಿಗಳಾಗುತ್ತಾರೆ. ದೇಶೀಯ ಜ್ಞಾನ-ವಿಜ್ಞಾನದ ಅಭಿವೃದ್ಧಿಯಿಂದ ದೇಶದ ಸಂಪತ್ತು ಸೃಷ್ಟಿಯ ಮೂಲಸಾಮಗ್ರಿಯಾಗುತ್ತದೆ. ಜನರು ಕೇವಲ ಕೂಲಿಗಳು ಅಥವ ಕಾರ್ಮಿಕರು ಆಗದೆ ನೈಪುಣ್ಯಶೀಲರು ಎನಿಸಿಕೊಳ್ಳುತ್ತಾರೆ. ಆ ಮೂಲಕ ಎಲ್ಲ

ಹಂತದಲ್ಲಿ ದೇಶೀ ಎಂಬ ಶಕ್ತಿ ಮತ್ತು ಜ್ಞಾನವನ್ನು ಪಡೆದ ಸಾಂಸ್ಕೃತಿಕ ವ್ಯಕ್ತಿತ್ವಗಳು ಚಿಗುರೆಲೆಗಳಂತೆ ಕಂಗೊಳಿಸುತ್ತವೆ. ನಮ್ಮ ಸಂಪತ್ತು ಮತ್ತು ನಮ್ಮ ಜನ ಪೊಟೆನ್‌ಷಿಯಲ್ ಆಗಬೇಕೆಂದಿದ್ದರೆ ಜಾನಪದ ಜ್ಞಾನ-ವಿಜ್ಞಾನ ಮೈಕೊಡವಿಕೊಂಡು ಮುಂದೆ ನಿಲ್ಲಬೇಕಾಗಿದೆ.

ನೀವು ನಮ್ಮ ಜಾನಪದವನ್ನು ಜೀವಂತ ಪಳಯುಳಿಕೆ ಎನ್ನುತ್ತೀರಿ. ಅದೇ ನೀವು ನಿಮ್ಮನ್ನು ಜೀವಂತ ಪಳಯುಳಿಕೆ ಎಂದು ಕರೆದುಕೊಳ್ಳುವುದಿಲ್ಲ. ಕಾರಣ ನೀವು ಆಧುನಿಕ -ವೈಜ್ಞಾನಿಕ ಬದುಕು ಬದುಕುತ್ತಿದ್ದೇವೆ ಎಂದುಕೊಂಡಿದ್ದೀರಿ. ನೀವು ತಿನ್ನುತ್ತಿರುವ ರೊಟ್ಟಿ ಉಣ್ಣುತ್ತಿರುವ ಹಿಟ್ಟು, ಅನ್ನಸಾರು, ಪಲ್ಯ ಯಾವ ಕಾಲದ್ದು. ನೀವು ಹುಟ್ಟು ಮದುವೆ ಮತ್ತು ಇತರ ಕಾರ್ಯಗಳಲ್ಲಿ ಅನುಸರಿಸುತ್ತಿರುವ ಅಚರಣೆಗಳು ಯಾವ ಕಾಲದವು. ಪುರೋಹಿತರು ನಿಮ್ಮ ಮೇಲೆ ಹೇರಿರುವ ರಾಹು, ಕೇತು, ಯಮಗಂಡರನ್ನು ಬಿಟ್ಟು ಯೋಚಿಸಿ. ನಾವು ನಿರ್ಣಯಿಸಿಕೊಳ್ಳಬೇಕಾದ್ದು ಇಷ್ಟೆ, ಒಂದು ಕಾಲದ ಆಧುನಿಕತೆ ಮತ್ತೊಂದು ಕಾಲದ ಆಧುನಿಕತೆ ಅಲ್ಲ. ಅಸಲಿ ಕಾಲ ನಿರ್ಣಯ ಎಂದರೆ ಸಮಕಾಲೀನತೆ. ನಾವು ಎಲ್ಲರಂತೆ (ಕೆಲವರಂತೆ ಅಲ್ಲ) ಬದುಕುತ್ತಿರುವುದೆ ಜನಪದ ಜೀವನ, ಅದುವೆ ಜಾನಪದ.

ನಾವು ಜಾನಪದ ಹಳೆಯದು, ಜೀವಂತೆ ಪಳಿಯುಳಿಕೆ ಎಂದು ಹೇಳಿ ಎಂಥ ಅಪರಾಧ ಮಾಡಿದ್ದೇವೆ ಗೊತ್ತಾ ? ಜನ ನಮ್ಮ ಜನಪದ ಕಲಾವಿದರನ್ನು ಗೌರವಿಸುವುದಿಲ್ಲ, ಸಂಭಾವನೆ ಕೊಡುವುದಿಲ್ಲ ; ನಮ್ಮ ಜಾನಪದ ವಿದ್ವಾಂಸರನ್ನು ಕೂಡ. ಇವರು ಸೃಜನಶೀಲ ಕೆಲಸ ಮಾಡುತ್ತಿಲ್ಲ ಎಂದು ಸಗಟು ತೀರ್ಮಾನ ತೆಗೆದುಕೊಂಡುಬಿಡುತ್ತಾರೆ. ಸಮಾಜದೊಂದಿಗೆ ಕ್ರಿಯಾಶೀಲವಾಗಿ ಅನುಸಂಧಾನ ನಡೆಸುವ ಯಾವ ಚಟುವಟಿಕೆಯಾದರೂ ಸೃಜನಶೀಲ ಎಂದು ನಾವು ಹೇಳಬೇಕು. ಇದಕ್ಕಾಗಿ 'ವಿದೇಶಿ ಶಾಪ ವಿಮೋಚನೆ ಮತ್ತು ಸ್ವದೇಶಿ ಸೃಜನಶೀಲತೆ' ಎಂಬ ಮಹಾಕಾರ್ಯ ಯೋಜನೆಯನ್ನು ನಾವು ಹಮ್ಮಿಕೊಳ್ಳಬೇಕಿದೆ. ಇದಕ್ಕಾಗಿ

| | |
|---|---|
| ಗುಲಾಮತನದಿಂದ | ವ್ಯಕ್ತಿತ್ವ ನಿರ್ಮಾಣಕ್ಕೆ |
| ವಸ್ತು ವೈಭವದಿಂದ | ಸಮಾಜ ವೈಭವಕ್ಕೆ |
| ಸ್ಥಳಾಂತರ ಚಿಂತನೆಯಿಂದ | ನೆಲೆ ಚಿಂತನೆಗೆ |
| ಕೊಳ್ಳುವ ಚಟುವಟಿಕೆಯಿಂದ | ಸೃಷ್ಟಿಸುವ ಹಟಕ್ಕೆ |

ಪುರದ ಪುಣ್ಯ

ಒಡಕೊಳ್ಳುವುದರಿಂದ ಕೂಡುವುದಕ್ಕೆ

ಅಸ್ಪೃಶ್ಯತೆಯಿಂದ ಅನ್ಯೋನ್ಯತೆಗೆ

ಭಾರತ ಮರಳಬೇಕಿದೆ. ನಾವು ಅನ್ಯಜ್ಞಾನಕ್ಕೆ, ದೇಶಕ್ಕೆ ಮತ್ತು ಶಕ್ತಿಗೆ ತೆರೆದುಕೊಳ್ಳಬೇಕಾದುದು ಈ ಹೊತ್ತಿನ ಅನಿವಾರ್ಯ. ಆದರೆ ಅನ್ಯಕ್ಕೆ ಮಾರಿಕೊಳ್ಳುವುದು ಬೇಡ.

ಇಂಥ ಕಾರಣಿಕವನ್ನು ಹೊತ್ತು ೨೦೦೧-೨೦೦೪ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕೆಲಸ ಮಾಡುತ್ತಿದೆ. ಅಕೆಡೆಮಿಯ ಕಾರ್ಯಯೋಜನೆಯ ಸೂಚಿ ಇದನ್ನು ಸ್ಪಷ್ಟಪಡಿಸಿದೆ. ಜನಪದ ಮಹಿಳೆಯರ ಸ್ವಶಕ್ತಿ ವರ್ಧನೆಗಾಗಿ ಜನಪದ ಪಾನೀಯಗಳ ಉದ್ಯಮೀಕರಣ, ಒತ್ತು ವೈದ್ಯ ಪದ್ಧತಿಯನ್ನಾಗಿ ಪುನರುಜೀವಿಸುವ ನಿಟ್ಟಿನಲ್ಲಿ ಹಚ್ಚೆ ಕಮ್ಮಟ, ಜನಪದ ಸಂಗೀತದ ಹೊಸ ಸಾಧ್ಯತೆಗಳ ಶೋಧದಲ್ಲಿ ಜನಪದ ವಾದ್ಯಗಳ ಕಮ್ಮಟ, ಜನಪದ ಕಲೆಗಳ ಸಮಕಾಲೀನ ದೃಷ್ಟಿಯ ಪ್ರದರ್ಶನ, ಜನಪದ ಸಮಾಜದ ಮಹಿಳೆಯರ ಸ್ವಾಸ್ಥ್ಯಕ್ಕಾಗಿ ಜನಪದ ಸಂಗೀತ ಕಮ್ಮಟ, ಜನಪದರಿಗಾಗಿ ಜನಪದ ನಾಯಕತ್ವ, ಜಾತಿ, ಮತ ಮತ್ತು ಧರ್ಮದ ಹಿನ್ನೆಲೆಯಲ್ಲಿ ಜನಪದ ಮಹಾಕಾವ್ಯದ ನಾಯಕರು ವಿಚಾರ ಸಂಕಿರಣ, ಅಮ್ಮ ಮತ್ತು ಯುದ್ಧ ದೇವತೆಗಳ ಅನಿವಾರ್ಯತೆ, ಮಳೆದೇವಿ ಉತ್ಸವ, ಬಹುಸಂಸ್ಕೃತಿಯ ಅಭಿವೃದ್ಧಿ ನೆಲೆಗಳು ಜಾಗತೀಕರಣದ ಸಂದರ್ಭದಲ್ಲಿ ಜನಸಂಸ್ಕೃತಿಗಳು, ಭೌತ ಸಂಸ್ಕೃತಿಯ ಪರಮಾಧಿಕಾರದ ಸಂದರ್ದದಲ್ಲಿ ಜಾನಪದ ವಸ್ತುಗಳು - ಈ ಮುಂತಾದ ಕಮ್ಮಟ ಮತ್ತು ಚಿಂತನ ಗೋಷ್ಠಿಗಳು ಅಕೆಡೆಮಿಯನ್ನು ಹೊಸ ನೆಲೆಯಲ್ಲಿ ನಿಲ್ಲಿಸಿವೆ. ಈ ಚಿಂತನೆಯ ನೆಲೆಯ ಮೇಲೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕೆಡೆಮಿಯ ವಾರ್ಷಿಕ ಪ್ರಶಸ್ತಿಗಳನ್ನು 'ಜಾನಪದ ಜ್ಞಾನ-ವಿಜ್ಞಾನ ಪ್ರಶಸ್ತಿಗಳು' ಎಂದು ಕರೆಯಲಾಗಿದೆ.

ಜಾನಪದ ವಿದ್ವಾಂಸರನ್ನು ಕುರಿತು 'ಜಾನಪದ ತಲೆಮಾರು' ಎಂಬ ಮೂರು ಸಂಪುಟಗಳ ಪ್ರಕಟಣೆ ಅಕೆಡೆಮಿಯ ಹೊಸ ಕ್ರಮ. ಈ ಸಂದರ್ಭದಲ್ಲಿ ಪ್ರಸ್ತಾವನೆ ಬರೆಯುತ್ತ ಪಂಪ ಕವಿಯ 'ಒಂದೆ ಚಿತ್ತದಿಂ ನೆನೆದು' ಎಂಬ ವಾಕ್ಯವನ್ನು ತೆಗೆದುಕೊಂಡು ಅದರ ಹಿನ್ನೆಲೆಯಲ್ಲಿ ಜಾನಪದ ವಿದ್ವಾಂಸರು ಬೆಳಕಿಗೆ ಬರುವ ಅವಶ್ಯಕತೆಯನ್ನು ವಿವರಿಸಲಾಗಿದೆ. ಪಂಪ ಅರಿಕೇಸರಿಯನ್ನು ಅರ್ಜುನನ ಜೊತೆಗೆ ಮೇಲ್ಮೈಸಿ ಬರೆಯುತ್ತಿರುವ ಸಂದರ್ಭದಲ್ಲಿ ಪ್ರತಿನಾಯಕ ಸ್ಥಾನದಲ್ಲಿ ನೊಂದು,

ಬೆಂದು, ಬಸವಳಿದು ಹೋಗಿರುವ ಕರ್ಣನನ್ನು ಕುರಿತು 'ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯೆ' ಎನ್ನುತ್ತಾನೆ. ಆ ಮೂಲಕ ಪ್ರಭು ಸಂಸ್ಕೃತಿಯನ್ನು ದಾಟಿ ಪ್ರಜಾ ಸಂಸ್ಕೃತಿಗೆ ಮನವಿರಿಸುತ್ತಾನೆ. ಒಂದರ್ಥದಲ್ಲಿ ಭಾರತದ ಜಾನಪದ ಹಾಗೂ ಜಾನಪದ ವಿದ್ವಾಂಸರ ಸ್ಥಿತಿಯೂ ಇದೆ ಆಗಿದೆ. ಜಾನಪದ ಕಂಡವರಿಗೆ ಸಪ್ಪೆ ಮಾಡುವ ಸಾಮಗ್ರಿ ಎಂದು ತಿಳಿದಿರುವ ನಮಗೆ ಕರ್ಣ ಹತ್ತಿರ ಬರುತ್ತಾನೆ. ನಾವು ನಮ್ಮ ಬಗ್ಗೆಯೇ ಕನಿಕರಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಜಾನಪದ ವಿದ್ವಾಂಸರು ಕಳೆದು ಹೋಗಿಲ್ಲ. ಅವರು ಇತರೆಲ್ಲ ಚಿಂತಕರಂತೆ ನಮ್ಮ ಮುಂದೆ ತಮ್ಮ ವ್ಯಕ್ತಿತ್ವ ಮತ್ತು ಸಾಧನೆಯಿಂದ ಕಾಣುತ್ತಿದ್ದಾರೆ ಎಂಬುತನ್ನು ಜಾನಪದ ತಲೆಮಾರು ಕೃತಿಗಳ ಮೂಲಕ ಹೇಳಲಾಗಿದೆ.

ಜಾನಪದ ಹೇಗೆ ನಮ್ಮ ಜ್ಞಾನದ ಸಂಗ್ರಹ ಮತ್ತು ಅಷ್ಟೇ ಮುಖ್ಯವಾಗಿ ಅದು ನಮ್ಮ ಸೃಷ್ಟಿ ಎಂಬುದನ್ನು ಹೇಳಲು ಜಾನಪದ ಜ್ಞಾನ ಶೋಧಮಾಲೆಯ ಹೆಸರಿನಲ್ಲಿ ಜನಪದ ವೈದ್ಯ, ಮಹಿಳಾ ಜಾನಪದ, ಜಾನಪದ ಸಿದ್ಧಾಂತಗಳು, ಜಾನಪದ ಅನ್ವಯಿಕತೆ, ಜಾನಪದ ಪ್ರಕಾರಗಳು, ಜನಪದ ನಾಯಕತ್ವ, ಜನಪದ ತಂತ್ರಜ್ಞಾನ, ಆಸರ, ಜಾನಪದ ಗ್ರಹಿಕೆ; ಪರಿಕಲ್ಪನೆ, ಕಲಾವಿದರ ಜಾನಪದ ಗ್ರಹಿಕೆ ಮುಂತಾದ ಕೃತಿಗಳನ್ನು ಪ್ರಕಟಿಸಲಾಗಿದೆ. ಈ ಕೃತಿಗಳಿಗೆ 'ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತ್ತಿದೆ' ಎನ್ನುವ ರಾಘವಾಂಕ ಕವಿಯ ಪದ್ಯದ ಸಾಲಿನ ಶೀರ್ಷಿಕೆ ಇಟ್ಟುಕೊಂಡು ಪ್ರಸ್ತಾವನೆ ಬರೆಯಲಾಗಿದೆ. ಭಾರತದ ಜ್ಞಾನವೆಂಬ ಸತ್ಯ, ಸತ್ವ, ವ್ಯಕ್ತಿತ್ವ, ತ್ಯಾಗ, ಅಹಿಂಸೆ.... ಎಂಬೆಲ್ಲವು ಹೇಗೆ ರಫ್ತು ವಸ್ತು, ವ್ಯಕ್ತಿ, ವಿದ್ಯೆ, ಆಸೆ..... ಮತ್ತೇನೇನೊ ರೂಪದಲ್ಲಿ ಈ ದೇಶದ ತಳ ಕೊಡವಿಕೊಂಡು ಹೊರದೇಶಕ್ಕೆ ಹೋಗುತ್ತಿವೆ. ಆ ಮೂಲಕ ದೇಶದ ಭವಿಷ್ಯದ ಬಗ್ಗೆ ಆತಂಕ ಹುಟ್ಟುವಂತಹ ವಾತಾವರಣ ಸೃಷ್ಟಿಯಾಗುತ್ತಿದೆ ಎಂಬುದನ್ನು ಹೇಳಲು ಪ್ರಯತ್ನಿಸಲಾಗಿದೆ. ಇದು ಭಾರತದ ಈ ಶತಮಾನದ ಸ್ಥಿತಿಯೂ ಆಗಿರುವುದು ವಿಶೇಷ. ನಮ್ಮ ಮುಂದಿನ ವಿಮೋಚನೆಯ ಬಗ್ಗೆ ಆಲೋಚಿಸುವ ಒಂದು ಕ್ರಮವೂ ಇದಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ನಾನು ಪ್ರವಾದಿ ಥರ ಈ ಮಾತನ್ನು ಹೇಳುತ್ತಿಲ್ಲ ; ಮಳೆ ಬರುವ ಸೂಚನೆಯನ್ನು ಕೊಡುವ ಕೊಡತಿ ಹುಳುವಿನ ಥರ ತುಸುವೆ ಹಾರಾಡಿದ್ದೇನೆ.

ನನ್ನ ಅರಿವಿಗೆ ಬಂದಂತೆ ನಮ್ಮ ಹಿರಿಯ ತಲೆಮಾರಿನ ಜಾನಪದ ವಿದ್ವಾಂಸರು ಜಾನಪದ ಸಾಮಗ್ರಿಯ ಕಡೆಗೆ ನುಗ್ಗಿದಂತೆ, ಅದರ ಬೇರಿನ ಕಡೆಗೂ ಚಿಂತನೆ

ನಡೆಸಿದ್ದಾರೆ. ಇದು ನಮ್ಮ ಜಾನಪದವನ್ನು ಅಂದರೆ ನಮ್ಮ ನಾಡಜ್ಞಾನವನ್ನು ನಮಗಾಗಿ ಪುನರುಜೀವಿಸಿಕೊಳ್ಳುವ ಹೊಣೆಗಾರಿಕೆಯ ಕೆಲಸವೂ ಆಗಿದೆ. ದಾಳಿಕೋರನಂತೆ ಬಂದ ಪಾಶ್ಚಾತ್ಯ ಆಧುನಿಕತೆ ಇವರ ಆಸೆಯ ಮೇಲೆ ಮಣ್ಣೆರಚಿತಾದರೂ ಅವರ ಕಳಕಳಿ ಇಂದಿಗೂ ಪ್ರಸ್ತುತವಾಗಿದೆ. ಅವರ ಮೂಲ ತುಡಿತ ಜಾನಪದ ನಮ್ಮ ಜ್ಞಾನ, ನಮ್ಮ ಅಸ್ತಿತ್ವ ಮತ್ತು ನಮ್ಮ ಕ್ರಿಯಾಶೀಲತೆ ಎಂಬುದನ್ನು ಸಾದರಪಡಿಸುವುದೇ ಆಗಿದೆ. ನಮ್ಮ ಹಿರಿಯ ಪ್ರಮುಖ ಜಾನಪದ ಚಿಂತಕರ ಅಭಿಪ್ರಾಯಗಳನ್ನು ಗಮನಿಸಿ :

ಬಿಎಂಶ್ರೀ : 'ಜನವಾಣಿ ಬೇರು ; ಕವಿವಾಣಿ ಹೂವು'

ಮಾಸ್ತಿ ಜನತೆಯ ಸಂಸ್ಕೃತಿ

ದೇಜಗೌ 'ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು'

ತಾಯಿ-ಬೇರು-ಸಂಸ್ಕೃತಿ ಈ ಮೂರು ಪರಿಕಲ್ಪನೆಗಳು ಜೀವ ನಿರ್ಮಿತಿ ಮತ್ತು ಅದರ ಕ್ರಿಯೆಯಾದ ಅಂಡ-ವೀರ್ಯ ಬದುಕನ್ನು ಸಾದರಪಡಿಸುತ್ತವೆ. ಈ ಮೂರು ಹಳೆಯವು ಎಂದಾದರೆ ಅಂಥ ಸಮಾಜ ಸಾಯುತ್ತಿದೆ ಎಂದು ತಿಳಿಯಬೇಕಾಗುತ್ತದೆ. ಅವು ನಿಜ ಎಂದು ಮತ್ತೆ ಮತ್ತೆ ಹೇಳುತ್ತಿದ್ದರೆ ಜನ ಬದುಕುವ ಎಚ್ಚರದಲ್ಲಿದ್ದಾರೆ ಎಂದು ತಿಳಿಯಬಹುದು.

ನಾವು ಜೀವಂತವಾಗಿ ಬದುಕುತ್ತಿರುವುದೇ ಜಾನಪದ. ಅದು ನಮ್ಮ ತಾವು, ಕಾವು, ಕ್ರಿಯೆ ಮತ್ತು ನಮ್ಮ ಸಂಗ್ರಹಿತ ಹಾಗೂ ಮುಂದುವರಿದ ಜ್ಞಾನ ಎಂಬುದನ್ನು ಹೇಳುವುದೇ ನನ್ನ ಮತ್ತು ನಮ್ಮ ಅಕೆಡೆಮಿಯ ಉದ್ದೇಶವಾಗಿದೆ. ಜಾನಪದ ಸಾಮಗ್ರಿಯಾಗಿ, ಪಳಯುಳಿಕಾ ಜಾನಪದ ಹಾಗೂ ಜೀವಂತ ಪಳಯುಳಿಕಾ ಜಾನಪದ ಇರಬಹುದು. ಅದಷ್ಟೆ ಜಾನಪದವಲ್ಲ; ಜೀವಂತ ಬದುಕು ಜಾನಪದ. ಅಲ್ಲಿ ಕಲೆ ಮತ್ತು ವಿಜ್ಞಾನ ಎರಡೂ ಇವೆ. ಅವನ್ನು ನಿರಾಕರಿಸಿ ಬದುಕಬೇಡಿ, ನಿರ್ವಹಿಸಿಕೊಂಡು ಬದುಕಿ ಎಂಬುದನ್ನು ಹೇಳಲು ಇಷ್ಟು ಬರೆದಿದ್ದೇನೆ. ಇಷ್ಟೆಲ್ಲ ಬರೆಯಲು ಪ್ರೇರಣೆ ಪ್ರೋತ್ಸಾಹ ನೀಡಿದ ನಮ್ಮ ಅಕೆಡೆಮಿಯ ಸೃಜನ ಸದಸ್ಯರಿಗೆ, ಕಟ್ಟುನಿಟ್ಟಾಗಿ ನನ್ನ ಜೊತೆಗಿದ್ದು ಶ್ರಮಿಸಿದ ಮಿತ್ರ ಚಕ್ಕೆರೆ ಶಿವಶಂಕರ್ ಅವರಿಗೆ, ರಿಜಿಸ್ಟಾರ್ ಮುನಿರಾಜು, ಕಛೇರಿಯ ಸಿಬ್ಬಂದಿ ಪ್ರಕಾಶ್, ನಾಗರತ್ನ ಮತ್ತು ಶಿವಲಿಂಗಯ್ಯ ಅವರಿಗೆ, ಮುದ್ರಕ ಮಿತ್ರ ಗೋಪಾಲ್ ಗೆ ನನ್ನ ಪ್ರೀತಿಪೂರ್ವಕ ವಂದನೆಗಳು.

೧. ವಸಾಹತು : ವಶಪಡಿಸಿಕೊಂಡ ಪ್ರದೇಶ

೨. ವಸಾಹತುಶಾಹಿ : ವಶಪಡಿಸಿಕೊಂಡ ಪ್ರದೇಶದ ಯಜಮಾನಿಕೆ

೧. ನೇರ ವಸಾಹತುಶಾಹಿ (Direct Colonialisation) :

ಹೊರದೇಶದ ಜನ ಒಳದೇಶದ ಜನರ ಆಡಳಿತ ನಡೆಸುವುದು ಮತ್ತು ಆ ದೇಶವನ್ನು ತಮ್ಮ ಸಂಪನ್ಮೂಲವಾಗಿ ಬಳಸಿಕೊಳ್ಳುವುದು. Mo

ಉದ್ದೇಶ : ೧. ತಮಗೆ ಬೇಕಾದ ಆರ್ಥಿಕ ಅನುಕೂಲ ಮಾಡಿಕೊಳ್ಳುವುದು.

೨. ತಮ್ಮ ಕೈಗಾರಿಕೆ ಮತ್ತು ವ್ಯಾಪಾರವನ್ನು ವಿಸ್ತರಿಸಿಕೊಳ್ಳುವುದು.

೩. ಆ ದೇಶದ ಕಚ್ಚಾ ಸಾಮಗ್ರಿಯನ್ನು ವಿಪುಲವಾಗಿ ಬಳಸಿಕೊಳ್ಳುವುದು.

೪. ತಮ್ಮ ಸಿದ್ಧವಸ್ತುಗಳಿಗೆ ಆ ದೇಶವನ್ನು ಮಾರುಕಟ್ಟೆಯಾಗಿ ಬಳಸಿಕೊಳ್ಳುವುದು

೫. ತಮ್ಮ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಳ್ಳುವುದು.

ಅಂದರೆ ಆಳಿಸಿಕೊಳ್ಳುವ ದೇಶದಲ್ಲಿ :

೧. ಸ್ವ ಆಳ್ವಿಕೆ

೨. ಸ್ವಯಂ ನಿರ್ಧಾರ

೩. ಸ್ವತಂತ್ರ ಆರ್ಥಿಕ ಯೋಜನೆ

೪. ಸ್ವತಂತ್ರ ತಂತ್ರಜ್ಞಾನ ಶೋಧ

೫. ಸ್ವತಂತ್ರ ಮಾರುಕಟ್ಟೆ

ಇರುವುದಿಲ್ಲ.

ಪುರದ ಪುಣ್ಯ

9. ಪರೋಕ್ಷ ಅಥವಾ ನವ ವಸಾಹತುಶಾಹಿ (Indirect colonialisation)

ಇದನ್ನೇ ವಸಾಹತೋತ್ತರ ಎನ್ನುತ್ತೇವೆ. ವಸಾಹತುಶಾಹಿ ಅಥವಾ ಪ್ರಭು ನೇರವಾಗಿ ಒಂದು ದೇಶದ ಒಳಗೆ ಇರದೆ ಬೇರೆ ಬೇರೆ ಶಕ್ತಿಗಳ ಮೂಲಕ ಆ ದೇಶದ ಮೇಲೆ ಹೇಳಿದ ಜೀವನ ಚಟುವಟಿಕಗಳ ಮೇಲೆ ಸದಾ ನಿಯಂತ್ರಣ ಮತ್ತು ಹತೋಟಿ ಇಟ್ಟುಕೊಳ್ಳುವುದು. ಆ ನಿಯಂತ್ರಣ ಶಕ್ತಿಗಳೆಂದರೆ :

೧. ಮಾಧ್ಯಮ (Media)

೨. ಸೈನ್ಯ (Army)

೩. ಆಯುಧ (Weapon)

೪. ಬಲಿಷ್ಠ ಅರ್ಥ ವ್ಯವಸ್ಥೆ (Strong Economy)

೫. ಶಕ್ತಿ / ಯುದ್ಧ (Power / War)

ಇದಕ್ಕೆಲ್ಲ ಪ್ರಬಲ ಸಹಾಯಕ ಎಂದರೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ (Modern Science & Technology)

೧. Impose (ಹೇರು) : Higher technology : ದುಬಾರಿ ತಂತ್ರಜ್ಞಾನ

೨. Introduce (ಅಸ್ತಿತ್ವಕ್ಕೆ ತರು) : Monopoly : ಏಕಸ್ವಾಮಿತ್ವ

Induce (ಒಳಸೇರಿಸು) : Mental Pressure : ಮಾನಸಿಕ ಒತ್ತಡ

೩. Destroy(): (1) Technical diversity

ತಾಂತ್ರಿಕ ವೈವಿಧ್ಯ

(2) Genetic diversity

ಜೈವಿಕ ವೈವಿಧ್ಯ

(3) Cultural Pluralism

ಸಾಂಸ್ಕೃತಿಕ ಬಹುತ್ವ

ಇದರಿಂದ ಆಳಿಸಿಕೊಳ್ಳುವವರು ಜೀವಿಗಳು ಮತ್ತು ಅವರ ಬದುಕು ಜೀವನ ಆಗದೆ ನಾವೆಲ್ಲ ವಸ್ತುಗಳಾಗುತ್ತೇವೆ. ಕ್ಲಾಡ್ ಅಲ್ವರಸ್ ಹೇಳುತ್ತಾನೆ "We have become things; things do not have rights"ಎಂದು.

ಯಾಕೆಂದರೆ ವಸಾಹತುಶಾಹಿಗಳು ಜ್ಞಾನ ಮತ್ತು ಶಕ್ತಿ (Knowledge and Power) ಯನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಮತ್ತು ಅದನ್ನು ತಮ್ಮ ಕಟ್ಟುನಿಟ್ಟಿನ





ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ನಾವು ನಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಂಡಿಲ್ಲ. ಕಾರಣವಾಗಿ ನಮಗೆ ಶಕ್ತಿ ಸಂಚಯನವಾಗಿಲ್ಲ. ಈಗ ಜ್ಞಾನ ಮತ್ತು ಶಕ್ತಿಗಾಗಿ ಯೂರೋಶಕ್ತಿಗಳನ್ನು ಬೇಡುತ್ತಿದ್ದೇವೆ. ಕೊಡಿ ಎಂದು ಬಾಲ ಅಳ್ಳಾಡಿಸುತ್ತಿದ್ದೇವೆ. ಕೊಡುವರೆಂದು ಕಾಯುತ್ತ ಬಡತನ ಅನುಭವಿಸುತ್ತಿದ್ದೇವೆ.

ನಮ್ಮ ಜ್ಞಾನ ನಮಗೆ ಶಕ್ತಿ. ಅದಿಲ್ಲದಿದ್ದರೆ ರಾಜಕೀಯ ಶಕ್ತಿಯೂ ಬರುವುದಿಲ್ಲ ; ಸಾಂಸ್ಕೃತಿಕ ದೃಢತೆಯೂ ಸಾಧ್ಯವಾಗುವುದಿಲ್ಲ. "Knowledge reflects power, it reflects interests, specifically a culture's interests" ಪ್ರತಿನಿಧಿಸುತ್ತದೆ. ಅದು ಅನುಕೂಲಗಳನ್ನು ಪ್ರತಿನಿಧಿಸುತ್ತದೆ. ವಿಶೇಷವಾಗಿ ಸಾಂಸ್ಕೃತಿಕ ಅನುಕೂಲಗಳನ್ನು ಪ್ರತಿನಿಧಿಸುತ್ತದೆ.

ಯೂರೋ ಶಕ್ತಿಗಳು ನಮ್ಮ ಮನಸ್ಸನ್ನು ಒಡೆದು ಹಾಕಿವೆ (demolish of our mind) ಇದು ನಮ್ಮ ಬೌದ್ಧಿಕ ದಿವಾಳಿತನ (intellectual devastation).

Best Example : Tourism

"It does little but convert the third world, its people, its nature, into things to be handled, abused, consumed and pho- tographed."

ಪ್ರವಾಸ ಉದ್ಯಮ ಆದ ತಕ್ಷಣದಿಂದ ನಮ್ಮ ನೆಲ, ಜಲ, ನಿಸರ್ಗ, ದೈವಸ್ಥಾನ, ವಾಸಸ್ಥಾನ, ಕಲೆ, ಸಾಹಿತ್ಯ, ಹೆಣ್ಣು - ಇವೆಲ್ಲಾ ವಸ್ತುಗಳಾಗುತ್ತವೆ. ಮತ್ತು ಭೋಗ ತೃಪ್ತಿಯ ಪಟ್ಟಿಗೆ ಸೇರುತ್ತವೆ. ಪ್ರತಿಯೊಂದು ಮೂರನೆಯ ಜಗತ್ತಿನ ದೇಶವೂ ಡಾಲರ್ ಪೈಪೋಟಿಗಾಗಿ ಅಂದರೆ ಸಂಪಾದನೆಗಾಗಿ ದೇಶವನ್ನು ಉದ್ಯಮಿಗೆ ಒತ್ತೆ ಇಡುತ್ತಿವೆ.

ಹೀಗೆ ರಾಜಶಕ್ತಿ ಎಂಬುದು ಸ್ಥಳೀಯ ಪಾಳೇಗಾರ, ರಾಜ, ಚಕ್ರವರ್ತಿ, ಶ್ರೀಮಂತರು, ಧಾರ್ಮಿಕ ಪ್ರಭುಗಳ ಮತ್ತು ಮೇಲು ವರ್ಗದಿಂದ ಈಗ ಸೂಪರ್ ಪವರ್ ಎಂಬ ದೈತ್ಯನ ಕೈಗೆ ಬಂದಿದೆ. ಅವನು ಬಕಾಸುರ; ಅನ್ನವನ್ನೂ ತಿನ್ನಬಹುದು, ಜನರನ್ನೂ ತಿನ್ನಬಹುದು ! ಕೇಳುವವರು ಯಾರು ?

**"ಸೋರುತಿಹುದು ಮನೆಯ ಮಾಳಿಗೆ ಅಜ್ಞಾನದಿಂದ..."**

ಎಂದು ತತ್ವಪದಕಾರ ಶಿಶುನಾಳ ಷರೀಫರು ಹೇಳಿದರಲ್ಲ ಆ ಕೆಲಸ ನಡೆಯತ್ತಾ ಇದೆ. ಆ ಸೋರುವ ಮನೆಯಿಂದ ನಮ್ಮ ಸ್ವಂತಕ್ಕೆ ಹೆಂಚು ಎಕ್ಕಿಕೊಳ್ಳುತ್ತಿದ್ದೇವೆ. ಗಳು ಹಿರಿಯುತ್ತಿದ್ದೇವೆ. ಇದರ ಮೊದಲ ಫಲಾನುಭವಿಗಳು ಭ್ರಷ್ಟ ರಾಜಕಾರಣಿಗಳು, ಕದೀಮ ಅಧಿಕಾರಿಗಳು,





ಮನಸುಗಳ್ಳ ನೌಕರರು ಮತ್ತು ಬೇಜವಾಬ್ದಾರಿ ಶಿಕ್ಷಕರು. ಸಾಮಾನ್ಯರು ನೋಯುತ್ತಿದ್ದಾರೆ. ರೈತರು ಸಾಯುತ್ತಿದ್ದಾರೆ.

ಈಗ ಎಲ್ಲವೂ ಉದ್ಯಮದ ಆಕೃತಿಯಲ್ಲಿ ಬರುತ್ತಿವೆ. ಅದರಲ್ಲಿ ಸೆಕ್ಸ್ ಕೂಡ ಒಂದು ಎಂದರೆ ನಮ್ಮ ಸಂಪ್ರದಾಯಸ್ಥ ಧರ್ಮ ನಿಷ್ಠನ ತಲೆ ಏನಾಗಬಹುದು ! ಶಿಕ್ಷಣ ಉದ್ಯಮವಾದರೆ ನಮ್ಮ ಪದವೀಧರರನ್ನು ಯಾವ ಸಮುದ್ರಕ್ಕೆ ತಳ್ಳಬೇಕು. ಧರ್ಮ ನಮ್ಮಲ್ಲಿ ಉದ್ಯಮ ಆಗಿದೆ ಮತ್ತು ಆಗುತ್ತಿದೆ. ಸಾಮಾಜಿಕ ಚಳುವಳಿಗಳು ಉದ್ಯಮವಾಗುವತ್ತ ಮುನ್ನಡೆದಿವೆ. ಆದ್ದರಿಂದಲೇ ಅವು ಸಮೂಹದ ಕೈತಪ್ಪಿ ಆಸಕ್ತ ವ್ಯಕ್ತಿಗಳ ಹಿಡಿತದಲ್ಲಿವೆ. ಸಂಸ್ಕೃತಿ ಉದ್ಯಮವಾದಲ್ಲಿ ನಮ್ಮ ದೇಶದ ಸಂದರ್ಭದಲ್ಲಿ ಅನೇಕ ಜಾತಿಗಳು ಏಕೀಭವಿಸಿದ ದೊಡ್ಡ ಜಾತಿ ಆಗುತ್ತದೆ. ಇನ್ನೂ ಜಾತಿಯ ನರಕದಿಂದ ಬಿಡುಗಡೆ ಕಾಣದ ಅಸ್ಪೃಶ್ಯರ ಗತಿ ಏನಾಗಬೇಕು ?

**ಒಂದು ದೇಶದ ಸಂಸ್ಕೃತಿ ಎಂಬುದು ಏನಾಗಿರುತ್ತದೆ ?**

೧. ದೇಶದ ಸಂಪನ್ಮೂಲ : (ನೆಲ, ಜಲ, ಕಾಡು, ನಾಡು, (ಭೌತಿಕ), ಕಲೆ, ಕಾನೂನು, ಸಾಹಿತ್ಯ (ಅಭೌತಿಕ)

೨. ದೇಶದ ಉತ್ಪಾದನಾಕ್ರಮ

೩.ದೇಶದ ತಂತ್ರಜ್ಞಾನ

೪. ದೇಶದ ವಹಿವಾಟು

೫. ದೇಶದ ಭದ್ರತೆ

ಭೌತಿಕ ಮತ್ತು ಅಭೌತಿಕ ಸಂಪನ್ಮೂಲಗಳನ್ನು ಬಳಸುವ ನೈತಿಕ ವ್ಯವಸ್ಥೆಯನ್ನೆ ನಾವು ಸಂಸ್ಕೃತಿ ಎಂದು ಹೇಳುವುದು. ನಮ್ಮ ಜಾತಿ ವ್ಯವಸ್ಥೆ ನೈತಿಕವಾಗಿರಲಿಲ್ಲ ಎಂಬ ಕಾರಣಕ್ಕೆ ನಮ್ಮಲ್ಲಿ ಬಡತನ ಹೆಚ್ಚಿತು. ಕೆಲವರು ಕೆಲವು ಪದಾರ್ಥಗಳನ್ನು ತಿನ್ನಬಾರದು ಎಂದು ಜಾತಿ ತತ್ವ ಹೇಳಿದ್ದರಿಂದ ಅಷ್ಟರ ಮಟ್ಟಿಗೆ ಅವುಗಳ ಉತ್ಪಾದನೆ ಮತ್ತು ವಹಿವಾಟು ನಿಂತುಬಿಟ್ಟಿತು. ಹೊಳೆದಾಟಿದರೆ ಪಾಪ ಎಂದದ್ದರಿಂದ ಜೀವನ ವಿಸ್ತರಣೆ ಮಾಡಿಕೊಳ್ಳಲಿಲ್ಲ. ಜಾತಿ ನಿರ್ದೇಶಕ ತತ್ವ ಮತ್ತು ಕುಬ್ಬ ಆರ್ಥಿಕ ವ್ಯವಸ್ಥೆಯೂ ಆಗಿದ್ದುದರಿಂದ ಭಾರತ ನರಳುವಂತಾಯಿತು. ನವ ವಸಾಹತುಶಾಹಿ ಅರ್ಥಾತ್ ಜಾಗತೀಕರಣ ಅದರ ಮೊಮ್ಮಗ ಅಲ್ಲವೆ ?

ಹಾಗಾದರೆ ಒಂದು ಸಂಸ್ಕೃತಿ ನಮ್ಮಿಂದ ಏನು ನಿರೀಕ್ಷಿಸುತ್ತದೆ ಅಥವಾ ಸಂಸ್ಕೃತಿಯೊಂದರಿಂದ ನಾವು ಏನು ನಿರೀಕ್ಷಿಸುತ್ತೇವೆ.

೧. ಬಡವರು ಕಣ್ಣೀರು ಹಾಕದಿರುವುದು

೨. ರೈತರು ಆತ್ಮಹತ್ಯೆ ಮಾಡಿಕೊಳ್ಳದಿರುವುದು

ಪುರದ ಪುಣ್ಯ

೩. ಹೆಣ್ಣು ಮಾರಾಟವಾಗದಿರುವುದು | ಸೆಕ್ಸ್ ಭೋಗ ಆಗದಿರುವುದು

೪. ನಮ್ಮ ಪದವೀಧರರು ಉದ್ಯಮಪತಿಯ ಉತ್ಪಾದನೆಗಳನ್ನು ಮನೆಮನೆ ಬಾಗಿಲು ಬಡಿದು ಕೊಳ್ಳಲು ಗೋಗರೆಯದಿರುವುದು.

೫. ವ್ಯಕ್ತಿತ್ವ ವಸ್ತುವಾಗಿ ಬಿಕರಿಯಾಗದಿರುವುದು

೬. ಕುಟುಂಬದ ವೃದ್ಧರು ಭಿಕ್ಷೆ ಬೇಡುವ ಸ್ಥಿತಿಗೆ ಬರದಿರುವುದು.

೭. ತಿನ್ನುವುದು | ಬಳಸುವುದನ್ನೇ ಬದುಕು ಮಾಡಿಕೊಳ್ಳದಿರುವುದು

೮. ಶೃಂಗಾರ ಪ್ರದರ್ಶನ ಆಗದಿರುವುದು

೯. ಊಟ ಮೋಜು/ಮನರಂಜನೆ ಆಗದಿರುವುದು

೧೦. ಉತ್ಪಾದನೆ ಮತ್ತು ಬಳಕೆಯ ಮಧ್ಯೆ ಭಾರಿ ಅಂತರ ಏರ್ಪಡದಿರುವುದು. ಆಸೆ ಮತ್ತು ದಾಸ್ಯಕ್ಕೆ ಇದು ಕಾರಣವಾಗುತ್ತದೆ.

ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂಗತಿಯನ್ನು ತೆಗೆದುಕೊಳ್ಳೋಣ. ಕೂಲಿ, ಕಾರ್ಮಿಕ, ಬಡವ ಬರ ಅನ್ನುವ ಕಾರಣಕ್ಕೆ ಸಾಯುತ್ತಿಲ್ಲ. ಜಮೀನು, ಮನೆ, ಮಠ ಇರುವ ರೈತ ಯಾಕೆ ಸಾಯುತ್ತಿದ್ದಾನೆ. ಅದು 'ಮರ್ಯಾದೆ ಸಾವು' ಎಂದು ನಾನು ಗ್ರಹಿಸಿದ್ದೇನೆ.

ಜಾನಪದ ಗ್ರಹಿಕೆ ಮತ್ತು ಪರಿಕಲ್ಪನೆಯ ಬಗ್ಗೆ ಕರ್ನಾಟಕದವರು ರಿಪೀಟರ್ಸ್ ಅಥವ ಸೆಪ್ಟೆಂಬರ್ ಪರೀಕ್ಷಾರ್ಥಿಗಳು, ನಾವು, ಕರ್ನಾಟಕದವರು ಯಾಕೆ? ಭಾರತದ ಜಾನಪದ ವಿದ್ವಾಂಸರೆ ಹಾಗೆ, ನಮಗೆ ಈ ಕಸುಬು ಹವ್ಯಾಸವಾಗಿ ಹೋಗಿದೆ. ಬ್ರಿಟಿಷ್ ಪೂರ್ವದಲ್ಲಿ ವೈದಿಕ ಅಕ್ಷರ ಸಂಸ್ಕೃತಿಗೆ ಶರಣು ಹೋಗಿ ಅದರ ಬೇಕು ಬೇಡವನ್ನೆಲ್ಲ ನಮ್ಮ ಸ್ಥಳೀಯ ಸಂಸ್ಕೃತಿಯಲ್ಲಿ ಅವತರಿಸುವಂತೆ ಮಾಡಿದೆವು. ಅದನ್ನು ಆಚರಿಸುವಲ್ಲಿ ಧನ್ಯತೆಯನ್ನು ಕಂಡೆವು. ಬ್ರಿಟಿಷರು ಬಂದ ಮೇಲೆ ಅವರ ಸಾಮಗ್ರಿ ಸಂಸ್ಕೃತಿಯನ್ನು ನಮ್ಮ ಮೈಮೇಲೆ ಎಳೆದುಕೊಂಡೆವು. ಈಗ ಪಾಶ್ಚಾತ್ಯ ಅಲ್ಲದ್ದು ವಸುವೂ ಅಲ್ಲ, ಜ್ಞಾನವೂ ಅಲ್ಲ ಎಂಬ ದೆವ್ವ ಮೆಟ್ಟಿಕೊಂಡವರ ಸ್ಥಿತಿಗೆ ತಲುಪಿದ್ದೇವೆ.

ಅಭಿವೃದ್ಧಿಯನ್ನು ಅನುಸರಿಸುವುದು ಅಪರಾಧವಲ್ಲ. ಅನುಸರಿಸುವವನು ಸೃಷ್ಟಿಶೀಲನೂ ಆಗಬೇಕಾದುದು ಉಚಿತ. ಅನುಸರಣೆಯೆ ಜೀವನವಾದರೆ 'ನಾವು' ಖಾಲಿಯಾಗುವುದು ಖಂಡಿತ. ಬೆಳಗುವ ದೀಪವೊಂದರ ಕಡೆಗೆ ಕಣ್ಣಿಟ್ಟವರು ಅದರ ತಳದ ಕತ್ತಲೆಯನ್ನು ಗ್ರಹಿಸದಿದ್ದರೆ ಹೇಗೆ? ಅಂಥ ಹಣತೆಯನ್ನು ತನ್ನಲ್ಲಿ ಹತ್ತಿಸಿಕೊಳ್ಳದಿದ್ದರೆ ಹೇಗೆ?

ಈಗ ನಮ್ಮ ನಮ್ಮ ಜನಪದ ಹಣತೆಗಳನ್ನು ಹತ್ತಿಸಿಕೊಳ್ಳೋಣವೆ! ನೂರು ಜನಪದಗಳಿಗೆ ನೂರು ದೀಪಗಳಿವೆ. ಅವುಗಳನ್ನು ಕೂಡಿಸಿಕೊಳ್ಳುವ, ಜೋಡಿಸಿಕೊಳ್ಳುವ ಕೆಲಸವನ್ನು ಆಮೇಲೆ ಮಾಡೋಣ. ಮೊದಲು ನಮ್ಮ ನಮ್ಮ ಮನೆಯ ಹಣತೆಗಳು ಉರಿಯಲಿ, ಜನಪದ ಸಾಹಿತ್ಯವನ್ನು ಕುರಿತು 'ಜನವಾಣಿ ಬೇರು, ಕವಿವಾಣಿ ಹೂವು' ಎಂಬ ಮೊದಲ ಮಾತನ್ನು ಬಿಎಂಶ್ರೀ ಅವರು ಆಡಿದ್ದು ಈ ನೆಲೆಯಲ್ಲಿ, ಕವಿಗಳು ಪಂಥೀಯರು, ಸಾಹಿತ್ಯ ಪಂಥಾತೀತವಾದುದು. ಜನಪದರ

ಜ್ಞಾನವೂ ಪಂಥ, ಪಂಗಡ ಹಾಗೂ ಜಾತ್ಯಾತೀತ. ಅದು ಜನಪರ ಮತ್ತು ಜೀವಪರ. ಇವರ ಉತ್ಪತ್ತಿಯಾದ ಜಾನಪದವನ್ನು ಗ್ರಹಿಸಬೇಕಾದುದು ಇವರ ಚಲನೆಯಲ್ಲಿ,

ಕರ್ನಾಟಕದ ಆರಂಭಿಕ ಜಾನಪದ ತಜ್ಞರೆನ್ನುವವರನ್ನು ನೋಡಿ. ಅವರು ಕವಿಗಳು ಮತ್ತು ರಾಷ್ಟ್ರೀಯವಾದಿಗಳು. ಇವರು ಜನಪದ ಸಾಹಿತ್ಯವನ್ನು ಕಂಡದ್ದು ಈ ನಾಡಿನ ಬೇರು ಮತ್ತು ಸಾರವನ್ನಾಗಿ, ಆ ಸಾಹಿತ್ಯ ಕೇವಲ ಸಾಹಿತ್ಯವಲ್ಲ ಜನಪದ - ಎ ಅಂತರಂಗ ಶೋಧದ ಕಡೆಗೆ ಅವರು ಸಮಾಜದ ಜ್ಞಾನದ ಪುಷ್ಪ ಎಂಬ ಗಮನಹರಿಸಿದವರೂ ಉಂಟು. ಶಿಷ್ಟವಾಗುವ ಮೂಲಕ ನಾವು ನಮ್ಮ ಚಲನೆಯನ್ನು ನಿಯಂತ್ರಿಸಿಕೊಳ್ಳುತ್ತೇವೆ, ಜನಪದರಾಗುವ ಮೂಲಕ ಕ್ರಿಯಾಶೀಲರಾಗುತ್ತೇವೆ ಎಂಬ ನಿತ್ಯಸತ್ಯವನ್ನು ಮನಗಂಡರು. ನಮ್ಮ ಕರ್ನಾಟಕದಲ್ಲಿ ಜಾನಪದ ಪ್ರಜ್ಞೆ ಮೂಡಿದುದೆ ನಮ್ಮ ಸ್ವಾತಂತ್ರ್ಯ ಚಳುವಳಿಗೆ ಎಣ್ಣೆ ಬತ್ತಿಯ ಕೊರತೆ ಇದೆ ಎಂಬುದನ್ನು ಮನಗಂಡಾಗ, ಸ್ವಾತಂತ್ರ ಚಳುವಳಿ ''ನಮ್ಮ'ದೆಂಬುದರ ಕೊರತೆಯನ್ನು ಅನುಭವಿಸಿದಾಗ, ಅಂದರೆ ಸೂಟುಬೂಟಿನವರ ಸಾಂಘಿಕ ಚಳುವಳಿ ಆಗಿದ್ದಾಗ ನಮ್ಮದು ಎಂಬುದು ಸಂವೃದ್ಧವಾಗಿರುವುದು ನಮ್ಮ ಜಾನಪದ ಜೀವನವಿಧಾನದಲ್ಲಿ ಎಂಬುದನ್ನು ದರ್ಶಿಸಿದರು. ಈ ನಮ್ಮದನ್ನು 'ದೇಶಿ' ಎಂದು ವಿವರಿಸಿಕೊಂಡರು. ಇವರಿಗೆ ಜಾನಪದಗೀನಪದ ಅಂಥ ಗೊತ್ತಿರಲಿಲ್ಲ. ಪಾಶ್ಚಾತ್ಯರನ್ನು ಓದಿ ತರ್ಜುಮೆ ಮಾಡಿದವರು ಈ ದೇಶಿಗೆ ಜಾನಪದ ಎಂದು ಕರೆದರು.

ಸಮಸ್ತರೂ ಹಂಚಿಕೊಳ್ಳಬಹುದಾದ ಬದುಕನ್ನು ದೇಶಿ ಎಂದು ನಾವು ಗ್ರಹಿಸಿದ್ದೇವೆ. ಭಾರತದ ಬಹುತೇಕ ಜೀವನ ವಿಧಾನ ದೇಶಿ ಆಗಿತ್ತು ಮತ್ತು ಆಗಿದೆ. ಶಿಷ್ಟ ಎಂಬುದು ಆಸ್ಥಾನ, ಅಗ್ರಹಾರ ಮತ್ತು ಮಠಮಾನ್ಯಗಳ ಸಂಸ್ಕೃತಿಯಾಗಿತ್ತು . ಅಲ್ಲೂ ಕೂಡ ಮಂತ್ರ ಪಠಣ ಶಿಷ್ಟವಾದರೆ ಮನೆಯ ಬದುಕು ದೇಶೀಯವೆ. ಭಾರತೀಯ ಶಿಷ್ಟ ಎನ್ನುವುದು ಒಂದು ಸಂವೃದ್ಧ ಹಾಗೂ ಸಮರ್ಥ ಸಂಸ್ಕೃತಿ ಅಲ್ಲ. ಅದೊಂದು ತಂತ್ರಗಾರಿಕೆಯ ಕಟ್ಟು ಕಥೆ, ಯಜಮಾನಿಕೆ, ಜೀವನದೃಷ್ಟಿಯಿಂದ ಹೇಳುವುದಾದರೆ ಒಂಟಿತನ. ಇದು ದೇಶಿಯನ್ನು ಬಳಕೆಗೆ ಇಟ್ಟುಕೊಂಡಿತ್ತು. ಆದರೆ ಅದನ್ನು ನಾಶ ಮಾಡುವ ಶಕ್ತಿ ಇರಲಿಲ್ಲ. ಜಾನಪದ ಒಂದು ಪ್ರತ್ಯೇಕ ವಿಷಯ ಎಂಬ ಚಿಂತನೆಯನ್ನು ಮೂಡಿಸಿದ್ದು ಪಾಶ್ಚಾತ್ಯ ಕೈಗಾರಿಕಾ ಜಗತ್ತು. ಅವರ ಶಿಷ್ಟ ನಮ್ಮವರ ಶಿಷ್ಟದಂತೆ ಶಾಸ್ತ್ರ ಪುರಾಣ ಆಗಿರಲಿಲ್ಲ. ಒಟ್ಟು ಕೈಗಾರಿಕೀಕರಣವೆಂಬುದೆ ಅವರ ಶಿಷ್ಟವಾಗಿ ಅದು ಇಂಗ್ಲೆಂಡ್ ಹಾಗೂ ತನ್ನ ಆಳ್ವಿಕೆಯ ದೇಶಗಳ ದೇಶೀ ಜೀವನ

ವಿಧಾನವನ್ನು ಅಸ್ತವ್ಯಸ್ತಗೊಳಿಸಿತು. ಜೀವನ ನಗರೀಕರಣ ಮತ್ತು ದೇಶೀಯತೆ ಎಂಬ ಎರಡು ಹೋಳುಗಳಲ್ಲಿ ಸ್ಪಷ್ಟವಾಗಿ ಒಡೆದುಕೊಂಡಿತು. ಶಿಷ್ಟವು ಆಳುವ ಮತ್ತು ವಸ್ತು ಸಂಸ್ಕೃತಿ ಎಂದೂ ದೇಶಿ ಸಾಮಾನ್ಯರ ಮತ್ತು ತಾತ್ವಿಕ ಸಂಸ್ಕೃತಿಯೂ ಆಗಿ ನಿರ್ವಚಿಸಲ್ಪಟ್ಟವು. ಈ ಹಿನ್ನೆಲೆಯಲ್ಲಿ ನೋಡಿದಾಗ ಪಾಶ್ಚಾತ್ಯ ಶಿಷ್ಟವೆಂಬುದು ವಸ್ತು ಸಂಸ್ಕೃತಿಯ ಅರ್ಥದಲ್ಲಿದ್ದು ಇದನ್ನು ಆಧುನಿಕ ಎಂದು ಕರೆದುಕೊಳ್ಳಲಾಗಿದೆ. ನಮ್ಮ ಶಿಷ್ಟ ಜಾತಿಸಂಸ್ಕೃತಿಯ ನೆಲೆಯಲ್ಲಿದೆ. ಆದರೆ ನಮ್ಮ ಜಾತಿಗಳನ್ನು ಕೇವಲ ವಸ್ತು ಸಂಸ್ಕೃತಿಯ ನೆಲೆಗಳು ಎಂದು ಕರೆಯಲಾಗದು.

ಪಾಶ್ಚಾತ್ಯ ಶಿಷ್ಟ ಮತ್ತು ಭಾರತೀಯ ಶಿಷ್ಟ ಒಂದೇ ಅಲ್ಲ. ಅದೇ ರೀತಿ ಪಾಶ್ಚಾತ್ಯ ಜಾನಪದ ಪರಿಕಲ್ಪನೆ ಮತ್ತು ಭಾರತೀಯ ಜಾನಪದ ಪರಿಕಲ್ಪನೆ ಸಮಾನಾರ್ಥಕ ಅಲ್ಲ. ಪಾಶ್ಚಾತ್ಯ ಜಾನಪದ ಅವರ ಶಿಷ್ಟ ಅಥವ ಅದಕ್ಕೆ ಸಮಾನ ಅಲ್ಲದ ಒಂದು ಜೀವನ ವಿಧಾನ ಎನ್ನುವುದಕ್ಕಿಂತ ಒಂದು ವಿಧದ ಸಾಮಗ್ರಿ ಸ್ವರೂಪ ಎನ್ನಬಹುದು. ಜೀವಂತ ಪಳಯುಳಿಕೆ ಮತ್ತು ಆಧುನಿಕ ದೂರವಾದ ಅಥವಾ ಆಧುನಿಕತೆಯ ಒಳಗೆ ಇರುವ ಆದರೆ ಆಧುನಿಕವಲ್ಲದ ಬದುಕು ಎಂದು ಕರೆದರು. ನಮ್ಮ ಜಾನಪದವೆಂಬುದು ಬೇರೆ ಬೇರ ಕಾಲಗಳಲ್ಲಿ ಸ್ಥಳಗಳಲ್ಲಿ ಮತ್ತು ಸ್ಥಿತಿಗಳಲ್ಲಿ ಬದುಕುತ್ತಿರುವ ಜನಪದಗಳ ಜೀವನ ವಿಧಾನ ಎಂದು ಕರೆಯಬಹುದು. ಇದು ಈ ದೇಶದ ದೇಶಿ ಎಂದರೆ ಬಹುಥರಗಳಲ್ಲಿ ಬದುಕುತ್ತಿರುವ ಬಹು ಸಂಸ್ಕೃತಿಗಳ ನಿತ್ಯದ ಜೀವನ ವಿಧಾನ. ಆದ್ದರಿಂದ ಪಾಶ್ಚಾತ್ಯ ಜಾನಪದ ಎಂಬ ಪದ ನಮ್ಮ ದೇಶಿ ಎಂಬ ಪದಕ್ಕೆ ಸಮಾನಾರ್ಥಕ ಅಲ್ಲ, ನಮ್ಮ ದೇಶಿ ಪರಿಕಲ್ಪನೆ ಜಾನಪದ ಪರಿಕಲ್ಪನೆಗಿಂತ ವಿಸ್ತಾರವಾದ ಅರ್ಥ ವ್ಯಾಪ್ತಿಯನ್ನು ಉಳ್ಳದ್ದು ಹಾಗೂ ಸಜೀವ ಜೀವನಕ್ರಮವನ್ನು ಕುರಿತದ್ದು.

ನಮ್ಮ ಜಾನಪದ ವಿದ್ವಾಂಸರು ಜಾನಪದದ ಸರಿಯಾದ ಅರ್ಥವನ್ನು ಹುಡುಕಲು 'ಸ್ಟಾಂಡರ್ಡ್ ಡಿಕ್ಷನರಿ ಆಫ್ ಫೋಕ್‌ಲೋರ್ ಅಂಡ ಮೈಥಾಲಜಿ' ಕೃತಿಗೆ ಹೋಗಬೇಕಾಗಿರಲಿಲ್ಲ. ನಮ್ಮ ಪಂಪ, ರನ್ನ, ಬ್ರಹ್ಮಶಿವ, ನಯಸೇನ, ಕುಮಾರವ್ಯಾಸ, ರತ್ನಕರವರ್ಣಿ, ಕನಕದಾಸ ಮೊದಲಾದ ಕೆಲವು ಕವಿಗಳನ್ನು ಆಳದಲ್ಲಿ ಅರ್ಥಮಾಡಿಕೊಂಡಿದ್ದರೆ ಸಾಕಾಗಿತ್ತು. ಕನಕದಾಸರ ರಾಮಧಾನ್ಯ ಚರಿತೆ ಒಂದನ್ನು ಶ್ರದ್ಧೆಯಿಂದ ಓದಿದ್ದರೆ ನಮ್ಮ ಜಾನಪದ ಪರಿಕಲ್ಪನೆಯ ಬೀಜ ಅಲ್ಲಿರುವುದು ಗೊತ್ತಾಗುತ್ತಿತ್ತು. ಶಿಷ್ಟ ದೇಶಿಯನ್ನು ಹೆದರಿಸುವ, ದೇಶೀ ಶಿಷ್ಟರ ಮರ್ಯಾದೆಯನ್ನು ಉಳಿಸಿಕೊಡುವ ಔದಾರ್ಯದಲ್ಲಿ ಜಾನಪದವಿದೆ. ಇದು ಪಾಶ್ಚಾತ್ಯ ಅರೆಸತ್ತ

ಜಾನಪದವಲ್ಲ ನಿತ್ಯ, ನಿರಂತರ ಜೀವನಮುಖಿಯಾದ ಜಾನಪದ. ಇನ್ನು ಮುಂದೆ ನಾವು ಜಾನಪದ ಪದವನ್ನು ಬಿಟ್ಟು ಸಂಸ್ಕೃತಿ ಅನುಸಂಧಾನ ಪ್ರಕ್ರಿಯೆಯಾದ ದೇಶಿಯನ್ನೆ ಬಳಸಬಹುದಾಗಿದೆ.

ಪಾಶ್ಚಾತ್ಯ ಜಾನಪದ ಪರಿಕಲ್ಪನೆಯನ್ನು ಇಟ್ಟುಕೊಂಡು ಜಾನಪದ ಕ್ಷೇತ್ರ, ಕ್ಷೇತ್ರ ಕಾರ್ಯಕರ್ತ, ಮತ್ತು ವಕ್ತೃಗಳನ್ನು ಹುಡುಕುತ್ತಿರುವ ಜಾನಪದ ವಿದ್ವಾಂಸರ ಸ್ಥಿತಿಗತಿಯನ್ನು ನೋಡಿದರೆ ನಾಚಿಕೆಯಾಗುತ್ತದೆ. ನಮ್ಮ ಜನಪದ ಕಥೆಯ ಅಜ್ಜಿಯೊಬ್ಬಳು, ತನ್ನ ದಡ್ಡ ಮಗ ಹೆಂಡತಿ ಊರಿಗೆ ದಾರಿ ಯಾವುದು ಎಂದು ಕೇಳಿದಾಗ ಆಕೆ ಊರೂರ ಮೇಲೆ ಹೋಗು ಎಂದಳಂತೆ. ಆತ ಊರೂರ ಮನೆಗಳ ಮೇಲೆ ಹತ್ತಿ ಹೋಗುತ್ತಿರುವಾಗ ಊರ ಜನ ಇದೇನು ಆಶ್ಚರ್ಯ ಎಂದು ಬೆರಗಾಗಿ ನೋಡಿದರಂತೆ. ಇದೇ ನಮ್ಮ ಜಾನಪದ ವಿದ್ವಾಂಸರ ಸ್ಥಿತಿಯೂ ಆಗಿದೆ. ಈ ದೇಶದ ೧% ಪ್ರದೇಶ, ೧% ಜನ ಮತ್ತು ೧% ವಿದ್ಯಾವಂತರನ್ನು ಬಿಟ್ಟರೆ ಉಳಿದುದೆಲ್ಲ ಜಾನಪದ ಕ್ಷೇತ್ರವೆ ಮತ್ತು ವಕ್ತೃಗಳೇ ಆಗಿದ್ದಾರೆ. ಅದು ತಿಳಿಯದೆ ತಮಗೆ ತಾವೇ ಫಾರಿನ್ ಆಗುವ ಜಾನಪದ ವಿದ್ವಾಂಸರ ಮೈಮರೆವೆಯನ್ನು ಕಂಡು ಏನು ಹೇಳಬೇಕೊ ತಿಳಿಯದು. ನಮ್ಮ ಜಾನಪದ ಅಧ್ಯಯನ ಎಡವಿ ಬಿದ್ದಿರುವುದು ಇಲ್ಲಿ. ಇದನ್ನು ಪುರಾತನ ಕಾಲದ ಬ್ರಾಹ್ಮಣಿಕೆ ಮಾದರಿ ಎನ್ನಬಹುದು. ಈಗಲೂ ನನಗೆ ಈ ಕರ್ಮಠ ಜಾನಪದ ವಿದ್ವಾಂಸರಿಗಿಂತ ನವೋದಯ ಕಾಲದ ಕವಿಚಿಂತಕರಾದ ಬಿಎಂಶ್ರೀ, ಬೆಟಗೇರಿ ಕೃಷ್ಣಶರ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೇಂದ್ರೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕುವೆಂಪು ಮೊದಲಾದವರು ನಿಜವಾದ ಕ್ರಿಯಾಶೀಲ ಜಾನಪದತಜ್ಞರು ಎನಿಸುತ್ತದೆ. ಹೆಚ್ಚಿನ ಪಾಲು ತಮ್ಮ ಚಿಂತನೆಯನ್ನು ಜನಪದ ಸಾಹಿತ್ಯಕ್ಕೆ ಸೀಮಿತಗೊಳಿಸಿದರು ಎನ್ನುವುದನ್ನು ಬಿಟ್ಟರೆ ಅವರ ಚಿಂತನೆಯ ಒಳನೆಲೆಯಲ್ಲಿ ದೇಶಿ ಎಂಬ ಸೃಜನಶೀಲವಾದ ಜಾನಪದ ಪರಿಕಲ್ಪನೆ ಗೋಚರವಾಗುತ್ತದೆ. ಹಾಗೆ ನೋಡಿದರೆ ಈ ಅರೆ ಸತ್ತ ಪಾಶ್ಚಾತ್ಯ ಜಾನಪದ ಪರಿಕಲ್ಪನೆಯಿಂದಲೇ ನಮ್ಮ ಜಾನಪದ ಅಧ್ಯಯನ ಹಿಂದೆ ಬೀಳುತ್ತಿದೆ.

ನಮ್ಮ ಜಾನಪದ ವಿದ್ವಾಂಸರು ನಮ್ಮ ದೇಶದ ಸಾಂಸ್ಕೃತಿಕ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಪಾಶ್ಚಾತ್ಯ ಜಾನಪದ ಗ್ರಹಿಕೆ ಮತ್ತು ಪರಿಕಲ್ಪನೆಯ ಹುಟ್ಟಿಗೆ ಇದ್ದ ಸಾಂಸ್ಕೃತಿಕ ಇತಿಹಾಸದಂತೆ ನಮ್ಮದೊಂದು ವಿಶಿಷ್ಟವೆನ್ನಬಹುದಾದ ಸಾಂಸ್ಕೃತಿಕ ಇತಿಹಾಸ ಇದೆ ಎನ್ನುವುದನ್ನು ತಿಳಿಯದ ಕಾರಣ ನಮ್ಮ ಜಾನಪದ ಅಧ್ಯಯನ ಕೈಕಟ್ಟಿ ಕುಳಿತಿದೆ. ಜಾನಪದ ಅಧ್ಯಯನದ ಜೊತೆಯಲ್ಲಿಯೆ ಹಳ್ಳಿಗೆ ಸಾಂಸ್ಕೃತಿಕ

ಯಜಮಾನಿಕೆಯ ನೇತೃತ್ವ ಬಂದಿರುವುದನ್ನು ಗುರುತಿಸಿ. ಇದೊಂದು ದಿಢೀರ್ ಕ್ರಿಯೆಯಲ್ಲ. ಭಾರತದ ಉಚ್ಚ ಸಂಸ್ಕೃತಿ ಎದುರಾದ ಸ್ಥಾಯಿ ಪ್ರತಿಭಟನೆಯ ಧ್ವನಿಗಳು ಇಲ್ಲಿವೆ. ನಗರದಿಂದ ಹಳ್ಳಿಗೆ ಮಾರ್ಗದರ್ಶನ ಸ್ಥಾನ ಬಂದಂತಿದೆ. ಜನಪದ ಗೀತೆಗಳನ್ನು ಸಂಗ್ರಹಿಸಿ ಪುಸ್ತಕ ಪ್ರಕಟಿಸಿದವರ ಉದ್ದೇಶವನ್ನು ಕುರಿತ ಪ್ರಸ್ತಾವನೆ ಮತ್ತು ಮುನ್ನುಡಿಗಳನ್ನು ಓದಿ ನೋಡಿ ಇಡೀ ದೇಶದ ಶೀಲ ಮತ್ತು ಅಭಿವೃದ್ಧಿ ಹಳ್ಳಿಯ ಕೇಂದ್ರದಲ್ಲಿದೆ. ಹಳ್ಳಿ ಚಲಿಸಿದರೆ ದೇಶ ಚಲಿಸುತ್ತದೆ ಎಂಬ ತತ್ವ ಪ್ರಣೀತವಾಗಿದೆ. ಇದರ ಮೂಲ ಕೇಂದ್ರ ಗಾಂಧೀಜಿ ಎಂಬುದು ನಿಜವಾದರೂ ದೇಶದ ಸ್ವಾತಂತ್ರ್ಯದ ಉದಯದ ಜೊತೆಗೇ ಸಹಜವೆಂಬಂತೆ ಗ್ರಾಮಕೇಂದ್ರಿತ ಚಿಂತನೆ ಅಸ್ತಿತ್ವ ಪಡೆದಿದೆ. ಈ ಕೇಂದ್ರದಲ್ಲಿ ಗಾಂಧಿ ಮೂಲಕ ರೈತ ಮತ್ತು ಅಂಬೇಡ್ಕರ್ ಮೂಲಕ ದಲಿತ ಪ್ರೊಜೆಕ್ಟ್ ಆಗಿದ್ದಾರೆ.

ನಮ್ಮ ಜಾನಪದ ಅಧ್ಯಯನದಲ್ಲಿ ಹಳ್ಳಿ ಸಾಂಸ್ಕೃತಿಕ ಯಜಮಾನಿಕೆಯನ್ನು ವಹಿಸಿಕೊಂಡಿದೆ. ಇಲ್ಲಿ ಭಾಷಾ ಯಜಮಾನಿಕೆಯ ಜೊತೆಗೆ ನವೀಕೃತ ರಾಜ್ಯ ಶಕ್ತಿಯೂ ಸೇರಿಕೊಂಡಿದೆ. ಈ ಸಂಚಯ ಬರುಬರುತ್ತ ದೇಶದ ಶಕ್ತಿಯನ್ನು ಬ್ರಾಹ್ಮಣಿಕೆಯಲ್ಲೂ ರಾಜ್ಯದ ಶಕ್ತಿಯನ್ನು ಶೂದ್ರತ್ವದಲ್ಲೂ ನಿರ್ವಚಿಸಿತು. ಈವೊಂದು ಪ್ರಬಲ ಶಕ್ತಿ ಜಾನಪದ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನಕ್ಕೆ ದೊಡ್ಡ ಚಾಲನೆ ಕೊಟ್ಟಿತು. ಭಾರತದ ಸಂದರ್ಭದಲ್ಲಿ 'ಗಾದೆ ವೇದಕ್ಕೆ ಸಮ' ಎಂಬ ಗ್ರಾಮೀಣ ಅನುಭವ ಜ್ಞಾನವನ್ನು ಎತ್ತಿಕೊಂಡು ಶೋಷಿತ ಪುರೋಹಿತಶಾಹಿ ಜ್ಞಾನಕ್ಕೆ ಪರ್ಯಾಯವಾಗಿ ಜನಪರಜ್ಞಾನದ ನೆಲೆಯಾದ ಜಾನಪದವನ್ನು ಎತ್ತಿಹಿಡಿಯಲಾಯಿತು. ಇದರಿಂದಾಗಿ ಜಾನಪದವನ್ನು ಮೊತ್ತದಲ್ಲಿ ಉಳಿಸುವ ತುರ್ತು ಹೆಚ್ಚಾಯಿತು. ಕೂಡಲೇ ರೈತಾಪಿ ವರ್ಗದ ವಿದ್ಯಾವಂತ ಜನ ಜಾನಪದವನ್ನು ತಮ್ಮ ಸಂಪತ್ತೆಂದೂ ಅದು ಕಳೆದುಹೋದರೆ ಮತ್ತೆ ಸಿಗುವುದಿಲ್ಲವೆಂದೂ ಬಹಳ ತುರ್ತಾಗಿ ಅದನ್ನು ಸಂಗ್ರಹಿಸಿ ವಿವರಿಸಿಕೊಳ್ಳಬೇಕೆಂಬ ಹಟಕ್ಕೆ ಬಿದ್ದರು. ಪ್ರತಿಯೊಂದು ರಾಜ್ಯದಲ್ಲಿಯೂ ಈ ಕೆಲಸ ನಡೆದಿದೆ. ಆದರೆ ಇದನ್ನು ಮತೀಯ ಸ್ವಭಾವದ ಬೆಳವಣಿಗೆ ಎಂದು ಕರೆಯುವಂತಿಲ್ಲ. ಭಾರತದ ಅನೇಕ ಬ್ರಾಹ್ಮಣ ವಿದ್ವಾಂಸರು ನಿಷ್ಠೆಯಿಂದ ಜಾನಪದ ಸಂಗ್ರಹವನ್ನು ಮಾಡಿ ಅಧ್ಯಯನ ಮಾಡಿದ್ದಾರೆ. ಈ ಎರಡೂ ವರ್ಗದ ಹಿಂದೆ ಹೊರದೇಶದಿಂದ ಬಂದು ಜಾನಪದ ಸಂಗ್ರಹ ಮತ್ತು ಅಧ್ಯಯನ ಮಾಡಿದವರಿದ್ದಾರೆ. ಇದನ್ನು ಭಾರತದ ಸಾಂಸ್ಕೃತಿಕ ಚಲನೆಯ ಅಂತರಗಳಲ್ಲಿ ನಡೆಯುವ ವೈದಿಕ ಶೂದ್ರರ ಸಾಂಸ್ಕೃತಿಕ ಮುಖಾಮುಖಿ ಎಂದಷ್ಟೆ ಕರೆಯಬಹುದು.

ಈ ಪ್ರಕ್ರಿಯೆಯಲ್ಲಿ ಶೂದ್ರರ ಹೆಸರಿನಲ್ಲಿ ಕೆಲಸ ಮಾಡದಿದ್ದರೂ ಆವೊಂದು ವರ್ಗ ಮುಖ್ಯ ಧಾರೆಯಲ್ಲಿದೆ. ಆದರೆ ಇವರು ತಮ್ಮ ಬದ್ಧತೆಯಲ್ಲಿ ದಾರಿ ತಪ್ಪಿರುವುದೂ ಎದ್ದು ಕಾಣುತ್ತದೆ. ಇವರ ರೈತಾಪಿ ಅಥವಾ ಗ್ರಾಮೀಣ ಚಿಂತನೆ ಗ್ರಾಮದಲ್ಲೇ ಇದ್ದ ಬಹುಸಂಖ್ಯಾತ ಮತ್ತು ಆ ಮಟ್ಟದ ಸ್ಥಿತಿವಂತ ಜನರ ಚಟುವಟಿಕೆಗೆ ಸೀಮಿತವಾಗಿದೆ. ದಲಿತ ಮತ್ತು ತಳವರ್ಗದ ಜನ ಈ ವರ್ಗದ ಜನರನ್ನು ದಾಟಬೇಕೆಂಬ ಕಾರಣಕ್ಕೆ ತಮ್ಮ ಪಾರಂಪರಿಕಜ್ಞಾನ ಪ್ರಸ್ತುತ ಸಂದರ್ಭಕ್ಕೆ ಅವಮಾನಕರ ಎಂದು ಭಾವಿಸಿದಂತೆ ಕಾಣುತ್ತದೆ. ದೇಶದ ಮಟ್ಟದಲ್ಲಿ ವೈದಿಕ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಬಲರಾಗಿರುವ ರೈತಾಪಿ ಜನರ ಸಂಸ್ಕೃತಿಯ ದಬ್ಬಾಳಿಕೆಯ ಪ್ರತಿಫಲವೇ ತಮ್ಮ ಜನಪದ ಸಂಸ್ಕೃತಿ ಎಂದೂ ಅದರ ನಿರಾಕರಣೆಯಿಂದಲೇ ತಮ್ಮ ಬಿಡುಗಡೆ ಸಾಧ್ಯವೆಂದು ಈ ಜನವರ್ಗ ಭಾವಿಸಿದ್ದರ ಕಾರಣವಾಗಿ ಅವರು ಜಾತಿ ಶೋಷಣೆಗೆ ಬೇರೆ ಯಾದ ತಮ್ಮದೇ ಬದುಕಿನ ಜ್ಞಾನ ಇದೆ ಮತ್ತು ಅದನ್ನು ಪುನರ್ ಸಂಘಟಿಸಿಕೊಂಡು ಎದುರು ನಿಲ್ಲಬೇಕೆಂಬ ಕೆಂಬ ಮನೋಧರ್ಮವನ್ನು ಬೆಳೆಸಿಕೊಂಡಂತೆ ಕಾಣಲಿಲ್ಲ. ಬಹುತೇಕ ತಳ ಮತ್ತು ಕೆಳಹಂತದ ಜನ ಜಾತಿಯ ಶೋಷಣಾ ಸಂಸ್ಕೃತಿಯ ವಿರುದ್ಧ ಎದುರು ನಿಲ್ಲುವಾಗ ದಲಿತರಂತೆಯೆ ಜಾತಿಹೇರಿಕೆಗೆ ಹೊರತಾಗಿ ತಾವು ಭೂಮಿಯ ಜೊತೆಗಿದ್ದು ಪಡೆದುಕೊಂಡ ಅಸಲಿ ಜ್ಞಾನವನ್ನೂ ಜಾತಿ ಸಮಾಜದ ಹೇರಿಕೆ ಎಂದು ತಿರಸ್ಕರಿಸಿದ್ದಾರೆ. ಇತ್ತೀಚಿನ ಆಫ್ರಿಕಾ ಖಂಡದ ಸಾಂಸ್ಕೃತಿಕ ಚಲನೆಯಿಂದಾಗಿ ಈ ವರ್ಗದ ಪ್ರಜ್ಞಾವಂತ ಜನ ಭಿನ್ನ ನೆಲೆಯಲ್ಲಿ ಯೋಚಿಸಲು ತೊಡಗಿದ್ದಾರೆ. ದಯ

ಚಿಂತನೆ ಮತ್ತು ಅಭಿವೃದ್ಧಿ ಕೇಂದ್ರ ಈಗ ನಗರಕ್ಕೆ ಬಂದಿದೆ. ಹಳ್ಳಿಯಲ್ಲಿ ರೈತ ಪ್ರಾಧಾನ್ಯತೆ ಇಲ್ಲ. ರೈತ ಕೂಡ ಜಮೀನುಳ್ಳ ಕೂಲಿಯಾಗಿದ್ದಾನೆ. ಇವನ ಜನಪದದ ಅಸ್ತಿತ್ವ ವಿಘಟನೆಗೊಂಡಿದೆ. ರೈತನ ಜೊತೆಗೆ ಇದ್ದ ಜನಪದ ಕಲಾಕಾರರು ಈಗ ನಗರದ ಕಡೆಗೆ ಮುಖ ಮಾಡಿದ್ದಾರೆ. ಅವರು ತಮ್ಮ ಕಲಾ ಪ್ರದರ್ಶನಕ್ಕೆ ಅವಕಾಶ ನೀಡಿರೆಂದು ಸರ್ಕಾರಿ ಮತ್ತು ಖಾಸಗಿ ಮಾಲೀಕರ ಕಡೆ ಅರ್ಜಿ ಹಿಡಿದು ನಿಂತಿದ್ದಾರೆ. ಕಲೆ ನಮ್ಮ ಸಂಸ್ಕೃತಿ ಮತ್ತು ನಮ್ಮ ಐಡೆಂಟಿಟಿ ಎಂಬ ಮನೋಭಾವ ಉಳಿದಿಲ್ಲ. ನಗರಕ್ಕಾಗಿ ತಮ್ಮದಾದ ಯಾವುದನ್ನೂ ಮಾರಲು ಸಿದ್ಧರಿದ್ದಾರೆ. ತಮ್ಮಲ್ಲಿ ಆಚರಣೆಯಾಗಿದ್ದ ಕಲೆ ಹೊರಗೆ ಮನರಂಜನೆಯಾಗಿದೆ. ಹಾಗೆ ತಮ್ಮ ಆಚರಣಾ ಕಲೆಯನ್ನು ಹಣಕ್ಕಾಗಿ ಮನರಂಜನೆ ಮಾಡಲು ಅವರಿಗೆ ಅಳುಕೇನೂ ಇಲ್ಲ. ಹೀಗೆ ಹಳ್ಳಿ ನಗರಕ್ಕೆ ಸರಕಾಗಿರುವುದರಿಂದ ಗ್ರಾಮ ಕೇಂದ್ರದಲ್ಲಿಟ್ಟು ಜಾನಪದವನ್ನು

ನಿರ್ವಚಿಸಿಕೊಳ್ಳಲು ಆಗದು. ಒಂದು ದೊಡ್ಡ ಜೀವನಕ್ರಿಯೆಯಾಗಿ ಬಂದಿರುವ ಜಾನಪದವನ್ನು ಹಳ್ಳಿಯ ಸರಕು ಎಂದು ಹೇಳುವುದು ಕೂಡ ಆಗದು.

ಗ್ರಾಮಕೇಂದ್ರ, ಪ್ರಭುಕೇಂದ್ರ, ನಗರ ಕೇಂದ್ರ ಮತ್ತು ತಂತ್ರಜ್ಞಾನ ಕೇಂದ್ರಗಳೆಂಬ ಜೈಲುಗಳಿಂದ ಜಾನಪದವನ್ನು ಬಿಡಿಸಿಕೊಳ್ಳಬೇಕಿದೆ. ಮೊತ್ತದ ಸಂಪಾದನೆ ಮತ್ತು ಮೊತ್ತದ ಬದುಕನ್ನು ಬದುಕದೆ ಹಂಚಿಕೊಂಡು ಬದುಕಿದ ಜನರ ಜೀವನ ಚಿಂತನೆಯನ್ನು ಕೇಂದ್ರ ಚಿಂತನೆಗೆ ಒಳಪಡಿಸಿ ಅಳೆಯುವುದು, ಬಳಿಯುವುದು ಸೂಕ್ತವಾಗಲಾರದು. ಕೇಂದ್ರಗಳು ಹುಟ್ಟುತ್ತವೆ, ಹೋಗುತ್ತವೆ. ಜನ ಎಂಬುವವರು ಮತ್ತು ಅವರ ಜೀವನ ಯಾವಕಾಲಕ್ಕೂ ಇರುತ್ತದೆ. ಅವರ ಜೀವನವೇ ಜಾನಪದವಾಗಿರುತ್ತದೆ. ಆ ನೆಲೆಯಲ್ಲಿ ಮಾತ್ರ ಜಾನಪದವನ್ನು ಗ್ರಹಿಸುವುದು ಮತ್ತು ಪರಿಕಲ್ಪಿಸಿಕೊಳ್ಳುವುದು ಉಚಿತವಾದ ಮಾರ್ಗವಾಗಿರುತ್ತದೆ.

ಈಗಾಗಲೆ ಜಾನಪದವನ್ನು ಪರಿಕಲ್ಪಿಸಿಕೊಂಡಿರುವ ಬಗೆಯನ್ನು ನೋಡಿದರೆ ಜಾನಪದ ಸಬ್ದತೆಯಲ್ಲಿ ಕಾಣದು ಎನ್ನುವುದು ಸ್ಪಷ್ಟವಾಗುತ್ತದೆ. ಆ ಬಗೆಗಳನ್ನು

ನೋಡಿ.

೧. ಸ್ಥಳಾಧಾರಿತ ಚಿಂತನೆ

| | ಸ್ಥಾನ ೧ | ಸ್ಥಾನ ೨ |
|---|---|---|
| ನೆಲೆ | ನಗರ | ಹಳ್ಳಿ |
| ನಿಲುವು | ನಗರೀಕತೆ | ಜಾನಪದ |
| ಪ್ರಕ್ರಿಯೆ | ಆಧುನಿಕತೆ | ಪುರಾತನತೆ |

9. ಜೀವನಾಧಾರಿತ ಚಿಂತನೆ

| | | |
|---|---|---|
| ನೆಲೆ | ಶಿಷ್ಟ | ಪರಿಶಿಷ್ಟ |
| ನಿಲುವು | ಮಾರ್ಗ | ದೇಶಿ |

| | | |
|---|---|---|
| ಪ್ರಕ್ರಿಯೆ | ನಗರ ಜೀವನ | ಸಾಮಾನ್ಯ ಜೀವನ |

೩. ನಡವಳಿಕೆ ಆಧಾರಿತ ಚಿಂತನೆ

| | | |
|---|---|---|
| ನೆಲೆ | ಸಂಸ್ಕರಿತ | ಪ್ರಾಕೃತ |
| ನಿಲುವು | ಆವೃತ | ಅನಾವೃತ |
| ಪ್ರಕ್ರಿಯೆ | ಒಂದು ಪದ್ಧತಿ | ಪದ್ಧತಿಗಳ ಕ್ರಿಯೆ |





೪. ಅಭಿವ್ಯಕ್ತಿ ಆಧಾರಿತ ಚಿಂತನೆ

| | | |
|---|---|---|
| ನೆಲೆ | ಪಠ್ಯ | ಸಾಂದರ್ಭಿಕ |
| ನಿಲುವು | ಬರಹ | ಪ್ರದರ್ಶನ |
| ಪ್ರಕ್ರಿಯೆ | ಏಕಸೃಷ್ಟಿ | ಪುನರ್ ಸೃಷ್ಟಿ |

೫. ಜನಾಧಾರಿತ ಚಿಂತನೆ

| | | |
|---|---|---|
| | ಪೌರೋಹಿತ | ಜನರಿಂದ ಜನರಿಗಾಗಿ |
| ನಿಲುವು | ಪರಿಷ್ಕೃತ | ತಲೆಮಾರು |

| | | |
|---|---|---|
| ಪ್ರಕ್ರಿಯೆ | ಉವಾಚ ನಿರ್ದೇಶಿತ | ಹಲವು ಜನ ಹಲವು ಮನ |

೬. ಭವಿಷ್ಯವಾದಿ ಚಿಂತನೆ

| | | |
|---|---|---|
| ನೆಲೆ | ಔದ್ಯಮಿಕ | ಹಂಚಿಕೊಂಡ |
| ನಿಲುವು | ಸಂಗ್ರಹಿಸು | ಉಳಿಸು |
| ಪ್ರಕ್ರಿಯೆ | ಬಳಸು ಮತ್ತು ಬಿಸಾಡು | ಬಳಸು ಮತ್ತು ಉಳಿಸು |

ಮೇಲಿನ ಚಿಂತನಾಕ್ರಮಗಳನ್ನು ನೋಡಿದರೆ ಜಾನಪದ ಹೋಲಿಕೆ, ವ್ಯತ್ಯಾಸಗಳ ನಿರ್ವಚನದಲ್ಲಿ ಸಿಗುತ್ತಿದೆಯೇ ಹೊರತು ಸ್ವತಂತ್ರ ಸ್ಥಿತಿಯಲ್ಲಿ ಅಲ್ಲ. ಹಾಗೆ ನೋಡಿದರೆ ಅದು ನಿರಂತರ ಬದುಕಿಗೆ ಅಡ್ಡಿಯಾದಂತಿದೆ ಇಲ್ಲವೆ ಒಂದು ಕಾಲಘಟ್ಟದಲ್ಲಿ ನಿಂತು ಕಳೆದು ಹೋದಂತಿದೆ. ಈ ಬಂಧಿತ ಸ್ಥಿತಿಯಿಂದ ಹೊರಗೆ ಬದುಕಿನ ಸ್ಥಿತಿಯಲ್ಲಿ ಜಾನಪದವನ್ನು ಗ್ರಹಿಸಿ ಪರಿಕಲ್ಪಿಸಿಕೊಳ್ಳಬೇಕಿದೆ.

ಜಾನಪದ ಎಷ್ಟೆಲ್ಲ ಅವಾಂತರಕ್ಕೆ ಒಳಗಾಗಲು ಹದಿನೆಂಟನೆಯ ಶತಮಾನದಲ್ಲಿ ಅವತರಿಸಿದ ಉದ್ಯಮಪತಿ ಆಧಾರಿತ ತಂತ್ರಜ್ಞಾನ. ಜೀವನದ ಅಭಿವೃದ್ಧಿಗೆ ಯಾಹೊತ್ತೂ ತಂತ್ರಜ್ಞಾನ ಬೇಕು. ಆದರೆ ಬಹುಜನರನ್ನು ಕೂಲಿಗಳನ್ನಾಗಿಯೂ ಕೆಲವರನ್ನು ಮಾತ್ರ ಪತಿಗಳನ್ನಾಗಿಯೂ ಮಾಡುವ ಜ್ಞಾನ ಜೀವ ಹಾಗೂ ಜನವಿರೋಧಿ. ಅಂಥ ತಂತ್ರಜ್ಞಾನವೆ ಜಾನಪದವನ್ನು ಪಳಯುಳಿಕೆ ಅಥವಾ ಜೀವಂತ ಪಳಯುಳಿಕೆ ಮಾಡಿತು. ಜಾಗತಿಕ ವಸ್ತುಗಳನ್ನು ಕೊಳ್ಳುವವ ಅಭಿವೃದ್ಧಿಶೀಲ, ಕೊಳ್ಳದವ ಹಿಂದುಳಿದವ ಎಂಬ ಈ ಹೊತ್ತಿನ ಜಾಗತಿಕ ತತ್ವ ಇದೇ ಮೂಲದಿಂದ ಬಂದದ್ದು. ಆದ್ದರಿಂದ ಪ್ರಸ್ತುತ ಜಾನಪದ ಚಿಂತಕ;

ಪುರದ ಪುಣ್ಯ

೧. ಕೈಗಾರಿಕಾ - ಉದ್ಯಮೀಕರಣ ಸಂಸ್ಕೃತಿಗೆ ಮಾತ್ರ ಬದ್ಧವಾಗಿ ಬಂದ ಜಾನಪದ ಗ್ರಹಿಕೆಯನ್ನು ಅತ್ತಕಡೆ ಇಡಬೇಕು.

9. ಜಾನಪದ ಪುರಾತನ,ಹಳೆಯ ಎಂಬ “ಆಧುನಿಕತೆ' ಪ್ರೇರಿತ ಗುಣವಾಚಕಗಳನ್ನು ಕೈಬಿಡುವುದು.

೩. ಜಾನಪದ ತಂತ್ರಜ್ಞಾನದ ಹೊರಗೆ ಇರುವ ಬುರುಡೆ ತತ್ವಜ್ಞಾನ ಅಲ್ಲ. ಅದು ಕಾಲ ಸಂಬಂಧಿ ತಂತ್ರಜ್ಞಾನವನ್ನು ಒಳಗೊಂಡ ಜೀವನ ವಿಧಾನ ಎನ್ನುವುದನ್ನು ಖಚಿತಪಡಿಸುವುದು.

೪. ಉದ್ಯಮಪತಿಯ ತಂತ್ರಜ್ಞಾನ ಜನ ಮತ್ತು ಜನಪದಕ್ಕೆ ಒಂದು ಆಕರ್ಷಕ ಸೆಳೆತವೆ ಹೊರತು ವಾಸ್ತವ ಅನುಭವಕ್ಕೆ ಬರದು ಎಂದು ತಿಳಿಯುವುದು.

೫. ಜನಪದ ಸಂಸ್ಕೃತಿ ನಿರಂತರ ಸಂಸ್ಕೃತಿ, ಆಧುನಿಕ ಸಂಸ್ಕೃತಿ, ತಾತ್ಕಾಲಿಕ ಸಂಸ್ಕೃತಿ. ಜನಪದ ಸಂಸ್ಕೃತಿ ಜೀವನಕ್ಕೆ ಗಾಳಿ ಮತ್ತು ನೀರು ಇದ್ದ ಹಾಗೆ, ಆಧುನಿಕತೆ ತಾರೆಯರು ಕ್ಷಣಕ್ಕೊಂದು ಸೀರೆ ಬದಲಿಸಿದ ಹಾಗೆ.

೬. ಒಟ್ಟೆಂಬ ಸಾರ್ವಕಾಲಿಕ ಜೀವನ ವಿಧಾನವೇ ಜಾನಪದ. ಅದು ಸರಳ, ಸಾಮಾನ್ಯ ಮತ್ತು ಎಲ್ಲರೂ ಹಂಚಿಕೊಳ್ಳಬಹುದಾದದ್ದು.

೭. ಜಾನಪದದಲ್ಲಿ ವಿಶಿಷ್ಟತೆ, ಶ್ರೇಷ್ಠತೆಗಳಿವೆ. ಇವು ಸಾಮುದಾಯಿಕ ಸಾಧನೆಗಳ ಹೊರತು ವ್ಯಕ್ತಿನಿಷ್ಠ ಸಾಧನೆಗಳಲ್ಲ. ಉದಾ : ಸಾಮಾನ್ಯ ಊಟ ಮತ್ತು ವಿಶೇಷ ಊಟ.

ಜಾನಪದವನ್ನು ಸರಿಯಾಗಿ ತಿಳಿದುಕೊಳ್ಳುವ ಪ್ರಜ್ಞೆ ನಮ್ಮಲ್ಲಿ ಹುಟ್ಟಬೇಕು. ಜಾನಪದವನ್ನು ತಿಳಿಯುವ ಸಾಮಾನ್ಯತೆ, ಸಮೂಹತೆ, ಸರಳತೆ, ಸೋಪಜ್ಞತೆ ಮತ್ತು ಸಜೀವತೆ ಎಂಬ ಐದು ಪ್ರಜ್ಞೆಗಳಿವೆ. ಇವು ಯಾವ ಸಮೂಹದಲ್ಲಿ ನಡವಳಿಕೆಯಲ್ಲಿವೆಯೊ ಅಲ್ಲಿ ಜಾನಪದ ಅಸಲಿಯಾಗಿರುತ್ತದೆ. ಇವುಗಳ ಕೊರತೆ ಇದ್ದ ಕಡೆ ಜಾನಪದ ನಲುಗಿರುತ್ತದೆ. ಅತಿ ವಿಶಿಷ್ಟತೆ ಮತ್ತು ಶೋಷಣಾಮೂಲದ ಪ್ರತ್ಯೇಕತೆ ಜನಪದ ಬದುಕಿನ ಗಂಡಾಂತರಕಾರಿಗಳು. ಇದಕ್ಕೆ ಸ್ಪಷ್ಟ ಉದಾಹರಣೆಗಳೆಂದರೆ ಜಾತಿ, ಮತೀಯ ಧರ್ಮ ಮತ್ತು ಪ್ರಚೋದಕ ಬದುಕನ್ನು ಹೇಳುವ ವಸ್ತು

ಸಂಸ್ಕೃತಿ. ಎಲ್ಲರ ಕೈಗೂ ಸಿಗುವ ತಂತ್ರಜ್ಞಾನ ಮಾನವನ ಅಭಿವೃದ್ಧಿ ಮಾಡುತ್ತದೆ. ಕೆಲವರ ಕೈ ವಶವಾಗಿರುವ ತಂತ್ರಜ್ಞಾನ ಜಾನಪದಗಳಲ್ಲಿ ತಾರತಮ್ಯ ಮಾಡುತ್ತದೆ.

## 14

ಪುರದ ಪುಣ್ಯ

ಸಂಸ್ಕೃತಿ ಮತ್ತು ಧರ್ಮವನ್ನು ಒಂದೇ ಅರ್ಥದಲ್ಲಿ ನೋಡಬಾರದು. ಸಂಸ್ಕೃತಿ ಎಂಬುದು ಬದುಕುವ ಒಟ್ಟು ವ್ಯವಸ್ಥೆ, ಅದರ ನೈತಿಕ ಬಲವೇ ಧರ್ಮ. ಈ ಧರ್ಮ ಇಲ್ಲದ ಸಂಸ್ಕೃತಿ ದುಷ್ಟ ಸಂಸ್ಕೃತಿಯಾಗಿರುತ್ತದೆ. ಧರ್ಮದ ಕೇಂದ್ರ ದೇವರು ಅಲ್ಲ ; ಸತ್ಯ ಅಥವಾ ನ್ಯಾಯ ನಿಷ್ಠೆ. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮಗಳು ಜಾನಪದ ಧರ್ಮಗಳಲ್ಲ ; ಇವು ವ್ಯಕ್ತಿಗಳು ಹೇಳಿದ ತತ್ವಗಳ ಮೊತ್ತ ಜನಪದ ಧರ್ಮದ ಸಾರ; 'ನೀ ನನಗಿದ್ದರೆ ನಾ ನಿನಗೆ ನೆನಪಿರಲಿ ನುಡಿ ನಮ್ಮೊಳಗೆ' ಎಂಬುದಾಗಿದೆ. ಜನಪದ ಧರ್ಮ ನ್ಯಾಯ ಸಮ್ಮತವಾದ ಬದುಕು, ಇನ್ನೊಬ್ಬರಿಗೆ ಹೇಳುವ ಬೊಗಳೆ ಅಲ್ಲ. ಜಾತಿಯ ತತ್ವದಲ್ಲಿ ಧರ್ಮ ಇಲ್ಲ. ಜಾನಪದವೂ ಇಲ್ಲ. ಜಾತಿಯನ್ನು ಮರೆತು ಸಾಮಾನ್ಯನಂತೆ ಬದುಕಿದ ಎಲ್ಲರ ಬದುಕಿನಲ್ಲೂ ಜಾನಪದ ಇದೆ.

ಸಾಮಾನ್ಯ ಎಂದರೆ ಯಾವ ಕಾಲಕ್ಕೂ ಸಾಮಾನ್ಯನಾಗಿಯೆ ಇರಬೇಕೆ. ಹೆಚ್ಚಿನ ಅನುಕೂಲಗಳನ್ನು ಅನುಭವಿಸಬಾರದೆ? ಸಾಮಾನ್ಯತೆಯಲ್ಲಿ ಎರಡು ಸ್ಥಿತಿಗಳಿವೆ. ೧. ಸಾರ್ವಕಾಲಿಕ ಸಾಮಾನ್ಯ ೨. ಸಮಕಾಲೀನ ಸಾಮಾನ್ಯ. ಸಾರ್ವಕಾಲಿಕ ಸಾಮಾನ್ಯವೆಂದರೆ ಜಗತ್ತಿನ ಎಲ್ಲ ಮನುಷ್ಯರಂತೆ ಇರುವುದು. ಮನುಷ್ಯ ಸಹಜವಾಗಿ ಅನುಭವಿಸುವ ಎಲ್ಲಾ ಸಾಮಾನ್ಯ ಸುಖಗಳನ್ನು ಅನುಭವಿಸುವುದು. ಸಮಕಾಲೀನ ಸಾಮಾನ್ಯತೆ ಎಂದರೆ ಆಯಾ ಕಾಲದಲ್ಲಿ ಬೆಳೆದ ಎಲ್ಲ ಜ್ಞಾನ-ತಂತಜ್ಞಾನದ ಸೌಲಭ್ಯಗಳನ್ನು ಎಲ್ಲರೂ ಹೊಂದಿಸಿಕೊಂಡು ಬದುಕುವುದು. ಹಾಗಾದಾಗ ಮಾನವನ ಸಂಬಂಧಗಳು ಲವಲವಿಕೆಯಿಂದ ಕೂಡಿರುತ್ತವೆ. ಲಕ್ಷಾಧಿಪತಿ, ಕೋಟ್ಯಾಧಿಪತಿ ಆಗಲು ಹೊರಟ ತಕ್ಷಣ ಮಾನವನ ಸಂಬಂಧಗಳು ಕುಸಿದು ಬೀಳುತ್ತವೆ. ಜನ-ಜನಪದಗಳ ಮಧ್ಯದ ಸೌಹಾರ್ದತೆ ಕುಸಿದು ಬೀಳುತ್ತದೆ. ಸಾಮಾನ್ಯತೆ ಎಂದರೆ ಬಡತನ ಅಲ್ಲ, ನೈಜವಾದ ಬದುಕು, ಆದ್ದರಿಂದಲೇ ಸಾಮಾನ್ಯತಾ ಸಮಾಜದಲ್ಲಿ ಸಾಮೂಹಿಕತೆ, ಸರಳತೆ, ಸೋಪಜ್ಞತೆ ಮತ್ತು ಸಜೀವತೆಗಳು ಇರುತ್ತವೆ. ಶೋಷಣಾ ಸಮಾಜದ ಯಜಮಾನರನ್ನು ಉಳಿದು ಆ ಸಮಾಜದ ಬಡವರಲ್ಲೂ ಬಹುಪಾಲು ಸಾಮಾನ್ಯತಾ ಸಂಸ್ಕೃತಿ ನಡವಳಿಕೆಯಲ್ಲಿರುತ್ತದೆ. ಬಡವರು ಎಂಬ ಸ್ಥಿತಿ ಹುಟ್ಟಿಕೊಂಡದ್ದೆ ಶೋಷಣಾಮೂಲದ ಶ್ರೀಮಂತಿಕೆ ಸಂಸ್ಕೃತಿಯಿಂದ, ಸಾಮಾನ್ಯತಾ ಸಮಾಜದಲ್ಲಿ ಬಡತನ ಎಂಬುದು ಇರುವುದಿಲ್ಲ. ಹಾಗೊಂದು ವೇಳೆ ಬಡತನ ಇದ್ದರೆ ಅದು ತಾರತಮ್ಯದಿಂದ ಬಂದುದಲ್ಲ, ದುಡಿಮೆಯ ಕೊರತೆಯಿಂದ ಬಂದುದಾಗಿರುತ್ತದೆ. ಆ

ಸಾಮಾನ್ಯತಾ ಸಮಾಜ (ಅಂದರೆ ಜನಪದದಲ್ಲೂ ವಿಶಿಷ್ಯತೆಗಳಿರುತ್ತವೆ. ಇವು ವ್ಯಕ್ತಿ ಅಥವ ಸಮಾಜದ ನೈಪುಣ್ಯದ ಆವಿಷ್ಕಾರದಿಂದ ಹುಟ್ಟುತ್ತವೆ. ಒಂದು ಕಾಲದ



ತಂತ್ರಜ್ಞಾನವೆಂಬ ನೈಪುಣ್ಯ ಏಕಕಾಲದಲ್ಲಿ ಎಲ್ಲಾ ಸಮುದಾಯಗಳಲ್ಲೂ ಕಾಣಿಸಿಕೊಳ್ಳುವುದಿಲ್ಲ. ಎಲ್ಲಿ ಮಾನಸಿಕ ವಿಕಾಸ ವಿಶೇಷವಾಗಿ ಸಾಧ್ಯವಾಗುತ್ತದೆ ಅಲ್ಲಿ ಹೊಸ ಜ್ಞಾನ ಹುಟ್ಟಿ ಬೇರೆಲ್ಲ ಕಡೆಗೆ ಅದರ ಫಲ ಹರಡುತ್ತದೆ. ಪ್ರತ್ಯೇಕ ವಿಶಿಷ್ಟತೆಯನ್ನು ಅನುಭವಿಸಬೇಕೆಂಬ ದುರುಳ ಹುಟ್ಟಿದ ಕಡೆ ಆತ ವಿಶಿಷ್ಟ ಶೋಧವನ್ನು ತನ್ನದಾಗಿಸಿಕೊಂಡು ಸಾಮಾನ್ಯ ಸಮಾಜವನ್ನು ವಂಚಿಸುತ್ತಾನೆ. ಆಗ ಸಾಮಾನ್ಯ ಮತ್ತು ಶಿಷ್ಟ ಎಂಬ ವರ್ಗಗಳು ಉಂಟಾಗುತ್ತವೆ.

ಯಾವ ದೇಶ ಅಥವ ಯಾವ ಸಮಾಜವನ್ನೇ ತೆಗೆದುಕೊಳ್ಳಿ, ಯಾವ ಕಾಲದಲ್ಲೂ ಸಾಮಾನ್ಯ ಮತ್ತು ವಿಶಿಷ್ಟ ಎನ್ನುವ ಜನವರ್ಗಗಳು ಇರುತ್ತವೆ. ರಾಜಪ್ರಭುತ್ವ ಇದ್ದ ಕಾಲದಲ್ಲಿ ರಾಜ ಕುಟುಂಬ, ಪುರೋಹಿತ ವರ್ಗ, ಶ್ರೇಷ್ಠಿಗಳು ಎಂದೂ ಮತ್ತು ಆಡಳಿತ ವರ್ಗ ವಿಶಿಷ್ಟವೆಂದೂ ಇತರರು ಪ್ರಜೆಗಳು ವಿಂಗಡಣೆಯಾಗಿತ್ತು. ಈ ವಿಶಿಷ್ಟರಿಗೆ ಹೆಚ್ಚಿನ ಅನುಕೂಲಗಳು, ಅಧಿಕಾರವೂ ಇತ್ತು. ಜನಸಾಮಾನ್ಯರಿಗೆ ಸಾಮಾನ್ಯ ಸೌಲಭ್ಯಗಳು ಮತ್ತು ನಿರಂತರ ದುಡಿಮೆ ಅವರ ಬದುಕಾಗಿತ್ತು. ಭಾರತದ ಜಾತಿ ಸಮಾಜವನ್ನು ಒಟ್ಟಾಗಿ ತೆಗೆದುಕೊಂಡರೆ ಬ್ರಾಹ್ಮಣರು, ವೈಶ್ಯರು ಮತ್ತು ಕ್ಷತ್ರಿಯರು ವಿಶಿಷ್ಟ ವರ್ಗವಾಗಿ ಪರಿಗಣಿಸಲ್ಪಟ್ಟಿದ್ದ ಇವರು ವಿಶೇಷ ಅನುಕೂಲ ಮತ್ತು ಅಧಿಕಾರಕ್ಕೆ ಭಾಜನರಾಗಿದ್ದರು. ಶೂದ್ರರು ಎಂಬುವವರು ನಿರಂತರ ದುಡಿಯುವವರೂ ಮತ್ತು ಜಾತಿಯಿಂದ ಕೆಳಗೆ ಇರುವವರೂ ಆಗಿದ್ದರು. ಆಧುನಿಕ ಸಮಾಜದಲ್ಲೂ ಸಾಮಾನ್ಯ ಮತ್ತು ವಿಶಿಷ್ಟ ಎಂಬ ಎರಡು ಪ್ರತ್ಯೇಕ ವರ್ಗಗಳು ಕಾಣುತ್ತವೆ. ನಿರಂತರ ರಾಜಕಾರಣದಲ್ಲಿ ಇರುವವರು, ನೌಕರ ವರ್ಗದವರು, ಉಪಾಧ್ಯಾಯ ವರ್ಗದವರು ಮತ್ತು ವ್ಯಾಪಾರಸ್ಥರು, ಮೇಲುವರ್ಗದವರಾಗಿ ಪರಿಗಣಿಸಲ್ಪಟ್ಟು ಆಡಳಿತ ಶಾಹಿಯ ಭಾಗಗಳಾಗಿದ್ದಾರೆ. ರೈತರು, ದಲಿತರು, ಕೆಳ-ತಳ ಜನವರ್ಗದವರು ಸಾಮಾನ್ಯ ವರ್ಗಕ್ಕೆ ಸೇರುತ್ತಾರೆ. ಸಾಮಾನ್ಯ ವರ್ಗದಲ್ಲಿ ಸಮಾನವಾದ ಬದುಕು ಸರ್ವೇಸಾಧಾರಣವಾಗಿದ್ದು ಅವರ ನಂಬಿಕೆ ನಡವಳಿಕೆ, ವಿಚಾರ- ಆಚಾರ, ಕಲೆ-ಸಾಹಿತ್ಯ, ಕಸುಬು, ಕಾನೂನು ಕಟ್ಟಳೆ ಎಂಬುವು ಸಾಮಾನ್ಯ ಸಂಸ್ಕೃತಿಗೆ ಸೇರುತ್ತವೆ. ಇದನ್ನೇ ನಾವು ಜಾನಪದ ಎಂದು ಕರೆಯುವುದು. ಮೇಲು ಜಾತಿ, ಮೇಲು ವರ್ಗದವರ ನಂಬಿಕೆ, ನಡವಳಿಕೆ, ವಿಚಾರ ಆಚಾರಗಳು ಬೇರೆಯಾಗಿರುತ್ತವೆ.

ಇವರು ಸಮಕಾಲೀನ ಭೌತಿಕ ಸಾಮಗ್ರಿಗಳ ಉಪಭೋಗಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಜನಸಾಮಾನ್ಯರು ತತ್ವ ಜೀವನಕ್ಕೆ ಒತ್ತು ನೀಡುತ್ತಾರೆ. ಇವರ ಬದುಕು

ಅನಂತ ಕಾಲವನ್ನು ಉದ್ದೇಶಿಸಿರುತ್ತದೆ. ಶಿಷ್ಟರು ತಾನುಂಟು ಮೂರುಲೋಕ ಉಂಟು ಎಂಬ ತತ್ವಕ್ಕೆ ಬದ್ಧರಾಗಿದ್ದರೆ, ಜನಸಾಮಾನ್ಯರು ಜಗತ್ತು ಇದ್ದರೆ ನಾನುಂಟು, ಎಲ್ಲರಂತೆ ನಾನು, ಎಂಬ ಜೀವನ ನಿಲುವಿಗೆ ಬದ್ಧರಾಗಿರುತ್ತಾರೆ. ಇದನ್ನೇ ಜನಪದ ಬದುಕು ಎನ್ನುತ್ತೇವೆ. ಇವರು ತಮ್ಮ ನಂಬಿಕೆ ನಡವಳಿಕೆ, ವಿಚಾರ-ಆಚಾರ, ಭಾಷೆ, ಭಾವನೆ, ಕಲೆ, ಧರ್ಮ, ಕಾನೂನು, ಊಟ -ಉಡುಪುಗಳ ಮೂಲಕ ಉತ್ಪತ್ತಿ ಮಾಡುವ ಜೀವನಕ್ರಮವನ್ನೇ ಜಾನಪದ ಎನ್ನುತ್ತೇವೆ. ಪ್ರತಿಯೊಂದು ಸಾಮಾನ್ಯ ಸಮಾಜ ಮತ್ತು ವಿಶಿಷ್ಟ ಸಮಾಜದಲ್ಲಿ ಮತ್ತೆ ಸಾಮಾನ್ಯ ಸೃಷ್ಟಿ ಮತ್ತು ವಿಶಿಷ್ಟ ಸೃಷ್ಟಿ ಎಂಬ ಶೋಧನೆಗಳಿವೆ. ಸಾಮಾನ್ಯ ಸಮಾಜದ ಊಟೋಪಚಾರದ ಉದಾಹರಣೆ ತೆಗೆದುಕೊಳ್ಳಿ. ಸಾಮಾನ್ಯ ಬೆಳಗಿನ ಆಹಾರ ರೊಟ್ಟಿ ಮಧ್ಯಾಹ್ನದ ಊಟ ರೊಟ್ಟಿಪಲ್ಯ ಅಥವಾ ಮುದ್ದೆಸಾರು, ವಿಶೇಷವಾಗಿ ಹಬ್ಬ ಜಾತ್ರೆ, ಉತ್ಸವ ಮತ್ತು ಜೀವನಾವರ್ತನ ಆಚರಣೆಗಳಲ್ಲಿ ಹೋಳಿಗೆ, ವಡೆ, ಪಾಯಸ, ಬಾತು ಅಥವ ಬಾಡಿನ ಸಾರು ಮತ್ತು ಇತರ ವೆರೈಟಿಗಳನ್ನು ಮಾಡುತ್ತಾರೆ. ಊಟದಲ್ಲಿ ಸಾಮಾನ್ಯ-ವಿಶೇಷ ಇರುವಂತೆ ವ್ಯಕ್ತಿಗಳಲ್ಲೂ ಇರುತ್ತಾರೆ. ಪಟೇಲ, ಶಾನುಭಾಗ, ಸಾಹುಕಾರ, ನ್ಯಾಯಗಾರ, ಕಲಾಕಾರ, ಪೂಜಾರಿ, ತತ್ವಕಾರ ಮತ್ತು ತಕರಾರು ಮನುಷ್ಯ ಎಂಬ ವಿಶಿಷ್ಟ ವ್ಯಕ್ತಿತ್ವದವರು ಇರುತ್ತಾರೆ. ಶಿಷ್ಟ ಸಮಾಜದಲ್ಲಿಯೂ ಸಾಮಾನ್ಯ ಆಹಾರ, ಸಾಮಾನ್ಯ ಜೀವನ ಪದ್ದತಿ ಎಂಬುದು ಇರುತ್ತದೆ. ಇದು ದಿನನಿತ್ಯದ ಪದ್ದತಿ. ಅದರಲ್ಲೂ ವಿಶೇಷ ಆಚರಣಾ ಸಂದರ್ಭಗಳಾದ ಪಾರ್ಟಿ, ಡ್ರೆಸ್, ಊಟ, ವ್ಯವಹಾರ ಮೀಟಿಂಗ್, ಗ್ರೀಟಿಂಗ್ ಮೇಟಿಂಗ್ ಮುಂತಾದ ನಡವಳಿಕೆ ಇರುತ್ತವೆ.

ಅಂದರೆ ಶಿಷ್ಟ-ವಿಶಿಷ್ಟವೆಂಬುದು ಯಾವುದೇ ಒಂದು ವರ್ಗದ ಸಂಸ್ಕೃತಿಗೆ ಸೀಮಿತವಾದುದಲ್ಲ. ಎಲ್ಲ ವರ್ಗಗಳಲ್ಲೂ ಅವೆರಡೂ ಉಂಟು. ಸಾಮಾನ್ಯ ನಡವಳಿಕೆ ಅಥವ ಸಂಸ್ಕೃತಿ ಎಂಬುದು ಸಾರ್ವಕಾಲಿಕ, ಇದೇ ಜಾನಪದ, ಸಕಾಲಿಕವೆಂಬ ಸಂತೋಷ, ಮುದ, ಮಜ ಅಥವ ಶೋಕಿ ವಿಶೇಷ ಎನಿಸಿಕೊಳ್ಳುತ್ತದೆ. ಸದಾ ಇಂಥ ವಿಶೇಷವನ್ನೇ ಅನುಭವಿಸಬೇಕೆನ್ನುವವರು ಸದಾ ಪ್ರತ್ಯೇಕ ಶಿಷ್ಟರಾಗಿ ಬದುಕಲು ಬಯಸುತ್ತಾರೆ. ಇಂಥ ಸದಾ ಪ್ರತ್ಯೇಕ ಶಿಷ್ಟವಾಗಿ ಬದುಕಬೇಕೆನ್ನುವ ಜನ ಇತರರನ್ನು ಶೋಷಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ಅವರು ಅಡ್ಡಮಾರ್ಗ ಹಿಡಿಯುತ್ತಾರೆ. ಬೇರೆ ಬೇರೆ ದೇಶ ಮತ್ತು ಜನಾಂಗಗಳ ಪುರೋಹಿತಶಾಹಿ ಮತ್ತು ಬಂಡವಾಳಿಗರು ಹೀಗೆ ಬದುಕಿದ ದಾಖಲೆಗಳಿವೆ. ಬದುಕುತ್ತಿರುವ ಸ್ಥಿತಿ ಇದೆ.

ಪುರದ ಪುಣ್ಯ

ಈಗ ಶಿಷ್ಟರಲ್ಲೂ ಎರಡು ವಿಧ : ಸಾಮಾನ್ಯ ಶಿಷ್ಟ ಮತ್ತು ಪ್ರತ್ಯೇಕ ಶಿಷ್ಟ ಎಂದು ನಾವು ತಿಳಿದೆವು. ಸಾಮಾನ್ಯ ಶಿಷ್ಟವೆಂಬುದು ಆಯಾಕಾಲದ ಸಾಮಾಜಿಕ-ರಾಜಕೀಯ ಇತಿಹಾಸದ ಕಾರಣದಿಂದ ಹುಟ್ಟುತ್ತದೆ. ವಿಶೇಷ ಅವಕಾಶ ಕಳೆದು ಹೋದಾಗ ಸಾಮಾನ್ಯವಾಗುತ್ತದೆ. ಒಂದು ಕಾಲದಲ್ಲಿ 'ಅರಸು' ಜನಾಂಗ ಕರ್ನಾಟಕದ ರಾಜ ಮನೆತನವಾಗಿತ್ತು. ಈಗ ಅದು ಹಿಂದುಳಿದ ವರ್ಗದ ಪಟ್ಟಿಗೆ ಸೇರಿದೆ. ಕಲಚೂರ್ಯವಂಶ ರಾಜ್ಯವಾಳುತ್ತಿದ್ದಾಗ ಕ್ಷೌರಿಕ ವರ್ಗ ಆಳುವ ವರ್ಗವಾಗಿತ್ತು. ರಾಜಗೊಂಡ ಎನ್ನುವ ಜನವರ್ಗ ಒಂದು ಕಾಲದಲ್ಲಿ ದಕ್ಷಿಣ ಭಾರತದ ಕಡೆ ರಾಜ್ಯವಾಳಿದ ಜನಾಂಗ, ಈಗ ಅವರು ಪರಿಶಿಷ್ಟ ವರ್ಗಕ್ಕೆ ಸೇರುತ್ತಾರೆ. ಹೈದರಾಬಾದ್ ನಿಜಾಮನ ರಾಜ್ಯಭಾರ ಇದ್ದಾಗ ಸಿದ್ಧಿಯರು ಸೈನಿಕ ಜನವರ್ಗವಾಗಿದ್ದರು. ಈಗ ಅವರು ಆದಿವಾಸಿ ಗುಂಪಿಗೆ ಬರುತ್ತಾರೆ. ಆದರೆ ಪ್ರತ್ಯೇಕ ಶಿಷ್ಟ ಇದೆಯಲ್ಲ ಇದು ನಿರಂತರ ಸುಖಸಂಪತ್ತಿನಿಂದ ಅಥವ ಇತರರಿಗಿಂತ ಹೆಚ್ಚಿನ ಅನುಕೂಲಗಳಿಂದ ಬದುಕಲು ಹವಣಿಸುತ್ತದೆ. ಅದಕ್ಕಾಗಿ ಸದಾ ಜಾಗೃತವಾಗಿರುತ್ತದೆ. ಯಾವ ಕಾಲ ಬಂದರೂ, ಯಾವ ಸಾಮಾಜಿಕ ಬದಲಾವಣೆಯಾದರೂ ಅವರು ತಮ್ಮ ಅನುಕೂಲಸಿಂಧು ನಡವಳಿಕೆಯನ್ನು ಉಳಿಸಿ ಕೊಳ್ಳುತ್ತಾರೆ. ನಮ್ಮ ದೇಶದ ಪುರೋಹಿತ ವರ್ಗವನ್ನು ಇದಕ್ಕೆ ಉತ್ತಮ ಉದಾಹರಣೆಯಾಗಿ ನೀಡಬಹುದು. ಇಂಥ ವರ್ಗ ಜನದೂರ, ಎಂದರೆ ಜನಪದ ದೂರ. ಇವರಿಗೆ ಜಾನಪದವೂ ದೂರ. ಇವರು ಪುರಾತನ ಆದಿವಾಸಿಗಳಂತೆ ಆಧುನಿಕರ ಮಧ್ಯೆಯೂ ಪ್ರತ್ಯೇಕವಾಗಿ ಬದುಕುತ್ತಾರೆ. ಸ್ಪಶ್ಯ - ಅಸ್ಪೃಶ್ಯ, ಶ್ರೇಷ್ಟ ಕನಿಷ್ಟ, ಆಚಾರ-ಅನಿಷ್ಟ ಎಂಬ ಮೌಲ್ಯಗಳನ್ನು ಸೃಷ್ಟಿ ಮಾಡಿ ತಾವು ಸ್ವರ್ಗದಲ್ಲಿ ಬದುಕುತ್ತ ಇತರರು ನರಕ ಸದೃಶವಾಗಿ ಬದುಕುವಂತೆ ಮಾಡುತ್ತಾರೆ. ಇಂಥ ತಾರತಮ್ಯ ಜನವಿರೋಧಿ ಜನವರ್ಗವನ್ನು 'ಜನಪದ' ಎಂದು ಕರೆಯುವುದು ಕಷ್ಟ ಇವರಲ್ಲಿ ಉತ್ಪತ್ತಿಯಾಗುವ ಜಾನಪದ ಕನಿಷ್ಟ .

'ಜನಪದ'ಕ್ಕೆ ಶಿಷ್ಟ ವಿಶಿಷ್ಟ ಅನಿಷ್ಟ, ಕನಿಷ್ಟ ಎಂಬ ಕಳಂಕ-ತಾರತಮ್ಯ ಇಲ್ಲ. ಸಾಮಾನ್ಯತಾ ಬದುಕನ್ನು ಬದುಕುತ್ತಿರುವುವೆಲ್ಲ ಜನಪದಗಳ, ಸಾರ್ವಕಾಲಿಕವಾಗಿ ಅವು ಸಾಮಾನ್ಯತಾ ಸಮಾಜದ ತತ್ವಕ್ಕೆ ಬದ್ಧವಾಗಿವೆ. ಸಾಂದರ್ಭಿಕವಾಗಿ ವಿಶೇಷ ನಡವಳಿಕೆಯನ್ನು ನಿರ್ವಹಿಸುತ್ತವೆ. ತಮ್ಮ ಸಾಮಾನ್ಯತಾ ಬದುಕಿಗೆ ಆಘಾತ ಉಂಟಾದಾಗ ವಿಘಟಿತವಾಗುತ್ತವೆ. ಕೆಲಕಾಲ ಈ ಅಸ್ವಾಸ್ಥ್ಯ ಮುಂದುವರಿದು ಮತ್ತೆ ಸಮಕಾಲೀನ ಅವಶ್ಯಕತೆಗೆ ಅನುಗುಣವಾಗಿ ಪುನರ್‌ಸಂಘಟಿತವಾಗುತ್ತವೆ. ಅವು ಎಂದೆಂದೂ ತಮ್ಮ ನಿರಂತರತೆಯನ್ನು ಕಾಯ್ದುಕೊಳ್ಳುತ್ತವೆ.

ಪ್ರತಿಯೊಂದು 'ಜನಪದ'ಕ್ಕೂ ಒಂದು ಸಮಾನತಾ ತತ್ವ ಇರುತ್ತದೆ. ಅದು ವೃತ್ತಿ ಆಧಾರಿತ ತತ್ವ. ಆ ಕಾರಣಕ್ಕೆ ವೃತ್ತಿಗಳು ಬದಲಾದಂತೆ ಹೊಸ ಜನಪದಗಳು ಅಸ್ತಿತ್ವಕ್ಕೆ ಬರುತ್ತವೆ. ಒಂದು ಜನಪದಕ್ಕೆ ಮೊದಲಿದ್ದ ಅಸ್ತಿತ್ವ ಹೋಗಿ ಹೊಸ ಅಸ್ತಿತ್ವ ಬರಬೇಕಾದರೆ ಯುಗಾಂತರ ಬದಲಾವಣೆಗಳ ಸಂಭವಿಸಬೇಕು. ಇಡೀ ಜನಪದ ಬದಲಾಗದೆ ಅದರೊಳಗಿಂದ ಕೆಲವರು ಹೋಗಿ ಮತ್ತು ಕೆಲವರು ಬಂದು ಹೊಸ ಅಸ್ತಿತ್ವ ಸಾಧ್ಯವಾಗಬಹುದು. 'ಜಾತಿ ಜನಪದ'ದೊಳಗೆ ಇವೆಲ್ಲ ಅಸಾಧ್ಯ. ಜಾತಿ ಶೋಷಣಾತತ್ವಕ್ಕೆ ಬದ್ಧವಾಗಿರುವುದರಿಂದ ಕಾಲ ಬದಲಾದಂತೆ ಶೋಷಣಾ ತತ್ವಗಳಲ್ಲಿ ಮಾರ್ಪಾಡು ಆಗಬಹುದೆ ವಿನಹ ಶೋಷಣಾಮೂಲ ನೆಲೆ ಬದಲಾಗದು.

ಆಧುನಿಕ ಜೀವನ ಪ್ರಕ್ರಿಯೆ ಜನಪದಗಳ ಅಸ್ತಿತ್ವವನ್ನು ಬದಲಾಯಿಸಿದೆ. ಜಗತ್ತಿನ ಅನೇಕ ಕಡೆ ಇಂಥ ಬದಲಾವಣೆಗಳನ್ನು ಕಂಡಿದ್ದೇವೆ. ನಮ್ಮ ಜಾತಿ ಜನಪದಗಳು ಬದಲಾಗಿಲ್ಲ. ಅದರೊಳಕ್ಕೆ ಹೊಸ ಜನ ಬರುವುದು ಆಗದು. ಆದರೆ ಅದರೊಳಗಿಂದ ಜನ ಹೊರಕ್ಕೆ ಹೋಗಿ ಬೇರೆ. ಜನಪದಗಳಲ್ಲಿ ಗುರುತಿಸಿಕೊಂಡಿದ್ದಾರೆ. ಅದೂ ಕೂಡ ತಾತ್ಕಾಲಿಕ, ಜಾತಿ ಜನಪದದಿಂದ ಕಾರ್ಮಿಕವರ್ಗಕ್ಕೆ ಹೋಗಿ ಕಾರ್ಮಿಕ ಜನಪದದಲ್ಲಿ, ನೌಕರ ವರ್ಗಕ್ಕೆ ಹೋಗಿ ನೌಕರ ಜನಪದದಲ್ಲಿ, ಅಧ್ಯಾಪಕರ ವರ್ಗಕ್ಕೆ ಹೋಗಿ ಅಧ್ಯಾಪಕ ಜನಪದದಲ್ಲಿ, ವಿದ್ಯಾರ್ಥಿ ವರ್ಗಕ್ಕೆ ಹೋಗಿ ವಿದ್ಯಾರ್ಥಿ ಜನಪದದಲ್ಲಿ ವ್ಯಾಪಾರಿ ವರ್ಗಕ್ಕೆ ಹೋಗಿ ವ್ಯಾಪಾರಿ ಜನಪದದಲ್ಲಿ.. ಹೀಗೆ ಗುರುತಿಸಿಕೊಂಡಿದ್ದಾರೆ. ಆದರೆ ಇದು ಹಗಲು ವೇಷದ ನಡವಳಿಕೆಯಾಗಿದೆ. ಸಂಜೆ, ಕೆಲಸ ಮುಗಿದ ಮೇಲೆ ಮನೆಗೆ ಬಂದಾಗ ಆತ ತನ್ನ ಮೂಲ ಜಾತಿ ಜನಪದದ ಮನೆಗೆ ಹಿಂತಿರುಗಿದ್ದಾನೆ. ನಮ್ಮ ಭಾರತದಲ್ಲಿ ಪಾಶ್ಚಾತ್ಯ ಕಾರ್ಖಾನೆ ಸಂಸ್ಕೃತಿ ಮಾಡಿರುವ ಮಾರ್ಪಾಡು ಇಷ್ಟು ಮಾತ್ರ. ನಮ್ಮ ಬೌದ್ಧ, ಜೈನ ಮತ್ತು ವೀರಶೈವ ಚಳುವಳಿಗಳು ಮಾಡಿರುವ ಮಾರ್ಪಾಡು ಅಪಾರ ಮತ್ತು ಅಸಾಧಾರಣ. ವಸ್ತು ಸಂಸ್ಕೃತಿಗಿಂತ ತತ್ವ ಸಂಸ್ಕೃತಿ ಮಾಡುವ ಮಾರ್ಪಾಡು ಅಗಾಧ ಮತ್ತು ಅನಂತವಾಗಿರುತ್ತದೆ ಎಂಬುದಕ್ಕೆ ಇವು ಸಾಕ್ಷಿ.

ಒಂದು ಜನಪದಕ್ಕಿಂತ ಮತ್ತೊಂದು ಜನಪದಕ್ಕೆ ಇರುವ ಅಂತರ ಏನು? ಒಂದು ಜನಪದ ತನ್ನದೇ ಆದ ಒಂದು ನಿಶ್ಚಿತ, ನಿರ್ದಿಷ್ಟ ತತ್ವದ ಮೇಲೆ ತನ್ನ ಅಸ್ತಿತ್ವವನ್ನು ನೆಲೆ ನಿಲ್ಲಿಸಿಕೊಂಡಿದೆ. ಆ ತತ್ವವನ್ನು ಆ ಜನಪದದ ಎಲ್ಲ ಸದಸ್ಯರು ತಿಳಿದಿದ್ದಾರೆ. ಮತ್ತು ಹಂಚಿಕೊಂಡಿದ್ದಾರೆ. ಆ ಜನಪದದ ತತ್ವ ಅದರ ಸದಸ್ಯರಿಗೆ ಸರ್ವ ಮಾನ್ಯ

ಸಾರ್ವಕಾಲಿಕ ಮತ್ತು ಸಮಾನತಾ ನೀತಿ. ಒಂದು ಜನಪದದಿಂದ ಮತ್ತೊಂದು ಜನಪದಕ್ಕೆ ತತ್ವದ ಅಂತರವಿದೆ, ಸ್ಥಳದ ಅಂತರವಿದೆ, ಮತ್ತು ಕಾಲದ ಅಂತರವಿದೆ. ಇಂತಹ ಜನಪದಗಳ ಜೊತೆಗೆ ಪಾರಸ್ಪರಿಕವಾಗಿ ಹೋಲಿಸಿಕೊಂಡಾಗ ಸ್ಥಾನದ ಅಂತರವೂ ಉಂಟಾಗುತ್ತದೆ.

ಒಂದು ಜನಪದದ ಸ್ಥಾನ ಮತ್ತು ಅಂತರವನ್ನು ಹೀಗೆ ನಿರ್ವಚಿಸಬಹುದು :

ಒಂದು ಜನಪದದ ಜನ ಭೌಗೋಳಿಕವಾಗಿ ಒಂದೇ ಕಡೆ ನೆಲೆ ನಿಂತಿರಬಹುದು. ಸಾಮಾಜಿಕ ಬದಲಾವಣೆಯ ಕಾರಣದಿಂದ ಕೆಲವು ಸದಸ್ಯರು ಬೇರೆ ಕಡೆ ಹೋಗಿ ನೆಲಸಿರಬಹುದು. ಆದರೆ ತಾತ್ವಿಕವಾಗಿ ಅವರೆಲ್ಲ ಒಂದೆ. ಅಮೆರಿಕಕ್ಕೆ ಹೋದರೂ ಭಾರತೀಯರು ತಿರುಪತಿ ದೇವಸ್ಥಾನ ಕಟ್ಟುವುದನ್ನು ಬಿಡುವುದಿಲ್ಲ. ಪೌರೋಹಿತ್ಯ ಮಾಡುವುದನ್ನು ನಿಲ್ಲಿಸುವುದಿಲ್ಲವಲ್ಲ ಹಾಗೆ, ತನ್ನ ತತ್ವ ಅಥವ ಸಂಸ್ಕೃತಿಯಿಂದ ಜನಪದವೊಂದಕ್ಕೆ ಸ್ಥಾನ ಪ್ರಾಪ್ತವಾಗುತ್ತದೆ. ಈ ಸ್ಥಾನ ತಾನೇ ನಿರ್ಧರಿಸಿಕೊಂಡದ್ದಾಗಿರಬಹುದು ಅಥವ ಅನ್ಯ ಜನಪದಗಳು ತುಲನೆ ಮಾಡಿ ನಿರ್ಧರಿಸಿದ್ದಾಗಿರಬಹುದು. ಭರತಖಂಡ ಅಖಂಡ. ನಮ್ಮದೇ ಆದ ಶಾಶ್ವತ ಹಾಗೂ ಶುದ್ಧ ಸಂಸ್ಕೃತಿ ತಮಗಿದೆ ಎಂದು ಭಾರತ ಹೇಳುತ್ತದೆ. ಪಾಶ್ಚಾತ್ಯ ಜನಪದಗಳು ತುಲನೆ ಮಾಡಿ ಹೇಳುತ್ತವೆ: ತಾರತಮ್ಯ ಮತ್ತು ಅಸ್ಪೃಶ್ಯತೆಯಿಂದ ಭಾರತವೆಂಬ ಜನಪದ ನರಳುತ್ತಿದೆ ಎಂದು.

**ಈ 'ಜನಪದ' ಎಂಬುದರ ತತ್ವದ ಸ್ವರೂಪ ಎಂಥದು?**

ಬೀದಿಯಲ್ಲಿ ಮಾತಾಡುವ ತತ್ವ ಜನಪದವೊಂದರ ತತ್ವ ಆಗುವುದಿಲ್ಲ. ಆ ಬೀದಿ ಮಾತು ಮನೆ ಮಾತು, ಮನೆತನದ ಮಾತು ಹಾಗೂ ತಮ್ಮ ಸಮುದಾಯದ ಮಾತು ಆಗಿದ್ದಾಗ ಅದಕ್ಕೊಂದು ನೆಲೆ ಬೆಲೆ ಇರುತ್ತದೆ. ಆ ತತ್ವವನ್ನು ಆ ಜನಪದರು ಎರಡು ರೀತಿಯಲ್ಲಿ ಬಳಸುತ್ತಾರೆ.

೧) ಸದ್ಯದ ಬದುಕುವ ಮಾರ್ಗವಾಗಿ

೨) ತಮ್ಮ ನಿರಂತರ ಜೀವನಕ್ರಮವಾಗಿ

ಆಗ ಅದು ಸಂಸ್ಕೃತಿ ಮತ್ತು ಸಂಸ್ಕೃತಿ ಇತಿಹಾಸ ಎನಿಸಿಕೊಳ್ಳುತ್ತದೆ. ಇಟ್ಟುಕೊಂಡ ತತ್ವ ಅಸಲಿಯಾಗಬೇಕಾದರೆ ಅದು ಜನಪದರ ನಡವಳಿಕೆ ಆಗಬೇಕು. ಅದನ್ನೇ ನಾವು ಸಂಸ್ಕೃತಿ ಎನ್ನುತ್ತೇವೆ. ಈ ಸಂಸ್ಕೃತಿ ಈಹೊತ್ತು ಮಾತ್ರ ಉಂಡು ಉಟ್ಟು





ಕಳಚಿ ಹೋಗುವಂಥದಾಗಿರಬಾರದು. ಅಂಥದಕ್ಕೆ ಬೆಲೆ ಇರುವುದಿಲ್ಲ. ಒಂದು ಸಂಸ್ಕೃತಿ ಚಾರಿತ್ರಿಕವಾಗಿ ಹಿಂದಿನಿಂದ ಬಂದಿರುವುದಾಗಿರಬೇಕು. ಇಲ್ಲವೇ ಈಹೊತ್ತು ಹುಟ್ಟಿ ಭವಿಷ್ಯವನ್ನು ಉಳಿಸಿಕೊಡುವುದಾಗಿರಬೇಕು. ಇದನ್ನೇ ನಿರಂತರ ಜೀವನಕ್ರಮ ಅಥವ ಸಂಸ್ಕೃತಿ ಇತಿಹಾಸ ಎಂದು ಕರೆಯುತ್ತೇವೆ. ಇದನ್ನೇ ನಾವು ಪರಂಪರೆ ಎಂದು ಕರೆಯುತ್ತೇವೆ. ಒಂದು ದೊಡ್ಡ ಸಂಸ್ಕೃತಿ ಪರಂಪರೆ ಇರುವ ಜನಪದಕ್ಕೆ ಸ್ಥಾನದಲ್ಲಿ ಬೆಲೆ ಹೆಚ್ಚು. ಅದರೊಟ್ಟಿಗೆ ಆ ಸಂಸ್ಕೃತಿಯ ತತ್ವ ಅಥವ ಮೌಲಿಕತೆ ಯಾವ ಸ್ವರೂಪದ್ದು ಎಂಬುದು ಮುಖ್ಯ. ಒಂದು ಜನಪದ ಅನೇಕ ಶತಮಾನಗಳಿಂದ ಕಳ್ಳತನ ಮಾಡುವ ಸಂಸ್ಕೃತಿ ಉಳಿಸಿಕೊಂಡು ಬಂದಿದೆ ಎನ್ನುವ ಕಾರಣಕ್ಕೆ ಅದಕ್ಕೆ ಮಾನ್ಯತೆ ಇಲ್ಲ. ಜನ ಹೇಳಿದ್ದಾರೆ 'ಕಳ್ಳನ ಹೆಂಡತಿ ಯಾಹೊತ್ತಿದ್ದರೂ ಮುಂಡೆ' ಅಂತ. ಅಂದರೆ ಸಹಜ ಕುಟುಂಬ ವ್ಯವಸ್ಥೆ ಇಲ್ಲದ್ದು ನಿಜ ಸಂಸ್ಕೃತಿ ಅಲ್ಲ. ಆ ಜನಪದವೂ ನಿಜಸ್ವರೂಪಿ ಅಲ್ಲ ಎಂಬುದೆ ಇದರ ಮಥಿತಾರ್ಥ, ಸಮಾಜದ ಮೂಲ ಘಟಕ ಸಂಸಾರ, ಕುಟುಂಬ ಸಂಸ್ಕೃತಿಯ ಗಂಗೋತ್ರಿ.

**ಸ್ಥಳ ಜನಪದವನ್ನು ಹೇಗೆ ನಿರ್ಧರಿಸುತ್ತದೆ?**

ಸಾಮಾನ್ಯ ತತ್ವದ ನಂತರ ಜನಪದವೊಂದರ ನಿರ್ಧಾರದಲ್ಲಿ ಸ್ಥಳ ಮುಖ್ಯ ಪಾತ್ರ ವಹಿಸುತ್ತದೆ. ಸ್ಥಳ ಎನ್ನುವುದು ಭೂಗೋಳ, ಎಂದರೆ ಸಂಪನ್ಮೂಲಗಳ ನೆಲೆ. ಜನಪದರ ಚಲನೆ ಅಥವ ಸಬ್ದತೆ ಈ ಭೂಗೋಳವನ್ನು ಅವಲಂಬಿಸಿದೆ. ತಮಿಳುನಾಡಿನವರು ಮತ್ತು ಕೇರಳದವರು ಜಗತ್ತಿನ ಎಲ್ಲ ಕಡೆಗೆ ಚಲಿಸಿದ್ದಾರೆ. ಕರ್ನಾಟಕದಲ್ಲಿ ದಕ್ಷಿಣ ಕರ್ನಾಟಕದವರು ಉತ್ತರ ಕರ್ನಾಟಕಕ್ಕೆ, ಉತ್ತರ ಕರ್ನಾಟಕದವರು ದಕ್ಷಿಣ ಕರ್ನಾಟಕಕ್ಕೆ ಚಲಿಸಲು ಇಷ್ಟ ಪಡುವುದಿಲ್ಲ ಯಾಕೆ? ತಮಿಳುನಾಡಿನಲ್ಲಿ ದೊಡ್ಡ ನದಿಗಳಿಲ್ಲ. ಕೇರಳದ ನದಿಗಳು ಹುಟ್ಟಿನಿಂದಲೇ ಓಡಿಹೋಗಿ ಸಮುದ್ರ ಸೇರುತ್ತವೆ. ತಮಿಳುನಾಡಿಗೆ ಬರದ ಶಾಪ, ಮಲಯಾಳಂ ದೇಶಕ್ಕೆ ಬೆಟ್ಟಗುಡ್ಡಗಳ ಕಾರಣ ಭೂಮಿಯ ಕೊರತೆ. ಈ ಕೊರತೆ ಎಂಬುದಿದೆಯಲ್ಲ ಅದು ಯಾರನ್ನೂ ಚಲಿಸುತ್ತದೆ. ಜಗತ್ತಿನಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ, ಆಕ್ರಮಣ, ದರೋಡೆಗಳು ನಡೆದಿದ್ದರೆ ಅದಕ್ಕೆ ಆಸೆಗಿಂತ ಕೊರತೆಗಳೇ ಮುಖ್ಯ ಕಾರಣ.

ಪ್ರಾದೇಶಿಕ ನಿರ್ದಿಷ್ಟತೆ ಎಂಬುದು ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಮತ್ತು ಸಮರ್ಥನೆಗೆ ತುಂಬ ಪ್ರೇರಕ ಶಕ್ತಿಯಾಗಿದೆ. ಮಲೆನಾಡಿನವರು, ಬಯಲು





ಸೀಮೆಯವರು, ಕರಾವಳಿಯವರು ಅಥವ ಮರಳುಗಾಡಿನವರು ಎಂದರೆ ಅವರು ಅಲ್ಲಿಯ ಸಂಸ್ಕೃತಿಯ ಪ್ರತಿರೂಪ ಮತ್ತು ಪ್ರತಿನಿಧಿ ಆಗಿರುತ್ತಾರೆ. ಅವರ ನಂಬಿಕೆ, ನಡವಳಿಕೆ, ಊಟ-ಉಡುಗೆ ಮತ್ತು ತಮ್ಮನ್ನು ಪ್ರಸೆಂಟ್ ಮಾಡಿಕೊಳ್ಳುವ ರೀತಿ ಅವರಿಗೇ ವಿಶಿಷ್ಟವಾಗಿರುತ್ತದೆ. ಮೈಸೂರಿನ ಸಭ್ಯ ನಾಗರೀಕನೊಬ್ಬ ಉತ್ತರ ಕರ್ನಾಟಕದ ಹಳ್ಳಿಯಲ್ಲಿ ಬಸ್ ಹತ್ತುವಾಗ ಪಕ್ಕದವ 'ಹತ್ರಿ ಗಡಗಡ್ಡೆ' ಅಂದರೆ ಹೆದರಿಕೆಯಾಗುತ್ತದೆ. ಆ ಕಡೆಯವರು ಸಾಮಾನ್ಯ ರೀತಿಯಲ್ಲಿ ಮಾತಾಡುತ್ತಿದ್ದರೆ, ಬೆಂಗಳೂರಿನವನಿಗೆ ಗಲಾಟೆ ಎಬ್ಬಿಸಿದ್ದಾರೆ ಎನಿಸುತ್ತದೆ.

ಇನ್ನೊಂದು ಮುಖದಲ್ಲಿ ಭೂಗೋಳ ಎಂದರೆ ವಾತಾವರಣ ಅಥವಾ ಪರಿಸರ. ಅದು ಜೀವಸಂಕುಲಗಳ ಸಮಾಜ. ಅದರೊಂದಿಗೆ ಒಡನಾಡಿ, ಹೊಂದಾಣಿಕೆ ಮಾಡಿಕೊಂಡು ಇಲ್ಲವೆ ಹೋರಾಟ ಮಾಡಿಕೊಂಡು ಜನಪದ ನೆಲೆನಿಂತಿರುತ್ತದೆ, ಅಥವಾ ಆ ಜೀವಸಂಕುಲದ ಲೂಟಿ ಮಾಡಿಕೊಂಡು ಬದುಕಿರಬಹುದು. ಅಲ್ಲಿಯ ಜನ ಮತ್ತು ಜೀವಸಂಕುಲ ಪರಸ್ಪರವಾಗಿವೆಯೆ ಅಥವಾ ಒಂದು ಇನ್ನೊಂದನ್ನು ಜಾಲಾಡುತ್ತಿದೆಯೇ ಎನ್ನುವ ಪ್ರಶ್ನೆ ಆ ಜನಪದದ ಈ ಹೊತ್ತಿನ ಅಸ್ತಿತ್ವ ನಿರ್ಣಯದ ಪ್ರಶ್ನೆಯೂ ಆಗುತ್ತದೆ. ಒಂದು ಕಾಲದಲ್ಲಿ ಕಾಡಿನ ಪ್ರಾಣಿಗಳನ್ನು ಧಾರಾಳ ತಿಂದು, ನಗರಕ್ಕೆ ತಂದು ಮಾರುತ್ತಿದ್ದ ಹಕ್ಕಿಪಿಕ್ಕಿ ಜನಪದ ಈ ಹೊತ್ತು ನೆಲೆಯೇ ಇಲ್ಲದಂತಾಗಿದೆ. ಆದ್ದರಿಂದ ಭೂಗೋಳವನ್ನು ಈ ಹೊತ್ತು ಸಬ್ದ ಸ್ಥಿತಿ ಎಂದು ನಿರ್ವಚಿಸಬಾರದು. ಈಗ ಭೂಗೋಳ ಆರ್ಥಿಕವಾಗಿ ಹೆಚ್ಚು ಹೆಚ್ಚು ಬಳಕೆಯಾಗುತ್ತಿದೆ. ಇಡೀ ಭೂಗೋಳವನ್ನು ಮನುಷ್ಯ ಇತರೆಲ್ಲ ಜೀವಿಗಳನ್ನು ಸ್ಥಳಾಂತರಿಸಿ ತಾನೇ ತಾನು ನೆಲೆಯೂರುತ್ತಿದ್ದಾನೆ. ಜನಪದಕ್ಕೆ ಕಾಲದ ಅಂತರ ಏನು ಮಾಡುತ್ತದೆ?

ಕಾಲ ಜನಪದವೊಂದನ್ನು ಉಳಿಸಬಹುದು ಇಲ್ಲವೆ ಸಂಪೂರ್ಣ ನಾಶ ಮಾಡಬಹುದು. ಕಾಲವನ್ನು ಗಮನಿಸದ ಜನಪದ ಕಾಲನ ಕಸವಾಗಿ ಹೋಗಬಹುದು. ಜನಪದವೊಂದಕ್ಕೆ ಕಾಲ ಗೊತ್ತಾಗುವುದು ಹೇಗೆ? ಜನಪದ ಮತ್ತು ಅದರ ಸಂಸ್ಕೃತಿ ಪಾರಸ್ಪರಿಕ ತತ್ವಕ್ಕೆ ಬದ್ಧವಾಗಿದ್ದಾಗ ಮಾತ್ರ ಕಾಲ ಗೊತ್ತಾಗುತ್ತದೆ. ಅಂಡಮಾನ್ ಆದಿವಾಸಿಗಳು ಇತರ ಜನಪದಗಳು ಹೇಗೆ ಇವೆ ಎಂಬುದನ್ನು ಗಮನಿಸಲಿಲ್ಲ. ಅವರು ನಿಧಾನ ನಶಿಸುತ್ತಿದ್ದಾರೆ.

ಕಾಡುವಾಸಿಗಳು ಊರವಾಸಿಗಳಿದ್ದಾರೆ ಎಂಬುದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಬ್ರಿಟಿಷ್ ಭಾರತದ ಹಳ್ಳಿಗರು ಭಾರತ ಯಾರ ಜೊತೆಗೋ ಓಡುತ್ತಿದೆ ಎಂಬುದನ್ನು ಗುರುತಿಸಲಿಲ್ಲ. ಆಗ ಕಾಲೇಜಿಗೆ ಬಂದ



ಮಾಡಿದ

ಶಾನುಭಾಗರು ತೂಬಿನ ಕೆಳಗಡೆಯ

ಪುರದ ಪುಣ್ಯ

ಗೌಡನ ಮಗ ಮೇಷ್ಟಿಗೆ ಹೇಳುತ್ತಿದ್ದ : "ನಿಮ್ಮ ಓದು ಇಲ್ಲೆ ಇದ್ರೆ ನನ್ನ ಶಪ್ಪ, ನಮ್ಮಪ್ಪ ಮಾಡಿದ ಆಸ್ತಿ ಇದರ ಕಣ್ರಿ' ಅಂತ ಈಗ ಅವನು ಪೇಟೆಗೆ ಸೊಪ್ಪು ಹೊತ್ತು ಮಾರುತ್ತಿದ್ದಾನೆ. ಓಡುತ್ತಿರುವ ಕಾಲವನ್ನು ಗುರುತಿಸಿ ಆ ಕಾಲದ ಹಳ್ಳಿಯ ಶಾನುಭಾಗರು ತೂಬಿನ ಕೆಳಗಡೆಯ ಇದ್ದ ತಮ್ಮ ಅಪಾರ ಗದ್ದೆಯನ್ನು ಮಾರಿ ಪಟ್ಟಣ ಸೇರಿಕೊಂಡರು. ಸಂಪತ್ತು ಎಲ್ಲಿ ಸೃಷ್ಟಿಯಾಗುತ್ತಿದೆ, ಸಂಪತ್ತಿನ ಕೇಂದ್ರಗಳು ಎಲ್ಲಿ ಹುಟ್ಟುತ್ತಿವೆ. ಅವುಗಳ ಜೊತೆಗೆ ಹೇಗೆ ಸಂವಾದ ಮಾಡಬೇಕಾಗುತ್ತದೆ ಎಂಬ ಎಚ್ಚರವೆ ಕಾಲದ ಎಚ್ಚರ. ಇಲ್ಲದಿದ್ದರೆ ಭೂಗೋಳ ಎಂಬ ನೆಲೆ ಜನ ವಸತಿಯಾಗುವುದಕ್ಕೆ ಬದಲಾಗಿ ಸಮಾಧಿಗಳ ವನ ಆಗುತ್ತದೆ.

ಸಮಾಜ ಒಂದು ವ್ಯವಸ್ಥೆ, ಸಂಸ್ಕೃತಿ ಅದರ ಯೋಚನೆ ಮತ್ತು ಯೋಜನೆ. ಆ ಸಂಸ್ಕೃತಿಯ ಆಚರಣೆಯ ಆ ಸಮಾಜದ ಧರ್ಮಕರ್ಮ, ಈ ಒಂದೊಂದು ಸಮಾಜವೂ ಒಂದೊಂದು ಜನಪದ. ಅದರ ಮಾನಸಿಕ ಮತ್ತು ದೈಹಿಕ ಉತ್ಪನ್ನ ಎಲ್ಲರೂ. ಹಂಚಿಕೊಳ್ಳಬಹುದಾಗಿದ್ದರೆ, ಅದರ ಆಚರಣೆಯಲ್ಲಿ ಭಾಗವಹಿಸಬಹುದಾಗಿದ್ದರೆ ಅದು ಜಾನಪದ, ಗಾಳಿ, ನೀರು ಮತ್ತು ಆಹಾರವನ್ನು ಹಾಗೂ ಅವುಗಳಿಂದ ಉತ್ಪತ್ತಿಯಾದ ಉತ್ಪನ್ನಗಳನ್ನು ಎಲ್ಲ ಜನಪದಗಳೂ ಹಂಚಿಕೊಳ್ಳಬಹುದು. ಆದರೆ ಅಸ್ಪೃಶ್ಯತೆ? ಅಸ್ಪೃಶ್ಯತೆಯನ್ನು ಆಚರಿಸುವ . ? ಜನಪದಗಳೆಲ್ಲವೂ ಅಷ್ಟರ ಮಟ್ಟಿಗೆ ಮುಕ್ಕಾಗಿವೆ. 'ಹಂದಿಯ ಜೊತೆಗೆ ಆಡಿ ಕೆಂದಗರು ಹಂದಿ ತಿನ್ನುವುದನ್ನೆ ತಿಂದಿತು' ಎನ್ನುವಂತಾಗಿವೆ. ಜನಪದ-ಜಾನಪದಕ್ಕೆ ಬಂದಿರುವ ದುರ್ಗತಿಯನ್ನು ಕುರಿತು ಹೇಳುವಾಗ ಇಂಥ ಮಾತುಗಳನ್ನು ಹೇಳಲೇಬೇಕಾಗುತ್ತದೆ. ಯಾಕೆಂದರೆ ಜನಪದಗಳು ಚಲಿಸಬೇಕು. ಅವುಗಳ ಉತ್ಪತ್ತಿಯಾದ ಜಾನಪದ ಜೀವಂತವಾಗಿರಬೇಕು. ಇದು ಜಾನಪದ ಚಿಂತಕನ ಅಪೇಕ್ಷೆಯೂ ಹೌದು ಬದ್ಧತೆಯೂ ಹೌದು.

'ಜನಪದ'ಗಳು ಹಳೆಯ ಸಮಾಜಗಳಲ್ಲ ಯಾಹೊತ್ತೂ ಚಲಿಸುವ ಜೀವನ ನೆಲೆಗಳು. ಹಾಗಾದ ಮೇಲೆ ಅವುಗಳ ಉತ್ಪತ್ತಿಯಾದ ಜಾನಪದ ಹಳೆಯದು, ಹಿಂದಿನ ಕಾಲದ್ದು, ಒರಟಾದದ್ದು, ಉಳಿದದ್ದು, ಜನಪ್ರಿಯವಾದುದು. ರಂಜನೆಗೆ ಇರುವುದು ಮತ್ತು ಪಳಯುಳಿಕೆಯಾಗಿರುವುದು ಹೇಗೆ ಸಾಧ್ಯ? ನಮ್ಮ ತಾತ ರಾಗಿರೊಟ್ಟಿ ಹುಚ್ಚೆಳ್ಳು ಚಟ್ನಿ ತಿನ್ನುತ್ತಿದ್ದ. ರಾಗಿ ಮುದ್ದೆ ಹುರುಳಿಕಾಳು ಸಾರು ಉಣ್ಣುತ್ತಿದ್ದ. ನಮ್ಮಜ್ಜಿ ಅದನ್ನು ಹಳೆಯದು ಅನ್ನಲಿಲ್ಲ, ನಮ್ಮಪ್ಪ ಅದು ಹಳೆಯದು ಅನ್ನಲಿಲ್ಲ. ನನಗೆ ಅದು ಹಳೆಯ





ರುಚಿ ಅನಿಸಿಲ್ಲ. ನನ್ನ ಮಗನಿಗೂ ಹಾಗೆ ಅನಿಸಿಲ್ಲ. ಒಂದು ಪಕ್ಷ ಬೇಡವಾಯಿತು ಎನ್ನಿ. ಅಷ್ಟಕ್ಕೆ ಅದು ಹಳೆಯದಾಗುವುದಿಲ್ಲ. ಕುರುಡಿಗೆ ದೀಪ ಆಗುವುದಿಲ್ಲ ಎನ್ನೋ ಕಾರಣಕ್ಕೆ ಇತರರು ಅದನ್ನು ತಿರಸ್ಕರಿಸುತ್ತಾರೆಯೆ? ಹಾಗೆಯೆ ಕೆಲವರ ಅಭಿಪ್ರಾಯದಲ್ಲಿ ಜನಪದ ಹಿಂದಿನದು, ಹಲವರ ಅಭಿಪ್ರಾಯದಲ್ಲಿ ಅದೇ ಅಸಲಿ, ಬೆಂಗಳೂರಿನ ಬೀದಿ ಬೀದಿಗಳ ಪಕ್ಕದಲ್ಲಿ ಮಧ್ಯಾಹ್ನ ಊಟದ ಸಮಯದಲ್ಲಿ ಜನ ಕ್ಯೂ ನಿಂತಿರುವುದೇಕೆಂದು ನೋಡಿ. ಅಲ್ಲಿ ಗಾಡಿಗಳಲ್ಲಿ ಬಿಸಿ ಬಿಸಿ ಮುದ್ದೆ, ಕೋಳಿ ಸಾರು, ಮಟನ್ ಚಾಪ್ಸ್, ಮೀನು ಫ್ರೈ ತಯಾರಾಗಿರುತ್ತದೆ. ಇದೇ ಕ್ಯೂ ಕಾಮತ್ ಹೋಟೆಲ್ ಮುಂದೆ ಇರುವುದಿಲ್ಲ.

ಸದಾ ನಮ್ಮ ಸೆಳೆತವೂ, ಕ್ರಿಯೆಯೂ ಆದ ಈ ಜಾನಪದವನ್ನು ನಾವು ನಿರ್ವಚಿಸಬೇಕಾಗಿರುವುದು ಹಿಂದಿನ ಜನಪದ ಬಿಟ್ಟು ಹೋಗಿರುವ ಸಾಮಗ್ರಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಅಲ್ಲ. ಅದು ನಿರ್ವಹಿಸುತ್ತಿರುವ ಕಾರ್ಯಭಾರವನ್ನು ಗಮನಿಸಿ ಅದರ ಗುಣ ಹೇಳಬೇಕು. ಈ ಬಗೆಯ ಚಿಂತನೆಯನ್ನು ಪ್ರಕ್ರಿಯಾತ್ಮಕ ದೃಷ್ಟಿ ಎನ್ನುತ್ತಾರೆ. ನಾನು ಮೊದಲಿನಿಂದಲೂ ಪ್ರಕ್ರಿಯಾತ್ಮಕ ಜಾನಪದ ಚಿಂತಕ. ಜಾನಪದವನ್ನು ನಾನು ಬದುಕುವ ರೀತಿಯಲ್ಲಿ ಕಾಣುತ್ತೇನೆ. ಜಾಪನದ ಯಾವುದು ಎನ್ನುವುದಕ್ಕಿಂತ ಜಾನಪದ ಹೇಗೆ ಜಾನಪದವಾಗಿ ಕಾಣುತ್ತಿದೆ, ನೋಡಲ್ಪಡುತ್ತಿದೆ ಹಾಗೂ ಅನುಭವಿಸಲ್ಪಡುತ್ತಿದೆ ಎಂಬುದು ಮುಖ್ಯ. ಹಾಗಾದಾಗಲೆ ಜಾನಪದವನ್ನು ನನ್ನಲ್ಲಿ ನಿಮ್ಮಲ್ಲಿ ಹಾಗೂ ಎಲ್ಲರಲ್ಲಿ ನಿರಂತರವಾಗಿ ಗುರುತಿಸಲು ಸಾಧ್ಯ. ಪ್ರಕ್ರಿಯೆಯಲ್ಲಿ ಇಲ್ಲದ್ದು ಜಾನಪದವಾಗುವುದಿಲ್ಲ. ಆಧುನಿಕ ಫ್ಯಾಕ್ಟರಿಯೊಂದು ಒಂದು ಮಾದರಿಯ ಪೂ ತಯಾರಿಸಿ ಮಾರುಕಟ್ಟೆಗೆ ಬಿಟ್ಟ ಮೇಲೆ ಮತ್ತೊಂದು ಹೊಸ ಮಾದರಿಯನ್ನು ಬಿಡುಗಡೆ ಮಾಡುತ್ತದೆ. ಹಿಂದಿನ ಮಾದರಿಯ ಹೂಗಳು ಉಳಿದಿದ್ದರೆ ಅವು ಉಳಿಕೆಗಳು. ಅವನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಮಾರಲಾಗುತ್ತದೆ. ಜಾನಪದದಲ್ಲಿಯೂ ಹಾಗೆಯೆ ಒಂದು ಜಾನಪದ ಆಚರಣೆ ಹಿಂದೆ ಬಿದ್ದರೆ, ಉದಾ. ಸಿಡಿ ಆಡಿಸುವುದು. ಅದು ಪ್ರಸ್ತುತ ಅಲ್ಲ ಎಂದು ಕೈ ಬಿಡಲಾಗುತ್ತದೆ. ಫ್ಯಾಕ್ಟರಿ ಉತ್ಪಾದನೆಗೂ

ಜನಪದದ ಉತ್ಪಾದನೆಗೂ ಒಂದು ಸ್ಪಷ್ಟ ವ್ಯತ್ಯಾಸ ಇದೆ. ಫ್ಯಾಕ್ಟರಿ ಉತ್ಪಾದನೆ ತಾತ್ಕಾಲಿಕ ಮತ್ತು ಅಲ್ಪ ಬಾಳಿಕೆ ಬರುವಂಥದು. ಜಾನಪದ ಅನಂತಕಾಲದ ಉತ್ಪಾದನೆ ಮತ್ತು ನಿರಂತರ ಬಾಳಿಕೆ ಬರುವಂಥದು. ಹತ್ತೊಂಬತ್ತನೆಯ ಶತಮಾನದ ಕಾರುಗಳು ಈಗ ಇಲ್ಲ. ಇದ್ದವು ಪುರಾತನ ಮೌಲ್ಯದ ಕಾರುಗಳು ಎನಿಸಿವೆ. ಆದರೆ ಜನಪದವೇ ಕಂಡುಹಿಡಿದ ಚಕ್ರಗಳು ಯಾಹೊತ್ತಿಗೂ ಪ್ರಸ್ತುತವೆ. ಅವುಗಳನ್ನು





ಉದ್ದ-ಗಿಡ್ಡ ಅಥವಾ ಬೇರೆ ಬೇರೆ ವಸ್ತುಗಳಿಂದ ನಿರ್ಮಿಸುವುದು ಕಾಲದ ಬೇಡಿಕೆ ಅಷ್ಟೆ .

ಅಂದರೆ ನಿಜವಾದ ಜಾನಪದ ಗ್ರಹಿಕೆ ಎಂದರೆ ಜಾನಪದ ಹೇಗೆ ಎಲ್ಲಿ ಮತ್ತು ಯಾವ ಮಾದರಿಯಲ್ಲಿ ಯಾರಿಂದ ಯಾರಿಗಾಗಿ ಕ್ರಿಯಾಶೀಲವಾಗಿದೆ ಎಂಬುದನ್ನು ತಿಳಿಯುವುದು. ರಾಗಿ ಬೀಸುವವರು ಮತ್ತು ರಾಗಿ ಪದ, ಬತ್ತ ಕುಟ್ಟುವವರು ಮತ್ತು ಕುಟ್ಟುವ ಪದ, ನೀರೆತ್ತುವವರು ಮತ್ತು ನೀರೆತ್ತುವ ಹಾಡು, ಕಣ ಮತ್ತು ಹಂತಿಯ ಹಾಡುಗಳು ಹೋದವು ಎಂಬ ದುಃಖ ಒಂದು ನೆನಪು ಮಾತ್ರವಾಗಿರಲಿ. ಅವೇ ಇರಬೇಕೆಂದರೆ ನಾವೂ ಸಮಾಧಿಯೊಳಕ್ಕೆ ಹೋಗಬೇಕಾಗುತ್ತದೆ. ಜನಪದಗಳು ಯಾವ ಕಾಲಕ್ಕೂ ಬದುಕಬೇಕು ಎಂಬುದೆ ಜಾನಪದ ಸೃಷ್ಟಿಯ ಉದೇಶವಾಗಿದೆ. ಜಾನಪದ ಸಾಯುವವರನ್ನು ಹುಡುಕುತ್ತ ಬದುಕಿರುವವರನ್ನು ಮರೆಯುವಂಥದಲ್ಲ, ಬದುಕಿರುವವರನ್ನು ಉಸಿರಾಡಿಸುತ್ತ, ಉಳಿಸಿ ಬೆಳೆಸುವಂಥದು. ಮನುಷ್ಯ ಬದುಕನ್ನು ಸಂಬಂಧಾತ್ಮಕವಾಗಿಸುತ್ತ ಅನಂತಕಾಲ ಮುನ್ನಡೆಯುವಂಥದ್ದು. ಜಾನಪದ ಜ್ಞಾನ ಆಧುನಿಕ ವಿಜ್ಞಾನದಂತೆ ಆಕಾಶದ ಕಡೆಗೆ ನೋಡುವಂಥದಲ್ಲ. ಭೂಮಿಯ ಒಳಗಿಂದ ಬೆಳೆದು ಆಕಾಶದ ಕಡೆಗೆ ಅರಳಿ ನಿಲ್ಲುವ ಕ್ರಿಯೆಯೆ ಜಾನಪದವಾಗಿದೆ. ಜಾನಪದ ಎಂಬುದು ಜನ, ಸಾಮಾನ್ಯವಾಗಿ ಹುಟ್ಟು ಹಾಕಬಹುದಾದದ್ದು, ಹಂಚಿಕೊಳ್ಳಬಹುದಾದದ್ದು, ಒಡನಾಡಬಹುದಾದದ್ದು ಮತ್ತು ವಿಸ್ತರಿಸಬಹುದಾದದ್ದು. ಈ ಪ್ರಕ್ರಿಯೆ ಬಿದ್ದ ಗಾಯಕ್ಕೆ ಎಲೆ ಔಷಧ ಹಚ್ಚಿಕೊಂಡಷ್ಟು ಸರಳವಾಗಿರಬಹುದು ಅಥವ ನೇಗಿಲು, ಕುಂಟೆ ಹೊಡೆಯುವುದನ್ನು ಕಲಿತಷ್ಟು ಕಷ್ಟವೂ ಆಗಿರಬಹುದು. ಯಾವ ಕಾರಣಕ್ಕೂ ಜಾನಪದ ಸೃಜನಶೀಲ ಕ್ರಿಯೆ, ಖಾಸಗಿ ಮಾತ್ರ ಅಲ್ಲ : ಅಂದರೆ ಸಾರ್ವಜನಿಕ ಅಲ್ಲ. ಅದು ಒಂದು ಕೂಟದ, ತಂಡದ ಅಥವ ಸಮೂಹದ ಶೋಧ. ಪ್ರೇರಣೆಗೆ ಒಬ್ಬ ವ್ಯಕ್ತಿ ಕಾರಣವಾಗಬಹುದು. ಆದರೆ ಒಟ್ಟು ಉತ್ಪತ್ತಿಯಲ್ಲಿ ಒಂದು ಕೂಟ ಅಥವ ತಂಡ ಇದ್ದೇ ಇರುತ್ತದೆ. ಹಾಗಿಲ್ಲದಿದ್ದಲ್ಲಿ ಅದು ಪೇಟೆಂಟ್ ಆಗಿ ಹೋಗುತ್ತದೆ. ಜಾನಪದ ಸರ್ವಥಾ ಏಕಸ್ವಾಮ್ಯ ವಿರೋಧಿ. ಈ ಏಕಸ್ವಾಮ್ಯ ಎಂಬುದು ಪ್ರತ್ಯೇಕತೆಯನ್ನು ಸೃಷ್ಟಿ ಮಾಡಿ ಜನಸಾಮಾನ್ಯರ ಉತ್ಪಾದನಾ ಚಟುವಟಿಕೆಯನ್ನು

ನಿರ್ಬಂಧಿಸುತ್ತದೆ. ನಮ್ಮ ದೇಶದ ಜಾತಿ ಮತ್ತು ಅಸ್ಪೃಶ್ಯತೆಗಳು ಇದಕ್ಕೆ ಜ್ವಲಂತ ಸಾಕ್ಷಿ. ನಮ್ಮಲ್ಲಿ ಅಸ್ಪೃಶ್ಯತೆ ಹುಟ್ಟಿದ್ದೆ ಈ ದೇಶದ ದುಡಿಯುವ ಶಕ್ತಿ ಸೃಜನಶೀಲತೆಯಲ್ಲಿ ತೊಡಗಿ ಸಂಪತ್ತನ್ನು ಸಂಪಾದಿಸಿಕೊಳ್ಳದಂತೆ ನೋಡಿಕೊಳ್ಳಲು. ಅಸ್ಪೃಶ್ಯತೆ ಕೇವಲ ಮುಟ್ಟಿಸಿಕೊಳ್ಳುವುದಕ್ಕೆ ಸೀಮಿತವಾಗಿಲ್ಲ. ನೋಡುವುದು, ತಿನ್ನುವುದು, ಉತ್ಪತ್ತಿ ಮಾಡುವುದು ಮತ್ತು





ಚಲಿಸುವುದಕ್ಕೂ ಸಂಬಂಧಿಸಿದೆ. ಒಂದು ಸಮಾಜವನ್ನು ಸಂಪೂರ್ಣ ನಿಷ್ಕ್ರಿಯಗೊಳಿಸಲು ಇದಕ್ಕಿಂತ ಹೆಚ್ಚಿನ ಸರ್ವಾಧಿಕಾರ ಬೇಕಾಗಿಲ್ಲ.

ಜಾನಪದ ಪಳಯುಳಿಕೆಯೊ, ಜೀವಂತ ಪಳಯುಳಿಕೆಯೋ ಆಗಿದ್ದರೆ ಸತ್ತು ಬಿದ್ದ ಹಕ್ಕಿಗಳನ್ನು ಲೆಕ್ಕ ಮಾಡುವಂತೆ ಏನೇನು ಅಂಶಗಳು (items) ಇವೆ ಎಂದು ಹೇಳಬಹುದು. ನನಗೆ ಅನಿಸುವ ಹಾಗೆ ಜಾನಪದ ಹಾರುವ ಹಕ್ಕಿಯ ಹಾಗೆ, ಹರಿಯುವ ನೀರಿನ ಹಾಗೆ ಮತ್ತು ಮಳೆಯ ಹದಕ್ಕೆ ಗರ್ಭಧರಿಸುವ ಭೂಮಿಯ ಹಾಗೆ. ಜಾನಪದ ಸಂಗ್ರಹ ಎಂದರೆ ಹಕ್ಕಿ ಕೂತಾಗ ಅದರ ಬಗ್ಗೆ ಮಾಹಿತಿ ಪಡೆದಂತೆ ಮತ್ತು ಬೆಳೆದ ತೆನೆಗಳನ್ನು ಲೆಕ್ಕ ಹಾಕಿದಂತೆ. ಉಳಿದ ಪ್ರಕ್ರಿಯೆ ನಮಗೆ ಸಿಕ್ಕಿಯೆ ಇರುವುದಿಲ್ಲ. ಆದ್ದರಿಂದ ಜಾನಪದ ಏನೆಲ್ಲವನ್ನು ಒಳಗೊಂಡಿರುತ್ತದೆ ಎಂದರೆ ಜಾನಪದ ಇದ್ದಕಡೆ, ಕರೆಂಟು ಇದ್ದಕಡೆ ದೀಪ ಉರಿಯುವಂತೆ ಒಂದು ಸಾಮಾನ್ಯತಾ ಸಮಾಜ ಮತ್ತು ಸಾಮಾನ್ಯತಾ ಸಂಸ್ಕೃತಿ ಕ್ರಿಯಾಶೀಲವಾಗಿರುತ್ತದೆ ಎಂದು ಹೇಳಬೇಕು. ಕುವೆಂಪು ಅವರ ಅರ್ಥದಲ್ಲಿ ಹೇಳುವುದಾದರೆ ಜಾನಪದ ಎಂಬುದು 'ಶ್ರೀಸಾಮಾನ್ಯತೆ' ನನ್ನ ಅರ್ಥದಲ್ಲಿ 'ಗೌರವ ಮಾನ್ಯತೆ', ಸಾಮಾನ್ಯನಿಂದ ಒಪ್ಪಿಕೊಂಡು, ಸ್ಥಾನ-ಮಾನ ಪಡೆದುಕೊಂಡು ನಿರಂತರವಾಗಿ ಅವನ ಬಳಕೆಯಲ್ಲಿ ಇರುತ್ತದೋ ಅದೆಲ್ಲವೂ ಜಾನಪದ. ಇದು ಹಳ್ಳಿಯಿಂದ ದಿಲ್ಲಿಯವರೆಗೆ, ಸಾಮಾನ್ಯನಿಂದ ಶ್ರೀಮಂತನವರೆಗೆ ವಾತಾವರಣದಂತೆ ಹರಡಿಕೊಂಡಿದೆ. ಹವಾನಿಯಂತ್ರಿತ ಬದುಕು ಜಾನಪದ ಬದುಕಲ್ಲ. ಹವಾಮಾನವನ್ನು ನಿಸರ್ಗ ಕೊಟ್ಟಂತೆ ಉಳಿಸಿಕೊಳ್ಳುವುದು ಮತ್ತು ಅದಕ್ಕೆ ಒಗ್ಗಿ ಕೊಳ್ಳುವುದು ಜಾನಪದೀಯತೆ. ಆಗಲೇ ನಮಗೆ ಒಂದು ಕಡೆ ಎಸ್ಕಿಮೋಗಳ ಶೀತ ಜಾನಪದವೂ, ಮತ್ತೊಂದು ಕಡೆ ಆಫ್ರಿಕಾದ ಬೇಗೆಯ ಜಾನಪದವೂ ಸೋಪಜ್ಞವಾಗಿ ಕಾಣುತ್ತವೆ. ಕೆಲವರು ನಿರ್ದಿಷ್ಟ ಐಟಂಗಳಲ್ಲಿ ಸೂಚಿಸದಿದ್ದರೆ ವಿಷಯದ ಚೌಕಟ್ಟು ಉಳಿಯುವುದಿಲ್ಲ ಎನ್ನುತ್ತಾರೆ. ಜಾನಪದದ ಚೌಕಟ್ಟು ಸಾಮಾನ್ಯತೆ, ಅದು ಸಾರ್ವಕಾಲಿಕ ಸಾಮಾನ್ಯತೆ. ಯಾಕೆ ಅದು 'ಶ್ರೀಸಾಮಾನ್ಯತೆ' ಎಂದರೆ ಎಲ್ಲ ಕಾಲದಲ್ಲಿ ಜಾತಿ, ವರ್ಗ, ಪುರೋಹಿತರು ಹುಟ್ಟಿ

ಸಾಮಾನ್ಯತೆಯನ್ನು ಕೆಳಗಿರಿಸಿದ ಕಾಲದಲ್ಲಿ ಸರ್ವಸಾಧಾರಣ ಸಾಮಾನ್ಯತೆ ಎಂಬುದು ಅಲ್ಲಗಳೆದವರಲ್ಲೂ ಇದ್ದು ಇತರರೆಲ್ಲರಲ್ಲೂ ಇರುತ್ತದೆ, ಇದೆ.

ಈ ನಿಯಮಕ್ಕೆ ಒಳಪಟ್ಟಂತೆ ಯಾವೆಲ್ಲ ವಸ್ತು, ವ್ಯಕ್ತಿ, ವಿಷಯ ಮತ್ತು ಸಂದರ್ಭಗಳು ಬರುತ್ತವೋ ಅವೆಲ್ಲವೂ ಜಾನಪದದೊಳಗೆ ಸೇರುತ್ತವೆ. ಈ ನಾಲ್ಕೂ





ಪ್ರಮುಖ ಆಶಯಗಳನ್ನು ಇಟ್ಟುಕೊಂಡು ಪ್ರಕ್ರಿಯಾತ್ಮಕವಾಗಿ ಜಾನಪದವನ್ನು

ಕೆಳಗಿನಂತೆ ಅರ್ಥ ಮಾಡಿಕೊಳ್ಳಬಹುದು.

೧. ವಸ್ತು ಪ್ರಕ್ರಿಯಾತ್ಮಕತೆ

೨. ವ್ಯಕ್ತಿ ಪ್ರಕ್ರಿಯಾತ್ಮಕತೆ

೩. ವಿಷಯ ಪ್ರಕ್ರಿಯಾತ್ಮಕತೆ

೪.ಸಂದರ್ಭ ಪ್ರಕ್ರಿಯಾತ್ಮಕತೆ

೧) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ವಸ್ತು ನಿಯಮಿತ ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತದೆ ಅದು ಜಾನಪದೀಯವಾಗಿರುತ್ತದೆ. ಅಲ್ಲಿಂದ ಹಿಂದೆ ಸರಿದರೆ ಪಳಯುಳಿಕೆಯಾಗುತ್ತದೆ. ಎತ್ತರಿಸಿಕೊಂಡರೆ ಅನ್ಯ ಜನಪದಕ್ಕೆ ಹೋಗುತ್ತದೆ. ದಿನನಿತ್ಯ ಜನಪದದೊಳಗೆ ಬಳಕೆಯಾಗುತ್ತಿರುವ ವಸ್ತುಗಳೆಲ್ಲವೂ ಜಾನಪದೀಯವೆ ಆಗಿರುತ್ತವೆ.

| | |
|---|---|
| | **ಭೋಗದ ವಸ್ತುಗಳು** |
| ೧) ವಾಸದ ವಸ್ತುಗಳು (ಸಾಮಾನ್ಯ + ವಿಶೇಷ)ರ | ೧) ರಾಜಭೋಗ |
| ೨) ವೃತ್ತಿಯ ವಸ್ತುಗಳು (ಸಾಮಾನ್ಯ + ವಿಶೇಷ) | ೨) ಭೋಜನ ಭೋಗ |

೩) ಊಟದ ವಸ್ತುಗಳು (ಸಾಮಾನ್ಯ + ವಿಶೇಷ) ೩) ವಸ್ತ್ರ ಭೋಗ

೪) ಆಟದ ವಸ್ತುಗಳು (ಸಾಮಾನ್ಯ + ವಿಶೇಷ) ೪) ವಾಹನ ಭೋಗ

೫) ಜೀವನಾವರ್ತನ ವಸ್ತುಗಳು (ಸಾಮಾನ್ಯ + ವಿಶೇಷ) ೫) ಸ್ತ್ರೀ ಭೋಗ

೬) ಉಡುಗೆ ವಸ್ತುಗಳು (ಸಾಮಾನ್ಯ + ವಿಶೇಷ) ೬) ವಸತಿ ಭೋಗ

೭) ಸಾರಿಗೆ ವಸ್ತುಗಳು (ಸಾಮಾನ್ಯ + ವಿಶೇಷ) ೭) ಯಾತ್ರೆ ಭೋಗ

೧) ಜನಪದ ವಸ್ತುವಾಗಿ ನಾವೆಲ್ಲ ಹಾಸಿ ಹೊದ್ದುಕೊಳ್ಳುವ ಕಂಬಳಿ ತಗೆದುಕೊಳ್ಳಿ. ಇದು ಮೂಲತಃ ಜನಸಾಮಾನ್ಯರ ಹೊದಿಕೆ. ಕುರಿಯ ತುಪ್ಪಟವನ್ನೇ ಮೊದಲ ವಾಸಿಗಳು ಹಾಸಿ ಹೊದ್ದುಕೊಳ್ಳುತ್ತಿದ್ದಿರಬಹುದು. ಅದನ್ನು ಅನಂತರ ಕಂಬಳಿ ಮಾಡಿಕೊಂಡರು. ಅದು ಮುಂದೆ ಹಾಸಿಕೊಳ್ಳುವ ಕಂಬಳಿ, ಜಮಖಾನ, ಹಾಸಿಗೆ ಬಟ್ಟೆ, ಅನಿವಾರ್ಯತೆಯ ಮುಂತಾದ ರೂಪ ಹೊಂದಿದೆ. ಇದರ ಸಾಮಾನ್ಯ ಬದುಕಿನ ಸ್ತರದಲ್ಲಿ ಕಂಡು ಕೊಂಡಿದ್ದ





ಪ್ರಭುಗಳು ತಮ್ಮ ಅಂತಸ್ತಿಗಾಗಿ ಅದನ್ನು ರತ್ನಗಂಬಳಿ ಮಾಡಿಕೊಂಡರು.

೨) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ವ್ಯಕ್ತಿ ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತಾನೆ ಅವನು ಜನಪದ ಸಮಾಜದ ವ್ಯಕ್ತಿತ್ವ ಆಗಿರುತ್ತಾನೆ. ಅದರೊಳಗಿಂದ ಹಿಂದೆ ಸರಿದರೆ ತಿರಸ್ಕೃತನಾಗುತ್ತಾನೆ. ಅದರ ಆಚೆಗೆ ಬೆಳೆದರೆ ಹೊರಗೆ ಹೋಗುತ್ತಾನೆ. ಹಳ್ಳಿಯಲ್ಲಿ ತಿಪ್ಪಣ್ಣನೊ ಕಪ್ಪಣ್ಣನೊ, ಭಾವನೊ ಬಂಧುವೊ, ಏನೇನೋ ಆಗಿದ್ದವನು ನಗರಕ್ಕೊ, ಹೊರದೇಶಕ್ಕೆ ಹೋದವನು ಸಾರೊ ? ಸಾಹೇಬರೊ ಅಥವಾ ಫಾರಿನ್ ರಿಟರ್ನೊ ಆಗುತ್ತಾನೆ. ಜನಪದದ ವ್ಯಕ್ತಿಗಳೆಲ್ಲರೂ ವೃತ್ತಿಯ ವ್ಯಕ್ತಿಗಳೇ ಆಗಿರುತ್ತಾರೆ. ಕೆಲಸ ಮಾಡದವನಿಗೆ ಅಲ್ಲಿ ಮಾನ್ಯತೆ ಇಲ್ಲ. ತರಲೆ, ತಾಟಗಿತ್ತಿ, ತಲೆಹಿಡುಕ, ಚಾಡಿಕೋರ ಇಂಥ ಚಿಲ್ಲರೆ ವ್ಯಕ್ತಿಗಳಿಗೂ ಅಲ್ಲಿ ಕೆಲಸ ಇರುತ್ತದೆ. ಅದಕ್ಕೆ ಅನುಗುಣವಾದ ಉತ್ಪಾದನೆ ಮತ್ತು ಗೌರವ ಇರುತ್ತದೆ. ಜನಪದ ವ್ಯಕ್ತಿಗಳಲ್ಲಿ ನೇಮಕ ಮಾಡಲ್ಪಟ್ಟವನು ಇರುವುದಿಲ್ಲ. ಜವಾಬ್ದಾರಿ ವಹಿಸಿಕೊಂಡವರು

ಇರುತ್ತಾರೆ. ಇವರಲ್ಲಿ ೧) ಮುಖಂಡರು, ೨) ಉಸ್ತುವಾರಿಯವರು, ೩) ಪೂಜೆಯವರು, ೪) ಸೇವೆಯವರು, ೫) ಸರ್ವರು ಇರುತ್ತಾರೆ.

೩) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ವಿಷಯ ನಂಬಿಕೆಯಾಗಿ, ತತ್ವವಾಗಿ, ಸಿದ್ಧಾಂತವಾಗಿ, ಧರ್ಮವಾಗಿ ಅಥವ ಜ್ಞಾನವಾಗಿ ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತದೊ ಅದನ್ನು ಜನಪದ ಸಮಾಜದ ವಿಷಯ ಎಂದು ಕರೆಯಲಾಗುತ್ತದೆ. ಅದು ಜನಪದ ಸಮಾಜದಿಂದ ಹಿಂದೆ ಸರಿದರೆ ಭೂತ ಕಾಲವಾಗಿ ಉಳಿಯುತ್ತದೆ. ಅಭಿವೃದ್ಧಿ ಹೊಂದಿದರೆ ಸರ್ವ ಸಮಾಜಕ್ಕೆ ಮಾರ್ಗದರ್ಶನವಾಗುತ್ತದೆ. ಜನಪದ ಸಮಾಜದ ಗಾದೆಯೊಂದನ್ನು ತೆಗೆದುಕೊಳ್ಳಿ. ಒಂದು ಗಾದೆ ಏಕಕಾಲದಲ್ಲಿ ಒಂದು ನಂಬಿಕೆ, ಆಚರಣೆ ಮತ್ತು ಮಾರ್ಗದರ್ಶನವಾಗಿರುತ್ತದೆ. ಗಂಡ ಹೆಂಡತಿ ಮಧ್ಯೆ ಏನಿರಬೇಕು ಎಂಬುದು ಒಂದು ಪ್ರಮುಖವಾದ ಜನಪದ ಸವಾಲು. ಸರಳವಾಗಿ ಯೋಚಿಸುವವರು ಒಂದು ಮಗು ಎನ್ನುತ್ತಾರೆ, ನಿಜವಾದ ಉತ್ತರ ನಂಬಿಕೆ. ಗಾದೆಯೇ ಸಮಾಜಸ್ತರ ಮಧ್ಯೆ ಏನಿರಬೇಕು ಎಂದರೂ ಇದೇ ಉತ್ತರ. ಆ ನಂಬಿಕೆ ಕೇವಲ ನಂಬಿಕೆ ಅಲ್ಲ, ಅದು ಅವರ ಧರ್ಮ ದೇವರು, ವಿಚಾರ ಮತ್ತು ಆಚರಣೆಯೂ





ಆಗಿರುತ್ತದೆ. ಹೊರಗಿನವರಿಗೆ ಅದು ಎಷ್ಟು ಪ್ರಸ್ತುತ ಎನ್ನುವ ಮಾತು ಬೇರೆ. ( ಒಳಗೆ ಜನಪದವನ್ನು ಕೂಡಿಸಲು ಮತ್ತು ಕೊಂಡೊಯ್ಯಲು ಅದು ಈ ಜೀವಧಾತುವಾಗಿದೆಯೆ ಎಂಬುದಷ್ಟೇ ಮುಖ್ಯವಾಗುತ್ತದೆ. ಈ ನಂಬಿಕೆ ಆ ಸಮಾಜದ ಒಪ್ಪಿಗೆಯೂ ವಿಮರ್ಶೆಯೂ ಆಗಿ ಕೆಲಸ ಮಾಡುವುದು ಸಾಮಾನ್ಯ.

೪) ಒಂದು ಜನಪದದ ಸಾಮಾನ್ಯತೆಯ ಒಳಗೆ ಯಾವ ಸಂದರ್ಭ ನಿಯಮಿತ ಮತ್ತು ಅನೇಕ ಕಾಲದಲ್ಲೂ ಪ್ರಕ್ರಿಯಾತ್ಮಕವಾಗಿರುತ್ತದೋ ಅದನ್ನು ಜನಪದ ಸಮಾಜದ ಸಂದರ್ಭ ಎಂದು ಕರೆಯಲಾಗುತ್ತದೆ. ಅದು ಜನಪದ ಸಮಾಜದಿಂದ ಹೊರಗೆ ಹೋದರೆ ನಿರ್ಜೀವವಾಗುತ್ತದೆ. ಉತ್ತಮಗೊಂಡರೆ ಹೊಸ ಮಾದರಿ ವ್ಯವಸ್ಥೆಯಾಗುತ್ತದೆ. ಜನಪದ ಸಮಾಜದ ಒಳಗೆ ಹುಟ್ಟುವ ಮತ್ತು ಪ್ರಾಯೋಗಿಸುವ ಸಂದರ್ಭಗಳು ಬಹುಮುಖ್ಯವಾಗಿ ನಡವಳಿಕೆಗಳು, ಆಚರಣೆಗಳು, ಸಂಪ್ರದಾಯಗಳು, ಪಂಚಾಯ್ತಿಗಳು ಮತ್ತು ಹೊಡೆದಾಟಗಳಾಗಿರುತ್ತವೆ. ಈ ಎಲ್ಲವೂ ಸಕಾರಣದ ಮೇಲೆ ನಡೆದು ಸಕಾರಣವಾಗಿ ಅಂತ್ಯವಾಗುತ್ತವೆ.

ಜನಪದ ಮತ್ತು ಜಾನಪದವನ್ನು ಗ್ರಹಿಸಬೇಕಾದ ಚಿಂತನೆ ಯಾವ ಬಗೆಯದಾಗಿರಬೇಕು ಎಂಬ ಅಂಶಗಳನ್ನು ಕುರಿತು ಚರ್ಚಿಸಿದೆವು. ಈಗ ಜಾನಪದದ ನಿರಂತರತೆ ಎಂದರೆ ಭೂತ, ವರ್ತಮಾನ ಮತ್ತು ಭವಿಷ್ಯದಲ್ಲಿ ಜಾನಪದ ಹೇಗಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ಗ್ರಹಿಸಿ ಹೇಳಬೇಕಾಗಿದೆ.

ಜಾನಪದ ಏನೆಂದು ಮೊದಲು ಹೇಳಿದ್ದು ಬ್ರಿಟಿಷ್ ಉದ್ಯಮಪತಿ ವ್ಯವಸ್ಥೆ. ಅದು, ಜನಪದ ಭೂತಕಾಲದಲ್ಲಿ ಜೀವನ ವಿಧಾನ ಎಂದು ಹೇಳಿತು. ಈಗ ಇದ್ದರೂ ಅದು ಪ್ರಸ್ತುತ ಅಲ್ಲ ಎಂದಿತು. ಅಂದರೆ ಉಳಿಕೆ, ಪಳಯುಳಿಕೆ ಅಥವ ಜೀವಂತ ಪಳಯುಳಿಕೆ ಈ ಅರ್ಥದಲ್ಲಿ ಜಾನಪದವನ್ನು ಉತ್ಪತ್ತಿ ಮಾಡುವ ಮೂಲವಾದ ಜಾನಪದ, ಎಂದರೆ ಜನರ ಸಮೂಹ ಹಾಲಿ ವಾಸವಾಗಿದ್ದರೂ ನಾಗರೀಕ ಸಮಾಜಕ್ಕೆ ಹೋಲಿಸಿದರೆ ಹಳೆಯಕಾಲದ ಜನ. ಹಾಲಿ ಜೀವಂತವಾಗಿದ್ದು, ಒಂದು ಪ್ರದೇಶದಲ್ಲಿ ನಿರ್ದಿಷ್ಟ ಜೀವನ ವಿಧಾನವನ್ನಿಟ್ಟುಕೊಂಡು ಬದುಕುತ್ತಿದ್ದರೂ ಈ ಜನಪದವನ್ನು ವಾಸ್ತವ ಎಂದು ಯಾಕೆ ಒಪ್ಪಿಕೊಳ್ಳಲಿಲ್ಲ?

ಕೈಗಾರಿಕೆ-ಉದ್ಯಮಪತಿ-ಮಾರುಕಟ್ಟೆ ಎಂಬುವು ಒಂದೇ ತತ್ವದ ಮೂರು ನೆಲೆಗಳು. ತಾನು ಉತ್ಪತ್ತಿ ಮಾಡುತ್ತಿರುವುದಕ್ಕಿಂತ ಹಿಂದಿನದು ಹಳೆಯದು ಎನ್ನದಿದ್ದರೆ

ಪುರದ ಪುಣ್ಯ

ಇವರ ಮಾಲುಗಳು ಬಿಕರಿಯಾಗುವುದಿಲ್ಲ. ಆದ್ದರಿಂದ ಜನಪದರ ಜ್ಞಾನ ಮತ್ತು ಉತ್ಪತ್ತಿ ಈ ಕಾಲಕ್ಕೆ ಸೂಕ್ತವಲ್ಲ ಎಂದು ಪ್ರಗತಿಯ ಭಾಷೆಯಲ್ಲಿ (Outdated) ಎಂದು ಹೇಳಿಬಿಟ್ಟರೆ ಮುಗಿಯಿತು, ತಮ್ಮ ವಸ್ತುಗಳ ಕಡೆಗೆ ಜನ ಗಿರಾಕಿಗಳಾಗಿ ಬರುತ್ತಾರೆ. ಹದಿನೆಂಟನೆಯ ಶತಮಾನದಲ್ಲಿ ಕೈಗಾರಿಕೋದ್ಯಮಿ ಹೇಳಿದ ರೀತಿಯಲ್ಲಿಯೆ ಈಗಿನ ಸ್ಪ್ರೈಟ್ ಉದ್ಯಮಿ ತನ್ನ ಟಿ.ವಿ. ಜಾಹೀರಾತಿನಲ್ಲಿ ಸ್ಪ್ರೈಟ್ ಒಂದೇ ಅಸಲಿ ಉಳಿದುವೆಲ್ಲ ನಕಲಿ ಎನ್ನುತ್ತಾನೆ. ಸರ್ಫ್ ಖರ್ಚಾಗದಿದ್ದರೆ ಅದು ಹಳೆಯದಾಯಿತು ಎಂದು ಹೇಳಿ ಸರ್ ಸೂಪರ್ ಎಂದು ಜಾಹೀರಾತು ನೀಡುತ್ತಾನೆ. ಅದಕ್ಕೂ ಬೇಡಿಕೆ ಕಡಿಮೆಯಾದರೆ ಈಗ ಬಂದಿದೆ ಸರ್ಫ್ ಎಕ್ಸೆಲ್ ಎಂದು ಸೆಳೆಯುತ್ತಾನೆ. 'ಈಗ' ಅಥವಾ 'ಈಹೊತ್ತು' ಮತ್ತು 'ಸೆಳೆ' ಎಂಬ ವರ್ತಮಾನ ಮತ್ತು ಆಕರ್ಷಣೆ ಎಂಬ ತತ್ವಗಳು ಪಾರಂಪರಿಕವಾಗಿ ನಿರಂತರ ಬದುಕುತ್ತಾ ಬಂದಿರುವ ಜಾನಪದ ಉತ್ಪತ್ತಿ ಎಂಬ ಜ್ಞಾನ ಮತ್ತು ವಸ್ತುಗಳನ್ನು ಹಿಂದೆ ತಳ್ಳಿವೆ.

ಹಾಗಿದ್ದಲ್ಲಿ ವರ್ತಮಾನದ ಜನಪದ ಮತ್ತು ಜಾನಪದ ಯಾವುದು? ಯಾವುದೇ ಜನ ಸಮೂಹ ಈಗ ಬದುಕುತ್ತಿದೆ ಎಂದರೆ ಅದು ವರ್ತಮಾನಕಾಲದ ಜಾನಪದವೇ ಆಗುತ್ತದೆ. ಬುಡಕಟ್ಟು, ಅಲೆಮಾರಿ, ರೈತ, ದಲಿತ ಮತ್ತು ಹಿಂದುಳಿದ ಎಂಬ ಬೇರೆ ಬೇರೆ ಸ್ಥಿತಿಯ ಜನ ಸಮೂಹಗಳು ನಮ್ಮಲ್ಲಿ ಇವೆ. ನಾಗರೀಕರಿಗೆ ಹೋಲಿಸಿದರೆ ಇವರು ಹಿಂದುಳಿದಿದ್ದಾರೆ ಎಂಬುದು ನಿಜ. ಅವರಿಗೆ ನಾಗರೀಕರಿಗೆ ಸಿಕ್ಕಿರುವ ಸೌಲಭ್ಯಗಳು ಸಿಕ್ಕಿಲ್ಲಾ ಅಂದ ಮಾತ್ರಕ್ಕೆ ಅವರು ವರ್ತಮಾನಕಾಲದಲ್ಲಿ ಅಂದರೆ, ಈ ಹೊತ್ತು ಬದುಕಿಲ್ಲ ಎಂದು ಅರ್ಥವೆ? ನಾಗರೀಕರು ಎನ್ನುವವರ ಸಂಖ್ಯೆಗೆ ಹೋಲಿಸಿದರೆ ಈ ಜನರ ಸಮೂಹಗಳ ಸಂಖ್ಯೆಯ ಅಧಿಕವಾಗಿದೆ. ಆದರೆ ಕೈಗಾರಿಕೋದ್ಯಮಿ ತಮ್ಮ ವ್ಯವಸ್ಥೆ

ತಯಾರು ಮಾಡಿದ ವಸ್ತುಗಳನ್ನು ಯಾರು ಬಳಸುತ್ತಿಲ್ಲವೋ ಅವರು ವರ್ತಮಾನದಲ್ಲಿ ಇಲ್ಲ ಎಂದು ಘೋಷಿಸಿದ್ದಾರೆ. ಯಾರು ಪ್ರೆಸ್ಟೀಜ್ ಕುಕ್ಕರನ್ನು ಪ್ರೀತಿಸುತ್ತಾನೋ ಅವನು ಹೆಂಡತಿಯನ್ನು ಪ್ರೀತಿಸುತ್ತಾನೆ ಎಂಬ ಜಾಹೀರಾತಿನಂತೆ. ಉಳಿದೆಲ್ಲ ಜನರಿಗೆ ನಾಗರೀಕರ ಸೌಲಭ್ಯಗಳು ದೊರೆಯದಿರುವುದಕ್ಕೆ ಈ ಉದ್ಯಮಪತಿಯ ವ್ಯಾಪಾರಿ ಬುದ್ಧಿಯೆ ಕಾರಣ. ಕಡಿಮೆ ಬೆಲೆಯ ತಮ್ಮ ಉತ್ಪತ್ತಿಗೆ ದುಬಾರಿ ಬೆಲೆ ಇಟ್ಟು ಮಾರುತ್ತಾರೆ. ಸಹಜವಾಗಿಯೇ ಕಡಿಮೆ ಆದಾಯ ಇರುವವರು ಹೆಚ್ಚಿನ ನಾಗರೀಕ ಸೌಲಭ್ಯಗಳನ್ನು ಪಡೆಯಲು ಆಗುವುದಿಲ್ಲ (ನಿಧಾನವಾಗಿ ಆ ವಸ್ತುಗಳನ್ನು ಅವರು ಪಡೆಯುತ್ತಾರೆ). ಅಂದರೆ ಆಧುನಿಕ ನಾಗರೀಕ ವಸ್ತುಗಳನ್ನು ಕೊಳ್ಳುವ ಶಕ್ತಿಯ ಆಧಾರದ ಮೇಲೆ, ಕಡಿಮೆ ಕೊಳ್ಳುವವನು





ಹಿಂದುಳಿದವನು ಮತ್ತು ಹೆಚ್ಚು ಕೊಳ್ಳುವವನು ಮುಂದುವರಿದವನು ಎಂದು ತೀರ್ಮಾನಿಸಲಾಗಿದೆ. ಜ್ಞಾನದ ವಿಷಯದಲ್ಲಿಯೂ ಹೀಗೆಯೆ, ಪಾಶ್ಚಾತ್ಯ ಜ್ಞಾನವನ್ನು ತಿಳಿದುಕೊಂಡವನು ಆಧುನಿಕ ಅಥವಾ ನಾಗರೀಕ. ಸ್ಥಳೀಯ ಜ್ಞಾನಿ ಹಿಂದುಳಿದವನು ಆಗಿದ್ದಾನೆ. ಈ ಉದ್ಯಮಪತಿಗಳೇ ಹೇಳುವ ಹಿಂದುಳಿದವರನ್ನು ತಯಾರು ಮಾಡಿದವರು ಯಾರು? ಹೀಗೆ ಹಿಂದುಳಿದವರು ಮತ್ತು ಮುಂದುವರಿದವರೆಂಬ ಹೆಸರು ಮತ್ತು ಸ್ಥಿತಿಗೆ ಕಾರಣರಾದವರೇ ಈ ಉದ್ಯಮಪತಿಗಳು. ನಮ್ಮ ಭಾರತದಲ್ಲಿ ಜಾತಿಯನ್ನು ಉದ್ಯಮ ಮಾಡಿಕೊಂಡು ಕೆಲವರು ಮೇಲೆ ಇದ್ದು ಕೆಳಗಿನವರನ್ನು ಶೂದ್ರ ಮತ್ತು ಪಂಚಮ ಎಂದು ಹಿಂದೆ ತಳ್ಳಿದ್ದರು ಅದೇ ಥರದ ಕೆಲಸ ಇದು.

ವರ್ತಮಾನದ ಜಾನಪದವೆಂದರೆ ಉಳಿಕೆ, ಪಳಯುಳಿಕೆ ಅಥವ ಜೀವಂತ ಪಳಯುಳಿಕೆ ಅಲ್ಲ, ಜಾನಪದ ಜೀವಂತ. ಇಲ್ಲಿ ನಮಗೆ ಬೇಡವಾದ ಉಳಿಕೆ ಎಂಬ ಅಸ್ಪೃಶ್ಯತೆ ಇದೆ. ಮತಮಾನ್ಯ ಎಂಬ ಪಳಯುಳಿಕೆಗಳು ಇವೆ ಮತ್ತು ಜಾತಿ ಎಂಬ ಜೀವಂತ ಪಳಯುಳಿಕೆಯೂ ಇದೆ. ಇದೇ ಸಂದರ್ಭದಲ್ಲಿ ಸ್ನೇಹ, ಸಹೋದರತೆ, ಮತ್ತು ಸಹಬಾಳ್ವೆ ಎಂಬ ಜೀವಂತ ನಡವಳಿಕೆಗಳಿವೆ. ಇವುಗಳು ಯಾವ ಕಾಲದಲ್ಲಿ ಯಾವ ಸ್ಥಳ | ದೇಶದಲ್ಲಿ ಹುಟ್ಟಿದವು ಎಂದು ಹೇಳಬಹುದೆ? ಅವುಗಳ ಕಾಲ ನಿರ್ಣಯ ಮಾಡಿ ಅವು ನಮ್ಮ ಪಳಯುಳಿಕೆಗಳು ಎಂದು ತೀರ್ಮಾನಿಸಿಬಿಡಬಹುದೆ? ಸಾಮಾನ್ಯ ಜನರು ನಿರಂತರ ಉಳಿಸಿಕೊಂಡು ಮತ್ತು ಬೆಳೆಸಿಕೊಂಡು ಬಾಳುತ್ತಿರುವ ನಡವಳಿಕೆಗಳನ್ನೇ ನಾವು ಜಾನಪದ ಎಂದು ಕರೆಯಬಹುದು. ಇಂಥ ಜಾನಪದ ವರ್ತಮಾನದ್ದೂ ಹೌದು, ಭವಿಷ್ಯದ ಜೀವನ ವಿಧಾನವೂ ಹೌದು. ತಾತ್ಕಾಲೀನವಾಗಿ ಬೇರೆಯಾಗುವ ನಾಗರೀಕ, ಮೇಲುವರ್ಗ, ಮೇಲು ಪಂಥ, ಮೇಲು ಪಂಗಡ, ಅಧಿಕಾರ,

ನೌಕರ ಎಂಬಿತ್ಯಾದಿ ಜನರು ಮೂಲತಃ ಸಾಮಾನ್ಯರೇ ಆಗಿದ್ದು ತತ್ಕಾಲದಲ್ಲಿ ಪಡೆದ ಅನುಕೂಲಗಳಿಂದ ಶಿಷ್ಟ, ನಾಗರೀಕ ಅಥವ ಆಧುನಿಕರು ಎನಿಸಿಕೊಂಡಿದ್ದಾರೆ.

ಆದ್ದರಿಂದ ಪ್ರಸ್ತುತ ಜನಪದ ಮತ್ತು ಜಾನಪದವನ್ನು ನಿರ್ವಚಿಸಿಕೊಳ್ಳುವಾಗ ನಿರಂತರವಾಗಿ ಸ್ನೇಹ, ಸೋದರತ್ವ ಮತ್ತು ಸಹಬಾಳ್ವೆ ಮೌಲ್ಯಗಳನ್ನು ಉಳಿಸಿಕೊಂಡು ಮತ್ತು ಅವುಗಳನ್ನು ಬದುಕುತ್ತ ಬರುತ್ತಿರುವ ಜನಸಮೂಹವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಸಮೂಹಕ್ಕೆ ಬೇರೆ ಬೇರೆ ಸಂದರ್ಭ ಮತ್ತು ಕಾಲಗಳಲ್ಲಿ ಎದುರಾಗುವ ಬದಲಿ ವ್ಯವಸ್ಥೆಗಳಾದ ನಾಗರೀಕತೆ, ಆಧುನಿಕತೆ, ವಿದೇಶಿ ಮತ್ತು ಜಾಗತೀಕರಣ ಇತ್ಯಾದಿ ಸಂಸ್ಕೃತಿ ಜೊತೆಗೆ ನಡೆಯುವ ಸಂಘರ್ಷ ಮತ್ತು ಅನುಸಂಧಾನವನ್ನು ಸಹಜವೆಂದು ಹಾಗೂ ಜನಪದಗಳು ಬೆಳಯುವ ಮಾರ್ಗ





ಇದೆಂದು ಒಪ್ಪಿ ನಡೆಯಬೇಕಾಗುತ್ತದೆ. ಇಂಥ ಸಹಜ ಸ್ಥಿತಿಯಲ್ಲಿ ಜನಪದ ಮತ್ತು ಜಾನಪದ ಏನೆಂದು ತಿಳಿಯೋಣ. (೧) ಒಂದು ನಿರ್ದಿಷ್ಟ ಪ್ರದೇಶದಲ್ಲಿ (೨) ಒಂದು ನಿರ್ದಿಷ್ಟ ಸಂಸ್ಕೃತಿಯನ್ನು ಇಟ್ಟುಕೊಂಡು ಬಾಳುವೆ ಮಾಡುತ್ತ ಬರುತ್ತಿರುವ ಒಂದು ನಿರ್ದಿಷ್ಟ ಜನ ಸಮೂಹವೆ ಜನಪದ.

**ಒಂದು ನಿರ್ದಿಷ್ಟ ಪ್ರದೇಶವೆಂದರೆ :** ಒಂದು ಭೌಗೋಳಿಕ ಪ್ರದೇಶ, ಒಂದು ಭಾಷಿಕ ಪ್ರದೇಶ, ಒಂದು ಸಾಂಸ್ಕೃತಿಕ ಪ್ರದೇಶ ಅಥವ ಒಂದು ದೇಶ. ಇತ್ತೀಚಿನ ದಿನಗಳಲ್ಲಿ ಜಗತ್ತಿನ ಒಂದು ಖಂಡ, ಉಪಖಂಡ ಅಥವ ಭಾಗವನ್ನು ಒಂದು ಸಮಾನ ಸಂಸ್ಕೃತಿಯ ಪ್ರದೇಶವೆಂದು ಗುರುತಿಸಲಾಗಿದೆ.

ಭೌಗೋಳಿಕ ಪ್ರದೇಶಕ್ಕೆ ಉದಾ : ಬಯಲುನಾಡು, ಮಲೆನಾಡು, ಕರಾವಳಿ ಪ್ರದೇಶ, ಬೆಳವಲನಾಡು ಇತ್ಯಾದಿ. ಭಾಷಿಕ ಪ್ರದೇಶಕ್ಕೆ ಉದಾ: ತಮಿಳು ನಾಡು, ಕನ್ನಡ ನಾಡು, ತುಳು ನಾಡು, ಮಲಯಾಳ ದೇಶ ಇತ್ಯಾದಿ.

ಸಾಂಸ್ಕೃತಿಕ ಪ್ರದೇಶಕ್ಕೆ ಉದಾ : ಆರ್ಯಾವರ್ತ ದ್ರಾವಿಡ ನಾಡು, ಬೇರೆ ದೇಶಕ್ಕೆ : ಭಾರತ, ಶ್ರೀಲಂಕಾ, ಬಾಂಗ್ಲಾದೇಶ ಇತ್ಯಾದಿ.

**ಒಂದು ನಿರ್ದಿಷ್ಟ ಸಂಸ್ಕೃತಿ ಎಂದರೆ :** ಒಂದು ಸಮಾನ ನಂಬಿಕೆ, ತತ್ವ, ಆರ್ಥಿಕ ಸ್ಥಿತಿ, ರಾಜಕೀಯ ಅಥವ ಸಹಕಾರವೆಂಬ ನಡವಳಿಕೆಗಳನ್ನು ಉಳಿಸಿಕೊಂಡು ಮತ್ತು ಆಚರಿಸಿಕೊಂಡು ಬರುವುದು. ಒಂದು ಸಮೂಹ

ಆಚರಿಸಿಕೊಂಡು ಬರುತ್ತಿರುವ ಈ ಸಂಸ್ಕೃತಿ ನೆನ್ನೆ ಮೊನ್ನೆಯದಾಗಿರಕೂಡದು. ಅನೇಕ ಕಾಲಗಳಲ್ಲಿ ಒಂದು ಸಮೂಹದ ಮಧ್ಯೆ ಉಳಿದು, ಪರೀಕ್ಷಿಸಿಕೊಂಡು ಮತ್ತು ಪ್ರಾಯೋಗಿಸಿಕೊಂಡು ಆ ಸಮೂಹಕ್ಕೆ ಅದು ನಮ್ಮ ಅಸಲಿ ಜೀವನತತ್ವ ಎನಿಸಿಕೊಂಡು ಬೆಳೆದು ಬಂದಿರಬೇಕು. ಹೀಗೆ ಬೆಳೆದು ಬಂದ ಸಂಸ್ಕೃತಿಯ ದಾರಿಯನ್ನು ಸಾಂಸ್ಕೃತಿಕ ಇತಿಹಾಸ ಎಂದು ಕರೆಯುತ್ತೇವೆ.

**ನಂಬಿಕೆ ಸಂಸ್ಕೃತಿಗೆ ಉದಾ :** ದ್ವಿಜ ಸಂಸ್ಕೃತಿ, ಮಾರ್ಗ ಸಂಸ್ಕೃತಿ, ಬೇರೆ ಸಮೂಹಕ್ಕೆ ಈ ನಂಬಿಕೆ ಸುಳ್ಳು ಮೋಸ ಅಥವ ವಂಚನೆ ಎನಿಸಬಹುದು. ನಂಬಿದವರಿಗೆ ಅದು ಸ್ವರ್ಗ, ತತ್ವ ಸಂಸ್ಕೃತಿಗೆ ಉದಾ : ವೃತ್ತಿ ಸಂಸ್ಕೃತಿಗಳು (ಕ್ಷತ್ರಿಯ, ವೈಶ್ಯ, ಕೃಷಿಕ, ಸೇವಕ, ಕಾರ್ಮಿಕ ಇತ್ಯಾದಿ) ಧರ್ಮ ಸಂಸ್ಕೃತಿಗಳು (ಕ್ರೈಸ್ತ ಮುಸಲ್ಮಾನ, ಪಾರ್ಸಿ, ಬೌದ್ಧ ಇತ್ಯಾದಿ)





**ಆರ್ಥಿಕ ಸಂಸ್ಕೃತಿಗೆ** ಉದಾ : ಡಾಲರ್ ಸಂಸ್ಕೃತಿ, ಕೈಗಾರಿಕಾ ಸಂಸ್ಕೃತಿ, ಯೂರೋ ಆರ್ಥಿಕ ವ್ಯವಸ್ಥೆ,

**ರಾಜಕೀಯ ಸಂಸ್ಕೃತಿಗೆ** ಉದಾ : ನ್ಯಾಟೊ, ಅಲಿಪ್ತ, ಯೂರೋ ಇತ್ಯಾದಿ

**ಸಹಕಾರ ಸಂಸ್ಕೃತಿಗೆ** ಉದಾ : ವಿಶ್ವ ಸಂಸ್ಥೆಯ ಉದಯದೊಂದಿಗೆ ಬೇರೆ ಬೇರೆ ರಾಷ್ಟ್ರಗಳು ತಮ್ಮ ಸಾಮಾಜಿಕ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಸಹಕಾರವನ್ನು ವೃದ್ಧಿಸಿಕೊಂಡು ಬದುಕುವುದು ದ್ವಿಪಕ್ಷೀಯ ಸಂಬಂಧ, ಬಹುಪಕ್ಷೀಯ ಸಂಬಂಧ. ಅಭಿವೃದ್ಧಿ ರಾಷ್ಟ್ರಗಳು; ಜಿ.ಆ. ಅಭಿವೃದ್ಧಿಶೀಲ ರಾಷ್ಟ್ರಗಳು, ಹಿಂದುಳಿದ ರಾಷ್ಟ್ರಗಳು, ಅಣುಜ್ಞಾನ ಶೋಧ ರಾಷ್ಟ್ರಗಳು, ಅಣುಜ್ಞಾನ ಶೋಧವಿಲ್ಲದ ರಾಷ್ಟ್ರಗಳು.

**ಬಾಳುವೆ ಎಂದರೆ** : ಒಂದು ಪ್ರದೇಶ ಹಾಗೂ ಸಂಸ್ಕೃತಿಯ ಚೌಕಟ್ಟಿನಲ್ಲಿ ನಡೆದ-ನಡೆಯುತ್ತಿರುವ ಸಾಮಾಜಿಕ, ಚಾರಿತ್ರಿಕ ಘಟನೆಗಳ ಅನುಭವದ ಮತ್ತು ಅನುಸರಣೆಯ ಮೊತ್ತ. ಪ್ರತಿಯೊಂದು ಜನಪದಕ್ಕೂ ಒಂದು ನಿರ್ದಿಷ್ಟ ಸಂಸ್ಕೃತಿ ಇರುವ ಹಾಗೆ ಆ ಸಂಸ್ಕೃತಿಯನ್ನು ರೂಪಗೊಳಿಸಿದ ಸಾಮಾಜಿಕ ಆರ್ಥಿಕ ಚಟುವಟಿಕೆಗಳ ಇತಿಹಾಸ ಇರುತ್ತದೆ. ಇದು ಆ ಜನಪದವನ್ನು ಇತರ ಜನಪದಗಳಿಗೆ ಹೋಲಿಸಿದಾಗ ವಿಶಿಷ್ಟ ಮತ್ತು ವಿಭಿನ್ನವಾಗಿ

ತೋರಿಸುತ್ತದೆ. ಈ ವಿಶಿಷ್ಟತೆಯ ಮೇಲೆ ಆ ಜನಪದ ತನ್ನ ನಿರಂತರತೆ ಮತ್ತು ಅಸ್ತಿತ್ವವನ್ನು ಪ್ರತಿಪಾದಿಸುತ್ತದೆ. ಜನಪದವೊಂದರ ಈ ಅಸ್ತಿತ್ವ ಗುಣಕ್ಕೆ ಅನನ್ಯತೆ (identity) ಎಂದು ಕರೆಯಲಾಗಿದೆ.

ಯಾವುದೇ ಜನಪದ ಒಂದು ತತ್ವದ ಮೇಲೆ ಒಂದಾಗುತ್ತದೆ. ಆ ತತ್ವದ ಆಚರಣೆಯನ್ನು ಸಂಸ್ಕೃತಿಯನ್ನಾಗಿ ಮಾಡಿಕೊಳ್ಳುತ್ತದೆ (ಆದರೆ ಯಾವುದೇ ಜನಪದ ಮತ್ತೊಂದು ಜನಪದಕ್ಕೆ ವಿರುದ್ಧವಾಗಿ ಹುಟ್ಟಿಕೊಳ್ಳುವುದಿಲ್ಲ. ಹಾಗೆ ಹುಟ್ಟಿಕೊಂಡಿದ್ದರೆ ಆ ಗುಂಪು ಅಥವ ಸಮೂಹವನ್ನು ಕಳ್ಳರ, ಖದೀಮರ ಅಥವ ದರೋಡೆಕೋರರ ಸಮೂಹ ಎಂದು ಕರೆಯಬಹುದು). ಒಂದು ಜನಪದ ತನ್ನನ್ನು ತಾನು ಗಾಢವಾಗಿ ಗೌರವಿಸಿಕೊಳ್ಳುವುದರ ಜೊತೆಗೆ ಇತರ ಜನಪದಗಳನ್ನು ಗೌರವಿಸುತ್ತದೆ. ಇಲ್ಲದಿದ್ದಲ್ಲಿ ಅದರ ಅನನ್ಯತೆ ಖೋಟಾ ಆಗಿರುತ್ತದೆ.

ಜನಪದ ಹುಟ್ಟುವುದು ಮತ್ತು ಬದುಕುವುದು ತನಗೆ ಲಭ್ಯವಿರುವ ಆರ್ಥಿಕ ಸಾಮಾಜಿಕ ಸೌಲಭ್ಯಗಳನ್ನು ಹೊಂದಿಸಿಕೊಳ್ಳಲು. ಉತ್ಪತ್ತಿಯೆ ಇದರ ಮುಖ್ಯ ಉದ್ದೇಶ, ಹಂಚಿಕೆ ಎಂಬುದು ಉತ್ಪತ್ತಿಯಲ್ಲಿ ತೊಡಗುವವರ ಶ್ರಮ, ನೈಪುಣ್ಯ ಮತ್ತು





ನಿರ್ವಹಣೆಯ ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆ. ಸಾಂಸ್ಥಿಕ ಹಕ್ಕು ಮತ್ತು ಕರ್ತವ್ಯಗಳು ಕೂಡ ಇದೇ ತತ್ವಕ್ಕೆ ಬದ್ಧವಾಗಿವೆ. ಆದರೆ ಅನಂತರದ ಐತಿಹಾಸಿಕ ಬೆಳವಣಿಗೆಯಲ್ಲಿ ನಿರ್ವಾಹಕರ ಯಜಮಾನರಾದುದು ಕಂಡು ಬರುತ್ತಿದೆ. ಶ್ರಮ ಮತ್ತು ನೈಪುಣ್ಯಗಳು ಆಕ್ರಮಣಕ್ಕೆ ಒಳಗಾದುದೆ ನಮ್ಮ ಈ ಹೊತ್ತಿನ ಬೃಹತ್ ಬಂಡವಾಳ ವ್ಯವಸ್ಥೆಯ ಅಸ್ತಿತ್ವಕ್ಕೆ ಕಾರಣ ಎನ್ನಬಹುದು. ಈ ಶೋಷಿತ ಅಂಗಗಳಲ್ಲಿ ನೈಸರ್ಗಿಕ ಸಂಪತ್ತು ಮತ್ತು ನೈಪುಣ್ಯಗಳೂ ಸೇರಿವೆ.

ಜನಪದಗಳಲ್ಲಿ ಆಧುನಿಕ ಜನಪದ ಎಂಬ ಸಾಂಸ್ಕೃತಿಕ ಸಮೂಹ ಇದೆಯೆ? ಆಧುನಿಕತೆ ಎಂಬ ಪರಿಕಲ್ಪನೆಯನ್ನು ಎರಡು ರೀತಿಯಲ್ಲಿ ನಿರ್ವಚಿಸಬಹುದು. ಒಂದು ಇಡೀ ಜಗತ್ತು ನೈಸರ್ಗಿಕ ಹಾಗೂ ಸಾಮಾಜಿಕ ಮಾರ್ಪಾಡಿಗೆ ಒಳಪಡುತ್ತಾ ಖರುವಾಗ, ಹತ್ತನೆಯ ಶತಮಾನಕ್ಕೆ ಹೋಲಿಸಿದರೆ ಹನ್ನೊಂದನೆಯ ಶತಮಾನ ನವೀನವಾಗಿರುತ್ತದೆ. ಪ್ರತಿಯೊಂದು ಶತಮಾನವೂ ಒಂದಲ್ಲ ಒಂದು ಕಡೆಯಿಂದ ತಂತ್ರಜ್ಞಾನ ಶೋಧದ ಕಾರಣದಿಂದ ಅಭಿವೃದ್ಧಿ ಹೊಂದುತ್ತದೆ. ಈ ತಂತ್ರಜ್ಞಾನ ಎಲ್ಲೇ ಹುಟ್ಟಿರಲಿ, ಹೇಗೇ ಹುಟ್ಟಿರಲಿ ಹೆಚ್ಚು ತಡೆ ಇಲ್ಲದೆ

ಜನಸಮೂಹಗಳ ಒಳಗೆ ಬರುತ್ತದೆ. ಈ ಹಿನ್ನೆಲೆಯಲ್ಲಿಯೇ ಒಂದು ಶತಮಾನ ಮತ್ತೊಂದು ಶತಮಾನಕ್ಕಿಂತ ಭಿನ್ನವಾಗಿರುತ್ತದೆ. ಇದನ್ನು ನಾವು ಸಹಜ ಅಭಿವೃದ್ಧಿ ಅಥವ ಸಹಜ ಆಧುನಿಕತೆ ಎಂದು ಕರೆಯುತ್ತೇವೆ. ಆ ಮಟ್ಟಿಗೆ ಜನಪದಗಳು ಆಧುನಿಕವಾಗುತ್ತವೆ.

ಹದಿನೆಂಟನೆಯ ಶತಮಾನದಲ್ಲಿ ಧುತ್ತನೆ ಅವತರಿಸಿದ ಆಧುನಿಕತೆಯ ನೆಲೆಯ ಬೇರೆ. ಇದು ಕೈಗಾರಿಕಾ ಉದ್ಯಮ ಆಧಾರಿತ ಆಧುನಿಕತೆ ಅಥವ ಅಭಿವೃದ್ಧಿ. ಸಾಕುಪ್ರಾಣಿಗಳಿಂದ ಹೊಸ ಘಟ್ಟಕ್ಕೆ ಬಂದ ಆದಿಮಾನವ ಕೃಷಿಕ್ರಾಂತಿಯಿಂದ ಬಹುದೊಡ್ಡ ಸಾಧನೆಯನ್ನು ಮಾಡಿದ. ಈ ಸಂದರ್ಭದಲ್ಲಿ ಹಳ್ಳಿಗಳೆಂಬ ಕೃಷಿ ಕೇಂದ್ರಗಳು ಹುಟ್ಟಿಕೊಂಡವು. ಇವುಗಳ ಉತ್ಪಾದನಾ ಉಳಿತಾಯ ಪ್ರಭುತ್ವದ ಹುಟ್ಟಿಗೆ ಕಾರಣವಾಯಿತು. ಕಾರಣವಾಗಿ ಹಳ್ಳಿಗಳಲ್ಲಿ ಪಟೇಲ ಮತ್ತು ಶಾನುಭಾಗರು ನೇಮಕಗೊಂಡರು. ಇವರು ಹಳ್ಳಿಯ ಉತ್ಪಾದನಾ ವ್ಯವಸ್ಥೆಯ ಮೇಲೆ ನಿಯಂತ್ರಣ ಇಟ್ಟುಕೊಂಡಿದ್ದರು. ಹೆಚ್ಚು ಉತ್ಪಾದನೆ ಇವರ ವೈಯಕ್ತಿಕ ಲಾಭ ಮತ್ತು ವರ್ಚಸ್ಸಿಗೆ ಬೆಂಬಲವಾಗುತ್ತಿತ್ತು. ಈ ಕೃಷಿ ಉದ್ಯಮದ ಸಂದರ್ಭದಲ್ಲಿ ಸಮಾಜದ ಬೇರೆ ಬೇರೆ ವರ್ಗ ಸಂಬಂಧಾತ್ಮಕವಾಗಿ ಉದ್ಯೋಗಗಳನ್ನು ಹೊಂದಿದ್ದರು. ಇಡೀ ಸಮಾಜ ಒಂದು ಸಂಪೂರ್ಣ ಆರ್ಥಿಕ ಸಾಮಾಜಿಕ ಸಂರಚನೆಗೆ ಒಳಪಟ್ಟಿತ್ತು; ಎರಡು ಅಪರಾಧಗಳನ್ನು





ಹೊರತುಪಡಿಸಿ; ಒಂದು, ವೃತ್ತಿಯನ್ನು ಜಾತಿಯಾಗಿ ಮಾಡಿದ್ದು, ಎರಡು; ಗೌಡಿಕೆ ಮತ್ತು ಶಾನುಬೋಗಿಕೆ ನಿಯಂತ್ರಣ ಮೀರಿ ಬೆಳೆದದ್ದು.

ಹದಿನೆಂಟನೆಯ ಶತಮಾನದ ಆಧುನಿಕತೆ ಸಂಬಂಧಗಳನ್ನೆ ನಾಶ ಮಾಡಿದ ಅಭಿವೃದ್ಧಿ ಸಿದ್ಧಾಂತ. ಗರಿಷ್ಟ ಲಾಭ ಇದರ ಉದ್ದೇಶ. ಎಲ್ಲಿ ಸಂಬಂಧ ಸಡಿಲಗೊಳ್ಳುತ್ತವೊ ಅಥವ ಕಡಿತಗೊಳ್ಳುತ್ತವೊ ಅಲ್ಲಿ ಜನಪದಗಳು ಅಸ್ಥಿರವಾಗುತ್ತವೆ. ಸಂಬಂಧ ಎಂಬುದು ಜನಪದಗಳ ಒಳಗಿನ ಉತ್ಪತ್ತಿ ಮತ್ತು ಹಂಚಿಕೆಯ ವ್ಯವಸ್ಥೆಗೆ ಸಂಬಂಧಪಟ್ಟುದು. ಹೊಸ ಆಧುನಿಕತೆ ಹೆಚ್ಚು ಹೆಚ್ಚು ಕೂಲಿಗಳನ್ನು ಮತ್ತು ಬಳಕೆದಾರರನ್ನು ನಿರ್ಮಿಸಿತು. ಇಡೀ ಭೂಮಿ ತನ್ನ ಉದ್ಯಮದ ಸಂಪನ್ಮೂಲ ಸಾಮಗ್ರಿ ಎಂದು ಭಾವಿಸಿತು. ಅದು ನಮಗೆ ನವನವೀನ ಆಧುನಿಕವೆಂಬ ಸಾಮಗ್ರಿಗಳನ್ನು ಕೊಟ್ಟಿತು. ಆದರೆ ಸಾಮೂಹಿಕ ಸಂಘಟನೆಗೆ ಬೇಕಾದ ಹೊಸ ಸಂಬಂಧಗಳನ್ನು ಸೃಷ್ಟಿಸಲಿಲ್ಲ. ಅದು ಕೊಟ್ಟ ಭೌತಿಕ ಸೌಲಭ್ಯಗಳು ನಮ್ಮಲ್ಲಿ ಸಂತಸ ಕೊಟ್ಟಿದೆ ನಿಜ, ಸಾಂಪ್ರದಾಯಿಕ ಶೋಷಣೆಯನ್ನು ಒಡೆದಿವೆ

ಎಂಬುದೂ ಸರಿ. ಆದರೆ ಮಾನವ ಸಂಬಂಧಗಳನ್ನೆ ಉಳಿಸಿಲ್ಲವಲ್ಲ ! ಜನಪದಗಳು ಕಳಚಿಕೊಳ್ಳುತ್ತಾ ಹೋದವು. ಜನಪದಗಳು ಕೂಡಲಿಲ್ಲವಾಗಿ ಜಾನಪದ ಹುಟ್ಟುವುದು ಕ್ಷೀಣವಾಗುತ್ತಾ ನಡೆಯಿತು. ಜನಪದಗಳು ಉತ್ಪತ್ತಿ ಸ್ಥಾನ ಮತ್ತು ನಿರ್ವಹಣೆಯಿಂದ ಹೊರದೂಡಲ್ಪಟ್ಟವು.

ಹೀಗೆ ಮಾಡಿ ಜನಪದಗಳು ಪುರಾತನ ಕಾಲದವು, ಹಳ್ಳಿಗಾಡಿನವು, ಹಿಂದುಳಿದವು, ನಿರುತ್ಪಾದಕವಾದುವು ಎಂದು ಹೇಳಿದರೆ ಏನೆನ್ನಬೇಕು? ಬಹುತೇಕ ಸಾಂಪ್ರದಾಯಿಕ ವೃತ್ತಿ- ಉದ್ಯೋಗಗಳನ್ನು ಮಾಡಿ ಕೆಲವೇ ಕಾರ್ಖಾನೆ ಉದ್ಯೋಗಗಳನ್ನು ಸೃಷ್ಟಿಸಿ ಷಿ ನಮಗೆ ಆಧುನಿಕತೆ ಮೋಸ ಮಾಡಿದೆ. ಅದರ ಬೆಡಗನ್ನು ನಾವು ತಿಳಿಯದೆ ಹೋಗಿದ್ದೇವೆ. ಭಾರತದಲ್ಲಿ ಸಾಂಪ್ರದಾಯಿಕ ವೃತ್ತಿಗಳು ಕೆಳಜಾತಿಯವರಿಗೆ ಮೀಸಲಾಗಿದ್ದುದು ನಿಜ. ಅದು ಅಪರಾಧ ಕೂಡ. ಜಗತ್ತಿನಾದ್ಯಂತ ಇಂಥ ಪರಿಸ್ಥಿತಿ ಇರಲಿಲ್ಲ. ಅಲ್ಲಿ ಪ್ರತಿ ವೃತ್ತಿ ಮತ್ತೊಂದು ವೃತ್ತಿಗೆ ದಾರಿ ಬಿಟ್ಟುಕೊಡುವ ಸುಗಮ ವ್ಯವಸ್ಥೆ ಇತ್ತು. ಸಹಜವಾದ ವಿಕಾಸಶೀಲ ಜಾಗತಿಕ ಆಧುನಿಕತೆ ಜನಪದಗಳನ್ನು ಮತ್ತು ಜಾನಪದವನ್ನು ಪುನರುಜೀವಿಸಬಹುದೇ ಹೊರತು ನಾಶ ಮಾಡುವುದಿಲ್ಲ.

ಯೂರೋ ಕೇಂದ್ರದಲ್ಲಿ ಆಧುನಿಕ ಜನಪದಗಳಿವೆ. ಅವುಗಳ ಉದ್ದೇಶ ಜಗತ್ತಿನ



ಪುರದ ಪುಣ್ಯ

ಇತರ ದೇಶಗಳ ಶೋಷಣೆ, ಅವರ ಜಾನಪದವೆಂದರೆ ಮಾರಾಟದ ತಂತ್ರಗಾರಿಕೆ, ಜಾಹೀರಾತು ಹಾಗೂ ಬಳಸು ಮತ್ತು ಬಿಸಾಡು ಎಂಬ ಸಂಸ್ಕೃತಿ. ನಮಗೆ ಕೊಳ್ಳುವ ಶಕ್ತಿಯೂ ಇಲ್ಲ ಬಿಸಾಡಲು ವಸ್ತುಗಳು ಮೊದಲೇ ಇಲ್ಲ, ಯೂರೋ ಕೇಂದ್ರದ ಹೊರಗಿನ ಆಧುನಿಕ ಜನಪದಗಳೆಂದರೆ ಯೂರೋ ತಂತ್ರಜ್ಞಾನದ ಮಾದರಿಗಳು ಮತ್ತು ವಸ್ತುಗಳನ್ನು ಪಡೆದಿರುವ ಮತ್ತು ಪಡೆಯುತ್ತಿರುವ ಜನಸಮೂಹಗಳು. ಇವರು ತಮ್ಮ ಮೂಲ ವೃತ್ತಿಯಲ್ಲಿ ಬದಲಾವಣೆ ಹೊಂದಿದ್ದಾರೆ. ಆದರೆ ಅವರ ನಂಬಿಕೆ, ನಡವಳಿಕೆ ಮತ್ತು ಧರ್ಮದಲ್ಲಿ ಅಲ್ಲ. ಆ ಮೂಲ ನಂಬಿಕೆಯ ಒಳಕ್ಕೆ 'ಆಧುನಿಕ' ತಂತ್ರಜ್ಞಾನ ಸಾಧನಗಳನ್ನು ಸೇರಿಸಿಕೊಳ್ಳುತ್ತಿದ್ದಾರೆ. ನಮ್ಮ ದೇಶದ ಜನ ಅಮೆರಿಕ, ಫ್ರಾನ್ಸ್‌ನಿಂದ ಹೊಸ ಯಂತ್ರಗಳನ್ನು ತಂದಾಗ ವಿಭೂತಿ ಹಚ್ಚಿ ನಾಮ ಹಾಕಿ ಮತ್ತು ದಾರವನ್ನು ಕಟ್ಟಿ ಸ್ಥಾಪಿಸಿಕೊಳ್ಳುತ್ತಿರುವಂತೆ.

'ಆಧುನಿಕ' ದೇಶಗಳ 'ಆಧುನಿಕ ಜನಪದ'ಗಳಲ್ಲಿ ಜಾನಪದ ಹುಟ್ಟುತ್ತಿದೆ. ಅದು ಭಯ, ಆತಂಕ, ಅಪರಾಧ, ಹುಸಿ ಪ್ರತಿಷ್ಠೆ, ಮಹಾಶೋಕಿ ಮತ್ತು ತಂತ್ರಗಾರಿಕೆಗೆ ಸಂಬಂಧ ಪಟ್ಟದ್ದಾಗಿದೆ. ನಮ್ಮಲ್ಲಿ ಆ 'ಆಧುನಿಕತೆ' ಜಾತಿಗಳ ಜೊತೆಗೆ ಸೇರಿ ಹೊಸ ತಮಾಷೆಗಳನ್ನು ಸೃಷ್ಟಿಸುತ್ತಿದೆ. ಉದಾ : ಸಾಫ್ಟ್‌ವೇರ್ ಎಂದರೆ ಜನಿವಾರ ಹಾವೇ ಎಂದರೆ ಶಿವದಾರ, ನೋವೇ ಎಂದರೆ ಇವರ ಪರಿವಾರ. ಎಂದರೆ, ಸೇವಕರು, ವಿಶೇಷವಾಗಿ ನಮ್ಮ ಆಧುನಿಕ ಜನಪದ ಎಂದರೆ ನೌಕರ ಹಾಗೂ ವಿದ್ಯಾರ್ಥಿ ವರ್ಗ. ಇವರು ಕಛೇರಿ ಮತ್ತು ಕಾಲೇಜುಗಳಲ್ಲಿ ಹುಟ್ಟಿಸುವ ಜೋಕುಗಳು ಆಧುನಿಕ ಜಾನಪದ. ಸಂಜೆ ಐದೂವರೆ ಕಳೆದರೆ ಮತ್ತೆ ಅದೇ ಜಾತಿ ಕೊಟ್ಟಿಗೆಗೆ ಹೋಗುತ್ತಾರೆ. ಯೂರೋಕೇಂದ್ರಿತ ಈ 'ಆಧುನಿಕತೆ'ಗೆ ಸ್ಥಿರತೆ ಎಂಬುದೇ ಇಲ್ಲ. ಈ ಆಧುನಿಕತೆ ಕಾಲದ ಮತ್ತು ಸಂಬಂಧದ ಆಳತೆಯಲ್ಲಿ ಇಲ್ಲ. ಪ್ರತಿನಿತ್ಯ ಹುಟ್ಟುವ ಹೊಸ ಯಂತ್ರಜ್ಞಾನಕ್ಕೆ ಮತ್ತು ಅದರ ಶೋಷಣೆಗೆ ಬದ್ಧವಾಗಿದೆ.

'ಜಾಗತಿಕ ಗ್ರಾಮ' ಎಂಬ ಇದೇ ಆಧುನಿಕ ಪ್ರಭುವಿನ ಘೋಷಣೆ ನಮ್ಮ ಕೆಲವರಲ್ಲಿ ಆನಂದವನ್ನೂ ಮತ್ತೆ ಕೆಲವರಲ್ಲಿ ಆತಂಕವನ್ನೂ ಉಂಟು ಮಾಡಿದೆ. ಇಡೀ ಜಗತ್ತೇ ಒಂದು ಗ್ರಾಮವಾದರೆ ಪಕ್ಕದ ಸಾರಾಯಿ ಅಂಗಡಿಗೆ ಹೋಗಿ ಬಂದಂತೆ ಹಲವು ದೇಶಗಳನ್ನು ಅಡ್ಡಾಡಬಹುದು ಎಂದು ಕೆಲವರು ತಿಳಿದಿದ್ದಾರೆ. ಆ ಗ್ರಾಮ ಯೂರೋ ಪ್ರಭುಗಳ ಸರಕುಗಳನ್ನು ತುಂಬುವ ಗುಜರಿ ಎಂದು ಅವರು ತಿಳಿಯಬೇಕು. ಶ್ರೀ ದೇವನೂರು ಮಾದೇವ ಒಂದು ಭಾಷಣದಲ್ಲಿ ಹೇಳಿದಂತೆ,





ಹಕ್ಕಿಗಳಿರುವ ಜಾಗತೀಕರಣ (ಬೇಕಾದಲ್ಲಿಗೆ ಹೋಗಿ ಮೀನು ತಿಂದು, ಮೊಟ್ಟೆ ಇಟ್ಟು, ಮರಿಮಾಡಿ ಬೆಳೆಸಿಕೊಂಡು ಮತ್ತೆ ತಮ್ಮ ಊರಿಗೆ ವಾಪಸ್ಸಾಗುವುದು) ಬರುವುದಾದರೆ ಖಂಡಿತ ಬರಲಿ, ಇನ್ನು ಕೆಲವರು ನಮ್ಮ ಗ್ರಾಮದ ಗೌಡನಿಗೆ ಬದಲಾಗಿ ಬುಷ್ ಗೌಡನ ಜಾಗತಿಕ ಗ್ರಾಮ ನಮ್ಮಲ್ಲಿಗೂ ಬರುವುದಾದರೆ ನಮ್ಮ ತಾಯಿಗೆ ಗಂಡಂದಿರು ಎಷ್ಟಾಗಬಹುದು ಎಂದು ತಲ್ಲಣಗೊಳ್ಳುತ್ತಿದ್ದಾರೆ. ಹೆಚ್ಚು ಹೇಳದೆ ಈ ಜಾಗತಿಕ ಗ್ರಾಮವನ್ನು ನಮ್ಮ ಈ ಹೊತ್ತಿನ ಪ್ಲೇವಿನ್ ಲಾಟರಿಗೆ ಹೋಲಿಸಿ ಕೈ ಬಿಡಬಹುದು. ಇಲ್ಲಿ ಏನು ಹುಟ್ಟಬಹುದು ಎಂಬುದನ್ನು ನೀವೇ ಯೋಚಿಸಿ !

ತಮ್ಮ ಜನಪದಗಳನ್ನು ಸಮರ್ಥಿಸಿಕೊಂಡು ನಮ್ಮ ಜನಪದಗಳನ್ನು ನಿರಾಕರಿಸಿದ 'ನವ ಆಧುನಿಕ' ಪಾಶ್ಚಾತ್ಯ ಚಿಂತನೆಯಿಂದ ಪ್ರಭಾವಿತರಾಗಿರುವ ನಾವು ಇಲ್ಲಿಯವರೆಗೆ 'ಜನಪದ' ಬಹುಮುಖ್ಯವಾಗಿ ಉತ್ಪತ್ತಿ ಸ್ಥಾನ ಎಂಬ ನಿಜವನ್ನು ನಮ್ಮ ಮೆದುಳಿನಿಂದಲೆ ದೂರ ಇಟ್ಟಿದ್ದೇವೆ. ಆ ತಂತ್ರಜ್ಞಾನದ ಓಟದ ಅಳತೆಯ ಮೀಟರ್ ನಮ್ಮ ಮೆದುಳಿನ ಓಟದ ಗತಿಯನ್ನು ಸೊನ್ನೆಯಿಂದ ಮೇಲೇರದಂತೆ ಸೀಸ್ ಮಾಡಿದೆ. ನಮ್ಮ ಸ್ವಂತದೊಂದು ಚಿಂತನೆ ಮಾಡುವುದಾದಲ್ಲಿ ನಾವು ಮತ್ತು ನಮ್ಮ ಜನಪದಗಳು ನಮ್ಮ ದೇಶದ ಸಂದರ್ಭದಲ್ಲಿ ಸಮಕಾಲೀನವಾಗಿದೆ ಎಂದು ತಿಳಿಯಬೇಕು.

ಹೀಗೆ ಚಿಂತನೆ ಮಾಡುವ ಜಾನಪದ ವಿದ್ವಾಂಸರು ಜಾತಿಯ ಅನುಕೂಲವೂ ಇಲ್ಲದೆ ವೃತ್ತಿಯ ನೆಲೆಯೂ ಇಲ್ಲದೆ ಬಳಲುತ್ತಿರುವ ಕೋಟ್ಯಾಂತರ ಮಂದಿ ತಳವರ್ಗದ ದುಡಿಮೆಗಾರರ ಬಗ್ಗೆ ಏನು ಹೇಳುತ್ತೀರಿ? ನಮಗೆ 'ಆಧುನಿಕತೆ' ಅನುಕೂಲ ಎಂದು ತಿಳಿದಿದ್ದೇವೆ ಎನ್ನಬಹುದು. ಜನಪದ ಪುನರುಜೀವನ ಎಂದರೆ ಜಾತಿ ಮತ್ತು ಮೂಢ ನಂಬಿಕೆಗಳ ಪುನರುಜ್ಜಿವನ ಅಲ್ಲ. ನಮ್ಮ ತಳ ನೆಲೆಯಲ್ಲಿ ಇದ್ದ ತಂತ್ರಜ್ಞಾನವನ್ನು ಅಂದರೆ ಜನಪದರ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಹೆಚ್ಚಿನ ಜನರಿಗೆ ಉದ್ಯೋಗ ಮತ್ತು ನೆಲೆ ಒದಗಿಸುವುದು ಎಂದಾಗಿದೆ. ಆಗ ಮೂಲಜಾತಿ ಹಾಗೇ ಉಳಿಯಬಹುದಲ್ಲವೆ? ನಮ್ಮ ದೇಶದಲ್ಲಿ ಈಗ ಹಾಲಿ ವ್ಯವಸ್ಥಿತ ಜಾತಿಗಳು ಬ್ರಾಹ್ಮಣ ಮತ್ತು ವೈಶ್ಯ ಎರಡೆ. ಉಳಿದವು ತಮ್ಮದಲ್ಲದ ಜಾತಿಯನ್ನು ತಮ್ಮ ಮೇಲೆ ಭೂತಾವೇಶದಂತೆ ಆವಾಹನೆ ಮಾಡಿಕೊಂಡಿವೆ.ಈಗಿನ ನಮ್ಮ ಅನುಕೂಲಗಳು ಮತ್ತು ತಂತ್ರಜ್ಞಾನ ಜಾತಿಯ ಮೂಲಕವೇ ಬಟವಾಡೆ ಆಗುತ್ತಿರುವುದರಿಂದ ಜಾತಿಯಾಗುವುದಕ್ಕೆ ಪೈಪೋಟಿ ನಡೆಯುತ್ತಿದೆ. ಅದನ್ನು ತಪ್ಪಿಸುವ ಕಾರಣಕ್ಕಾಗಿಯೆ ಜಾತಿ ನಿರ್ಮೂಲನೆಯ ಜೊತೆಗೆ ನಮ್ಮ ಜನಪದಗಳ ಮೂಲ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕಿದೆ.





**ಜಾನಪದ ಎಂದರೆ :** ಜನಪದವೊಂದು ಸಾಂಸ್ಕೃತಿಕವಾಗಿ ಉತ್ಪತ್ತಿ ಮಾಡುವ ಉತ್ಪನ್ನವೇ ಜಾನಪದ, ಜನಪದ ಒಂದು ಸಾಂಸ್ಕೃತಿಕ ಗುಂಪು ನಿಜ; ಆದರೆ ಅದು ಉತ್ಪತ್ತಿ ಮಾಡುವುದೆಲ್ಲ ಜಾನಪದವೇ ಆಗಬೇಕೆಂದಿಲ್ಲ. ಬೆಳೆಯುತ್ತಿರುವ ಜನಪದಗಳಲ್ಲಿ ಅಸಾಂಸ್ಕೃತಿಕ ಉತ್ಪಾದನೆಯೂ ಇರುತ್ತದೆ. ಅನೇಕ ಬೇರೆ ಬೇರೆ ಒತ್ತಡಗಳಿಗೆ ಒಳಗಾಗುವ ಜನಪದ ಜನಪ್ರಿಯವಾದುದನ್ನೂ, ಮಾರುಕಟ್ಟೆಯ ಸಾಹಿತ್ಯವನ್ನು ಸೃಷ್ಟಿ ಮಾಡುವುದುಂಟು. ತಾತ್ಕಾಲಿಕವಾಗಿ ಜನರು ಅದನ್ನು ಮೆಚ್ಚಲೂಬಹುದು. ಆದರೆ ಬಹಳ ಕಾಲ ಅಂಥ ಉತ್ಪಾದನೆ ಉಳಿಯುವುದಿಲ್ಲ.

ಜನಪದ ಸಾಹಿತ್ಯದ ಹೆಸರಲ್ಲಿ ಬಾರಿ ಗಲೀಜು ಸಾಹಿತ್ಯ ಕ್ಯಾಸೆಟ್ ಗಳ ರೂಪದಲ್ಲಿ ಬರುತ್ತಿದೆ. ಇಂಥ ಸಾಹಿತ್ಯವನ್ನು ಹಾಡಿ ಜನಪ್ರಿಯರಾಗಿರುವವರು ಉಂಟು. ಆದರೆ ಇದನ್ನು ಗೃಹಿಣಿಯರು ಮನೆ ಬಾಗಿಲಿನಿಂದ ಒಳಕ್ಕೆ ಬಿಡುವುದಿಲ್ಲ. ಈ ಸಾಹಿತ್ಯವನ್ನು ಹೆಚ್ಚಾಗಿ ಎಂಜಾಯ್ ಮಾಡುವವರು ಚಂಗಲು ಗಂಡಸರು.

ಜಾನಪದದ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ತಮ್ಮದೇ ಆದ ನಂಬಿಕೆ, ಆಚರಣೆ, ಸಾಹಿತ್ಯ ಮುಂತಾದುವನ್ನು ಸೃಷ್ಟಿ ಮಾಡಿ ಜನಪದದೊಳಕ್ಕೆ ಬಿಡುತ್ತಾರೆ. ಅವುಗಳನ್ನು ಜನಪದ ಸ್ವೀಕರಿಸಬಹುದು ಇಲ್ಲವೆ ತಿರಸ್ಕರಿಸಬಹುದು. ಒಬ್ಬ ವ್ಯಕ್ತಿಯೆ ಬರೆದ ಒಂದು ಹಾಡು ಜನಪದದೊಳಕ್ಕೆ ಬಂದು ಆ ಸಮುದಾಯದ ಐವತ್ತು ಶತಕ್ಕಿಂತ ಹೆಚ್ಚು ಜನ ಒಪ್ಪಿ ಉಳಿಸಿಕೊಂಡರೆ ಅದು ಜನಪದಗೀತೆ ಆಗುತ್ತದೆ. ಜನಪದ ನಂಬಿಕೆ ಮತ್ತು ಆಚರಣೆಗಳು ಸಮಾಜದ ಹಿರಿಯರಿಂದ ಸೃಷ್ಟಿಯಾಗಿ ಒಟ್ಟು ಜನರಿಗೆ ಒಪ್ಪಿಗೆಯಾಗುವುದುಂಟು. ನಮ್ಮ ಊರ ದೇವತೆ ನನ್ನ ಕನಸಿಗೆ ಬಂದು ಜಾತ್ರಿ ಆಗಬೇಕೆಂದು ಹೇಳಿದ್ದಾಳೆ ಎಂದು ಗಣ್ಯ ಹಿರಿಯ ಅಥವಾ ಊರ ಯಜಮಾನ ಹೇಳಿದರೆ ಅದು ನಡೆಯುತ್ತದೆ.

ಜಾನಪದ ಮತ್ತು ದೇಶಿ ಎಂಬ ಎರಡು ಪರಿಕಲ್ಪನೆಗಳ ಬಗ್ಗೆ ನಮ್ಮ ಕೆಲವು ಜಾನಪದ ತಜ್ಞರು ಮಾತನಾಡುತ್ತಿದ್ದಾರೆ. ನಮ್ಮ ನವೋದಯ ಸಾಹಿತಿಗಳಲ್ಲಿ ದೇಶ, ದೇಶೀಯತೆ ಮತ್ತು ದೇಸಿ ಎಂಬ ಪರಿಕಲ್ಪನೆಗಳು ಬಳಕೆಯಾಗಿವೆ. ಇವರಲ್ಲಿ ಭಾಷಾದೇಸಿ, ಸ್ವದೇಶಿ ಮತ್ತು ಸ್ವತಂತ್ರದೇಸಿಗಳೆಂಬ ಭಿನ್ನ ನೆಲೆಯ ಪರಿಕಲ್ಪನೆಗೆ ಸೇರಿದವರಿದ್ದಾರೆ. ಬಿ.ಎಂ.ಶ್ರೀ., ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದೇವುಡು ನರಸಿಂಹಶಾಸ್ತ್ರಿ ಈ ಮುಂತಾದವರು ಭಾಷಾ ದೇಸಿ ಬಗ್ಗೆ ಮಾತನಾಡುತ್ತ ಸಂಸ್ಕೃತಿ ದೇಸಿ ಕಡೆಗೆ ಚಲಿಸುತ್ತಾರೆ. ಗೊರೂರು





ರಾಮಸ್ವಾಮಿ ಅಯ್ಯಂಗಾರ್ ಅಂಥವರು ಮಾತನಾಡುವ ದೇಸಿ ಭಾಷಾ ಸಾಹಿತ್ಯಕ್ಕಿಂತ ಆಚೆಗಿನ ಗ್ರಾಮ ಸ್ವರಾಜ್ಯಕ್ಕೆ ಸಂಬಂಧಿಸಿದುದಾಗಿದೆ. ಈ ಎಲ್ಲ ದೇಸಿ ಅಭಿವೃದ್ಧಿ ಚಿಂತನೆ ಭಾರತದ ಸನಾತನ ಸಂಸ್ಕೃತಿಯಿಂದ ಆಚೆಗೆ ಬರುವುದಿಲ್ಲ. ಹಾಲಿ ಭಾರತದಲ್ಲಿರುವ ಧರ್ಮ, ಜಾತಿ, ಪಂಥಗಳಿಗೆ ಸಂಬಂಧಿಸಿದ ಸಂಸ್ಕೃತಿಯಲ್ಲಿ ಇರುವ ಮೂಲ ತತ್ವಗಳೆ ನಮ್ಮ ಅಭಿವೃದ್ಧಿಗೆ ಮೂಲ ನೆಲೆಗಳು ಎಂದು ಇವರು ನಂಬಿಕೊಂಡಂತೆ ಇದೆ. ಈಗ ದೇಸಿ ಮತ್ತು

ದೇಶೀಯತೆಯ ಬಗ್ಗೆ ಮಾತನಾಡುವ ಹಲವರು ದೇಶೀಯತೆಯ ಬೇರು ತಾವು ನೆಲೆ ನಿಂತಿರುವ ಧರ್ಮ, ಜಾತಿ ಅಥವ ಪಂಗಡದೊಳಗೆ ಇದೆ ಎಂದು ತಿಳಿದಂತಿದೆ. ಆದ್ದರಿಂದ ಇವರು ಜಾಗತೀಕರಣಕ್ಕೆ ಪ್ರತಿರೋಧವಾಗಿ ದೇಸಿಯನ್ನು ಗುರಾಣಿಯಂತೆ ಬಳಸಿಕೊಳ್ಳಲು ಬಯಸಿದಂತಿದೆ. ಆದರೆ ಇವರು ಬಳಸಲೇಬೇಕಾದ ಕತ್ತಿಗಳು ಜಾಗತಿಕ ಪ್ರಭುಗಳ ಕೈಯಲ್ಲೇ ಇವೆ.

ಈ ಧೋರಣೆಯಿಂದಾಗಿ ಕೆಳವರ್ಗದ ಜನಗಳು ದೇಸೀಯತೆಯ ಬಗ್ಗೆ ಭಯ ಮತ್ತು ಅನುಮಾನವನ್ನು ಉಳ್ಳವರಾಗಿದ್ದಾರೆ. ಮತ್ತೆ ಆ ಮೂಲಕ ಎಲ್ಲಿ ಸನಾತನತೆಯ ಪ್ರಾಥಮಿಕ ಪ್ರಭುಗಳಾದ ಪುರೋಹಿತ, ಶ್ಯಾನುಬೋಗ ಮತ್ತು ಪಟೇಲರುಗಳು ತಮ್ಮ ಜೀವನದ ಮೇಲೆ ಎಗರಿ ಬರುತ್ತಾರೋ ಎಂದು ಆತಂಕಗೊಂಡಿದ್ದಾರೆ. ಆದ ಕಾರಣ ಈ ಸನಾತನಿಗಳ ದೇಸಿಗಿಂತ ವಸ್ತುಗಳ ರೂಪದಲ್ಲಿ ಬರುತ್ತಿರುವ ಜಾಗತೀಕರಣವೆ ವಾಸಿ ಎನ್ನುತ್ತಿದ್ದಾರೆ. ಅಸ್ಪೃಶ್ಯತೆಯಲ್ಲಿ ನರಳಿದವರು ನಮಗೆ ಯಾವ ಕಾಲಕ್ಕೂ ಈ ದೇಶ ಧರ್ಮವನ್ನೂ, ದೇವರನ್ನೂ ಮತ್ತು ಪವಿತ್ರತೆಯನ್ನು ಕೊಡುವುದು ಸಾಧ್ಯವೇ ಇಲ್ಲ. ಆದ್ದರಿಂದ ಜಾಗತಿಕ ಪ್ರಭುವಿನ ಮೂಲಕ ಜಾತಿ, ಧರ್ಮ ಮತ್ತು ತಾರತಮ್ಯದ ಸ್ಪರ್ಶ ಇಲ್ಲದಿರುವ ವಸ್ತುಗಳೇ ಬರಲಿ ಎನ್ನುವವರೂ ಇದ್ದಾರೆ.

ನಾನೂ ಕೂಡ ೧೯೮೭ಕ್ಕೆ ಮೊದಲಿನಿಂದಲೂ ದೇಶೀಯತೆಯ ಬಗ್ಗೆ ಮಾತನಾಡುತ್ತಾ ಬಂದಿದ್ದೇನೆ. ಮಧುರೈನಲ್ಲಿ ನಡೆದ ಅಖಿಲ ಭಾರತ ಜಾನಪದ ವಿಚಾರ ಸಂಕಿರಣದಲ್ಲಿ 'ಹೆಣ್ಣು ಮತ್ತು ಬಾಂಬು' ಹಾಗೂ ಜನಪದ ಗಂಗೋತ್ರಿ ಪತ್ರಿಕೆಯಲ್ಲಿ ಬರೆದ, 'ಸಮಾಜವಾದಿ ದೃಷ್ಟಿಯಲ್ಲಿ ಜಾನಪದ' ಎಂಬ ಲೇಖನಗಳಲ್ಲಿ ನನ್ನ ದೇಶೀ ಪರಿಕಲ್ಪನೆಯ ದೃಷ್ಟಿಕೋನವನ್ನು ಹೇಳಿದ್ದೇನೆ. ಆಮೇಲಿನ ಜಾನಪದವನ್ನು ಕುರಿತ ನನ್ನ ಬಹುತೇಕ ಲೇಖನಗಳು ದೇಶೀಯತೆಯ ನೆಲೆಯ ಮೇಲೆಯೆ ನಿಂತಿವೆ. ನಾನು ದೇಶೀಯತೆ ಬಗ್ಗೆ ಮಾತನಾಡುವಾಗ ನಮ್ಮ ದೇಶದ ಎಲ್ಲ ಬಗೆಯ ಸನಾತನ ಪ್ರಭುತ್ವ ಮಾದರಿಗಳನ್ನು ತಿರಸ್ಕರಿಸಿದ್ದೇನೆ. ಪ್ರಭುತ್ವ ಅಸ್ತಿತ್ವದ ಹೊರಗಿನ ಎಲ್ಲ





ಸ್ವತಂತ್ರ, ಸುಸ್ಥಿರ ಮತ್ತು ಉತ್ಪತ್ತ್ಯಾತ್ಮಕ ಜ್ಞಾನ ಮಾದರಿಗಳನ್ನು ಸ್ವೀಕರಿಸಬೇಕು ಎನ್ನುತ್ತೇನೆ. ಪ್ರತಿಯೊಂದು ಜಾತಿ, ಧರ್ಮ ಮತ್ತು ಪಂಗಡದ ತಳದಲ್ಲಿ ಇರುವುದು ಜನಪದ ಸಂಸ್ಕೃತಿ ಮತ್ತು ಅದರ ಉತ್ಪನ್ನವಾದ ಜಾನಪದ, ಅಡಿಗೆ, ಉಡುಪು, ವೈದ್ಯ, ತಂತ್ರಜ್ಞಾನವೆಂಬ ಶುದ್ಧ ಜ್ಞಾನಗಳು ಧರ್ಮ ಮತ್ತು ಆಚರಣೆಗೆ ಬಳಕೆಯಾಗಬಹುದು. ಆದರೆ ಸ್ವತಃ ಅಡಿಗೆ, ಉಡುಪು, ವೈದ್ಯ, ತಂತ್ರಜ್ಞಾನವೆ ಜಾತಿಯೋ ಅಥವಾ ಒಂದು ಧರ್ಮವೋ ಆಗಿರುವುದಿಲ್ಲ. ಕೆಲವು ದೇಶೀ,

ಜ್ಞಾನ ಪದ್ಧತಿಗಳು ಜಾತಿಗೆ, ಜಾತಿಯ ಭಾಷೆಗೆ ಅಂಟಿಕೊಂಡಿವೆ. ಅವನ್ನು ಯಾವಾಗ ಬೇಕೆಂದರೆ ಆಗ ಜಾತಿಯಿಂದ ಬಿಡಿಸಿ ಹೊರಗೆ ತರಬಹುದಾದಷ್ಟು ಸ್ವತಂತ್ರವಾಗಿವೆ. ಉದಾಹರಣೆಗೆ ಆಯುರ್ವೇದ. ಈಗ ಅದು ಸಂಸ್ಕೃತ ಸಂಬಂಧಿ ಜ್ಞಾನದ ಜೊತೆಗೆ 'ಕೂಡಿಕೆ' ಮಾಡಿಸಿಕೊಂಡಿದೆ. ಆದ್ದರಿಂದಲೇ ಅದು ಸವೆಯುವ ಹಾದಿ ಹಿಡಿದಿದೆ. ಬಹುತೇಕ ಈ ಪದ್ಧತಿ ನಮ್ಮ ಜನಪದರು ಬಳಸುವ ವೈದ್ಯ ಪದ್ಧತಿಯೇ ಆಗಿದೆ. ಜನರ ಭಾಷೆಯ ಈ ಔಷಧ ವಿವರಣೆಯನ್ನು ಸಂಸ್ಕೃತದಲ್ಲಿ ದಾಖಲಿಸಿರುವುದೇ ಇದರ ವಿಶೇಷ. ಒಂದು ಜ್ಞಾನ ಪದ್ಧತಿ ಕೆಲವರ ಸಂಗ್ರಹ ಮಾತ್ರ ಆದರೆ ಅದು ಕ್ರಿಯಾಶೀಲ ಆಗುವುದಿಲ್ಲ ಎನ್ನುವುದಕ್ಕೆ ಆರ್ಯವೇದ ಜ್ಞಾನವೇ ಸಾಕ್ಷಿ.

ನಮ್ಮ ದೇಶೀ ಜ್ಞಾನ ಮೊದಲಿನಿಂದಲೂ ಕೈವಶವಾಗಿದ್ದುದು ತಳ, ಕೆಳ ಹಾಗೂ ವ್ಯವಸಾಯದಲ್ಲಿ ತೊಡಗಿದ್ದ ಜನರಲ್ಲಿ. ಆದರೆ ಕೆಲ ಸ್ಥಳೀಯರು ಅದರ ಒಡೆಯರಾಗಿದ್ದರು. ಬ್ರಿಟಿಷರು ಬಂದ ಮೇಲೆ ಈ ಸ್ಥಳೀಯ ಒಡೆಯರನ್ನು ಕಿತ್ತುಹಾಕಿ ಅಥವ ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು ತಳನೆಲೆಯಲ್ಲಿ ಇದ್ದ ನಮ್ಮ ಜ್ಞಾನ-ತಂತ್ರಜ್ಞಾನ ಪದ್ದತಿಗಳ ಕತ್ತು ಹಿಚುಕಿಬಿಟ್ಟರು. ಅವರ ತಂತ್ರಜ್ಞಾನದ ವಸ್ತುಗಳಿಗೆ ನಮ್ಮ ದೇಶವನ್ನು ಮಾರುಕಟ್ಟೆ ಮಾಡಿಕೊಳ್ಳಲು ಈ ಕೆಲಸ ಮಾಡಿದರು. ಬ್ರಿಟಿಷರು ಅವರು ಆಳುತ್ತಿದ್ದ ದೇಶಗಳಲ್ಲಿ ಈ ಕೆಲಸ ಮಾಡಿದರೆ ಈಗಿನ ಜಾಗತಿಕ ಪ್ರಭುಗಳು ಇದೇ ಕೆಲಸವನ್ನು ಜಗತ್ತಿನ ಪ್ರಗತಿ ಹೊಂದುತ್ತಿರುವ ಮತ್ತು ಬಡ ದೇಶಗಳಲ್ಲಿ ಜಾಗತೀಕರಣದ ಹೆಸರಿನಲ್ಲಿ ಮಾಡ ಹೊರಟಿದ್ದಾರೆ. ಪ್ರಜ್ಞಾವಂತ ಜನ ಜಾಗತೀಕರಣವನ್ನು ವಿರೋಧಿಸುತ್ತಿದ್ದಾರೆ.

ನನ್ನ ದೃಷ್ಟಿಯ ದೇಶಿ ಎಂದರೆ, ಜಾತ್ಯಾತೀತವಾದ ನಮ್ಮ ಸಾಮಾಜಿಕ ಮತ್ತು ನೈಸರ್ಗಿಕ ಪಾರಂಪರಿಕ ಜ್ಞಾನ ಪದ್ಧತಿಗಳನ್ನು ಸಮಕಾಲೀನ ಜಾಗತಿಕ ಅಭಿವೃದ್ಧಿ ಮಾದರಿಗಳನ್ನಾಗಿ ರೂಪಿಸುವುದು. ಆ ಮೂಲಕ ನಮ್ಮ ಅಭಿವೃದ್ಧಿಯಲ್ಲಿ ಬಹು ಜನರು





ದುಡಿಯುವ ಮತ್ತು ಉದ್ಯೋಗಿಗಳಾಗುವ ಅವಕಾಶಗಳನ್ನು ಕಲ್ಪಿಸುವುದು. ಈ ಕಾರಣಕ್ಕೆ ಜಾಗತಿಕ ಪ್ರಭುಗಳು ರೂಪಿಸಿರುವ ತಂತ್ರಜ್ಞಾನವನ್ನು ತಿರಸ್ಕರಿಸಬೇಕಿಲ್ಲ. ಆ ಜ್ಞಾನಕ್ಕೆ ನಮ್ಮ ದೇಶಿ ಜ್ಞಾನವನ್ನು ಪರ್ಯಾಯವಾಗಿ ಬೆಳೆಸಬೇಕು. ಇಲ್ಲವೆ ಸಮಸಂಸ್ಕೃತಿಯನ್ನಾಗಿ ರೂಪಿಸಬೇಕು. ನಮ್ಮ ಅಭಿವೃದ್ಧಿಗೆ ಹೊರಗಡೆಯ ಜ್ಞಾನದ ಬೆಳಕು

ಬೀಳುತ್ತಿರಬೇಕು. ಆದರೆ ಆ ಬೆಳಕು ಜ್ವಾಲೆಯಾಗಿ ನಮ್ಮ ದೃಷ್ಟಿಯನ್ನು ಮಸಕುಗೊಳಿಸಬಾರದು. ಈಗಿನ ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ ನಮ್ಮ ಕಣ್ಣು ಮಸುಕಾಗಿವೆ, ನಮ್ಮ ಬುದ್ಧಿ ಮರವೆಯಿಂದ ನಲುಗಿದೆ.

ಯಾಕೆ ಹೀಗಾಯಿತು? ಬ್ರಿಟಿಷರ ಆಗಮನದಿಂದ ತಮ್ಮ ಮೊದಲಿನ ಮಾನ್ಯತೆ ಕಳೆದುಕೊಂಡಿದ್ದವರಿಗೆ ಬ್ರಿಟಿಷರನ್ನು ಬಿಡಿಸುವುದರಿಂದ ಹೊಸ ಸ್ಥಾನಮಾನ ಪಡೆಯುವ ಹುನ್ನಾರವಿತ್ತು. ಇತರ ಬಹುಸಂಖ್ಯಾತರು ನಮ್ಮ ಜಾತಿ ವ್ಯವಸ್ಥೆಯಿಂದ ಸತ್ತು ಬದುಕಿದ್ದರು. ಬ್ರಿಟಿಷರ ಆಗಮನ ತಕ್ಕಮಟ್ಟಿಗಾದರೂ ದೇಶೀಯ ಶೋಷಕರಿಂದ ಇವರಿಗೆ ಬಿಡುಗಡೆ ಕೊಟ್ಟಿತು. ಬ್ರಿಟಿಷರ ಹೊಸ ತಂತ್ರಜ್ಞಾನ -ಸ್ಥಾನಮಾನ ಜಾತ್ಯಾತೀತವಾಗಿ ಎಲ್ಲರಿಗೂ ಹಂಚಿಕೆಯಾಗತೊಡಗಿದ್ದು ಇಲ್ಲಿಯ ಸಾಮಾನ್ಯ ಜನರಿಗೆ ಸ್ವರ್ಗವೇ ಎಟುಕಿದಂತಾಯಿತು. ಅಂದರೆ ನಮ್ಮವರೆ ಆದ ಬೇರೆ ಬೇರೆ ಜನರ ಬೇರೆ ಬೇರೆ ಇಂಥ ಅಪೇಕ್ಷೆಗಳಿಂದಾಗಿ ಬ್ರಿಟಿಷರು ಈ ದೇಶದಲ್ಲಿ ಶತಮಾನಗಳ ಕಾಲ ಉಳಿದಿದ್ದರು.

ಅದು ಬಿಡಿ, ಸ್ವಾತಂತ್ರ ಬಂದ ಮೇಲೆ ಹಲವರು ಹಲವು ಬಗೆಯ ಹಕ್ಕುಗಳನ್ನು ಅನುಕೂಲಗಳನ್ನೂ ಪಡೆದರು. ಈಗ ಜಾಗತೀಕರಣ ಬಂದು ಸರ್ಕಾರಿ ಉದ್ಯೋಗಗಳನ್ನು ಕಳಚಿ ಹಾಕುತ್ತಿದೆ. ಸ್ವತಂತ್ರ ಪೈಪೋಟಿ ಬದುಕಿಗೆ ಆಹ್ವಾನ ನೀಡಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ. ನಿಮ್ಮ ರಕ್ಷಣೆ ಎಂದರೆ ನಿಮ್ಮ ಸಾಮರ್ಥ್ಯದ ಪ್ರಯೋಗ ಮತ್ತು ಅದರಿಂದ ಬರಬಹುದಾದ ಪ್ರತಿಫಲ ಎನ್ನಲಾಗುತ್ತಿದೆ. ಮೇಲುನೋಟಕ್ಕೆ ಇದು ಸರಿಯಾದ ತತ್ವ ಎನಿಸುತ್ತದೆ. ಇದು ಯಾವಾಗ ಸರಿ ಎಂದರೆ ಎಲ್ಲರೂ ಸಾಮಾಜಿಕ ಮತ್ತು ಆರ್ಥಿಕವಾಗಿ ಸಮಾಧಾನಕರವಾದ ಒಂದು ಸ್ಥಿತಿಯಲ್ಲಿ ಇದ್ದಾಗ, ತನ್ನ ದುಡಿಮೆಯನ್ನು ತೊಡಗಿಸಿಕೊಳ್ಳುವ ಮೂಲ ಸೌಕರ್ಯಗಳ ಇಲ್ಲದಿದ್ದಾಗ ಅವನು ಏನು ಮಾಡಬೇಕು. ಇದರಿಂದಾಗಿ ಜಾಗತೀಕರಣವೆಂಬುದು ಬಹುಜನರನ್ನು ಬೀದಿಯಲ್ಲಿ ನಿಲ್ಲಿಸಿ ಕೆಲವರನ್ನು ಮಹಡಿಯೊಳಗೆ ತೂಗುತ್ತದೆ.





ಆದ್ದರಿಂದಲೆ ನಾವೀಗ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮತ್ತು ಕುವೆಂಪು ಅವರನ್ನು ನಮ್ಮ ಹತ್ತಿರಕ್ಕೆ ತಂದುಕೊಳ್ಳಬೇಕಿದೆ. ನಮ್ಮ ದೇಸಿ ಚಿಂತನೆಯ ವಿವಿಧ ಆಯಾಮಗಳು ಈ ಚಿಂತಕರ ಅಭಿವ್ಯಕ್ತಿಯಲ್ಲಿ ಇವೆ. ಅವರವರು ಇರುವಲ್ಲಿಯೇ ಉದ್ಯೋಗ ಗೌರವ ಸೃಷ್ಟಿಸಿದ ಬಸವಣ್ಣ ಭಾರತದ ಪುನರ್‌ಸೃಷ್ಟಿ ಸಾಧ್ಯತೆ ಇಲ್ಲಿನ ಎಲ್ಲ

ತಳ-ಕೆಳ ವರ್ಗಗಳ ಭಾಗವಹಿಸುವಿಕೆ ಮಾತ್ರದಿಂದ ಸಾಧ್ಯ ಎಂದ ಲೋಹಿಯಾ, ಏನು ಇಲ್ಲದವರ ಕೈಗೆ ದುಡಿಯುವ ಸಲಕರಣೆ ಕೊಟ್ಟ ಅಂಬೇಡ್ಕರ್ ಮತ್ತು ಪ್ರತಿಯೊಂದು ಜನಸಮೂಹದೊಳಗಿಂದ ಸಾಂಸ್ಕೃತಿಕ ವ್ಯಕ್ತಿತ್ವದ ನಿರ್ಮಾಣದಿಂದ ಆ ಜನವರ್ಗದ ಆರ್ಥಿಕ - ಸಾಂಸ್ಕೃತಿಕ ಸಮಾನ ಅಭಿವೃದ್ಧಿ ಸಾಧ್ಯ ಎಂದ ಕುವೆಂಪು ನಮ್ಮೊಳಗೆ ಬರಬೇಕು.

ಇಷ್ಟೆಲ್ಲ ಕೇಳಿದಾಗ ನೀವು ಓದಿದ್ದ, ಕೇಳಿದ್ದ ಮತ್ತು ಭಾಗವಹಿಸಿದ್ದ ಜಾನಪದ ಪರಿಕಲ್ಪನೆ ಎಲ್ಲೋ ಹಾರಿ ಹೋಯಿತಲ್ಲ ಎನಿಸಿಬಿಡಬಹುದು. ಕೂತುಂಡು ಯೋಚಿಸುವವರ ಸ್ಥಿತಿಯೇ ಹೀಗೆ. ದುಡಿಮೆ ಮತ್ತು ಅಭಿವೃದ್ಧಿಯ ಜೊತೆಗೆ ಯೋಚಿಸುವವನಿಗೆ ಆಧುನಿಕವೆಂಬ ಯೂರೋಪಿನ ಜ್ಞಾನ ಕೆಲವರ ಅಭಿವೃದ್ಧಿ ಮಾಡುತ್ತದೆ, ಜಾನಪದ ಜ್ಞಾನ ಹಲವರ ಅಭಿವೃದ್ಧಿಯಾಗಿದೆ ಎಂಬುದು ಗೊತ್ತಾಗುತ್ತದೆ. ಇದು ಜಾನಪದ.

'ಜಾನಪದ ಗ್ರಹಿಕೆ; ಪರಿಕಲ್ಪನೆ' ಎಂಬ ಈ ಪುಸ್ತಕಕ್ಕೆ ಇಷ್ಟೊಂದು ಮಾತು ಬರೆದಿರುವುದು ಅಗತ್ಯವೆಂದೆ ತಿಳಿದುಕೊಂಡಿದ್ದೇನೆ. ಜನಪದ- ಜಾನಪದ ಅಧ್ಯಯನದ ಆರಂಭದ ಕಾಲದಲ್ಲಿ ಮಾಡಿದ ತಪ್ಪನ್ನು ಮರೆವೆಯನ್ನು ನಾವು ತಿದ್ದಿಕೊಳ್ಳಲೇಬೇಕಾಗಿದೆ. ನಮ್ಮನ್ನು ನಾವೇ ನಿರಾಕರಿಸಿಕೊಳ್ಳುವ ತತ್ವದಿಂದ ಹೊರಗೆ ನಿಂತು ಯೋಚಿಸುವುದಿದೆ. ಅದಕ್ಕೆಂದೆ ಇಷ್ಟೆಲ್ಲ ಪುರಾಣ ಹೇಳಿದ್ದೇನೆ. ಬೇಡವೆಂದರೂ ಬೇಕಾದುದಲ್ಲವೆ ಪುರಾಣ!

ಮತ್ತೊಂದು ಮುಖ್ಯ ಉದ್ದೇಶ ಉಂಟು. ನಮ್ಮ ಅನೇಕ ಹೊಸ ತಲೆಮಾರಿನ ಜನ ಜಾನಪದವನ್ನು ಓದುತ್ತಿದ್ದಾರೆ. ಅವರಿಗೆ ತಮ್ಮ ಕಡೆಯ ವಿದ್ವಾಂಸರು ಹೇಳಿದ ಜಾನಪದ ಕುರಿತ ನಿರ್ವಚನಗಳು ಸಿಗುತ್ತಿವೆ. ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಜಾನಪದ ಕುರಿತು ಅಧ್ಯಯನ ಮಾಡಿದ, ಆ ಕುರಿತು ಬರೆದ ಗಣ್ಯರಿದ್ದಾರೆ. ಇವರೆಲ್ಲ ಏನು ಹೇಳಿದ್ದಾರೆ ಎಂಬುದು ಕರ್ನಾಟಕದ ಯಾವ ಭಾಗದಲ್ಲಿ ಕೂತು ಓದಿದವರಿಗೂ ಗೊತ್ತಾಗಬೇಕಿದೆ. ಒಟ್ಟು ಜಾನಪದ ಕರ್ನಾಟಕ ನಮ್ಮ ಮುಂದೆ ನಿಲ್ಲುವಂತೆ





ಯೋಜಿಸಲಾಗಿದೆ. ಕರ್ನಾಟಕದ ಜಾನಪದವನ್ನು ಆರಂಭ ಮಾಡಿದ ಹಿರಿಯರ ನಿರ್ವಚನಗಳನ್ನು. ಈ ಕ್ಷೇತ್ರದಲ್ಲಿ ನಿರಂತರ ಕೆಲಸ ಮಾಡುತ್ತಿರುವ ಜಾನಪದ ತಜ್ಞರ ಜಾನಪದ ಕುರಿತ ಚಿಂತನೆಯನ್ನು ದಾಖಲಿಸಲಾಗಿದೆ. ಜನಪದ ಗ್ರಹಿಕೆ; ಪರಿಕಲ್ಪನೆ ಎಂಬ ಬೇರೊಂದು ಪುಸ್ತಕದಲ್ಲಿ ಜನಪದ ಕಲಾವಿದರು ತಮ್ಮದೇ ಜೀವನ ಸಾಮಗ್ರಿಯ ಬಗ್ಗೆ ಏನು

ಹೇಳುತ್ತಾರೆ ಎಂಬುದನ್ನು ಅವರಿಗೆ ಮೂರು ಪ್ರಶ್ನೆಗಳನ್ನು ಕಳಿಸಿ ಉತ್ತರವನ್ನು ತರಿಸಿಕೊಂಡು ಈ ಕೃತಿಯಲ್ಲಿ ಜೋಡಿಸಲಾಗಿದೆ.

ಇದೊಂದು ಚಾರಿತ್ರಿಕ ಮಹತ್ವದ ದಾಖಲೆ ಎಂದುಕೊಂಡಿದ್ದೇನೆ. ನಾವೆಲ್ಲ ಜಾನಪದದ ಬಗ್ಗೆ ಏನು ಮಾತನಾಡುತ್ತಿದ್ದೇವೆ ಎಂಬುದು ನಮ್ಮೆದುರು ನಿಂತರೆ ನಮ್ಮ ಮುಂದಿನ ದಾರಿಯ ಬೆಳಕು ಕಾಣಬಹುದು ಅಂದುಕೊಂಡಿದ್ದೇನೆ.



**ತಾವಿನಿಂದ**

ಒಂದು ದೇಶಕ್ಕೆ ತನ್ನದೆ ಆದ ಒಂದು ಸಂದರ್ಭ ಇದೆ. ಇದನ್ನು ರಾಷ್ಟ್ರೀಯತೆ ಎನ್ನುತ್ತೇವೆ. ಇದು ಸಾಂಸ್ಕೃತಿಕ ಸ್ವರೂಪದಲ್ಲಿ ಕಾಣಬಹುದು ಅಥವ ರಾಜಕೀಯ ಸ್ವರೂಪದಲ್ಲಿ ಕಾಣಬಹುದು. ಈ ರಾಷ್ಟ್ರೀಯತೆಗೆ ಹೊರಗಿನ ಸಂದರ್ಭವನ್ನು ಅನ್ಯ ದೇಶೀಯತೆ ಅಥವ ವಿದೇಶೀಯತೆ ಎನ್ನಬಹುದು. ಈ ನಿಟ್ಟಿನಲ್ಲಿ ಒಂದೊಂದು ದೇಶವೂ

ಒಂದೊಂದು ಅನನ್ಯತೆ (identity). ಈ ತನ್ನತನವೆಂಬ ಅನನ್ಯತೆಯನ್ನು ಉಳಿಸಿಕೊಂಡಲ್ಲದೆ ಅದು ತನ್ನನ್ನು ತನ್ನತಾವಿನಿಂದ ಪ್ರತಿಪಾದಿಸಿಕೊಳ್ಳಲಾರದು. ಈ ಪ್ರತಿಪಾದನೆಗೆ ಬೇಕಾದ ದತ್ತ ವಿಷಯವೆಂದರೆ ಸಂಸ್ಕೃತಿ, ಅಮೆರಿಕದ ಸಂಸ್ಕೃತಿ ಯಾವುದು ಎಂದು ಕೇಳಿದರೆ ಅದು ಡಾಲರ್ ಸಂಸ್ಕೃತಿ. ಜಪಾನ್ ಸಂಸ್ಕೃತಿ ಎಂದರೆ ಎಲೆಕ್ಟ್ರಾನಿಕ್ ಸಂಸ್ಕೃತಿ. ಚೀನಾದ್ದು ದುಡಿಮೆ ಸಂಸ್ಕೃತಿ, ಥಾಯ್ ಲ್ಯಾಂಡ್‌ದು ಪ್ರವಾಸೋದ್ಯಮ ಸಂಸ್ಕೃತಿ. ಇಸ್ರೇಲ್‌ನದು ಯುದ್ಧ ಸಂಸ್ಕೃತಿ, ಭಾರತದ್ದು ಶಾಂತಿ ಸಂಸ್ಕೃತಿ.

ಈ ಸಾಂಸ್ಕೃತಿಕ ಅನನ್ಯತೆಯನ್ನು ಭದ್ರವಾಗಿ ಉಳಿಸುವಂಥದು ಜಾನಪದ. ಅಂದರೆ, ಸಾಮಾನ್ಯ ಜನರ ದುಡಿಮೆ ಮತ್ತು ಜ್ಞಾನ. ಈ ಜನಪದ ಸಂಸ್ಕೃತಿಯ ತಳದಿಂದ ನಮ್ಮ ದೇಶವನ್ನು ಗುರುತಿಸಬೇಕು ಮತ್ತು ಅಭಿವೃದ್ಧಿಪಡಿಸಬೇಕು. ನಮ್ಮ ಎಲ್ಲ ಚಿಂತನೆ ಮತ್ತು ಯೋಜನೆಗಳು ನಮ್ಮ ದೇಶವನ್ನು ಅದರ ತಾವಿನಿಂದ ಉಳಿಸಿ ಬೆಳೆಸುತ್ತ ವಿಶ್ವ ಸಂಬಂಧವನ್ನು ತಂದುಕೊಳ್ಳಬೇಕಿದೆ. ನಾವೇ ವಿಶ್ವವಾಗುತ್ತೇವೆ ಎಂದು ಹೊರಟರೆ ಅಮೆರಿಕಾದ ಥರ ರಾಕ್ಷಸರಾಗುತ್ತೇವೆ ಇಲ್ಲವೆ ನಮ್ಮ ಬೇರುಗಳು ಕಳಚಿ ಮರ ನೆಲಕ್ಕೆ ಉರುಳುತ್ತದೆ.





ನಮ್ಮ ಜಾನಪದ ಅಧ್ಯಯನ ಕೂಡ ಭಾರತೀಯ ಬಹುಸಂಸ್ಕೃತಿಯ ಹೊಂದಾಣಿಕೆ ಮತ್ತು ಅಭಿವೃದ್ಧಿ ಚಿಂತನೆಯ ಜೊತೆಗೆ ನಡೆಯಬೇಕು. ಆ ನಿಟ್ಟಿನಲ್ಲಿ ನಮ್ಮ ಅಧ್ಯಯನ ಮಾದರಿಗಳು ರೂಪು ತಳೆಯಬೇಕು. ಹೀಗೆ ಹೇಳಿದಾಗ ನಮ್ಮ ವಿದ್ವಾಂಸರು ಸಿದ್ಧಾಂತಗಳು ಮತ್ತು ಅಧ್ಯಯನ ಪದ್ಧತಿಗಳು ಜಗತ್ತಿಗೆಲ್ಲಾ ಒಂದೇ ಆಗಿರುತ್ತವೆ,

ಬೇರೆ ಬೇರೆ ದೇಶಕ್ಕೆ ಬೇರೆ ಬೇರೆ ಇರುವುದಿಲ್ಲ ಎನ್ನುತ್ತಾರೆ. ಇದು ಆಧುನಿಕ ಏಕಾಕಾರ ಅಧ್ಯಯನ ಮತ್ತು ಅಭಿವೃದ್ಧಿ ಸಿದ್ಧಾಂತ ಸೃಷ್ಟಿಸಿರುವ ಭ್ರಮೆ. ನೈಸರ್ಗಿಕ ವಿಜ್ಞಾನಗಳು ಅಧ್ಯಯನಕ್ಕೆ ತೆಗೆದುಕೊಳ್ಳುವ ಹೆಚ್ಚಿನ ಭೌತಿಕ ವಸ್ತುಗಳು ಯೂನಿವರ್ಸಲ್ ಆಗಿರುತ್ತವೆ. ಸಮಾಜ ವಿಜ್ಞಾನದ ಮೂಲ ಸಂಪತ್ತಾದ ಸಂಸ್ಕೃತಿ ಪ್ರವೃತ್ತಿ ಸ್ವರೂಪದಲ್ಲಿರುತ್ತದೆ. ಅದು ಏಕ ಸ್ವರೂಪಿ ಅಲ್ಲ ; ಕಿರುಹಿರಿ ಅಲೆಗಳ ರೀತಿ ಬಹು ಸ್ವರೂಪಿ. ಮಾನವನ ಮೂಲ ಚಿಂತನೆ ಮತ್ತು ಅಪೇಕ್ಷೆಯಲ್ಲಿ ಕೆಲವು ಏಕಾಕಾರಗಳು ಇವೆ, ನಿಜ. ಆದರೆ ಅವು ಮೂಲ ಅಪೇಕ್ಷೆಗೆ ಸಂಬಂಧಿಸಿದುವೆ ಹೊರತು ಅಭಿವೃದ್ಧಿ ಹೊಂದಿದ ಸಂಸ್ಕೃತಿಯ ಅಪೇಕ್ಷೆಗಳಲ್ಲ. ಸಂಸ್ಕೃತಿಯೊಂದು ಹುಟ್ಟಿ ಬೆಳೆಯುವುದು ಒಂದು ಪ್ರದೇಶದ ಭೂ ಉತ್ಪನ್ನ, ದುಡಿಮೆಯ ಸ್ವಭಾವ ಮತ್ತು ಅದನ್ನು ವಿತರಣೆ ಮಾಡಲು ಹುಟ್ಟಿಕೊಳ್ಳುವ ವ್ಯವಸ್ಥೆಯನ್ನು ಆಧರಿಸಿದೆ. ಆದ್ದರಿಂದ ಸಂಸ್ಕೃತಿಬದ್ಧವಾಗಿ ಒಂದು ದೇಶ ಮತ್ತೊಂದು ದೇಶಕ್ಕಿಂತ ಭಿನ್ನವಾಗಿರುತ್ತದೆ. ಈ ಭಿನ್ನತೆ ಸಹಜ ಮತ್ತು ಅನಿವಾರ್ಯ.

ಅಮೆರಿಕ ಕೇಂದ್ರಿತ ಚಿಂತನೆಯ ದೇಶಗಳ ಜನಪದ ಮತ್ತು ಜಾನಪದ ಚಿಂತನೆಯ ಸ್ವರೂಪವನ್ನು ಗಮನಿಸಿ. ಜಾನಪದ ಇವರಿಗೆ ಯಾವಾಗಲೂ ಒಮ್ಮೆ ಸಿದ್ಧವಾದ ವಸ್ತು (Finished Product). ಆದ್ದರಿಂದ ಇವರು ಜಾನಪದವನ್ನು ಉಳಿಕೆ, ಪಳಯುಳಿಕೆ ಮತ್ತು ಜೀವಂತ ಪಳಯುಳಿಕೆ ಎಂದು ಕರೆದರು. ಭಾರತಕ್ಕೆ ಜಾನಪದ ಜೀವಂತ ನಡವಳಿಕೆ (Performance) ಮತ್ತು ನಿರಂತರ ಪ್ರಕ್ರಿಯೆ (Process) ಹೀಗೆ ಗ್ರಹಿಸಿಕೊಂಡೆ ನಾವು ನಮ್ಮ ಜನಪದ ಮತ್ತು ಜಾನಪದವನ್ನು (Folk and Folklore) ನಿರ್ವಚಿಸಿಕೊಳ್ಳಬೇಕು. ಆಗ ನಮ್ಮ ಅಧ್ಯಯನ ಜೀವಂತವಾಗಿರುತ್ತದೆ. ಈಗ ನಮ್ಮಲ್ಲಿ ಜಾನಪದ ಅಧ್ಯಯನ ಹಿಂದೆ ಬಿದ್ದಿರುವುದು ಈಗಾಗಲೇ ಅದು ಸಿದ್ಧಗೊಂಡ ವಸ್ತು ಎಂದು ತಿಳಿದಿರುವುದು.



ಪುರದ ಪುಣ್ಯ

**ಜಾನಪದ : ನಮ್ಮ ಜೀವನಜಲ**

**೧. ೧ ಜೀವನವಾಗಿ**

ಜಾನಪದ ಎಂಬುದು ನಮ್ಮ ಜೀವನಜಲ. ಜೀವನ ಕೂಡಲು, ಬದುಕಾಗಲು ಮತ್ತು ನಿರಂತರವಾಗಲು ಜೀವನ ಬಲವನ್ನು ಉಂಟು ಮಾಡುವುದೆ ಈ ಜೀವನಜಲ, ಈ ನೆಲಕ್ಕೆ ಜಲ ಇಲ್ಲದಿದ್ದರೆ ಜೀವಿಗಳು ಬದುಕಲು ಹೇಗೆ ಸಾಧ್ಯವಿಲ್ಲವೊ ಹಾಗೆ ಜೀವನಜಲ ಇಲ್ಲದಿದ್ದರೆ ಜನಪದ ... (ಸಮಾಜ) ಆಸ್ತಿತ್ವಕ್ಕೆ ಬರುವುದಿಲ್ಲ, ಜೀವಿ ಜಲ ಪ್ರಕೃತಿಯನ್ನು ಸೃಷ್ಟಿ ಮಾಡುತ್ತದೆ. ಜೀವನಜಲ ಸಂಸ್ಕೃತಿಯನ್ನು ಹುಟ್ಟುಹಾಕುತ್ತದೆ. ಜೀವಿಗಳು ಒಟ್ಟಾಗಿ ಬದುಕುವ - ಬಯಕೆಯನ್ನು ಹೊಂದಿವೆ. ಇದು ಅನ್ನ, ಬಟ್ಟೆ ಮತ್ತು ವಸತಿಗಾಗಿ ಮಾತ್ರವಲ್ಲ ; ಪೀಳಿಗೆ ಮತ್ತು ಪರಂಪರೆಯನ್ನು ಮುಂದುವರಿಸುವುದಕ್ಕಾಗಿ, ಬದುಕಬೇಕೆಂಬ ಇಂಥ ಸಾಮಾಜಿಕ ಒತ್ತಾಸೆಯನ್ನು ಯಾರೊತ್ತೂ ಕಾಯ್ದಿಡುವ ಜೀವನ ದ್ರವ್ಯವನ್ನು ಜೀವನಜಲ ಎನ್ನಬಹುದು.

ಜೀವಿಸುವುದಕ್ಕಾಗಿ ಜನಪದ ಕೊಡುತ್ತದೆ. ನಿರಂತರವಾಗಿ ಸಾಗಲು ಜೀವನ ತತ್ವವೊಂದನ್ನು ಅಳವಡಿಸಿಕೊಳ್ಳುತ್ತದೆ. ಆ ಒಪ್ಪಿತ ತತ್ವದಂತೆ ಬದುಕುತ್ತದೆ. ಇಂಥ ತಾತ್ವಿಕ ಬದುಕಿನ ಎಲ್ಲ ಬಗೆಯ ಉತ್ಪನ್ನವನ್ನು ನಾವು ಸಂಸ್ಕೃತಿ ಎಂದು ಕರೆದುಕೊಂಡಿದ್ದೇವೆ. ಈ ಸಂಸ್ಕೃತಿಯಲ್ಲಿ ನೆಲ ಸಂಸ್ಕೃತಿ ಮತ್ತು ಇಲ್ಲಿ ಆಕಾಶ ಸಂಸ್ಕೃತಿಗಳೆಂಬ ಎರಡು ಬಗೆಗಳಿವೆ. ನೆಲ ಸಂಸ್ಕೃತಿ ಹೆಚ್ಚು ವಾಸ್ತವತೆಗೆ ಆ ಬದ್ಧವಾಗಿದ್ದರೆ ಆಕಾಶ ಸಂಸ್ಕೃತಿ ಕಲ್ಪನೆಗೆ ಹೆಚ್ಚು ಒತ್ತು ಕೊಡುತ್ತದೆ. ಈ ಕಲ್ಪನೆ ಇತಿ ಆಧಾರಿತ ಸಂಸ್ಕೃತಿಯಿಂದ ಶ್ರೇಷ್ಟ - ಕನಿಷ್ಠ, ಮೇಲು - ಕೀಳು, ಸ್ವರ್ಗ - ನರಕ, ಪುಣ್ಯ - ಪಾಪ, ಮೋಕ್ಷ - ನಿತ್ಯ ನಾರಕಿ ಎಂಬ ತಾರತಮ್ಯ ಪರಿಕಲ್ಪನೆಗಳು ಹುಟ್ಟಿ ಮನುಷ್ಯನನ್ನು ಇಬ್ಬಾಗಿಸುತ್ತವೆ. ಇದಕ್ಕಾಗಿ ಬಹಳ ರಮ್ಯವಾದ ಪುರಾಣ-ಪುಣ್ಯಕಥೆಗಳನ್ನು ಸೃಷ್ಟಿ ಮಾಡುತ್ತವೆ. ತಮ್ಮ ಪೂರ್ವಿಕರು, ನೆಲದಿಂದ, ಹೆಣ್ಣಿನಿಂದ ಹುಟ್ಟಿದವರೇ ಅಲ್ಲ ಎಂದು ಪ್ರತಿಪಾದಿಸುತ್ತವೆ. ತಮ್ಮ ದೇಹಾಂತ್ಯ ಕೂಡ ನೀರು ಅಥವ ಆಗ್ನಿಯ ಮೂಲಕ ಬೂದಿ ಅಥವ ಗಾಳಿ ರೂಪದಲ್ಲಿ ಅನ್ಯ ಜಗತ್ತೆಂಬ ನಮ್ಮ ನಾಡಿಗೆ ಹೋಗಬೇಕೆನ್ನುತ್ತಾರೆ.

ನೆಲ ಸಂಸ್ಕೃತಿ ತನ್ನ ಹುಟ್ಟು, ಬದುಕು ಮತ್ತು ಸಾವನ್ನು ನೆಲದಲ್ಲೇ ಅಂತ್ಯಗೊಳಿಸುತ್ತದೆ. ಸತ್ತವರನ್ನು ಹೂತು ಸಮಾಧಿಯ ಮೇಲೆ ಫಸಲು





ಕೊಡುವ ಗಿಡವನ್ನು ನೆಡುತ್ತಾರೆ. ಸತ್ತವನ ಸತ್ವ ಮತ್ತೆ ಫಸಲಿನ ಮೂಲಕ ಸಮಾಜಕ್ಕೆ ಹಿಂತಿರುಗುತ್ತದೆ. ಇಲ್ಲಿ ವಸ್ತು, ವ್ಯಕ್ತಿ ಮತ್ತು ಸಂದರ್ಭಗಳು ಆವರ್ತನ (Cyclical) ಗೊಳ್ಳುತ್ತವೆ. ಜೀವನ ನಿರಂತರ ಹೊಸದಾಗುತ್ತಾ - ಹೋಗುತ್ತದೆ.

ಸಿದ್ಧ ಸಮಾಜದ ಸ್ವರ್ಗ, ಶ್ರೇಷ್ಠ, ಮೋಕ್ಷ ಮತ್ತು ಆಧುನಿಕ ವಿಜ್ಞಾನ ಸಮಾಜದ ಪ್ಲಾಸ್ಟಿಕ್ ಥರ ಪುನರ್ ಸೃಷ್ಟಿಗೆ (Recycle) ಬರದ ವಸ್ತುಗಳು, ನಂಬಿಕೆಗಳು, ಆಚರಣೆಗಳು ಮತ್ತು ಪುರಾಣಗಳು ನೆಲ -- ಸಂಸ್ಕೃತಿಯಲ್ಲಿ ಇಲ್ಲ. ಈ ಎಲ್ಲವೂ ಇಲ್ಲಿ ಪುನರ್ ಸೃಷ್ಟಿಯಾಗುತ್ತವೆ.

ಈ ನೆಲ ಸಂಸ್ಕೃತಿಯ ಜನಪದ ಸಂಸ್ಕೃತಿ. ಇದು ಜನಸಾಮಾನ್ಯರ ಅಥವ ಸಾಮಾನ್ಯ ಜೀವನದ ಉತ್ಪತ್ತಿ, ಈ ಉತ್ಪನ್ನವನ್ನೇ ನಾವು ಜಾನಪದ ಎನ್ನುತ್ತೇವೆ. ಈ ಅರ್ಥದಲ್ಲಿ ಜನಪದ ಜೀವನವೆ ಜಾನಪದ. ಜಾನಪದದ ಜೀವಸತ್ವಗಳೆಂದರೆ ಅಥವ ಮುಖ್ಯ ಗುಣಗಳೆಂದರೆ ಸಾಮಾನ್ಯತೆ, ಸರಳತೆ, ಸೋಪಜ್ಞತೆ, ಸಜೀವತೆ ಮತ್ತು ಸಾಮೂಹಿಕತೆ. ಇಂಥ ಸಾರ್ವತ್ರಿಕ ಸಾಮಾಜಿಕ ತತ್ವಗಳ ಮೇಲೆ ರೂಪುಗೊಂಡ ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಜೀವನ ವಿಧಾನವೆ ಜನಪದ ಜೀವನ. ಜಗತ್ತಿನ ಸಾಮಾನ್ಯ ಜನರ ಒಟ್ಟು ೨೬ ಬದುಕು ಜಾನಪದವಾಗಿದೆ. ಮೇಲೇರಿದವರ ಜೀವನದ ತಳಮಟ್ಟದಲ್ಲಿ ಮತ್ತು LL ಒಳನೆಲೆಯಲ್ಲಿ ಜಾನಪದವಿದೆ.

ಜಾನಪದ ಜೀವಂತ ಪಳಯುಳಿಕೆ ಎನ್ನುವವರು ಸುಖ ಸಂಸ್ಕೃತಿಯ ನಾಗರೀಕರು. ಇವರ ಅರ್ಥದಲ್ಲಿ ಆಧುನಿಕ ಸೌಲಭ್ಯ (ಯೂರೋ ಅಮೆರಿಕನ್ ಆಧುನಿಕತೆಯ)ಗಳನ್ನು ಪಡೆದವರು ಜೀವಂತ, ಉಳಿದವರೆಲ್ಲ ಜೀವಂತ ಪಳಯುಳಿಕೆಗಳು. ಭಾರತೀಯರಿಗೆ ಬುದ್ಧ, ಬಸವ, ಗಾಂಧಿ, ಲೋಹಿಯಾ, ಅಂಬೇಡ್ಕರ್ ಮತ್ತು ಅವರ ನಂತರದ ತಲೆಮಾರು ಪೆರಿಯಾರ್, ನಾರಾಯಣಗುರು, ಮಹಾತ್ಮ ಫುಲೆ, ಕಬೀರ್, ಕುವೆಂಪು ಮುಂತಾದವರು ಈ ಹೊತ್ತು ಜೀವಂತ, ಅವರು ನಮ್ಮ ಬದುಕಿನ ಈ ಹೊತ್ತಿನ ಅಭಿವೃದ್ಧಿ ಮಾರ್ಗದರ್ಶಿಗಳು ಕೂಡ. ಅಯೋಧ್ಯೆ ರಾಮ ನಮಗೆ ಜೀವಂತ ಪಳಯುಳಿಕೆ. ರಾಮರಾವ್, ರಾಮಚಂದ್ರಗೌಡ, ಅಗಸರ ರಾಮಯ್ಯ, ಕುರುಬರ ರಾಮಪ್ಪ, ದಲಿತರ ರಾಮಗಳು ಜೀವಂತ ಬದುಕು. ಅದು ಜಾನಪದ.



ಪುರದ ಪುಣ್ಯ

**೧. ೨ ವ್ಯವಸ್ಥೆಯಾಗಿ**

ಒಂದು ಸಮಾಜದ ಎಲ್ಲರೂ ಪಡೆದುಕೊಂಡಿದ್ದ, ಪಡೆದಿರುವ ಮತ್ತು ಪಡೆಯಬಹುದಾದ ಸಾಮಾನ್ಯ ಸಂಸ್ಕೃತಿ, ತಂತ್ರಜ್ಞಾನ, ಆರ್ಥಿಕತೆ ಮತ್ತು ಆಡಳಿತ ವ್ಯವಸ್ಥೆಯನ್ನೇ ಜಾನಪದ ಅಥವ ಜಾನಪದ ವ್ಯವಸ್ಥೆ ಎಂದು ಕರೆಯಬಹುದು. ಹೆಚ್ಚಿನವು ಹೆಚ್ಚಿಕೊಂಡವರು ತಂದು ಹಾಕಿದವುಗಳು. ಉದಾ: ಹೆಚ್ಚಿನ ತತ್ವಜ್ಞಾನ ಮತ್ತು ಹೆಚ್ಚಿನ ತಂತ್ರಜ್ಞಾನ.

ಯಾವುದೇ ಜ್ಞಾನ ಅಥವ ವಸ್ತು ಹೆಚ್ಚಿನದಾಗಿ ಒಳಗಿನಿಂದ ಬರಲಿ ಅಥವ ಹೊರಗಿನಿಂದ ಬರಲಿ ಅದನ್ನು ಸಾಧಾರಣೀಕರಣಗೊಳಿಸಿ ತನ್ನೊಳಕ್ಕೆ ತೆಗೆದುಕೊಳ್ಳುವ ಸದ್ಗುಣ ಜನಪದ ವ್ಯವಸ್ಥೆಗೆ ಇದೆ. ಈ ಸಾಧಾರಣೀಕರಣ ಏಡಿ ಸದ್ಗುಣವನ್ನು ಕಾಲಕಾಲಕ್ಕೆ ಬಂದ ಅನ್ಯ ಜ್ಞಾನಗಳು ಸದುಪಯೋಗಪಡಿಸಿಕೊಂಡು ತಮ್ಮನ್ನು ಉಳಿಸಿಕೊಂಡಿವೆ ಹಾಗೆಯೇ ಜನಪದ ಆ ವ್ಯವಸ್ಥೆಯನ್ನು ಹಿಗ್ಗಲಿಸಿವೆ. ಜಾತಿ, ವರ್ಣ, ಧರ್ಮ ಮತ್ತು ಪಂಥಗಳೆಂಬ ಯಜಮಾನ ಸಂಸ್ಕೃತಿಗಳು ತಮ್ಮ ಕಸ-ಮುಸುರೆಯನ್ನೆಲ್ಲ ಜಾನಪದದೊಳಕ್ಕೆ ತುರುಕಿ ಅದನ್ನು ದುರುಪಯೋಗ ಮಾಡಿಕೊಂಡಿರುವುದೂ ಉಂಟು.

ಈ ಮಧ್ಯೆ ಜಾನಪದ ಒಂದು ಆಯ್ಕೆಯ ಹಕ್ಕನ್ನು ಉಳಿಸಿಕೊಂಡಿದೆ. ಆಗಾಗ ಒಳ ಬಂದ ಸಾಂಸ್ಕೃತಿಕ ಅಂಶಗಳನ್ನು ಒಪ್ಪಿ ಸಮರ್ಥಿಸುವಾಗಲೂ ಅವುಗಳನ್ನು ಪ್ರಶ್ನಿಸುವ ಪ್ರತಿಭಟಿಸುವ ಮತ್ತು ಸೊಕ್ಕು ಮುರಿದು ಸಾಧಾರಣೀಕರಣಕ್ಕೆ ಒಳಪಡಿಸಿಕೊಂಡು ಮಾನವೀಕರಣಗೊಳಿಸುವ ತನ್ನ ಸಾರ್ವಭೌಮತೆಯನ್ನು ಮೆರೆದಿದೆ. ನುಚ್ಚಾಯ್ತು ನೀರ ಹೊಳಿಯಾಗೆ, ಮನಸೋತೆ ಮಾದಿಗರೆಣ್ಣಿಗೆ ಮತ್ತು ಸಾಮಂತಶಾಹಿ ಮೌಲ್ಯಗಳಿಗೆ ಬಲಿಯಾದ ಹೆಣ್ಣಿನ ಗೋಳನ್ನು ಕುರಿತ ಕಥನ ಗೀತೆಗಳನ್ನು ಉದಾಹರಣೆಯಾಗಿ ಹೇಳಬಹುದು.

ಜಾನಪದ ವ್ಯವಸ್ಥೆ ಎಂಬ ಸಂಗತಿ ಬಂದಾಗ ಧರ್ಮದ ವಿಷಯ ಬರುತ್ತದೆ. ಈ ಹೊತ್ತು ಮೆರೆಯುತ್ತಿರುವ ಹಿಂದೂ, ಮುಸ್ಲಿಂ, ಕ್ರೈಸ್ತ ಎಂಬುವು ಜನಪದ ಧರ್ಮಗಳಲ್ಲ. ಅವು ನಮ್ಮ ಈಗಿನ ಭಾರತದ ಪಂಚವಾರ್ಷಿಕ ಯೋಜನೆಗಳ ರೀತಿ ಜನರ ಮೇಲೆ ಹೇರಿದಂಥವು. ಜನಪದ ಧರ್ಮ ಜನಪದದ ಬದುಕಿನೊಳಗೆ ಇದೆ. ಅದರ ತತ್ವ 'ನೀ ನನಗಿದ್ದರೆ ನಾ ನಿನಗೆ

ನೆನಪಿರಲಿ ಈ ನುಡಿ ನಮ್ಮೊಳಗೆ' ಎಂಬುದು. ಆದರೆ ಕಾಲಾನುಕ್ರಮದಲ್ಲಿ ಮೇಲಿನ ದೊಡ್ಡ ಧರ್ಮಗಳು ಜನರ ಹತ್ತಿರ ಹೋಗಲು ಅವರ ನಂಬಿಕೆ ನಡವಳಿಕೆಗಳನ್ನು ಅಳವಡಿಸಿಕೊಂಡಿವೆ. ಈ ಮೂಲಕ ಸರಳವಾದ ಜಾನಪದವನ್ನು ಹುಟ್ಟು ಹಾಕಿಕೊಂಡಿವೆ.

**೧.೩. ಸಾಮಗ್ರಿಯಾಗಿ**

ಜಾನಪದ ಎಂದರೆ ಒಂದು ಸಮಾಜದ ಎಲ್ಲರಿಗೂ ಸಿಗಬಹುದಾದ ವಸ್ತು, ವ್ಯಕ್ತಿ ಮತ್ತು ಬದುಕು. ಒಬ್ಬನಿಗೆ ಟಿ.ವಿ. ಸಿಗದಿರಬಹುದು, ಮತ್ತೊಬ್ಬನಿಗೆ ಫ್ರಿಜ್ ಸಿಗದಿರಬಹುದು. ಮಗದೊಬ್ಬನಿಗೆ ಕಾರು ಅಥವ ಬೈಕ್ ಸಿಗದಿರಬಹುದು. ರೇಡಿಯೋ ಮತ್ತು ಸೈಕಲ್ ಎಲ್ಲರಿಗೂ ಸಿಗುವಂತಿವೆ. ಮೂರು ಅಥವ ಐದು ಸ್ಟಾರ್‌ನ ಊಟ ಎಲ್ಲರಿಗೂ ಸಿಗದಿರಬಹುದು. ಹೋಟೆಲ್ ಮತ್ತು ಮನೆ ಊಟ ಎಲ್ಲರಿಗೂ ಸಿಗುತ್ತದೆ. ಕಾಂಚೀವರಂ ಮತ್ತು ಮೈಸೂರು ಸಿಲ್ಕ್ ಸೀರೆಗಳು ಎಲ್ಲರಿಗೂ ಸಿಗದಿರಬಹುದು. ಇತರ ಅಂದ ಚಂದದ ಸೀರೆ ಮತ್ತು ಬಟ್ಟೆಗಳು ಎಲ್ಲರಿಗೂ ಎಟುಕುವಂತಿವೆ. ಒಂದು - ಕಾಲದಲ್ಲಿ ಸ್ಟೀಲ್ ಪಾತ್ರೆ ಮತ್ತು ಸೈಕಲ್ ಉಳ್ಳವರ ವಸ್ತುಗಳಾಗಿದ್ದವು ಈಗ ಅವು ಸಾಮಾನ್ಯರೆಲ್ಲರ ಬಳಕೆಗೆ ಬಂದಿವೆ, ಜಾನಪದವಾಗಿವೆ.

ಜಾನಪದ ಸಾಮಗ್ರಿ ಎಂಬುದು ಹಿಂದಿನ, ಹಳೆಯ, ಅನಾಗರೀಕ ಅಥವ ಹಳ್ಳಿಗಾಡಿನ ಜನ ಅನೇಕ ಶತಮಾನಗಳಿಂದ ಬಳಸುತ್ತ ಬಂದು ಈಗ ಅಪ್ರಸ್ತುತವಾಗಿರುವ ವಸ್ತುಗಳು ಎಂದು ಆಧುನಿಕ ಪಾಶ್ಚಾತ್ಯ ಪ್ರಭುಗಳು ಅಪ್ಪಣೆ ಕೊಡಿಸಿದರು. ಆದರೆ ನೀವೇ ಹೇಳಿ ಅನೇಕ ಶತಮಾನಗಳಿಂದ ನೀವು ಬಳಸುತ್ತಾ ಬಂದಿರುವ ಅನ್ನ, ಹಿಟ್ಟು, ಹಾಲು, ಮೊಸರು, ತುಪ್ಪ-ಸೊಪ್ಪು, ಕಾರ-ಕಾಳು.. ಹಳೆಯವೊ, ಹೊಸವೊ ?

**೧.೪ ಸ್ವಭಾವವಾಗಿ**

ಒಂದು ಸಮಾಜದ ವಸ್ತು, ವ್ಯಕ್ತಿ ಮತ್ತು ವಿಷಯ ಹೇಗೆ ಈ ಜಾನಪದೀಯವಾಗಿ ಬಳಸಲ್ಪಡುತ್ತದೆ, ವರ್ತಿಸುತ್ತದೆ ಮತ್ತು ವಿವರಿಸಲ್ಪಡುತ್ತದೆ ಎನ್ನುವುದರ ಮೇಲೆ ಅದರ ಜಾನಪದೀಯತೆಯನ್ನು ತಿಳಿಯಬಹುದಾಗಿದೆ. 'ಹಾಯ್ದ ದುಡಿಯೋದು ಪಿಂಡೈ, ಒಕ್ಕಲಿಗ ದುಡಿಯೋದು ದಂಡೆ, ಹೊಲ್ಯ ದುಡಿಯೋದು ಹೆಂಡೆ' ಎಂಬ ಗಾದೆಯ ಒಳ ಅರ್ಥವನ್ನು ಗಮನಿಸಿ, ಹಾತ್ವ

ಪಿಂಡಕ್ಕೆ, ಒಕ್ಕಲಿಗ ದಂಡಕ್ಕೆ ಮತ್ತು ಹೊಲೆಯ ಹೆಂಡಕ್ಕೆ ಖರ್ಚು ಮಾಡುತ್ತ ಶಿ: ತಮ್ಮ ಸಂಪಾದನೆಯನ್ನು ಅನುತ್ಪಾದಕ ಚಟುವಟಿಕೆಗೆ ತೊಡಗಿಸಿದ್ದಾರೆ ದಿ ಎಂಬುದನ್ನು ಜೀವನಗಾಥೆಯಾದ ಈ ಗಾದೆ ಸ್ಪಷ್ಟಪಡಿಸುತ್ತದೆ.

ನೆಹರು ಅವರನ್ನು ಕೆನಡಿ ಅಮೆರಿಕಕ್ಕೆ ಕರೆಸಿಕೊಂಡರು. ತಾನು ಅಮೆರಿಕವನ್ನು ಎಷ್ಟು ಉನ್ನತವಾಗಿ ಮತ್ತು ಸ್ವಚ್ಛವಾಗಿ ಬೆಳೆಸಿದ್ದೇನೆ ಎಂದು ತೋರಿಸಲು ಅವರನ್ನು ಎತ್ತರ ಕಟ್ಟಡದ ಮೇಲಕ್ಕೆ ಕರೆದುಕೊಂಡು ಹೋದರು. ಬೈನಾಕ್ಯುಲರ್ ಮೂಲಕ ಅಮೆರಿಕವನ್ನು ತೋರಿಸುತ್ತಾ ಹೋದರು. ಒಂದು ಕಡೆ * ಬೈನಾಕ್ಯುಲರ್ ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು. ನೋಡುತ್ತಾರೆ, ಯಾರೋ ಒಬ್ಬ ಒಂದು ಮರದ ಹಿಂದೆ ಕುಕ್ಕರುಗಾಲಿನಲ್ಲಿ ಕೂತಿದ್ದಾನೆ. ತಕ್ಷಣವೇ ಸ್ಕ್ವಾಡ್ ಕಳಿಸಿ ಅವನು ಯಾರು ಎಳೆದು ತನ್ನಿ ಎಂದು ಆದೇಶ ನೀಡಿದರು. ೬. ಸ್ಕ್ವಾಡ್‌ನವರು ಹೋಗಿ ನೋಡುತ್ತಾರೆ. ಆತ ಅಮೆರಿಕದಲ್ಲಿರುವ ಭಾರತದ ರಾಯಭಾರಿ!! ಇದು ಭಾರತ ?

ಅಪ್ಪ ಎಲ್ಲಿ ಹೋಗಿದ್ದಾನೆ ಎಂದು ಮಗನಿಗೆ ಗೊತ್ತು. ಆದರೂ ಕಂಪ್ಯೂಟರ್ ಮುಂದೆ ಕುಳಿತು ನಮ್ಮ ಅಪ್ಪ ಎಲ್ಲಿದ್ದಾನೆ ಎಂದು ಕೇಳಿದ. ಆತ ಸಮುದ್ರತೀರದಲ್ಲಿ ಮೀನು ಹಿಡಿಯುತ್ತಿದ್ದಾನೆ ಎಂದು ಉತ್ತರ ಕೊಟ್ಟಿತು. ನಮ್ಮ ಜಗ ಅಪ್ಪ ಶ್ರೀಮಂತ, ಅಮೆರಿಕ ಆಡಳಿತದಲ್ಲಿ ಪ್ರತಿಷ್ಠಿತ, ಇಂಥವನು ಮೀನು ಹಿಡಿಯಲು ಯಾಕೆ ಹೋಗುತ್ತಾನೆ. ಮತ್ತೆ ಮತ್ತೆ ಕಂಪ್ಯೂಟರ್ ಕೇಳಿದ. ಅದೇ * ಉತ್ತರ. ಕೊನೆಗೆ ಜಾಣತನ ಬಳಸಿ ನನ್ನನ್ನು ಹುಟ್ಟಿಸಿದವನು ಎಲ್ಲಿದ್ದಾನೆ ಎಂದು ಕೇಳಿದ. ಮೊದಲ ಉತ್ತರವೇ ಬಂತು! ಇದು ಅಮೆರಿಕಾದ ಜೋಕು.

**೧.೫ ಪರಂಪರೆಯಾಗಿ**

ಜಾನಪದ ಹಿಂದಿನಿಂದ ಪಡೆದದ್ದು, ಈಗ ಬಳಸುತ್ತಿರುವುದು ಮತ್ತು ಮುಂದಿನ ಪೀಳಿಗೆಗೆ ಬಿಟ್ಟು ಹೋಗಬೇಕಾಗಿರುವ ಸಮಾಜೋ ಆರ್ಥಿಕ 21. ಸಂಪತ್ತು, ಕೂಡಿ ಬಾಳುವುದು, ಹಂಚಿಕೊಂಡು ತಿನ್ನುವುದು ಮತ್ತು ತನ್ನನ್ನು ವಿವರಿಸಿಕೊಳ್ಳುವುದು ಯಾಹೂತ್ತೂ ನಡೆಯಬೇಕು. ಜೀವನಾವರ್ತನ ದ ಆಚರಣೆಗಳಲ್ಲಿ ಈ ಅಂಶಗಳನ್ನು ಕಾಣಬಹುದು. ಹುಟ್ಟು, ಮದುವೆ, ಸಾಮಾಜಿಕ ಕಾರ್ಯ, ವ್ಯಕ್ತಿತ್ವ ನಿರ್ಮಾಣ ಮತ್ತು ಆಸ್ತಿಯ ವರ್ಗಾವಣೆ ಆಚರಣೆಗಳೆಲ್ಲ ಈ ನೆಲೆಯಲ್ಲಿ ನಡೆದಿವೆ. ಹುಟ್ಟು ಆಚರಿಸದೆ

ನಿರ್ಧಾರವಾಗುವುದಿಲ್ಲ. ಮದುವೆ ಯಾವ ಕಾಲದಲ್ಲೂ ನಿಲ್ಲುವುದಿಲ್ಲ, ಸಮಾಜ ಕೂಟಗಳು ಇಲ್ಲದಿದ್ದರೆ ಮನುಷ್ಯ ನಿರ್ವೀರ್ಯನಾಗುತ್ತಾನೆ. ಇವು ಅನಂತ ಕಾಲದ ಆಚರಣೆಗಳು. ಇವುಗಳಲ್ಲಿ ಪರಂಪರೆಯಿದೆ. ಪರಂಪರೆ ಇಲ್ಲದ ಸಮಾಜವೊಂದು ಇದೆ ಎನ್ನುವುದಾದರೆ ಅದು ಈ ಘಳಿಗೆಯಲ್ಲಿ ಹುಟ್ಟಿದ್ದಾಗಿರಬೇಕು.

**೧.೬ ಚಟುವಟಿಕೆಯಾಗಿ**

ಒಂದು ಸಮಾಜದ ಎಲ್ಲರೂ ಉತ್ಪತ್ತಿ, ಹಂಚಿಕೆ ಮತ್ತು ಅನುಭೋಗದಲ್ಲಿ ತೊಡಗಬಹುದಾದ ಚಟುವಟಿಕೆಯ ಜಾನಪದ. ಒಂದು ಸಮಾಜದ ಆಹಾರ, ಉಡುಪು, ವಸತಿ ಮೊದಲಾದ ಆರ್ಥಿಕ ಚಟುವಟಿಕೆಗಳು ಅದರ ಸಾಂಸ್ಕೃತಿಕ ಪರಂಪರೆಯಂತೆ ಮಾದರಿಗೊಂಡಿರುತ್ತವೆ. ಈ ಮಾದರಿಗಳು ಬಳಕೆಯ ವಸ್ತುಗಳು ಮಾತ್ರ ಆಗಿರುವುದಿಲ್ಲ. ಆಚರಣೆಯ ವಿಷಯಗಳು ಕೂಡ ಆಗಿವೆ. ಒಂದು ಜನಪದ ಚಟುವಟಿಕೆಯಲ್ಲಿದೆ ಎಂದರೆ ಅದರೊಳಗಿನ ಜನರು ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯವಾಗಿದ್ದಾರೆ ಎಂದು ಅರ್ಥ.

**೧.೮ ಅನುಸಂಧಾನವಾಗಿ**

ತಿನ್ನುವುದು, ಉಡುವುದು, ವಾಸಿಸುವುದು ಮತ್ತು ಕೂಡುವುದರಲ್ಲಿ ಸಾಮಾನ್ಯ ನಡವಳಿಕೆಗಳಿರುವುದೇ ಜಾನಪದ. ಇವುಗಳ ರೂಪ, ಮಾದರಿಗಳಲ್ಲಿ ಬದಲಾವಣೆ ಆಗಿದೆ ಎಂದರೆ ಹೊರಗಿನ ಇದೇ ಬಗೆಯ ಸಾ ಸಾಂಸ್ಕೃತಿಕ ಮಾದರಿಗಳೊಂದಿಗೆ ಅನುಸಂಧಾನ ನಡೆದಿದೆ ಎಂದು ತಿಳಿಯಬಹುದು. ಹೀಗೆ ಎರಡು ಜನಪದ ಸಂಸ್ಕೃತಿಗಳ ಮಧ್ಯೆ ಅಥವ ಜನಪದ ಸಂಸ್ಕೃತಿ ಮತ್ತು ಆಧುನಿಕ ಸಂಸ್ಕೃತಿಗಳ ಮಧ್ಯೆ ಅನುಸಂಧಾನ ನಡೆಯುವುದು ಅಗತ್ಯ ಹಾಗೂ ಅನಿವಾರ್ಯ. ಇಲ್ಲದಿದ್ದಲ್ಲಿ ಬೆಳೆಯುವ ಜನಪದವನ್ನು ಕಾಣಲಾರೆವು.

ನಿಜದಲ್ಲಿ ಜಾನಪದಕ್ಕೆ ಏಕಕಾಲ ಎಂಬುದಿಲ್ಲ. ಒಂದು ಕುಟುಂಬ ಮತ್ತು ಜನಪದ ಮೂರು ಕಾಲವನ್ನು ಒಟ್ಟಿಗೆ ಬದುಕುತ್ತದೆ. ಇವು ಆಚರಿಸುವ ಆಚರಣೆಗಳೆಲ್ಲ ಭೂತ ಕಾಲದವು ಎಂದು ಕರೆದರೆ ಆ ಉತ್ಪತ್ತಿ ಜೀವಂತ ಪಳೆಯುಳಿಕೆಯಾಗುತ್ತದೆ. ನಡವಳಿಕೆಗಳು ಎಲ್ಲೆ ಹುಟ್ಟಲಿ ಅವು ಪ್ರಸ್ತುತದಲ್ಲಿ ಪ್ರಯೋಗದಲ್ಲಿರುವುದರಿಂದ ಆ ಸಂದರ್ಭವೇ ಮುಖ್ಯ ಎನ್ನುವುದಾದರೆ ಆ ಉತ್ಪತ್ತಿ ಜೀವಂತ ಜೀವನ. ಒಂದು ಟಿವಿ ಅಥವ ಪ್ರೆಷರ್ ಕುಕ್ಕರ್ ಕೊಂಡಂತೆ

ಪುರದ ಪುಣ್ಯ

ಜನಪದ ನಡವಳಿಕೆಗಳು ತಾತ್ಕಾಲಿಕ ಅಲ್ಲ ಅನ್ನುವುದಾದಲ್ಲಿ ಆ ಉತ್ಪನ್ನ ಭವಿಷ್ಯ ಸಂಬಂಧಿ ಕೂಡ ಆಗಿರುತ್ತದೆ.

ಒಂದು ಜನಪದ ಮತ್ತು ಒಂದು ದೇಶಕೂಡ ಏಕಕಾಲವನ್ನು ಬದುಕುತ್ತದೆ ಅ" ಎಂಬುದು ಸುಳ್ಳು, ಅಮೆರಿಕಾದ ದೃಷ್ಟಿಯಿಂದ ಇಪ್ಪತ್ತೊಂದನೆಯ ಶತಮಾನ ಅಸಲಿ ಆಧುನಿಕ ಸಂದರ್ಭ. ಇದೇ ಕಾಲದಲ್ಲಿ ಭಾರತದಲ್ಲಿ ತ್ರೇತಾಯುಗದ ಶ್ರೀರಾಮ ಹುಟ್ಟುತ್ತಿದ್ದಾನೆ. ಅಮೆರಿಕಕ್ಕೆ ವಾಷಿಂಗ್ ಟನ್ ಪ್ರಾಮುಖ್ಯತೆಗಿಂತ ಭಾರತದ ಈಗಿನ ಆಡಳಿತಕ್ಕೆ ಯಾವುದೋ ಶತಮಾನದ ಆಯೋಧ್ಯ ಮುಖ್ಯವಾಗುತ್ತಿದೆಯಲ್ಲ ! ಈ ಹೊತ್ತಿನ ಭಾರತದ ಅನೇಕ ಉಪಪಂಗಡಗಳು, ಅಂಚಿಗೆ ಸರಿಯುತ್ತಿರುವ ಕಿರು ಪಂಗಡಗಳು ತಮ್ಮ ಭೂತಕಾಲದಿಂದ ಆಧುನಿಕ ಅಭಿವೃದ್ಧಿ ನಾಯಕನನ್ನು ಹುಡುಕಿಕೊಳ್ಳುತ್ತಿವೆಯಲ್ಲ ! ಹಾಗೆಂದಲ್ಲಿ ವರ್ತಮಾನದ ಅಸಲಿತನ ಎಷ್ಟರ ಮಟ್ಟಿನದು? ಈ ಆಧುನಿಕ ಅಸಲಿತನ ಎಂಬುದು ಈಗ ಫ್ಯಾಕ್ಟರಿಯಿಂದ ಬಂದ ಸಿದ್ಧ ವಸ್ತುವಿನ ವಿಷಯಕ್ಕೆ ವಾಸ್ತವವೆ ಹೊರತು, ಒಂದು ಜನಪದದ ಅಥವ ದೇಶದ ಸಾಂಸ್ಕೃತಿಕ ಚಟುವಟಿಕೆಯ ವಿಷಯದಲ್ಲಿ ಕಾಲ ಹಿಂದಿನ ನೇಣುಗಂಭವೂ ಅಲ್ಲ, ಈ ಹೊತ್ತಿನ ಸ್ವಾತಂತ್ರ್ಯ ಧ್ವಜವೂ ಅಲ್ಲ. ಅದು ಕಾಲಗಳ ಸಂಕೀರ್ಣ,

ಆದರೆ ಅಮೆರಿಕ ಕೇಂದ್ರ ಚಿಂತನೆಯ ವಕ್ತಾರರು ಆ ಚಿಂತನೆಯ ಏರುಕಾಲಮಾನದ (Vertical time) ಆಧಾರದ ಮೇಲೆ ನಮ್ಮ ಸಮಾಜಗಳನ್ನು ನಾಗರಿಕ, ಗ್ರಾಮೀಣ, ಬುಡಕಟ್ಟು, ಅಲೆಮಾರಿ ಇತ್ಯಾದಿಯಾಗಿ ಒಡೆದ ಕಾಲಗಳಲ್ಲಿಟ್ಟು ನೋಡುತ್ತಿದ್ದಾರೆ. ಈ ಎಲ್ಲ ಸಮಾಜಗಳು ಈ ಹೊತ್ತು ಒಳ ಹೊರಗೆ ಪರಸ್ಪರ ಸಾಂಸ್ಕೃತಿಕ ಅನುಸಂಧಾನದಲ್ಲಿ ತೊಡಗಿವೆ ಎಂಬುದನ್ನು ಮರೆಯುತ್ತಾರೆ. ಒಂದು ಸ್ಥಿತಿ ಅಥವ ಸಂದರ್ಭದಲ್ಲಿ ಒಂದು ಜನಪದದೊಳಗೆ ಅನೇಕ ಕಾಲಗಳೂ, ಸಂದರ್ಭಗಳೂ ಮತ್ತು ಪಠ್ಯಗಳೂ ಇರುತ್ತವೆ ಎಂಬುದನ್ನು ಹೇಗೆ ಮರೆಯೋಣ?

**೧.೮ "ದೇಶಿ" ಎಂಬ "ನಾವು'**

ಪ್ರಸ್ತುತ 'ದೇಶಿ' ಎಂದರೆ, ಕೈ ತಪ್ಪಿ ಹೋಗಿರುವ ಅಭಿವೃದ್ಧಿಯನ್ನು ನಮ್ಮತ್ತ ಎಂದರೆ ನಮ್ಮ ಕೇಂದ್ರದತ್ತ, ಎಂದರೆ ನಮ್ಮ ದೇಶದತ್ತ ತಿರುಗಿಸಿಕೊಳ್ಳುವ ಉಪಕ್ರಮ. ದೇಶಿ ಎಂಬುದು ಸ್ವತಂತ್ರ ಸಿದ್ಧಾಂತವೂ ಅಲ್ಲ

ಅಥವ ಪ್ರತ್ಯೇಕವಾದ ಜೀವನಕ್ರಮವೂ ಅಲ್ಲ. ನಾವು ಸಮಕಾಲೀನವಾಗಿ ಬದುಕಲೇಬೇಕಾದ ಜರೂರಿನಿಂದ ಹುಟ್ಟಿದ ನನ್ನ ಮತ್ತು ನನ್ನ ದೇಶದ ಹೀಗೆ ಆತ್ಮಕಥನವೇ ದೇಶೀಯತೆ, ದೇಶೀಯ ಉಪಕ್ರಮ ಹೇಗಿರುತ್ತದೆ ಎಂದರೆ ಆ ಒಂದು ಕಡೆಯಿಂದ ಅನ್ಯದೇಶೀಯ ಜ್ಞಾನ ಮಾರ್ಗೀಯ ದರೋಡೆಯನ್ನು ಛ, ಪ್ರತಿಭಟಿಸುತ್ತ ಮತ್ತೊಂದು ಕಡೆಯಿಂದ ಜಾತ್ಯತೀತವಾಗಿ ನಮ್ಮ ನೈಸರ್ಗಿಕ ' ಮತ್ತು ಸಾಮಾಜಿಕ ಪಾರಂಪರಿಕ ಜ್ಞಾನ ಪದ್ಧತಿಗಳನ್ನು ಸಮಕಾಲೀನ ಜಾಗತಿಕ ಅಭಿವೃದ್ಧಿ ಮಾದರಿಗಳನ್ನಾಗಿ ರೂಪಿಸಿಕೊಳ್ಳುವುದಾಗಿದೆ. ಆ ಮೂಲಕ ನಮ್ಮ ಅಭಿವೃದ್ಧಿಯಲ್ಲಿ ಬಹು ಜನರು ದುಡಿಯುವ ಮತ್ತು ಸ್ವ-ಉದ್ಯೋಗಿಗಳಾಗುವ ಅವಕಾಶಗಳನ್ನು ಸೃಷ್ಟಿಸುವುದಾಗಿದೆ.

ಕೃಷಿ ಜಗತ್ತಿನ ಮೊದಲ ಉದ್ಯಮಕ್ರಾಂತಿಯಾಗಿ ಬಹುಜನರು - ದುಡಿಯುವ ಮತ್ತು ಉಣ್ಣುವ ಅವಕಾಶವನ್ನು ನೀಡಿತ್ತು. ಆದರೆ ಜಾತಿ ಎಂಬ ಹಿತ ಶತ್ರು ಹಲವರು ಫಲಾಪೇಕ್ಷೆ ಇಲ್ಲದೆ ದುಡಿದು ಸಾಯುವಂತೆ ಮಾಡಿತು. ದುಡಿಮೆಯ ಅಖಂಡತೆ ಮತ್ತು ಬದುಕುವ ಅಖಂಡತೆಯನ್ನು ಮುರಿದ ಜಾತಿಯ ತಂತ್ರದಿಂದಾಗಿ ಕೃಷಿ ಉದ್ಯಮದಲ್ಲಿ ಸಂಗ್ರಾಹಕರು ಮತ್ತು ಭೋಗಿಗಳು ಪ್ರತ್ಯೇಕ ಗುಂಪುಗಳಾದರು. ಆ ಕಾರಣ ದುಡಿಮೆಯ ವಿಘಟನೆ ಮತ್ತು ತಾರತಮ್ಯದಿಂದಾಗಿ ದೇಶವೇ ಹಲವು ಭಿನ್ನ ವೃತ್ತಿ ಪಂಗಡಗಳಲ್ಲಿ ಒಡೆದು ಹೋಯಿತು. ಬೇಡವಾದ ಜನ ಪ್ರಬಲರಾಗಿ ದೇಶ ಮಾತ್ರ ಎಲ್ಲರ ಕೈತಪ್ಪಿ ಹೋಯಿತು.

ದೇಶಿ ಪರಿಕಲ್ಪನೆಯನ್ನು ಈಗ ಎರಡು ನೆಲೆಯಲ್ಲಿ ಬಳಸುತ್ತಿದ್ದೇವೆ. ನಮ್ಮ ದೇಶದ ಹೊರಗಿನ ಅಭಿವೃದ್ಧಿ ದೇಶವನ್ನು ಅನ್ಯ ದೇಶಿ ಎಂದು ನಮ್ಮೊಳಗಿನ ಅನಭಿವೃದ್ಧಿ ದೇಶವನ್ನು ಸ್ವದೇಶಿ ಎಂದು ಕರೆಯುತ್ತಿದ್ದೇವೆ. ಈ ಎರಡಕ್ಕೆ ಭಿನ್ನವಾದ ಸಾಂಪ್ರದಾಯಿಕ ದೇಶಿ ಪರಿಕಲ್ಪನೆ ಪಂಪ ಮಹಾಕವಿಯಿಂದ ಈ * ಯುಗದ ವಿಶ್ವಮಾನವ ಕುವೆಂಪು ಕವಿಯವರೆಗೆ ಹರಡಿಕೊಂಡಿದೆ. ರಾಜಕಾರಣಿ, ತಂತ್ರಜ್ಞಾನ ಪಂಡಿತ, ಆರ್ಥಿಕ ಅಭಿವೃದ್ಧಿ ಸಿದ್ಧಾಂತಕಾರ, ದೇಶೀಯ ಚಿಂತಕ ಮತ್ತು ಮಹಾತ್ಮ ಎಂದು ಅನೇಕಗಳ ಏಕವಾದ ಗಾಂಧೀಜಿ ಆ ಸಾಂಪ್ರದಾಯಿಕ ದೇಶಿವಾದದ ನೇತಾರ. ಈತ ಆರ್ಥಿಕ ಅಭಿವೃದ್ಧಿಯನ್ನು ನಿಯಂತ್ರಿಸುವ ಜಾತೀಯ ಅಸ್ತವಾದ ಅಸ್ಪೃಶ್ಯತೆ, ಅಸಮಾನತೆ ಮತ್ತು ದೈಹಿಕ -

ಮಾನಸಿಕ ಹಿಂಸೆಯ ಹೊರಗೆ ಭಾರತೀಯ ಅಭಿವೃದ್ಧಿ ಪರಂಪರೆಯೊಂದನ್ನು - ಗುರುತಿಸಿಕೊಂಡಿದ್ದಾನೆ. ಅದು ಜಾಗತಿಕ ಶಿಷ್ಟವೆಂಬ ಆಧುನಿಕತೆ. ಭಾರತೀಯ ಶಿಷ್ಟವೆಂಬ ಜಾತಿಗೆ ಪಕ್ಕಾ ವಿರೋಧಿ ಅಲ್ಲ. ಅವುಗಳ ಜೊತೆಗಿನ ಲ ಅನುಸಂಧಾನದಿಂದ ಎಲ್ಲ ಜನರ ಕ್ಷೇಮಕ್ಕಾಗಿ ಸಾಧ್ಯವಾಗಬಹುದಾದ ಹಿತಕರ, ಅಗತ್ಯ ಆದರೆ ದುರಾಸೆಯದಲ್ಲದ ಅಭಿವೃದ್ಧಿ, ನನ್ನ ದೇಶಿ ಚಿಂತನೆ ಕೂಡ ಗಾಂಧೀಜಿಯ ನಾಭಿಯಿಂದ ಹುಟ್ಟಿದ್ದು, ಅಮೆರಿಕಾದ ಮೆದುಳಿಗೆ ಪ್ರತಿಕ್ರಿಯೆಯಾಗಿ ಅಲ್ಲ,

**೧.೯ ಅಜಾನಪದ**

ಒಂದು ಸಮಾಜದ ಎಲ್ಲರಂತೆ ಪಡೆಯಲಾಗದ್ದು ಅಜಾನಪದ. ಅದು ಸಂಸ್ಕೃತಿ ಆಗಿದ್ದಿರಬಹುದು ಅಥವ ತಂತ್ರಜ್ಞಾನ ಆಗಿದ್ದಿರಬಹುದು. ಒಂದು ಸಮಾಜದ ಒಳ ಪ್ರವೇಶಕ್ಕೆ ಅವಕಾಶ ಇಲ್ಲದ್ದು; ಸಾಧುವೊ ಅಸಾಧುವೊ ಅದು ಅಜಾನಪದವಾಗಿರುತ್ತದೆ.

ಅಮೆರಿಕಾದವರು ಕಾಲಜ್ಞಾನ ಹೇಳುತ್ತಿದ್ದಾರೆ; ಅದು ಜಾನಪದ, ಇದು ಅಲ್ಲ ಅಂತ. ಯಾಕೆಂದರೆ ಅವರಿಗೆ ಗೊತ್ತಿರುವುದು ಒಂದೇ ಜ್ಞಾನ. ಅದು ವಸ್ತುಗಳ ಉತ್ಪತ್ತಿ ಮತ್ತು ಅದರ ಉದ್ಯಮೀಕರಣ. ಅದು ವಸ್ತುಗಳನ್ನು ಬಳಸು ಮತ್ತು ಬಿಸಾಡು ಎನ್ನುತ್ತದೆ. ಈ ಧ್ಯೆಯ ವಾಕ್ಯ ಸಂಸ್ಕೃತಿಯ ಪುನರ್ ಸೃಷ್ಟಿಗಾಗಿ ಅಲ್ಲ, ಉದ್ಯಮದ ವಸ್ತುಗಳ ಪುನಃ ಪುನಃ ಉತ್ಪತ್ತಿಗಾಗಿ, ಈ ಮಧ್ಯೆ ಈ ಯಾವುದೂ ಬಾಧಿಸದ ಮನುಷ್ಯನೊಬ್ಬನಿದ್ದಾನೆ ಎಂದು ಅಮೆರಿಕ ಕೇಂದ್ರ ಚಿಂತನೆಗೆ ತಿಳಿಯಬೇಕಾದರೆ ಅವರು ಇನ್ನೂ ಒಂದು ಶತಮಾನಕಾಲ ಸಂಶೋಧನೆ ಮಾಡಬೇಕಾಗುತ್ತದೆ !

**೧. ೧೦ ಜಾನಪದ ವಿದ್ವಾಂಸ**

ನಮ್ಮಲ್ಲಿ ಜಾನಪದ ವಿದ್ವಾಸನೆಂಬುವನೊಬ್ಬ ಇದ್ದಾನೆ. ಈತ ಆಂಗ್ಲ ಜಾನಪದ ಪರಿಕಲ್ಪನೆಯನ್ನು ಕನ್ನಡಕ್ಕೆ ಅನುವಾದಿಸುವಾತ ಇಲ್ಲವೆ ತನ್ನದೆಂಬ ಜಾನಪದ ಮೊಟ್ಟೆಯ ಮೇಲೆ ಕೂತೂ ಮರಿಮಾಡದಾತ. ನವೋದಯ ಸಾಹಿತಿಗಳು ಮತ್ತು ಗ್ರಾಮ ಕೇಂದ್ರಿತ ಜ್ಞಾನ ಪದ್ದತಿಯಿಂದ ಬಂದ ಹಿರಿಯರ ನಂತರ ಜಾನಪದ ಸಂಗ್ರಹ ಕುಸಿದಿದೆ. ಅಧ್ಯಯನ ಹೆಚ್ಚಿದೆ ಎನ್ನುವಾಗಲೂ ಅದು ಪದ್ಧತಿ ಬದ್ಧ (Methodological) ವಾಗಿದೆಯೇ ಹೊರತು ಸೃಜನಶೀಲ

(Innovative) ಆಗಿಲ್ಲ. ಹಿರಿಯರು ಜಾನಪದದಲ್ಲಿ ಇರುವುದನ್ನೆಲ್ಲ ಮೇಲೆತ್ತಿ ಹಾಡಿದರು. ಹೊಸ ತಲೆಮಾರಿನವರು ಅದರೊಳಗೆ ಕಳ್ಳನಂತೆ ಅಡಗಿ ಕುಳಿತಿರುವ ಜಾತಿ, ಮತ ಮತ್ತು ಧರ್ಮದ ಶೋಷಣಾ ಮುಖವನ್ನು ಬೆಳಕಿಗೆ ಹಿಡಿದರು. ಸ್ತ್ರೀ ಮತ್ತು ಬಡವರ ಶೋಷಣೆ ಮತ್ತು ಮೂಢ ನಂಬಿಕೆಗಳು ಈ ಮೇಲೆದ್ದು ತೇಲುವ ಕಸದಿಂದಾಗಿ ಮೂಲ ಸೆಲೆಯಾದ ತಿಳಿಜಲವೆಂಬ ಜಾನಪದ ನೆಲದೊಳಗೆ ಇಂಗಿ ಹೋಗುವಂತಾಯಿತು. ಸಕಾಲಿಕ ಜಾನಪದವನ್ನು ಅಧ್ಯಯನ ಮಾಡಿದ ವಿದ್ವಾಂಸರು ನಿರಂತರ ಕಾಲದ ಜಾನಪದವನ್ನು ಶೋಧಿಸಿ ಸಮಾಜದ ಮುಂದೆ ಇಡಲು ಅಸಮರ್ಥರಾದರು. ಈ ಹೊತ್ತಿಗೂ ಜಾನಪದವೆಂದರೆ ಜನಪದ ಕಲೆ ಎಂದು ತಿಳಿದಿರುವ ಬಹು ಜನರ ಜನಪ್ರಿಯ ಒಪ್ಪಿಗೆಯನ್ನು ಇತ್ತೀಚಿನ ವಿದ್ವಾಂಸರು ತಿದ್ದಲು ಸಾಧ್ಯವಾಗಿಲ್ಲ. ''ಜನವಾಣಿ ಬೇರು, ಕವಿವಾಣಿ ಹೂವು'' ಎಂದು ಬಿಎಂಶ್ರೀಯವರು ಜನಪದ ಸಾಹಿತ್ಯಕ್ಕೆ ಚಕ್ರವರ್ತಿ ಪಟ್ಟ ತಂದುಕೊಟ್ಟ ಮನ್ವಂತರ ದೊಡ್ಡ ಜಾನಪದ ಸಾಧನೆ. ಆನಂತರದಲ್ಲಿ ಜಾನಪದ ನಮ್ಮ ಪಾರಂಪರಿಕ ಜ್ಞಾನ-ವಿಜ್ಞಾನ ಎಂಬ ದೊಡ್ಡ ಅರಿವನ್ನು ಮೂಡಿಸಿದ್ದಾಗಿದ್ದಲ್ಲಿ ನಮ್ಮ ಜಾನಪದ ಅಧ್ಯಯನ ಇಷ್ಟು ಹೊತ್ತಿಗೆ ಜಾಗತಿಕ ಜ್ಞಾನದ ಜೊತೆಗೆ ಪೈಪೋಟಿಗೆ ನಿಲ್ಲುತ್ತಿತ್ತು. ನಮಗೆ 'ದಂ' ಇಲ್ಲ ಎಂದುಕೊಳ್ಳೋಣವೆ ? ಈಗ ನಮ್ಮ ಜಾನಪದ ವಿದ್ವಾಂಸರು ಮೈ ಕೊಡವಿ ಎದ್ದರೆ ಸಾಲದು ಮನಸ್ಸಿಗೆ ಮೆತ್ತಿಕೊಂಡಿರುವ ಜಾತಿ, ಮತ ಮತ್ತು ವಸ್ತು ಸಂಸ್ಕೃತಿಯ ಅವಸರದಿಂದ ಹೊರಬರಬೇಕು. ಜಾನಪದವೂ ಅಧ್ಯಯನವೆಂಬ ಗೌಡಿಕೆಯಲ್ಲಿ ಅವಸಾನಗೊಳ್ಳದಿರಲಿ, ಮಾನವತೆಯ ಮಾಧುರ್ಯದಲ್ಲಿ ಅರಳಲಿ ! ಈಗ ಜಾನಪದ ಅಕಾಡೆಮಿ ಜಾನಪದ ಜ್ಞಾನ-ವಿಜ್ಞಾನ ಶೋಧದಲ್ಲಿ ತೊಡಗಿದೆ.

ಭಾರತದ ಜಾನಪದ ವಿದ್ವಾಂಸನಿಗೆ ಅಮೆರಿಕಾದ ಜಾನಪದ ವಿದ್ವಾಂಸನಿಗಿಂತ ಬೇರೆಯಾದ ಜವಾಬ್ದಾರಿಗಳಿವೆ. ಅಮೆರಿಕೆಯ ಜಾನಪದ ವಿದ್ವಾಂಸ ತನ್ನ ದೇಶಕ್ಕಾಗಿ ಪ್ರಪಂಚದ ಜ್ಞಾನವನ್ನು ಸಂಗ್ರಹಿಸಿ ಕೂಡಿ ಹಾಕಿಕೊಳ್ಳುವನು. ಆತ ಭವಿಷ್ಯದ ಎಲ್ಲ ಅವಘಡಗಳನ್ನು ಗೆಲ್ಲಬೇಕೆಂಬ ಭವಿಷ್ಯವಾದಿ, ಅದಕ್ಕಾಗಿ ಪ್ರಪಂಚದ ಎಲ್ಲ ಜ್ಞಾನ ಮಾದರಿಗಳು ಅವನ ವಸ್ತು ಮತ್ತು ಜ್ಞಾನ ಸಂಗ್ರಹಾಲಯದಲ್ಲಿ ಕೂಡಿ ಹಾಕಲ್ಪಟ್ಟಿವೆ. ಈ ಎಲ್ಲವನ್ನೂ ಅವನು ಡಾಲರ್ ಆಗಿ ಪರಿವರ್ತಿಸಬಲ್ಲ. ಅದು ಅವನ ದೇಶೀಯತೆ.

ಪುರದ ಪುಣ್ಯ

ನಮ್ಮ ಜಾನಪದ ಸಂಗ್ರಾಹಕ ಮತ್ತು ವಿದ್ವಾಂಸ ಯೂರೋ-ಅಮೆರಿಕನ್ ಕೇಂದ್ರ ಚಿಂತನೆಯ ಪ್ರೇಮ್ನೊಳಗೆ ನಿಷ್ಠಾವಂತ ಅಕೆಡಮಿಕ್ ತಜ್ಞನಾಗಿ Yadv ಕೂರುವಂತಿಲ್ಲ. ನಮ್ಮ ಜಾನಪದಗಳ ಅಧ್ಯಯನಕಾರನಾಗಿಯೂ, ಪ್ರವರ್ಧಕನಾಗಿಯೂ ಕೆಲಸ ಮಾಡಬೇಕು. ನಮ್ಮ ವಿದ್ವಾಂಸರನ್ನು ಈ ಅಕಡೆಮಿಕ್ ಶೈಲಿ ಎಷ್ಟು ಹೆಳವರನ್ನಾಗಿ ಮಾಡಿದೆ ಎಂದರೆ ಅಕಡೆಮಿಷಿಯನ್ ಒಬ್ಬ ರಿಫಾರರ್ ಆಗಕೂಡದು ಎಂದು ತಮ್ಮ ಮನಸ್ಸನ್ನು ಬ್ಲಾಕ್ ಮಾಡಿಕೊಂಡು ಬಿಟ್ಟಿದ್ದಾರೆ. ಈ ಮಾನಸಿಕ ಬ್ಲಾಕ್ ಮತ್ತು ಲಾಕ್‌ನ ಹೊರಗೆ ಬಂದು ನಮ್ಮ ತಜ್ಞರು ಕ್ಲಾಸ್ ಮಾಡುವ ಕೂಲಿಗಳಾಗದೆ ಜೀವನದರ್ಶನ ಕೊಡುವ ಭಾಗ್ಯಶಾಲಿಗಳಾಗಲಿ.

**ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ**

**ಪರಿಜನದ ಭಾಗ್ಯವಡವಿಗೆ ನಡೆಯುತಿದೆ...**

ರಾಘವಾಂಕ

ಇದು ಜಾನಪದ : ಜ್ಞಾನ-ವಿಜ್ಞಾನ ಶೋಧ ಮಾಲಿಕೆಯ ಪುಸ್ತಕ. ಇದೇನಿದು, ಜಾನಪದದವರು ಎತ್ತೆತ್ತಲೋ ಕೈ ಹಾಕುತ್ತಿದ್ದಾರೆ. ಜ್ಞಾನ-ವಿಜ್ಞಾನಕ್ಕೂ, ಜಾನಪದಕ್ಕೂ ಎತ್ತಣ ಸಂಬಂಧ. ಇದು ಅತಿ ವ್ಯಾಪ್ತಿ, ಅತಿಯಾಸೆಯ ಪ್ರಾಪ್ತಿ - ಹೀಗೆ ಏನೇನೋ ಅನಿಸಿದರೆ, ಸ್ವಲ್ಪ ನಿಲ್ಲಿ ! ಜಾನಪದ ಹಳೆಯದು, ಆದಿಕಾಲದ್ದು, ಅನಾಗರಿಕವಾದದ್ದು, ಹಳ್ಳಿಗಾಡಿನದು, ಪಳಯುಳಿಕೆ, ಜೀವಂತ ಪಳಯುಳಿಕೆ ಯಾವತ್ತಾದರೂ ಒಂದು ದಿನ ಅಳಿದು ಹೋಗುವಂಥದು, ಸಾಯುವ ಮುನ್ನ ಅದನ್ನು ಸಂಗ್ರಹಿಸಿಟ್ಟುಕೊಳ್ಳಬೇಕು - ಹೀಗೆ ಹೇಳುತ್ತಾ ಹೋದರೆ ಸಮಾಧಾನ ಆಗಬಹುದೆ ?

ಜ್ಞಾನ, ಅನುಭವ ಮತ್ತು ಪ್ರಯೋಗದಿಂದ ಪ್ರಾಪ್ತವಾಗುತ್ತದೆ. ಅನುಭವ ಗ್ರಹಿಕೆ ಮತ್ತು ಅನುಸರಣೆಯಿಂದ ಸಿದ್ಧವಾಗುತ್ತದೆ. ಅನುಸರಣೆಯಲ್ಲಿ ಪ್ರಯೋಗಾತ್ಮಕತೆ ಕೂಡ ಇದೆ. ನಮ್ಮ ಜನಪದ ಆಹಾರ ಮತ್ತು ಔಷಧ ಪದ್ಧತಿಗಳು ಅನುಭವದಿಃದ ಸಿದ್ಧವಾದವು ಎಂದಾಗ ಅವು ನಿರಂತರ ಪ್ರಯೋಗದಿಂದ ಬಳಕೆಗೆ ಬಂದಿವೆ. ಜನಪದ ವಸತಿ, ಉಡುಪು, ಪಾತ್ರೆ ಪಗಡಿ, ವ್ಯವಸಾಯ ಉಪಕರಣಗಳು, ಆಯುಧಗಳು, ಅಲಂಕಾರಿಕ ವಸ್ತುಗಳು, ವ್ಯಾಯಾಮ ಪದ್ಧತಿಗಳು, ಕುಟ್ಟಿ ಬೀಸುವ ಪದ್ಧತಿಗಳು, ಯುದ್ಧತಂತ್ರಗಳು, ಮಳೆ, ಭೂಮಿ ಮತ್ತು ವಾತಾವರಣಕ್ಕೆ ಸಂಬಂಧಿಸಿದ ಅರಿವು, ಸಾಗಣೆ ಸಾಧನಗಳು, ದವಸ ಧಾನ್ಯ ಸಂರಕ್ಷಕ ಪದ್ಧತಿಗಳು, ಕುಯ್ದು ಮತ್ತು ಕತ್ತರಿಸುವ ಸಾಧನಗಳು, ಜಲ ಸಂರಕ್ಷಣೆ ಮತ್ತು ಜಲವಾಹಕ ಪದ್ಧತಿಗಳು, ಬೇಟೆಯ

ವಿಧಾನಗಳು, ಲೋಹ ಪರೀಕ್ಷೆ, ಲೋಹ ಪರಿವರ್ತನೆ ಮತ್ತು ಲೋಹ ಸಂಯೋಗ ವಿಧಾನಗಳು, ಪ್ರಾಣಿ ಪಳಗಿಸುವಿಕೆ, ಸಂರಕ್ಷಣೆ ಮತ್ತು ಅಭಿವೃದ್ಧಿ ವಿಧಾನಗಳು, ಋತುಸ್ರಾವ, ಹೆರಿಗೆ ಮತ್ತು ಮಕ್ಕಳ ಸಂರಕ್ಷಣಾ ವಿಧಾನಗಳು, ಸಸ್ಯ ಮತ್ತು ಬೀಜ ಉತ್ಪತ್ತಿ ಹಾಗೂ ಸಂರಕ್ಷಣಾ ಪದ್ಧತಿಗಳು - ಇವೆಲ್ಲ ಜನಪದ ವಿಜ್ಞಾನ ಪದ್ಧತಿಯಲ್ಲಿ ಸೇರಿದುವು ಮತ್ತು ನಿರಂತರ ಪ್ರಯೋಗದಿಂದ ಒಪ್ಪಿತವಾದುವು. ಒಂದು ಪದ್ಧತಿಯಲ್ಲಿ ಲೋಪವಿದ್ದಲ್ಲಿ ಅದು ತಿದ್ದುವ ಪ್ರಯೋಗಶೀಲತೆಗೆ ಒಳಪಟ್ಟಿರುತ್ತದೆ. 'ಪ್ರಯತ್ನ ಮತ್ತು ತಪ್ಪು' ತತ್ವದ ಮೂಲಕವೇ ಜನಪದ ವಿಜ್ಞಾನ ಬೆಳೆದು ಬಂದಿದೆ. ಇದು ಅನೇಕ ಶತಮಾನಗಳ ಜ್ಞಾನ.

ಜ್ಞಾನ ಮತ್ತು ವಿಜ್ಞಾನ ಬೇರೆಯಲ್ಲ. ಈಗಾಗಲೇ ಶತಮಾನಗಳ ಅರಿವಿನಲ್ಲಿ ಸೇರಿ ಹೋಗಿರುವ ಎಲ್ಲವೂ ಜ್ಞಾನವೇ. ಇದರೊಳಗೆ ವಸ್ತುಜ್ಞಾನ ಮತ್ತು ವಿಷಯಜ್ಞಾನಗಳೆರಡೂ ಸೇರಿವೆ. ವಸ್ತುಜ್ಞಾನವೆಂಬುದು ಭೌತಿಕ ವಸ್ತುಗಳ ಬಳಕೆಗೆ ಸಂಬಂಧಿಸಿದ್ದು, ವಿಷಯಜ್ಞಾನವೆಂಬುದು ಭೌತಿಕ ಜ್ಞಾನವನ್ನು ಸಾಮಾಜಿಕ ಜ್ಞಾನವಾಗಿ ಪರಿವರ್ತಿಸಿಕೊಂಡು ಬಾಳುವೆ ಮಾಡುವುದಕ್ಕೆ ಸಂಬಂಧಿಸಿದ್ದು. ಭೌತಿಕ ಮತ್ತು ಸಾಮಾಜಿಕ ಜ್ಞಾನವನ್ನು ಸೂಕ್ತವಾದ ಆವರಣದಲ್ಲಿ ಇರಿಸಿ ಮೌಲಿಕವಾಗಿಸುವುದು ಸಂಸ್ಕೃತಿ, ಅಂದರೆ, ಸಂಸ್ಕೃತಿಯ ಒಳಗೆ ಎಲ್ಲ ಜ್ಞಾನಗಳೂ ಸೇರಿವೆ. ಸಂಸ್ಕೃತಿ ಆ ಜ್ಞಾನವನ್ನು ವಿವೇಕದಿಂದ ಬಳಸಿಕೊಳ್ಳಬೇಕೆಂದು ಹೇಳುತ್ತದೆ. ಓಡುವ ನದಿಗೆ ಅಣೆಕಟ್ಟು ಕಟ್ಟಿ ವಿವಿಧೋದ್ದೇಶಗಳಿಗೆ ಬಳಸಿಕೊಳ್ಳುವಂತೆ ಪ್ರಕೃತಿಜ್ಞಾನವನ್ನು ಸಾಮಾಜೀಕರಣಗೊಳಿಸಿ ಬಳಕೆಗೆ ಯೋಜಿಸುವುದು ಸಂಸ್ಕೃತಿಯ ಕಾರ್ಯ.

ಹಾಗಿದ್ದಲ್ಲಿ ವಿಜ್ಞಾನ ಎಂದರೆ, ವಿಶೇಷ ಜ್ಞಾನ ಎಂಬ ಪ್ರತ್ಯೇಕ ಜ್ಞಾನ ಪರಿಕಲ್ಪನೆ ಬಂದದ್ದು ಯಾಕೆ ? ಮತ್ತು ಹೇಗೆ ? ಈ ಪರಿಕಲ್ಪನೆಯಿಂದ ಜ್ಞಾನ ಎಂಬುದು ಸಾಧಾರಣವಾದುದು, ವಿಜ್ಞಾನ ಎಂಬುದು ಅಸಾಧಾರಣವಾದುದು ಎಂಬ ಧ್ವನಿ ಹುಟ್ಟುತ್ತಿದೆ. ಈ ಎರಡರ ಮಧ್ಯದ ವ್ಯತ್ಯಾಸ ಏನು ? ಜ್ಞಾನ ಸಾರ್ವಕಾಲಿಕ, ಸರ್ವಮಾನ್ಯ, ಸಾಮಾನ್ಯ ಬಳಕೆಗೆ ಸೇರಿದ್ದು ಎಂಬುದು ನಮ್ಮ ಶತಮಾನಗಳ ಬದುಕಿನ ಅನುಭವದಿಂದ ತಿಳಿಯುತ್ತಿದೆ. ಹಾಗಿದ್ದಲ್ಲಿ ವಿಜ್ಞಾನ ? ಅದರ ಹುಟ್ಟೇ ಹೇಳುವಂತೆ ಅದು ಮಾರುಕಟ್ಟೆ ಮತ್ತು ಲಾಭ (Market and Profit) ಪರಿಕಲ್ಪನೆಯಲ್ಲಿ ಜನ್ಮ ತಾಳಿದೆ. ಈ ಮಾರುಕಟ್ಟೆ ಮತ್ತು ಲಾಭ ಎಂಬುದು ಉದ್ಯಮಪತಿಯು ಹುಟ್ಟುಹಾಕಿದ ಸಂಪತ್ತಿನ ನೆಲೆಗಳು. ಅಂದರೆ ಸಾಮಾನ್ಯ ಬದುಕಿನ ಹೊರಗೆ ಸಂಪತ್ತಿನ ಕೇಂದ್ರಗಳನ್ನು ರೂಪಿಸಲಾಗಿದೆ.

ವಿಜ್ಞಾನದ ಜ್ಞಾನ ಎಲ್ಲರಿಗೆ ಸೇರಿದ್ದು, ಅದರ ಅಪ್ರತಿಮ ಪ್ರತಿಫಲ ಉದ್ಯಮಿಗೆ ಸೇರಿದೆ. ವಿಜ್ಞಾನದ ಶೋಧ ನಡೆದದ್ದೇ ಉದ್ಯಮ ಕೇಂದ್ರೀಕರಣಕ್ಕೆ. ಅಂದರೆ ಶ್ರೇಷ್ಠ ವಸ್ತುಗಳ ಶೋಧ, ಹೆಚ್ಚು ಉತ್ಪತ್ತಿ ಮತ್ತು ಹೆಚ್ಚಿನ ಲಾಭಕ್ಕಾಗಿ, ವಸಾಹತು ಸಾಮ್ರಾಟನಾಗಿದ್ದ ಇಂಗ್ಲೆಂಡಿಗೆ ಜಾಗತಿಕ ಮಾರುಕಟ್ಟೆಯನ್ನು ಸೃಷ್ಟಿಸಿ ಸಂಪತ್ತು ಹರಿದು ಬರುವಂತೆ ಮಾಡಿಕೊಳ್ಳಲಾಯಿತು. ಹೊಸ ಹೊಸ ಉತ್ಪನ್ನಗಳು ಮಾರುಕಟ್ಟೆಗೆ ಬಂದವು. ಜನ ಮೋಹಗೊಂಡರು, ಕೊಂಡರು. ಉದ್ಯಮಪತಿಯನ್ನು ಸಂತುಷ್ಟಗೊಳಿಸಿದರು. ಆತ ಆಡಳಿತ ಮತ್ತು ಅದರ ಪ್ರಭುಗಳನ್ನು ಸಂತುಷ್ಟಪಡಿಸಿದ. ಆಸೆ ಮತ್ತು ವಿಸ್ತರಣಾ ಮನೋಭಾವ ಹೆಚ್ಚಾಯಿತು. ಯುದ್ಧಗಳು ಹೆಚ್ಚಾದವು. ಆಡಳಿತ ಕೃಷಿ ಉದ್ಯಮಪತಿಯಿಂದ ಕೈಗಾರಿಕಾ ಉದ್ಯಮಪತಿಗೆ ವರ್ಗಾವಣೆ ಹೊಂದಿತು. ಉತ್ಪತ್ತಿ ಮತ್ತು ಬಳಕೆ ಕಡ್ಡಾಯವಾಯಿತು. ಉತ್ಪತ್ತಿ ಮಾಡಿದ್ದಕ್ಕಾಗಿ ಗ್ರಾಹಕ ಕೊಳ್ಳಲೇಬೇಕಾದ ಸ್ಥಿತಿ ನಿರ್ಮಾಣವಾಯಿತು. ಗ್ರಾಹಕ ಪರಿಕಲ್ಪನೆ ವ್ಯಕ್ತಿಯಿಂದ ಸಮೂಹಕ್ಕೆ, ಸಮೂಹದಿಂದ ದೇಶಕ್ಕೆ ವರ್ಗಾಯಿಸಲ್ಪಟ್ಟಿತು. ಇಂಗ್ಲೆಂಡಿಗೆ ಅದರ ವಸಾಹತು ದೇಶಗಳು ಕಡ್ಡಾಯ ಗ್ರಾಹಕರಾದವು. ಸಂಪತ್ತು ಪೂರ್ವದಿಂದ ಪಶ್ಚಿಮ ದೇಶಗಳ ಕಡೆಗೆ ದಾಟಿತು. ಇದರ ಪರಿಣಾಮವಾಗಿ ಪ್ರಪಂಚದಲ್ಲಿ ಒಂದನೆ ಜಗತ್ತು ಎರಡನೆಯ ಜಗತ್ತು ಮತ್ತು ಮೂರನೆಯ ಜಗತ್ತು ಎಂಬ ರಾಷ್ಟ್ರಗಳ ವಿಂಗಡಣೆಯಾಯಿತು. ಒಟ್ಟಾಗಿದ್ದ ಜಗತ್ತು ಉದ್ಯಮಪತಿ ಮತ್ತು ಅವನ ಸ್ನೇಹಿತ ಆಡಳಿತ ಪತಿಯಿಂದಾಗಿ ಹೀಗೆ ಒಡೆದುಕೊಂಡಿತು. ಉದ್ಯಮ ಮತ್ತು ಆಡಳಿತದ ಸಂರಕ್ಷಣೆಗಾಗಿ ನಗರ ಕೇಂದ್ರಗಳು ಹುಟ್ಟಿಕೊಂಡವು. ಸಂಪತ್ತು ಮತ್ತು ಆಡಳಿತ ನಗರದಲ್ಲಿ ಕೇಂದ್ರೀಕೃತವಾಯಿತು. ಜನ ಈ ಕೇಂದ್ರದ ಕಡೆಗೆ ವಲಸೆ ಹೊರಟರು. ಅವರ ಜೊತೆಗೆ ಕಾಡು, ನಾಡು ನಗರ ಸೇರಿದವು. ಇಷ್ಟೆಲ್ಲ ವಿಜ್ಞಾನದ ಕೊಡುಗೆ.

ವಿಜ್ಞಾನದಿಂದ ಹೊಸ ವಸ್ತುಗಳು ಜಾತಿ, ಪಂಥ, ವರ್ಗ, ಪಂಗಡ, ಧರ್ಮ ರಹಿತವಾಗಿ ಎಲ್ಲರನ್ನೂ ತಲುಪಿದವು. ಸಂಸ್ಕೃತಿಯೊಂದರ ಹೊರಗೆ ಉತ್ಪನ್ನವಾಗುವ ವಸ್ತುಗಳಿಗೆ ಯಾವುದೇ ಜಾತಿ-ಧರ್ಮದ ಅಂಟು ಇರುವುದಿಲ್ಲ. ಅವು ಪ್ರವೇಶಿಸಿದ ಸಂಸ್ಕೃತಿಯನ್ನು ಪ್ರಶ್ನಿಸುತ್ತವೆ, ಸಡಿಲಗೊಳಿಸುತ್ತವೆ ಮತ್ತು ಸಂಸ್ಕೃತಿಯ ಪುನರ್ ನಿರ್ಮಾಣಕ್ಕೆ ಕಾರಣವಾಗುತ್ತವೆ. ಭಾರತದಂಥ ಜಾತಿನಿಷ್ಠ ದೇಶಕ್ಕೆ ಇವುಗಳ ಆಗಮನ ಒಂದು ವರವಾಗಿಯೇ ಪರಿಣಮಿಸಿತು. ಉತ್ಪತ್ತಿ ಮತ್ತು ಬಳಕೆ ವಿಷಯದಲ್ಲಿ ಕೆಳ ಹಾಗೂ ದಲಿತ ವರ್ಗಕ್ಕೆ ಹಾಕಿದ್ದ ನಿರ್ಬಂಧ ಸಡಿಲವಾಯಿತು. ಇಂಥ ವೈಜ್ಞಾನಕ ಉತ್ಪನ್ನಗಳು ಕೇವಲ ಭೌತಿಕ ಸಾಮಗ್ರಿಗಳಾಗಿ ಬರದೆ ಬಿಡುಗಡೆಯ ವೈಚಾರಿಕ

ಚಿಂತನೆಗಳಾಗಿ ಬಂದವು. ಇದರಿಂದ ಕೆಳ ವರ್ಗದ ಜನ ಮಾನಸಿಕವಾಗಿ ಬಿಡುಗಡೆಗೊಂಡರು. ಆದರೆ ಅವರ ಉತ್ಪತ್ತಿಯ ಸ್ಥಾನ-ಮಾನವೇನೂ ಬದಲಾಗಲಿಲ್ಲ. ವಿಜ್ಞಾನ ಹುಟ್ಟಿಸಿದ ವ್ಯವಸ್ಥೆ ಮತ್ತು ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಸಂಸ್ಥೆಗಳಲ್ಲಿ ಹಲವರಲ್ಲಿ ಕೆಲವರಿಗೆ ಉದ್ಯೋಗದಂಥ ವಿಶೇಷ ಸೌಲಭ್ಯಗಳು ದೊರೆತವು. ಇದರಿಂದ ಪ್ರತಿಯೊಂದು ಜಾತಿ, ಧರ್ಮ ಮತ್ತು ಪಂಗಡಗಳಿಂದ ವಿಶೇಷ ವರ್ಗವೊಂದು ಹುಟ್ಟಿಕೊಂಡಿತು. ಭಾರತದಲ್ಲಿ ಅಕ್ಷರ ಕೈಗಾರಿಕೆಯಿಂದ ಉತ್ಪನ್ನವಾದ ಬ್ರಾಹ್ಮಣರು ಎಂಬ ಒಂದು ವರ್ಗ ಶತಮಾನಗಳಿಂದ ಇತ್ತು. ಇವರ ಜೊತೆ ವಿಜ್ಞಾನ ವ್ಯವಸ್ಥೆ ಉಂಟುಮಾಡಿದ ನವಬ್ರಾಹ್ಮಣ ವರ್ಗ ಸೃಷ್ಟಿಯಾಯಿತು. ಹಲವರ ಸೊತ್ತನ್ನು ತಿನ್ನುವ ಕೆಲವರ ಈ ವರ್ಗ ಭಾರತದ ಅಭಿವೃದ್ಧಿಗೆ ಒಂದು ಅಡ್ಡಗಾಲು ಆಯಿತು. ಸ್ವಂತ ಲಾಭಕ್ಕಾಗಿ ಆಡಳಿತಾತ್ಮಕ ಅನಾಚಾರಕ್ಕೆ ಒಳಗಾಗಿ ರಾಜಕಾರಣದ ಗುಲಾಮನಾಯಿತು. ಇದರಿಂದ ಪುರಾತನ ಕೇಂದ್ರೀಕೃತ ಸುಖ ಮತ್ತು ವಿಕೇಂದ್ರೀಕೃತ ಬಡತನ ಭಾರತದ ನಿರಂತರ ಅದೃಷ್ಟವಾಯಿತು.

ನಾನು ಎಲ್ಲಿಗೆ ಬಂದೆ ಎಂದರೆ, ವಿಜ್ಞಾನವೆಂಬುದು ಕೇವಲ ತಂತ್ರಜ್ಞಾನಕ್ಕೆ (Technology) ಸೀಮಿತಗೊಂಡು ಉದ್ಯಮಪತಿ ಮತ್ತು ಆಡಳಿತ ಪ್ರಭುವನ್ನು ಸಂತುಷ್ಟಗೊಳಿಸುವುದಕ್ಕೆ ಸೀಮಿತವಾಯಿತಲ್ಲ ಎಂದು ಹೇಳಲು. ಯಾವುದೇ ದೇಶ ತಂತ್ರಜ್ಞಾನದ ಶೋಧವಿಲ್ಲದೆ ಮುಂದಕ್ಕೆ ಹೋಗದು. ಇತಿಹಾಸದ ಎಲ್ಲ ಅಭಿವೃದ್ಧಿ ಘಟ್ಟಗಳು ಒಂದಿಲ್ಲೊಂದು ಬಗೆಯ ತಂತ್ರಜ್ಞಾನದ ಫಲಶೃತಿಗಳೇ ಆಗಿವೆ. ಆದರೆ 'ಆಧುನಿಕ'ವೆಂಬ ವಿಜ್ಞಾನ ಶೋಧ ಮಾತ್ರ ಯುದ್ಧ ಪ್ರಭುತ್ವವನ್ನು ಸೃಷ್ಟಿಸುವಲ್ಲಿ ದೊಡ್ಡ ಯಶಸ್ಸು ಸಾಧಿಸಿದೆ. ಬಡವರು ಸದಾ ಅಭಿವೃದ್ಧಿಯ ಪಂಚಮಂತ್ರ ಕೇಳಿಕೊಂಡು ಕಾಸಿಲ್ಲದ ಪೂಜೆಯಲ್ಲಿ ತಲ್ಲೀನರಾಗಿದ್ದಾರೆ. ಕೇಂದ್ರೀಕೃತ ತಂತ್ರಜ್ಞಾನದ ಹಣೆಬರಹವೆ ಹೀಗೆ, ಜನರು ತಮ್ಮ ಸೃಜನಶೀಲತೆಯನ್ನು ಮರೆತು ದೈವಕೃಪೆಗೆ ಬದಲಾಗಿ ಕೇಂದ್ರ ಪ್ರಭುವಿನ ಕಡೆಗೆ ಆಸೆಯಿಂದ ಕಣ್ಣೆತ್ತಿ, ಕೈಯೊಡ್ಡಿ ನೋಡುವುದಾಗಿರುತ್ತದೆ.

ವಿಜ್ಞಾನ ಅಪರಾಧವಲ್ಲ. ಅದು ಮಹಾ ಅನ್ವೇಷಣೆ. ಹದಿನೆಂಟನೆಯ ಶತಮಾನದ ಹುಟ್ಟಿನ ಸಂದರ್ಭದಲ್ಲಿ ಅದು ಅನ್ಯತೆಗೆ ಹೆಸರು ಹೇಳಿಸಿಕೊಂಡದ್ದು ದೊಡ್ಡ ಡ್ಡ ಆಘಾತ. ಈ ವಿಜ್ಞಾನ ಅನೇಕ ಶತಮಾನಗಳ ಆಸೆಯ ಫಲ. ಆದರೆ ಅದು ಕೆಲವರಲ್ಲಿ ಆವಿಷ್ಕಾರಗೊಂಡದ್ದು ದೊಡ್ಡ ಅಪರಾಧ. ಹುಟ್ಟುತ್ತಲೆ ಅದನ್ನು 'ಆಧುನಿಕ' ಎಂದು ಕರೆದು ಬೇರೆ ಜನ ಮತ್ತು ತ್ತು ಕಾಲದ ಶೋಧವನ್ನು ಪುರಾತನ ಎಂದು ದೂರ

ಇಡಲಾಯಿತು. ಆಗ ಈ ಜ್ಞಾನ ಎಲ್ಲ ಸಂದರ್ಭದಂತೆ ಹಂಚಿಕೆಯಾಗಲಿಲ್ಲ. ಒಂದು ಕೇಂದ್ರದ ವಶಕ್ಕೆ ಒಳಗಾಯಿತು. 'ಆಧುನಿಕತೆ'ಯ ಅಪರಾಧ ಇರುವುದೇ ಇಲ್ಲಿ ಬೇರೆ ಬೇರೆ ಜ್ಞಾನ ಪದ್ಧತಿಗಳು ಳು ತಮ್ಮ ನೆ ನೆಲೆಯಲ್ಲಿ ವಿಕಾಸ ಹೊಂದದಂತೆ ನೋಡಿಕೊಳ್ಳುವುದು. ಇದನ್ನು ಉದ್ಯಮಪತಿಯ ತಂತ್ರಗಾರಿಕೆ ಎಂದೂ ಹೇಳಬಹುದು. ಎಷ್ಟು ಶತಮಾನಗಳ ಜ್ಞಾನ ಕೊಳೆಗೆ ಬಿತ್ತು, ಜ್ಞಾನದ ಭಯ ನಮ್ಮನ್ನು ಕಾಡಲಿಲ್ಲವಲ್ಲ! ಇಡೀ ಜಗತ್ತು ಈ ತಂತ್ರಗಾರಿಕೆಗೆ ಹೆದರಿ, ಸೋತು ಅಥವಾ ವಿಹ್ವಲಗೊಂಡು ಕೈ ಇಳಿಬಿಟ್ಟು ನಿಂತಿತಲ್ಲ. ಈ ಶರಣಾಗತಿಗೆ ಏನೆನ್ನಬೇಕು ?

ವಿಜ್ಞಾನವೆಂಬ ಯಜಮಾನನಿಗೆ ಅರ್ಥಾತ್ ಜನತೆಯ ಜ್ಞಾನ ಸೊರಗಿ, ಸೋತು ಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈ ಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿ ಹಿಡಿಯಿತು. ಇದೇ ಜನಪದ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತ ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಯಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದರೆ ಈ ಆಧುನಿಕತೆ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನಿರಂತರ ಭಯದಲ್ಲಿ ಇಟ್ಟಿರುತ್ತದೆ.

ನಾನು ಜ್ಞಾನ, ವಿಜ್ಞಾನ ಮತ್ತು ಆಧುನಿಕತೆಯನ್ನು ಬೇರೆ ಬೇರೆ ಪರಿಕಲ್ಪನೆಗಳಾಗಿ ಳಿದ್ದು ಯಾಕೆ ಎಂದು ನಿಮಗೆ ಗೊತ್ತಾಗಿರಬಹುದು. ಜ್ಞಾನ ಎಂಬುದು ತತ್ವಜ್ಞಾನವೂ ಹೌದು, ಧರ್ಮ ಜ್ಞಾನವೂ ಹೌದು. ಹಾಗೆಯೇ ಸಂಸ್ಕೃತಿ ಜ್ಞಾನ ಕೂಡ ಆಗಿದೆ. ವಿಜ್ಞಾನ ಈ ಎಲ್ಲವನ್ನೂ ದೂರ ಇಟ್ಟಿದೆ. ಇಲ್ಲವೆ ತನ್ನ ಕಾರ್ಯಯೋಜನೆಯಲ್ಲಿ ಕೊನೆಯ ಐಟಂ ಐಟಂ ಆದ ಮನರಂಜನೆಯನ್ನಾಗಿ ಮಾಡಿಕೊಂಡಿದೆ. ನಮ್ಮ ಕರ್ನಾಟಕದ ಸಂದರ್ಭವನ್ನೇ ಗಮನಿಸಿ; ಜನಪದ ಕಲೆಗಳನ್ನು ಪ್ರತಿಯೊಂದು ಸಮಾರಂಭದ ಕೊನೆಯ ಮನರಂಜನಾ ಪ್ರದರ್ಶನಗಳನ್ನಾಗಿ ಮಾಡಿಕೊಂಡಿದೆ. ಜನಪದ ಕಲೆಗಳ ಒಳ ಹೊಕ್ಕು ನೋಡಿ; ಅಲ್ಲಿ ಸಮಾಜ ವಿಕಾಸದ ಆಶಯಗಳು ಕಣ್ಣು ಕೋರೈಸುತ್ತವೆ. (ನೋಡಿ : ಜಾನಪದ ತಡಕಾಟ : ೧೯೮೮ : ಹಿಶಿರಾ) ಅಂದರೆ ನಾವು, ಜನಪದರು ವಿಕಾಸದ ದೃಷ್ಟಿಯಿಂದ ಆತ್ಮಹತ್ಯೆ

ಪುರದ ಪುಣ್ಯ

ಮಾಡಿಕೊಂಡಿರುವುದು ಸ್ಪಷ್ಟವಾಗುತ್ತದೆ.

ವಿಜ್ಞಾನ ವಿಶಿಷ್ಟ ಎನ್ನುತ್ತೇವೆ. ಸಹಜವಾಗಿ ವಿಶಿಷ್ಟತೆ ಎಲೈಟ್ ವರ್ಗದ ಸೊತ್ತು. ಅವರು ಮತ್ತೊಂದು ವಿಶಿಷ್ಟತೆಯನ್ನು ಕಂಡುಕೊಳ್ಳದೆ ಮೊದಲ ವಿಶಿಷ್ಟತೆಯನ್ನು ಕೈ ಬಿಡುವುದಿಲ್ಲ. ಅವರು ಕೈ ಬಿಟ್ಟ ಮೇಲೆ ಅದು ಸಾಮಾನ್ಯರಿಗೆ ಬರಬೇಕು; ಟಿ.ವಿ. ಸೆಟ್ ಬಂದ ಮೇಲೆ ರೇಡಿಯೋ ಸೆಟ್ ಹಿಂದೆ ಸರಿದಂತೆ ಅಂದರೆ ವಿಜ್ಞಾನ ಸಂಪತ್ತಿನ ಮೊತ್ತದೊಂದಿಗೆ ನಿರ್ವಚಿಸಲ್ಪಟ್ಟಿದೆ. ಅದು ಕೇವಲ ಜ್ಞಾನವಲ್ಲ ಮೊತ್ತ ಆಧಾರಿತ ಜ್ಞಾನ. ಜನಸಾಮಾನ್ಯರು ಅಂದರೆ ಜನಪದರು ಮೊತ್ತವನ್ನು ಸಂಗ್ರಹಿಸಿಟ್ಟುಕೊಂಡು ಬದುಕಲು ಸಾಧ್ಯವಾಗುವುದಿಲ್ಲ. ಅವರು ಮೊತ್ತವನ್ನು ಹಂಚಿಕೊಂಡು ಬಾಳಿದರು. ಅವರ ಜೊತೆಗೆ ನಾಯಿ, ನರಿ, ಕುರಿ, ಕೋಳಿ, ಕತ್ತೆ, ಹಂದಿ, ಕುದುರೆ... ಎಂಬ ಸಮಸ್ತ ಪರಿವಾರ ಮತ್ತು ಪರಿಸರ ಇದೆ. ಇವೆಲ್ಲವನ್ನು ತಿಂದು ಮೊತ್ತದ ಜನವರ್ಗ ಇದೆ. ಅಂದರೆ ಈಗ ವಿಜ್ಞಾನ ಶೋಷಕನ ಸ್ಥಾನದಲ್ಲಿದೆ. ಪೋಷಕನಾಗಿ ಅಲ್ಲ.

ಈ ವಿಜ್ಞಾನವನ್ನು ನಿರಾಕರಿಸಬೇಕೆ ? ಖಂಡಿತ ಇಲ್ಲ. ವಿಶೇಷ ಎಂಬುದು ಸಾಮಾನ್ಯದ ಮತ್ತೊಂದು ಮುಖ ಎನ್ನುವಂತಿರಬೇಕು. ಅದು ಅಗತ್ಯವಿದ್ದಲ್ಲಿ ಸಾಮಾನ್ಯನಿಗೆ ಸಿಗುವಂತೆ ಇರಬೇಕು; ದಿನಾ ಅನ್ನ ಸಾರು, ಹಿಟ್ಟು, ರೊಟ್ಟಿ, ತಿನ್ನುವವರಿಗೆ ಹಬ್ಬ, ಜಾತ್ರೆಗಳ ಕಾಲದಲ್ಲಿ ಹೋಳಿಗೆ, ಬಾಡಿನೆಸರು ವಿಶೇಷ ಆಗಿರುವಂತೆ. ಅಂದರೆ ನಾವೀಗ ವಿಜ್ಞಾನದ ಸಾಮಾಜೀಕರಣದ ಬಗ್ಗೆ ಮಾತನಾಡಬೇಕು. ವಿಜ್ಞಾನದ ಸಾಮಾಜೀಕರಣ ಒಂದು ಕಾಲದ ಪ್ರಗತಿಪರ ಧೋರಣೆಯಾಗಿತ್ತು. ಜಾಗತೀಕರಣದ ಹೆಜ್ಜೆಗಳಿಗೆ ಕಾಲಿಡುವ ಮುಂಚೆ ಅಭಿವೃದ್ಧಿ ರಾಷ್ಟ್ರಗಳು ತಮ್ಮ ವಿಜ್ಞಾನದ ಜ್ಞಾನವನ್ನೂ ಅದರಿಂದ ಉತ್ಪನ್ನವಾದ ಸಿದ್ಧ ವಸ್ತುಗಳನ್ನೂ ಬೇರೆ ಬೇರೆ ದೇಶಗಳಿಗೆ ಕಳಿಸುತ್ತಿದ್ದವು. ಆಮದು ಮಾಡಿಕೊಂಡ ಅಂಥ ಜ್ಞಾನದಿಂದ ಇತರ ದೇಶಗಳೂ ತಮ್ಮ ಶ್ರಮದಿಂದ ಸಿದ್ಧ ವಸ್ತುಗಳನ್ನು ತಯಾರು ಮಾಡುತ್ತಿದ್ದವು. ಇದರಿಂದ ಸ್ಥಳೀಯ ಉದ್ಯಮಿ, ಕಾರ್ಮಿಕ ಮತ್ತು ಇತರ ಪೋಷಕ ಶ್ರಮಗಳಿಗೆ ಉದ್ಯೋಗ ಸಿಗುವ ಸನ್ನಿವೇಶ ಇತ್ತು. ಸ್ವದೇಶಿ ಕೈಗಾರಿಕೋದ್ಯಮಿಗಳು 'ಭಾರತೀಯನಾಗು; ಭಾರತದ ವಸ್ತುಗಳನ್ನು ಕೊಳ್ಳು' (Be Indian; Buy Indian) ಎಂಬ ಮಾರಾಟ ಸೂತ್ರವನ್ನು ಇಟ್ಟುಕೊಂಡು ಹೊರ ದೇಶದಿಂದ ಬಂದ ಸಿದ್ಧ ವಸ್ತುಗಳ ಜೊತೆಗೆ ಪೈಪೋಟಿ ನಡೆಸುತ್ತಿದ್ದರು. ಈಗ ಜಾಗತಿಕ ಪ್ರಭು ಹೇಳುತ್ತಾನೆ; ನಮ್ಮ ಜ್ಞಾನವನ್ನು ನಿಮಗೆ ಕೊಡುವ ಅವಶ್ಯಕತೆ ಇಲ್ಲ , ಆ ಜ್ಞಾನದಿಂದ ನಾವೇ ಸಿದ್ಧ

ವಸ್ತುಗಳನ್ನು ತಯಾರಿಸುತ್ತೇವೆ. ನೀವು ನಮ್ಮ ವಸ್ತುಗಳಿಗಾಗಿ ಮಾರುಕಟ್ಟೆಯನ್ನು ತೆರೆದುಕೊಡಿ. ಹಾಗೆಯೇ ನಮ್ಮ ವಸ್ತುಗಳು ನಿಮ್ಮ ದೇಶದೊಳಕ್ಕೆ ಬರುವಾಗ ಹಾಕುವ ಒಳಸುಂಕವನ್ನು ಕಡಿಮೆ ಮಾಡಿ. ನಾವು ನಿಮ್ಮ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ವಸ್ತುಗಳನ್ನು ಮಾರಾಟ ಮಾಡುತ್ತೇವೆ. ನೀವು ನಿಶ್ಚಿಂತೆಯಿಂದ ಕೊಳ್ಳುವವರಾಗಿ, ನಾವು ನಿಮಗೆ ಬೇಕಾದುದು ಮತ್ತು ಬೇಡವಾದುದನ್ನೆಲ್ಲಾ ಮಾರುತ್ತೇವೆ ಎನ್ನುತ್ತಿದೆ. ಗು

ಇದರಿಂದಾಗಿ (೧) ಸ್ಥಳೀಯ ಕೈಗಾರಿಕೆ, ಉತ್ಪಾದನೆ, ಕಾರ್ಮಿಕ ಮತ್ತು ಮಾರುಕಟ್ಟೆ ಮಣ್ಣು ತಿನ್ನಬೇಕಾಗುತ್ತದೆ. (೨) ಜಾಗತಿಕ ಪ್ರಭುಗಳ ವಸ್ತುಗಳನ್ನು ಕೊಳ್ಳುವುದಕ್ಕಾಗಿ ನಾವು ನಮ್ಮ ಸಂಪನ್ಮೂಲವನ್ನು ನಿರಂತರ ಮಾರಬೇಕಾಗುತ್ತದೆ. ನಮ್ಮ ಹಳ್ಳಿಗೆ ಮಿಠಾಯಿ ಸಾಬಿ ಬರುತ್ತಿದ್ದ. ಅವನಲ್ಲಿ ಎರಡು ಥರದ ಮಿಠಾಯಿ ಇದ್ದವು. ಒಂದು, ಕಡಲೆ ಮತ್ತು ಬೆಲ್ಲದ ಪಾನಕ ಸೇರಿಸಿ ಮಾಡಿದ್ದು. ಎರಡು, ಕೊಬ್ಬರಿ ಮತ್ತು ಸಕ್ಕರೆಯಿಂದ ಮಾಡಿದ್ದು. ನಾವು ನಮ್ಮ ತೋಟದ ತೆಂಗಿನಕಾಯಿ ಕೊಟ್ಟರೆ ಆತ ಕಡಲೆ ಮಿಠಾಯಿ ಕೊಡುತ್ತಿದ್ದ. ಸಕ್ಕರೆ ಮಿಠಾಯಿ ಕೊಳ್ಳಬೇಕಾದರೆ ನಮ್ಮ ಮನೆಯಲ್ಲಿ ಇರುವ ಹಳೆಯ ಲೋಹದ ಪದಾರ್ಥಗಳನ್ನು ಕೊಡಬೇಕಾಗಿತ್ತು. ಸಕ್ಕರೆ ಮಿಠಾಯಿ ಆಸೆಗಾಗಿ ನಾವು ಮನೆಯ ಹಳೆ ಲೋಹದ ವಸ್ತುಗಳನ್ನು ಕದ್ದು ತಂದು ಕೊಡುತ್ತಿದ್ದೆವು. ಆ ಹಳೆಯ ಸಾಮಾನುಗಳ ನೆಲೆ ಬೆಲೆ ಗೊತ್ತಾಗಿದ್ದು ಅವುಗಳನ್ನು ಹೊರ ದೇಶಗಳಿಗೆ ಕದ್ದು ಮಾರುವವರಿದ್ದಾರೆ ಎಂದು ಗೊತ್ತಾದ ಮೇಲೆ. ಪೈಸೆ ನಾಣ್ಯಗಳು ಬಂದಾಗ ನಗರದ ಕಡೆಯ ಕೆಲವರು ಆ ನಾಣ್ಯಗಳನ್ನು ತಂದು ಹಳ್ಳಿಯ ಲೋಹದ ನಾಣ್ಯಗಳಿಗೆ ಬದಲಿ ಮಾಡಿಕೊಂಡು ಹೋಗುತ್ತಿದ್ದರು. ಬೆಳ್ಳಿ ನಾಣ್ಯಗಳನ್ನು ಕೂಡಿಟ್ಟುಕೊಂಡಿದ್ದ ನಮ್ಮ ಹಳ್ಳಿಯ ಅಜ್ಜಮ್ಮಗಳು ಇದರಿಂದ ಯಾವ ದಡ ತಲುಪಿದರು ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಇದು ಈಗ ಜಾಗತಿಕ ಪ್ರಭುಗಳ ಜಾಗತಿಕ ವಿದ್ಯಮಾನವಾಗಿದೆ.

ಇಂಥ ಸಂದರ್ಭದಲ್ಲಿ ವಿಜ್ಞಾನದ ಸಾಮಾಜೀಕರಣ ಸಾಧ್ಯವೆ ? ಅಭಿವೃದ್ಧಿ ಸೈದ್ಧಾಂತಿಕತೆಯಲ್ಲಿ ಕೊನೆಯ ಮನುಷ್ಯನಿಗೆ ಮೊದಲ ಆದ್ಯತೆ ಇದ್ದಾಗ ಸಾಮಾಜೀಕರಣದಂಥ ತತ್ವಗಳಿಗೆ ಆಸ್ತಿತ್ವವಿರುತ್ತದೆ. ಆದರೆ ಈ ಸಮಾಜವಾದಿ ಸಿದ್ಧಾಂತ ರಷ್ಯದ ಕುಸಿತದೊಂದಿಗೆ ಹಾಗೂ ಚೀನಾದ ಜಾಗತೀಕರಣ ತತ್ವದ ಆಹ್ವಾನದೊಂದಿಗೆ ನೆಲ ಕಚ್ಚಿದೆ. ಈಗ ಏನಿದ್ದರೂ ಮೊದಲಮನುಷ್ಯ ಎಂದರೆ ಉದ್ಯಮಿ. ಆತ ಮುಂಚೂಣಿಯಲ್ಲಿದ್ದಾನೆ. ಈಗ ಇರುವುದೊಂದೇ ತತ್ವ, ಅದು ಮಾರುವುದು. ಉಳ್ಳವರು ದೇವಾಲಯವ ಮಾರುತ್ತಾರೆ, ಇಲ್ಲದವರು ತಮ್ಮನ್ನೇ

ಮಾರಿಕೊಳ್ಳುತ್ತಾರೆ. ಹೊರ ದೇಶದ ಸಿದ್ಧ ವಸ್ತುಗಳಿಗೆ ತಮ್ಮ ಸಂಪನ್ಮೂಲವನ್ನು ಮಾರುತ್ತಿರುವ ದೇಶಗಳವರು ಅದು ಮುಗಿದುಹೋದಾಗ ತಮ್ಮ ದೇಶದ ಜನರನ್ನೇ ಮಾರಬಹುದು. ಒಂದೊಂದು ಕಿಡ್ನಿ ಮಾರಿಕೊಂಡವರ ಒಂದು ಕಾಲೊನಿಯ ಚೆನ್ನೈನಲ್ಲಿ ಇದೆ ಎಂಬುದನ್ನು ಕೇಳಿದಾಗ ಇಂಥ ಘಟನೆ ಸಂಭವಿಸಿದರೆ ಆಶ್ಚರ್ಯ ಇಲ್ಲ, ರಾಜಕಾರಣಿಗಳ ವಿಷಯ ಬಿಡಿ, ಅವರು ಆಗಲೆ ಮಾರಾಟವಾಗಿದ್ದಾರೆ.

ಈಗ ಯಾವ ವಸ್ತು ಮತ್ತು ಅವಕಾಶದ ಸಾಮಾಜೀಕರಣ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆ ನಮ್ಮ ಮುಂದೆ ಇಲ್ಲ. ಇರುವ ಸಂಪತ್ತು ಮತ್ತು ಅನುಕೂಲಗಳನ್ನು ಹಂಚಿಕೊಳ್ಳಲು ಈ ತತ್ವ ಬೇಕು. ಈಗ ಹಂಚಿಕೊಳ್ಳಲು ಏನೂ ಉಳಿದಿಲ್ಲ. ನಿರಂತರ ಉತ್ಪಾದನೆ ಹಾಗೂ ಹೊಸ ಶೋಧಗಳ ಆವಿಷ್ಕಾರ ಇದ್ದಾಗ ಉತ್ಪತ್ತಿಯ ಹೆಚ್ಚಳ ಇರುತ್ತದೆ. ಭಾರತದ ಜನಸಂಖ್ಯೆ, ಸಂಪನ್ಮೂಲ ಮತ್ತು ಉತ್ಪತ್ತಿಯ ಪ್ರಮಾಣಗಳನ್ನು ಗಮನಿಸಿದರೆ ಹಂಚಿಕೊಳ್ಳುವ ಪ್ರಮಾಣದ ಉತ್ಪಾದನೆ ಇಲ್ಲವೆಂದೇ ಹೇಳಬೇಕು. ಈಗ ನಮ್ಮ ಮುಂದೆ ಇರುವುದೊಂದೆ ದಾರಿ. ಈ ಜನಸಂಖ್ಯೆ, ಈ ರಾಜಕೀಯ, ಈ ಜಾತಿ, ಈ ಧರ್ಮಗಳೆಂಬ ದೊಡ್ಡ ಮೊತ್ತ ಮತ್ತು ದೊಡ್ಡ ವಿಪತ್ತುಗಳನ್ನು ಎದೆಯ ಮೇಲೆ ಇಟ್ಟುಕೊಂಡು ಹೆಚ್ಚಿನ ಉತ್ಪಾದನೆಗೆ ತೊಡಗುವುದು ಹೇಗೆ ಎಂಬುದು. ಅಭಿವೃದ್ಧಿ ರಾಷ್ಟ್ರಗಳು ತಮ್ಮ ಸಿದ್ಧ ಸೂತ್ರಗಳ ಜ್ಞಾನವನ್ನು ಹೊರಗೆ ಕೊಡುತ್ತಿಲ್ಲ. ಅದು ಹೋಗಲಿ, ಜಗತ್ತಿನಲ್ಲಿ ಸಿಗಬಹುದಾದ ಉತ್ತಮ ವಸ್ತು ಮೂಲಗಳನ್ನು ಪೇಟೆಂಟ್ ಪಡೆಯುವುದರಲ್ಲಿ ಮಹಾ ಕದೀಮತನ ತೋರುತ್ತಿದ್ದಾರೆ. ಇಂತಹ ಉತ್ತಮವಾದುದನ್ನೆಲ್ಲಾ ಪೇಟೆಂಟ್ ಪಡೆದ ಮೇಲೆ ಉಳಿದ ವಸ್ತುಗಳಿಂದ ಸೃಜನಶೀಲರಾಗುವುದು ಹೇಗೆ ? ಜೊತೆಜೊತೆಯಲ್ಲಿ ಈಗಾಗಲೇ ಉತ್ತಮ ಉತ್ಪಾದನೆ ಮತ್ತು ಜಗತ್ತಿನಾದ್ಯಂತ ಮಾರುಕಟ್ಟೆಯಿರುವ ನಮ್ಮ ವಸ್ತುಗಳ ಉತ್ಪಾದನಾ ಘಟಕಗಳನ್ನು ಮುಚ್ಚಿಸುವ ಹುನ್ನಾರವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿದ್ದಾರೆ. ನಮ್ಮ ರಾಜಕೀಯ ದಲ್ಲಾಳಿಗಳ ನೆರವಿನಿಂದ ಅಂಥ ಉತ್ತಮ ಉತ್ಪಾದನಾ ಕೇಂದ್ರಗಳು ಮುಚ್ಚಿ, ಕಾರ್ಮಿಕರು ಬೀದಿ ಪಾಲಾಗಿ, ನಿರುದ್ಯೋಗ ಸಮಸ್ಯೆಗಳು ಹೆಚ್ಚುತ್ತಿವೆ. ಮತ್ತೊಂದು ಕಡೆ ಭಾರೀ ಸಂಖ್ಯೆಯ ಸಮಾಜ ವಿಜ್ಞಾನ ಹಾಗೂ ನೈಸರ್ಗಿಕ ವಿಜ್ಞಾನದ ಪದವೀಧರರನ್ನು ತಯಾರು ಮಾಡಿ ಬೀದಿಗೆ ಬಿಟ್ಟಿದ್ದೇವೆ. ಅವರಿಗೆ ಕೊಡಲು ಉದ್ಯೋಗಗಳಿಲ್ಲ. ಕೈಗೆ ಕೆಲಸ ಕೊಟ್ಟು ಕ್ರಿಯಾಶೀಲರನ್ನಾಗಿ ಮಾಡಲು ಹೊಸ ಜ್ಞಾನವೂ ಇಲ್ಲ, ಹೊಸ ಸೈದ್ಧಾಂತಿಕತೆಯೂ ಇಲ್ಲ. ಮತ್ತೇನು ಮಾಡಬೇಕು ?

ನಾವು ಹಾಳಾಗಿದ್ದೇವೆ ಎಂಬ ನಿರಾಶಾವಾದ ನನ್ನದಲ್ಲ. ಸ್ವಾತಂತ್ರ ಬಂದ

ಇಲ್ಲಿಯ ತನಕದ ಸಾಧನೆ ಕಡಿಮೆಯದಲ್ಲ. ಭಾರತ ಯಾವ ಹಿಂದಿನ ಶತಮಾನಗಳಲ್ಲೂ ಇಷ್ಟೊಂದು ಸಾಧನೆ ಮಾಡಿದ್ದಿಲ್ಲ. ಹಸಿವಿನಿಂದ ಸಾಯುವ ಪ್ರಕರಣಗಳು ಈಗ ತೀರಾ ಕಡಿಮೆ. ಒಂದು ಸಮೂಹ ಮತ್ತೊಂದು ಸಮೂಹವನ್ನು ಜೀತಕ್ಕೆ ಇಟ್ಟುಕೊಂಡ ಸ್ಥಿತಿ ಈಗ ಇಲ್ಲ. ಊರ ಹೊರಗೆ ಇದ್ದ ಅಸ್ಪೃಶ್ಯ ನಗರದ ಒಳಕ್ಕೆ ಬಂದಿರುವುದು ಅಪ್ರತಿಮ ಸಾಧನೆ ಎಂದು ಹೇಳಲೇಬೇಕು. ಈಗ ಮತೀಯ ರಾಜಕೀಯ ಇದೆ, ನಿಜ; ಆದರೆ ಹಿಂದಿನಂತೆ ಮತೀಯ ಹಿಂಸೆ ಇಲ್ಲ. ಪ್ರಗತಿಯ ಸಾಧನಗಳು ಸಮಾನವಾಗಿ ಅಲ್ಲದಿದ್ದರೂ ಬಡವರ ಕಣ್ಣಿಗೆ ಎಟುಕುವಂತೆ ಇವೆ. ಗುಡಿಸಲುಗಳೇ ಇಲ್ಲದಿದ್ದ ಕಡೆ ಬಂಗಲೆಗಳಿವೆ. ಕಾಲುದಾರಿಗಳು ಇಲ್ಲದಿದ್ದ ಕಡೆ ರಾಜ್ಯ ಹೆದ್ದಾರಿಗಳಿವೆ. ಹಳ್ಳಿಗಳಿಗೆಲ್ಲ ಬಸ್ಸುಗಳು ಓಡಾಡುತ್ತಿವೆ. ಅಜ್ಞಾನ ಓಲಾಡುತ್ತಿದ್ದ ಕಡೆ ತಿಳುವಳಿಕೆಯ ಅಲೆಗಳು ಎದ್ದಿವೆ. ಕಾಡಿನಲ್ಲಿದ್ದವರು ಊರಿಗೆ ಬಂದಿದ್ದಾರೆ. ಊರವರು ನಗರಕ್ಕೆ ಬಂದಿದ್ದಾರೆ. ಮಾನ ಕಳಕೊಂಡಿದ್ದವರು ಪಡೆದುಕೊಂಡಿದ್ದಾರೆ, ಮಾರಿಕೊಂಡಿದ್ದವರು ಮಾರುಕಟ್ಟೆಯಲ್ಲಿದ್ದಾರೆ.

ಸದ್ದು : ಈ ಎಲ್ಲ ಚಲನೆಯ ದಾರಿಗಳೂ ನಮ್ಮೂರಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ದೆಹಲಿಗೆ, ದೆಹಲಿಯಿಂದ ನ್ಯೂಯಾರ್ಕ್ ಕಡೆಗೆ ಹೋಗುತ್ತಿವೆಯಲ್ಲ ಏನಿದರ ಅರ್ಥ ? ಜನಗಳಷ್ಟೇ ಆ ದಾರಿಯಲ್ಲಿ ಹೋಗುತ್ತಿದ್ದಾರೆಯೆ ಅಥವಾ ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ... ಎಂದು ಕವಿ ಹೇಳಿದಂತೆ ಆಗುತ್ತಿದೆಯೆ ? ಸ್ವಲ್ಪ ತಾಳಿ, 'ಕೊಳ್ಳೆ ಹೋದ ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಸ್ಥಿತಿಗೆ ನಾವು ತಲುಪುತ್ತಿದ್ದೇವೆಯೆ ? ಅಥವಾ ಇಂಥಾ ಮಾತುಗಳು ವರ್ತಮಾನದ ವಿರೋಧವೆ, ಭವಿಷ್ಯದ ಕಾಳಜಿಯ ?

ಈಗ ವರ್ತಮಾನ ಮಾತ್ರ ನಿರ್ವಹಿಸಲ್ಪಡುತ್ತಿದೆ, ಮಂಡಿಸಲ್ಪಡುತ್ತಿದೆ ಮತ್ತು ಮುದ್ರಾಂಕಿತವಾಗುತ್ತಿದೆ ಎನಿಸುತ್ತಿಲ್ಲವೆ? ವರ್ತಮಾನ ಯಾರದು ಎಂಬ ಪ್ರಶ್ನೆ ಹಾಕಿಕೊಳ್ಳುವ ಮೂಲಕವೆ ತ್ರಿಕಾಲಬದ್ಧವಾದ ಜಾನಪದವನ್ನು ಅರ್ಥಾತ್ ಜೀವನನಿರಂತರತೆಯನ್ನು ಕಂಡುಕೊಳ್ಳಬೇಕಾಗಿದೆ. ಅಪವಾದಗಳನ್ನೂ ದಾಖಲಿಸಿಕೊಳ್ಳುತ್ತ ವಿವೇಕವನ್ನು ಜಾರದಂತೆ ನೋಡಿಕೊಳ್ಳಬೇಕಾಗಿದೆ. ಆಧುನಿಕೋತ್ತರ ಜಾನಾಂಗಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಚಿಂತನೆಗಳು ಎಲ್ಲಿ ಹೇಗೆ ಮತ್ತು ಯಾರಿಗಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ತಳದಿಂದ ಗ್ರಹಿಸಬೇಕಾಗಿದೆ. ಆಧುನಿಕೋತ್ತರ ಸ್ಥಾನಿಕ ಚಿಂತನೆಯಾದ ಜಾಗತೀಕರಣ ಮೃದಂಗವೋ ಅಥವ ಮರಣ ಮೃದಂಗವೋ ಎಂಬುದನ್ನು ಗ್ಯಾನಿಸಬೇಕಾಗಿದೆ.

ಪುರದ ಪುಣ್ಯ

ಜಾಗತೀಕರಣ ಜಗತ್ತಿನ ಬಾಗಿಲು ತೆರೆದಿದೆ, ಕೆಳವರ್ಗಗಳಿಗೆ ವಿಮೋಚನೆ ಕೊಡುತ್ತಿದೆ, ಅಪಾರ ಸಾಮಗ್ರಿಗಳನ್ನು ಕೈಗಿಡುತ್ತಿದೆ, ಜಾತಿ, ಮತ, ಪಂಗಡ ಮತ್ತು ಪಂಥಗಳೆಂಬ ಕಿರಿದುಗಳನ್ನು ಕಿತ್ತು ಹಾಕಿ ಹಿರಿದೆಂಬ ಅಂಬಾರವನ್ನು ಹೊದಿಸುತ್ತಿದೆ ಎಂಬ ಸ್ವೀಕೃತಿಗಳ ಜೊತೆಗೆ ನಮ್ಮ ನೆಲ, ಜಲ, ಕಾಡು, ಕಾಳು, ಪ್ರಾಣಿ ಪಕ್ಷಿ, ಜೀವಜಾಲ ಎಂಬ ಜೀವಮೂಲಗಳು ಮತ್ತು ಸಂಸ್ಕೃತಿಯ ಹೆಜ್ಜೆಗಳನ್ನು ಅಳಿಸಿ ಹಾಕುತ್ತಿದೆ ಎಂಬ ನಿರಾಕೃತಿಗಳ ಜೊತೆಗೆ ನಾವೂ ಸೇರಿದ್ದೇವೆಯೋ ಅಥವಾ ಇಲ್ಲವೋ; ಹಿರಣ್ಯ ಕಶ್ಯಪ ಭೂಮಿಯನ್ನು ಸುತ್ತಿ ಬಿಸಾಡುವಾಗ ಅವನು ಎಲ್ಲಿ ಇದ್ದ ಎಂಬಂತೆ.

ಇದು ತೀರ ಎಚ್ಚರವೋ ಅಥವಾ ಮತ್ಸರವೋ ಅರ್ಥವಾಗುತ್ತಿಲ್ಲ. ಭೂಮಿ ಮುಳುಗುವಾಗ ಜನಗಳ ಬಗ್ಗೆ ಚಿಂತಿಸದೆ, ತಮ್ಮ ಜಾತಿಯ ಬಗ್ಗೆ ನಿಗಾ ವಹಿಸುವ ಮನಸ್ಥಿತಿಯ ಬಗ್ಗೆ ಏನು ಹೇಳಬೇಕು? ಅಥವಾ ಭೂಮಿ ಮುಳುಗುವುದು ಇಲ್ಲದಿದ್ದರೂ ನಾವು ಅದು ಮುಳುಗುತ್ತದೆ ಎಂದು ಹೆದರಿದ್ದೇವೆಯೊ ಅಥವಾ ಹೆದರಿಸುತ್ತಿದ್ದೇವೆಯೊ, ಇದು ಒಂದು ಕ್ಯಾಪ್ಟಲಿಸ್ಟ್ ಚಿಂತನ ಮಾರ್ಗವೊ ? ಹೌದು, ಮಾರ್ಗಕ್ಕೆ ದೇಶೀ ಕೂಡ ಒಬ್ಬ ಉದ್ಯಮಪತಿ, ಸಾಮಾನ್ಯನಿಗೆ ದೇಶ ದೊಡ್ಡ ಗಂಡ, ಹಾಗಿದ್ದಲ್ಲಿ ನೆಲೆ ಮತ್ತು ಅಭಿವೃದ್ಧಿಯ ಚಾಲನಾ ಕೇಂದ್ರ ಯಾವುದು ? ಅದು ಏಕ ವ್ಯಕ್ತಿಯಲ್ಲಿ ಇಲ್ಲ ; ಸಂಸ್ಕೃತಿ ನೆಲೆಯಲ್ಲಿ ಇದೆ ಎಂಬುದು ನನ್ನ ತಿಳುವಳಿಕೆ. ಈ ಸಂಸ್ಕೃತಿಯ ಹೆಸರಿನಲ್ಲಿಯೆ ಪಂಥ, ಪಂಗಡ ಮತ್ತು ದೇಶದಂಥ ಸಾಮೂಹಿಕ ಪ್ರಯತ್ನಗಳು ಸಾಧ್ಯವಾಗಿರುವುದು. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟಿರುವ ಜನ ತಮ್ಮ ಅಭಿವೃದ್ಧಿಯನ್ನು ಆದಿ ಮಾನವ ಕಲ್ಲು - ಕೋಲು ಹಿಡಿದುಕೊಂಡು ಬೇಟೆಗೆ ಹೊರಟಂತೆ ಗ್ರಹಿಸಲಾಗುವುದಿಲ್ಲ. ಬಹಳ ಕಾಲದ ಬದುಕಿನ ಒಂದು ನಿರ್ದಿಷ್ಟ ಮೊತ್ತವಾದ ಸಂಸ್ಕೃತಿಯ ಸಂರಕ್ಷಣೆ ಮತ್ತು ಚಾಲನೆಯ ಮತ್ತು ಚಾಲನೆಯ ನೆಲೆಯಲ್ಲಿ ವಿಸ್ತರಿಸಿಕೊಳ್ಳಬೇಕಾಗಿದೆ. ಆದ್ದರಿಂದ ಒಂದು ಪಂಗಡದ ಅಥವಾ ದೇಶದ ಸಂಸ್ಕೃತಿಯಲ್ಲಿ ಏನೋ ಊನ ಎಂಬುದು ಇದ್ದಾಗಲೂ ಅದರ ವಿಮರ್ಶೆಯ ಜೊತೆಗೆ, ಅದರ ಹತ್ತಿರದ ಅವಲಂಬನೆಯಿಂದ ಆ ದೇಶ ಮತ್ತು ಜನರ ಅಭಿವೃದ್ಧಿಯ ಬಗ್ಗೆ ಚಿಂತಿಸಬೇಕಾಗುತ್ತದೆ. ಆದ್ದರಿಂದಲೇ ನಾವೀಗ ಜಗತ್ತಿಗೆ ಒಂದು ದೇಶವನ್ನು ಮತ್ತು ಒಂದು ದೇಶಕ್ಕೆ ಒಂದು ಸಂಸ್ಕೃತಿಯನ್ನು ಎದುರು ನಿಲ್ಲಿಸಿ ಅಭಿವೃದ್ಧಿಯ ಸಾಧ್ಯತೆಗಳನ್ನು ಹುಡುಕಿಕೊಳ್ಳಬೇಕಾಗಿದೆ.

ಭಾರತ ತನ್ನೊಳಗೆ ಮತ್ತು ಹೊರಗೆ ಜಾಗತೀಕರಣಕ್ಕೆ ಎದುರಾಗುವ ಮೂಲಕ ತನ್ನ ಜ್ಞಾನದ ಮೊತ್ತವನ್ನು ಒಗ್ಗೂಡಿಸುವ ಮತ್ತು ಅಭಿವೃದ್ಧಿಗೆ ಮುಖ ಕೊಡುವ

ಹೋರಾಟದ ಕೆಲಸಕ್ಕೆ ಕೈ ಹಚ್ಚಲೇಬೇಕಾಗಿದೆ, ಎಂದರೆ ಇಲ್ಲಿಯವರೆಗೆ ಹೊರಗಿನ ಜ್ಞಾನಕ್ಕೆ ನಮ್ಮ ಜ್ಞಾನವನ್ನು ತಾಳೆ ನೋಡಿಕೊಂಡು ದೂರ ಇರಿಸಿಕೊಂಡವೇ ಹೊರತು ಅದನ್ನು ಅದು ಇರುವ ನಲೆಯಿಂದ ಮೇಲೆತ್ತುವ ಕೆಲಸ ಮಾಡಲಿಲ್ಲ. ಈ ಸ್ಥಳೀಯ ಅಥವಾ ಸಾಂಸ್ಕೃತಿಕ ಜ್ಞಾನವನ್ನು ಮೇಲೆತ್ತುವ ಕೆಲಸಕ್ಕೆ ಕೆಲವರು ದೇಶೀ ಎಂದು ಕರೆಯುತ್ತಾರೆ. ಸ್ಥಳೀಯ ಉದ್ಯಮಪತಿಗಳು ಅದನ್ನು ಸ್ವದೇಶಿ ಎಂದು ಕರೆಯುತ್ತಾರೆ. ನನ್ನಂಥ ಸಂಸ್ಕೃತಿಪ್ರಿಯ ಇದನ್ನು ನನ್ನ ಮತ್ತು ನಮ್ಮ ನಿರಂತರ ಹಸಿವು ಮತ್ತು ಅದರ ನಿವಾರಣೆಗೆ ಎಂದು ಕರೆದುಕೊಳ್ಳುತ್ತೇನೆ. ಇದು ಹೊಟ್ಟೆ ಪಾಡಲ್ಲ ; ಜೀವನ ಪಾಡು ಮತ್ತು ನಾವೆಲ್ಲ ಎಂಬುವವರು ಉಳಿಯುವ ಹಾಡು.

ಈ ಕಾರಣಕ್ಕೆ ನಮ್ಮ ಮೊದಲ ಪ್ರಯತ್ನ, ನಮ್ಮದೆಂಬುದು ಏನು ಇತ್ತು ಮತ್ತು ಇದೆ ಎಂಬುದನ್ನು ಒಂದು ಕಡೆಗೆ ತಂದು ನೋಡುವುದು ಅಗತ್ಯವಾಗಿದೆ. ನಮ್ಮ ಹಿರಿಯರು ಮತ್ತು ನಾವು ಬರಿದೆ ತಿನ್ನುತ್ತಾ ಕೂತುದಲ್ಲ ; ನಮಗಾಗುವಷ್ಟು ಮಾನಸಿಕ ಹಾಗೂ ದೈಹಿಕ ಉತ್ಪಾದನೆಯಲ್ಲಿ ತೊಡಗಿದ್ದು ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಒಳಿತು. ಇದರಲ್ಲಿ ವಿಸ್ತಾರವಿದ್ದರೆ ಎತ್ತರಿಸಿಕೊಳ್ಳೋಣ, ಆಗದ್ದು ಆಚೆ ಇರಲಿ. ನಮ್ಮ ಡಿಪಾರ್ಟ್ಮೆಂಟ್‌ಗಳು ಎಷ್ಟು, ಎಲ್ಲಿದ್ದವು ಮತ್ತು ಹೇಗಿದ್ದವು ಎಂಬುದನ್ನು ಪತ್ತೆ ಮಾಡಿಕೊಳ್ಳೋಣ. ಪೂಜಾರಿಯನ್ನೂ, ಪುರೋಹಿತನನ್ನೂ ಆ ಕಡೆಗೆ ಬಿಸಾಡಿರಿ. ನಮ್ಮ ದೇವರು ಮತ್ತು ದೇವಸ್ಥಾನಗಳು ನಮಗೆ ಏನಾಗಿದ್ದವು ನೋಡಿ. ದೇವರೆಂಬುವವನು ನಿಜದ ಸಂಸ್ಕೃತಿಯಲ್ಲಿ ವೈದ್ಯ, ದೇವಸ್ಥಾನವೆಂಬುದು ಉಪಚಾರ ಗೃಹ. ಅದು ಕೇವಲ ಭೌತಿಕ ಉಪಚಾರದ ಮನೆ ಅಲ್ಲ ; ಮಾನಸಿಕ ಒತ್ತಡಗಳ ಚಿಕಿತ್ಸಾ ಗೃಹ. ಎಲ್ಲಮ್ಮ ದೇವಿಯ ಪೂರ್ವ ಪುರಾಣವನ್ನು ತಿಳಿಯಿರಿ. ಆಕೆ ಅಮ್ಮ. ಅಮ್ಮ ಎಂದರೆ ತಾಯಿಯೂ ಹೌದು, ವೈದ್ಯೆಯೂ ಹೌದು. ಅವಳು ಮಕ್ಕಳ ಪೋಷಣೆ ಮಾಡುವ ಮಾರ್ಗದಲ್ಲಿ ಔಷಧೋಪಚಾರ ಹುಟ್ಟಿಕೊಂಡಿತು. ಈಗ ನೂರು ಹಾಸಿಗೆಯ ಆಸ್ಪತ್ರೆ ಕಟ್ಟಿಸಬಹುದು. ಆದರೆ ಮನೆಗೊಂದು ಆಸ್ಪತ್ರೆ ಕಟ್ಟಿಸಲು ಆಗುವುದಿಲ್ಲ. ಬದುಕಿನೊಳಗೇ ಔಷಧವೂ, ಉಪಚಾರವೂ ಇರುವುದು ಒಂದು ಚಿಂತನೆ. ಹದಿನೆಂಟನೆಯ ಶತಮಾನದ ಛಿದ್ರೀಕೃತ ಜ್ಞಾನಪದ್ಧತಿ (Split Knowledge System) ಬರುವವರೆಗೆ ಎಲ್ಲ ಸಂಸ್ಕೃತಿಗಳ ಜ್ಞಾನ ಮಾದರಿಗಳು ಏಕದಲ್ಲಿ ಸೇರಿಕೊಂಡ ಅನೇಕ ತಿಳುವಳಿಕೆಗಳಾಗಿದ್ದವು.

ಏಕದೊಳಗೆ ಸೇರಿಕೊಂಡಿರುವ ಅನೇಕ ಜ್ಞಾನ ಘಟಕಗಳನ್ನು ಪ್ರತ್ಯೇಕ ತೆಗೆದುಕೊಂಡು ತಿಳಿಯುವುದು ಅಪರಾಧವೇನೂ ಅಲ್ಲ. ಸಾರ್ವತ್ರಿಕ ಮಾದರಿಗಳ

ಅಧ್ಯಯನಕ್ಕೆ ಈ ಮಾರ್ಗ ಅತ್ಯುತ್ತಮವಾದುದು. ಸಂಸ್ಕೃತಿ ಮಾದರಿಗಳನ್ನು ತಿಳಿಯುವಾಗ ಅದರ ನೆಲೆ ಮತ್ತು ಐತಿಹಾಸಿಕ ಅನುಭವಗಳಿಗೆ ಮಾನ್ಯತೆ ಕೊಡಲೇಬೇಕು. ಅದಕ್ಕಾಗಿ ಒಂದು ನಾಡು ಅಥವಾ ದೇಶದೊಳಗಿನ ಎಲ್ಲ ಉತ್ಪತ್ತಿಗಳನ್ನು ಮುನ್ನೋಟಕ್ಕೆ ಒಡ್ಡಬೇಕು. ಹೀಗೆಂದಾಗ ಒಬ್ಬರ ಜಾತಿ ಇನ್ನೊಬ್ಬರಿಗೆ ಎದುರಾಗುತ್ತದೆ. ಈ ಜಗಳದಲ್ಲಿ ಯಾರಲ್ಲಿಯೂ ಏನೂ ಇಲ್ಲ ಎಂಬ ತೀರ್ಮಾನ ಸಿದ್ಧವಾಗುತ್ತದೆ. ಇದು ಅತ್ಯಂತ ದುರದೃಷ್ಟಕರ ಸಂಗತಿ. ಜಾತಿ ವಿಕಸನಶೀಲ ಅಲ್ಲ. ಅದು ಶೋಷಣಶೀಲ. ಶೋಷಣೆ ಕೂಡ ಒಂದು ಆರ್ಥಿಕ ತತ್ವ, ಸ್ವಂತ ಉದ್ಧಾರಕ್ಕಾಗಿಯೇ ರೂಪಿಸಿಕೊಂಡ ಜ್ಞಾನದ ತಂತ್ರಗಳು ಅದರೊಳಗೆ ಇವೆ. ಜಾತಿಯನ್ನು ಬಿಟ್ಟು ಅದು ಜೀವನಕ್ಕಾಗಿ ಶೋಧಿಸಿದ ಜ್ಞಾನವನ್ನು ಎತ್ತಿಕೊಳ್ಳಿ. ಅದು ಸಾರ್ವತ್ರಿಕ ಉಪಯೋಗಕ್ಕೆ ಬರುವುದಾದಲ್ಲಿ ಎತ್ತಿಕೊಳ್ಳಬಾರದೇಕೆ ? ಅಂದರೆ, ಜಾತಿ ಆಶಯವನ್ನು ಬಿಟ್ಟು ಅದರೊಳಗೆ ಇದ್ದಿರಬಹುದಾದ ಸಾರ್ವತ್ರಿಕ ಜ್ಞಾನದ ಮಾದರಿಗಳನ್ನು ಆಯ್ದುಕೊಳ್ಳಿರಿ. ಇದು ಸಾಧ್ಯವಾದಾಗಲೇ ಭಾರತವನ್ನು ತನ್ನೊಳಗಿಂದ ಅಭಿವೃದ್ಧಿಪಡಿಸಲು ಸಾಧ್ಯ. ದಲಿತರು ನಮಗೆ ಜಾಗತೀಕರಣವೇ ಉತ್ತಮ, ಅಸ್ಪೃಶ್ಯತೆಯನ್ನು ಆಚರಿಸುವ ಈ ನೀಚರು ಬೇಡ ಎಂದರೆ, ತಳ ವರ್ಗದವರು ನಮ್ಮ ಕೈಗೆ ಹೊರಗಿನ ಸಾಮಗ್ರಿಗಳು ಬರಲಿ, ಈ ಮಾಲೀಕರ ಸಂಘ ಬೇಡ ಎಂದರೆ ಅವರು ತಪ್ಪು ಮಾಡುತ್ತಿದ್ದಾರೆ ಎಂದು ಹೇಳುವಂತಿಲ್ಲ. ನಾನು ಹೇಳುವುದು ಅವರು ಸ್ವೀಕರಿಸಲು ಹೊರಟಿರುವ ಮತ್ತು ನಿರಾಕರಿಸಲು ಹೊರಟಿರುವ ಇಬ್ಬರೂ ಶತ್ರುಗಳು ಬೇಡ ಎನ್ನಬೇಕು. ಆಗ ಮಾತ್ರ ಸ್ವತಂತ್ರ, ಸರ್ವಶಕ್ತ ಮತ್ತು ವಿಕಸನಶೀಲ ಭಾರತವನ್ನು ಕಾಯಲು ಸಾಧ್ಯ ಎಂದುಕೊಂಡಿದ್ದೇನೆ.

ಇದು ಆಂತರಿಕ ಸಮರ್ಥ ಭಾರತವನ್ನು ಕಟ್ಟುವ ಕ್ರಮ ಎಂದು ತಿಳಿಯಬಹುದು. ಆಂತರಿಕದ ಪ್ರಶ್ನೆ ಬಂದಾಗ ಭಾರತದ ಮಟ್ಟದಲ್ಲಿ 'ಅಖಿಲ ಭಾರತ ಸ್ವಭಾವದ ವೈದಿಕ ಸಂಸ್ಕೃತಿ ಮತ್ತು ರಾಜ್ಯಮಟ್ಟದಲ್ಲಿ ಭೂ ಮಾಲೀಕ ಸಂಸ್ಕೃತಿಗಳು ಹೆಚ್ಚು ಕ್ರಿಯಾಶೀಲವಾಗುತ್ತವೆ ಎಂಬ ಆತಂಕ ಅನೇಕ ಚಿಂತಕರಲ್ಲಿ ಇದೆ. ಇದು ಹಾವನ್ನು ಹೊಡೆದು ಹದ್ದಿಗೆ ಹಾಕಿದಂಥ ಜೀವ ವಿರೋಧಿ ಕ್ರಮವಾಗುತ್ತದೆ ಎಂಬುದೂ ಸತ್ಯವೆ. ಈ ಕಾರಣಕ್ಕಾಗಿಯೆ ಭಾರತ ಒಳಮುಖ ಅಭಿವೃದ್ಧಿ ಚಿಂತನೆಯಲ್ಲಿ ತೊಡಗಲು ಸಾಧ್ಯವಾಗಿಲ್ಲ. ಅದು ಹೊರಗಿನಿಂದ ಬರುವ ಸೌಲಭ್ಯಗಳನ್ನು ತರಾತುರಿಯಲ್ಲಿ ಹಂಚಿಕೊಳ್ಳುವ ಪೈಪೋಟಿಯಲ್ಲಿ ತೊಡಗುತ್ತದೆ ಮತ್ತು ತೊಡಗಿದೆ. ಇದೇ ಕಾರಣಕ್ಕೆ ಭಾರತದ ಆರ್ಥಿಕ ಚಟುವಟಿಕೆ ಹಂಚಿಕೆಯ ಸ್ವಭಾವದ್ದಾಗಿದೆ.

ದಲಿತನಿಗೆ ಮೂಲಭೂತ ಸೌಕರ್ಯಗಳನ್ನು ಹಂಚಿದರೆ, ತಳ ಮತ್ತು ಕೆಳವರ್ಗಗಳಿಗೆ ಸರ್ಕಾರದ ಸೌಲಭ್ಯಗಳಲ್ಲಿ ಸರಳವಾದ ಪಾಲನ್ನು ಕೊಡಮಾಡಲು ಹೊರಟರೆ ಸದಾ ಸೌಲಭ್ಯಸುಖಿ ಜನವರ್ಗ ಆಕ್ರೋಶಗೊಳ್ಳುತ್ತದೆ. ಆಧುನಿಕ ಸೌಲಭ್ಯಸುಖಿ ಜನವರ್ಗದಂತೆ ಪುರಾತನ ಸೌಲಭ್ಯಸುಖಿ ಜಾತಿಸಮಾಜ ಸ್ವಲ್ಪ ಕಾಲ ತನ್ನ ಸೌಲಭ್ಯಗಳಲ್ಲಿ ಕಡಿಮೆಯಾದ ಕಾರಣಕ್ಕೆ ದೇಶವೇ ಕಳಚಿ ಬೀಳುವಂತೆ ಬೊಬ್ಬೆ ಹಾಕುತ್ತದೆ. ಕೆಲವರ ಇಂಥ ರಭಸ ಪ್ರವೃತ್ತಿಯನ್ನು ಸಮಾಧಾನಪಡಿಸದೆ ದೇಶದ ಆಂತರಿಕ ಅಭಿವೃದ್ಧಿಯನ್ನು ಮಾಡಲಾಗುವುದಿಲ್ಲ.

ತಿಳಿಯಿರಿ; ಜಾಗತೀಕರಣವೆಂಬುದು ಇಂಥ ಸೌಲಭ್ಯ ಸುಖಿ ಜನರ ಪರವಾಗಿಯೇ ಬರುತ್ತಿರುವುದು. ಅದು ಅವರ ಯೋಗವನ್ನು ಭೋಗವನ್ನು ಖುಲಾಯಿಸುತ್ತದೆ. ಜಾಗತಿಕ ಹೊಸ ಸೌಲಭ್ಯಗಳು ಕೂಡ ಇವರ ಮುಖಾಂತರವೇ ಕೆಳಹಂತದ ಜನರ ಕಡೆಗೆ ತಲುಪಬೇಕಾಗುತ್ತದೆ. ಹಿಂದೆ ಕೂಲಿಯವನಿಗೆ ಗೌಡನ ಮನೆಯ ಹಳೆ ಎಕ್ಕಡ, ಗೌಡನಿಗೆ ಶ್ಯಾನಭೋಗನ ಮನೆಯ ಹಳಸಲು ಪ್ರಸಾದ ಹೊಸಾ ಸ್ವೀಕಾರವಾಗಿರುತ್ತಿದ್ದಂತೆ ಈಗಿನ ಕೆಳ-ತಳವರ್ಗಗಳ ಜನರಿಗೆ, ದಲಿತ ಮತ್ತು ರೈತರಿಗೆ ಜಾಗತಿಕ ಸೌಲಭ್ಯವೆಂಬುದು ದೇಶಶಾಹಿ ಎಂಬುವವರು ಉಂಡು ಉಳಿಸಿದ ಪ್ರಸಾದವಾಗಿರುತ್ತದೆ. ಆದ್ದರಿಂದಲೇ ಎಲ್ಲರೂ ವಿಕಾಸಶೀಲರಾಗಬೇಕಾದ ತಂತ್ರಜ್ಞಾನ, ಆರ್ಥಿಕ ಅಭಿವೃದ್ಧಿ ಯೋಚನೆ ಮತ್ತು ಯೋಜನೆಗಳು ಬೇಕಾಗಿವೆ. ಅವನ್ನು ನಮ್ಮ ನೆಲದ ಜ್ಞಾನ ಪದ್ಧತಿಗಳನ್ನು ಹೊಸ ಜಗತ್ತಿನ ಜ್ಞಾನ ಮಾದರಿಗಳ ಜೊತೆಗೆ ಪರಾಮರ್ಶಿಸಿಕೊಂಡು ಬೆಳೆಸಿಕೊಳ್ಳಬೇಕಾಗಿದೆ.

ಈ ಆಂತರಿಕ ಅಭಿವೃದ್ಧಿಯನ್ನು ಕೆಲವರು ದೇಸಿ ಚಿಂತನೆ ಎಂದು ಕರೆಯುತ್ತಾರೆ. ಇದು ಹೊರ ದೇಶಗಳ ಮಾರ್ಗ ಚಿಂತನೆಗೆ ಭಿನ್ನ ಮತ್ತು ಪೈಪೋಟಿ ಕೊಡುವಂಥದು ಎಂದು ತಿಳಿಯಲಾಗಿದೆ. ಪ್ರತಿಯೊಂದು ದೇಶದ ಒಳಗೂ ಮೇಲಿನವರ ಸುಖಕ್ಕೆ ಪೂರಕವಾದ ಜ್ಞಾನ ಮಾದರಿಯನ್ನು ಮಾರ್ಗವೆಂದೂ ಅವರ ಕೆಳಗಿರುವವರ ಜೀವನ ವಿಧಾನವನ್ನು ದೇಸಿ ಎಂದೂ ಕರೆಯಲಾಗುತ್ತದೆ. ಮಾರ್ಗ ದೇಸಿಯ ಮೇಲೆ ಸವಾರಿ ಮಾಡುವುದೂ ಉಂಟು, ಸಹಯೋಗ ಇಟ್ಟುಕೊಳ್ಳುವುದೂ ಉಂಟು. ಈ ಸಹಯೋಗ ಸದುದ್ದೇಶಿಯೂ ಆಗಿರಬಹುದು, ಸ್ವಂತ ಉದ್ದೇಶವೂ ಆಗಿರಬಹುದು. ಕರ್ನಾಟಕದಲ್ಲಿ ಎಲ್ಲ ಮಟ್ಟದಲ್ಲೂ ಕನ್ನಡ ಬಳಕೆ ಎಂಬ ನಿಯಮ ಬಂದು ತಕ್ಷಣ ಪೊಲೀಸ್ ಇಲಾಖೆ, ಆರಕ್ಷಕ ಇಲಾಖೆ, ಎಂಜಿನಿಯರ್ ಇಲಾಖೆ ಅಭಿಯಂತರ ಇಲಾಖೆಯಾಗುತ್ತದೆ. ದೇಸೀ ಭಾಷೆಯ ಹೆಸರಿನಲ್ಲಿ ಮಾರ್ಗ ಭಾಷೆ ಸವಾರಿ ಮಾಡುವ

ವಿಧಾನ ಇದು. ಒಂದು ತತ್ವ ಚಿಂತನೆಯಾಗಿ ಇದೇ ಮಾರ್ಗ ಹಲವು ಚಿಕ್ಕ ಪುಟ್ಟ ದೇಶೀ ಸಂಸ್ಕೃತಿಗಳ ಮಧ್ಯೆ ಹೊಂದಾಣಿಕೆಯ ಕ್ರಮವನ್ನು ಪ್ರೇರೇಪಿಸುವುದುಂಟು. ತಮ್ಮ ಉತ್ಪನ್ನಗಳ ಮಾರಾಟ, ಪೂಜೆ-ಪುನಸ್ಕಾರಗಳೆಂಬ ಆಚರಣೆಗಳನ್ನು ಆ ಜನಗಳಲ್ಲಿ ಸೇರಿಸುವ ಮುಖಾಂತರ ಈ ಕೆಲಸ ಮಾಡುತ್ತದೆ. ವಸ್ತು ರೂಪದಲ್ಲಿ ವಡೆ, ಕಜ್ಜಾಯ, ಮೊಸರನ್ನ, ಬಿಸಿಬೇಳೆ ಬಾತು, ಪುಳಿಯೋಗರೆ ಈ ಕೆಲಸ ಮಾಡಿದರೆ ಆಚರಣೆಯ ರೂಪದಲ್ಲಿ ರಾಘವೇಂದ್ರ ಪೂಜೆ, ತಿರುಪತಿ ಪೂಜೆ ಮತ್ತು ಸತ್ಯನಾರಾಯಣ ಪೂಜೆಗಳು ಈ ಕೆಲಸ ಮಾಡುತ್ತಿವೆ. ಸಹಕಾರ ಸಹಯೋಗದ ಹೆಸರಿನಲ್ಲಿ ದೇಶಿ ಎಂಬ ಕೆಳ-ತಳವರ್ಗದ ಜನರಲ್ಲಿ ಮಾರ್ಗದ ಜನ ತಮ್ಮ ತಳಿ ಬಿತ್ತನೆ ಕೆಲಸ ಮಾಡುತ್ತಾ ಬಂದಿರುವುದು ಭಾರತ ಸಾಂಸ್ಕೃತಿಕ ಇತಿಹಾಸದ ಒಂದು ಚಲನೆಯಾಗಿದೆ. ಆದರೆ ಯಾಹೊತ್ತೂ ದೇಸಿ ಮಾರ್ಗದ ನಿರ್ವೀರ್ಯತೆಯನ್ನು ತುಂಬಿಕೊಡುತ್ತಾ ಬಂದಿರುವುದು ಸೂರ್ಯನ ಬೆಳಕಿನಷ್ಟು ಸತ್ಯವಾಗಿದೆ.

ಆದರೆ ಸಂಯೋಜಿತ ರಾಷ್ಟ್ರೀಯ ಅಭಿವೃದ್ಧಿ ತಂತ್ರಜ್ಞಾನವನ್ನು ಪಕ್ಷ ಪ್ರಣಾಳಿಕೆಯನ್ನಾಗಿ ನೋಡಲಾಗದು. ಅದು ರಾಷ್ಟ್ರ ಪ್ರಣಾಳಿಕೆ ಆಗಬೇಕು. ಇತ್ತೀಚಿನ ದಿನಗಳಲ್ಲಿ ಭಾರತದ ಜ್ಞಾನ-ತಂತ್ರಜ್ಞಾನ ಅಭಿವೃದ್ಧಿಯನ್ನು ಮೇಲುಜಾತಿಯ ಪಕ್ಷಗಳು ತಮ್ಮ ಪ್ರಣಾಳಿಕೆ ಮಾಡಿಕೊಂಡಿವೆ. ಇದು ತುಂಬ ಅಪಾಯಕಾರಿ ಬೆಳವಣಿಗೆ, ಈ ಚಾಲನೆಗೆ ತಡೆ ಒಡ್ಡದಿದ್ದರೆ ಮತೀಯ ಅಭಿವೃದ್ಧಿ ತತ್ವ ಮುಂದುವರಿಯುತ್ತದೆ.

ನಮಗೆ ದೇಶೀ ಸಿದ್ಧಾಂತ ಪ್ರಸ್ತುತವೆಂದಾದಲ್ಲಿ ಅದನ್ನು ಜಾತ್ಯಾತೀತವಾದ ಪ್ರದೇಶಾತೀತವಾದ ಸಂಸ್ಕೃತಿ ಭಾರತ ಸಿದ್ಧಾಂತವನ್ನಾಗಿ ನಿರ್ವಹಿಸಿಕೊಳ್ಳಬೇಕು; ಇಲ್ಲಿ ಭಾರತದ ಎಲ್ಲ ಸಂಸ್ಕೃತಿಗಳು ಅಸ್ತಿತ್ವದಲ್ಲಿವೆ ಮತ್ತು ವಿಕಾಸಶೀಲವಾಗಿವೆ ಎಂದು ಗ್ರಹಿಸಬೇಕು. ಅಖಿಲ ಭಾರತ ಎಂಬ ಕೂಡಿಸಿಜೋಡಿಸಿ ಭಾರತವನ್ನು ಕಲ್ಪಿಸಿಕೊಳ್ಳುವ ಉದಾರವಾದ ಬೇಡ. ಅದು ಯಜಮಾನನ ಕರುಣೆ ಮತ್ತು ವಿಸ್ತರಿಸಿಕೊಂಡ ಪ್ರೀತಿಯಿಂದ ಬಂದುದು. ಅದರೊಳಗೆ ನೋಟದಲ್ಲಿ ಭಾರತ ಒಂದಾಗಿರುತ್ತದೆ, ಕೂಟದಲ್ಲಿ ಒಂದಾಗಿರುವುದಿಲ್ಲ. ಭಾರತದ ಎಲ್ಲ ಸಂಸ್ಕೃತಿಗಳನ್ನೂ ಒಂದು ಉಂಡೆ ಕಿತ್ತಳೆ ಹಣ್ಣಿನ ತೊಳೆಗಳು ಮತ್ತು ಅವುಗಳೊಳಗಿನ ಬೀಜದಂತೆ ಅಖಂಡ ಕ್ರಿಯಾಶೀಲ ಘಟಕವನ್ನಾಗಿ ಪರಿಭಾವಿಸಬೇಕು. ಒಂದೆರಡು ತೊಳೆಗಳ ಒಳಗೆ ಬೀಜಗಳು ಇಲ್ಲದಿರಬಹುದು. ಆದರೆ ಅದರಿಂದ ಕಿತ್ತಳೆ ಬೀಜೋತ್ಪತ್ತಿಗೆ ತೊಂದರೆ ಏನೂ ಆಗುವುದಿಲ್ಲ. ಭಾರತದ ಜೀವಸತ್ವ ಒಂದು ಜಾತಿ, ಜನಾಂಗ

ಅಥವಾ ರಾಜ್ಯವೊಂದರಲ್ಲಿ ಕೇಂದ್ರೀಕೃತ ಎಂದು ತಿಳಿಯಲಾಗದು. ಹೀಗೆ ನಿರ್ವಹಿಸಿಕೊಂಡ 'ಸಂಸ್ಕೃತಿ ಭಾರತ'ದಲ್ಲಿ ಸಂಸ್ಕೃತಿ ಬೀಜೋತ್ಪತ್ತಿ ಮತ್ತು ತಾಂತ್ರಿಕ ಬೀಜೋತ್ಪತ್ತಿ ಅಂತರ ಸಂಬಂಧಿಯಾಗಿರುತ್ತವೆ ಮತ್ತು ಸರ್ವಮಾನ್ಯವಾಗಿರುತ್ತವೆ.

ತಂತ್ರಜ್ಞಾನ ಸಂಸ್ಕೃತಿಬದ್ಧವಾಗಿದ್ದಾಗಲೆ ಮತ್ತು ಸಂಸ್ಕೃತಿ ಜೀವಪರವಾಗಿದ್ದಾಗಲೆ ಸರ್ವಮಾನ್ಯ ಅಭಿವೃದ್ಧಿ ಸಾಧ್ಯವಾಗುತ್ತದೆ. ಒಂದು ಸಂಸ್ಕೃತಿ ಹುಟ್ಟುವುದು ಆ 'ಸಂಸ್ಕೃತಿ ಜನಾಂಗ'ದ ಆರ್ಥಿಕ ಉತ್ಪಾದನೆಯನ್ನು ಸಾಮಾಜೀಕರಿಸುವ ಸಲುವಾಗಿ, ಆ ಮೂಲಕ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬಾದ ತಂತ್ರಜ್ಞಾನವನ್ನು ಮಾನವೀಕರಿಸುವ ಕಾರಣಕ್ಕಾಗಿ. ಅಂದರೆ ಪ್ರತಿಯೊಂದು ಸಂಸ್ಕೃತಿ ತನ್ನೊಳಗೆ ತನ್ನದೇ ತಂತ್ರಜ್ಞಾನ ಮತ್ತು ಆರ್ಥಿಕ ಅಭಿವೃದ್ಧಿ ತತ್ವವನ್ನು ಹೊಂದಿರುತ್ತದೆ. ಭಾರತದ ಒಟ್ಟು ಜನ ಸಂಸ್ಕೃತಿಯಲ್ಲಿ ಅಂಥ ತಂತ್ರಜ್ಞಾನ ಇತ್ತು ಮತ್ತು ಈಗಲೂ ಇದೆ. ಭಾರತದ ಬಡತನ ಮತ್ತು ಆ ಮೂಲಕ ಒಪ್ಪಿತವಾಗುವ ಗುಲಾಮತನವನ್ನು ಕಂಡ ಬ್ರಿಟಿಷ್ ಆಡಳಿತ, ಭಾರತದ ಸಂಸ್ಕೃತಿ ಅನೇಕ ವಿಚಿತ್ರಗಳ ಒಂದು ಮೊತ್ತ ಎಂದು ಕರೆದರು. ಆದರೆ ಆ ಸಂಸ್ಕೃತಿಯ ಒಳಗೆ, ಅದೇ ಸಂಸ್ಕೃತಿಗೆ ಬದ್ಧವಾದ ತಂತ್ರಜ್ಞಾನ ಪದ್ಧತಿಯೊಂದು ಇದೆ ಎಂದು ಹೇಳಲಿಲ್ಲ. ಯಾಕೆಂದರೆ ಅವರು ತಮ್ಮ ತಂತ್ರಜ್ಞಾನದ ಉತ್ಪತ್ತಿಯನ್ನು ಭಾರತಕ್ಕೆ ಮಾರಿ ಸಂಪತ್ತು ಸಂಗ್ರಹಿಸಬೇಕಿತ್ತು. ನಮ್ಮ ಭಾರತದ ಈ ಮಂಗಜನ, ಅವರ ಈ ಸಂಸ್ಕೃತಿ ಸಿದ್ಧಾಂತವನ್ನು ಪ್ರಶ್ನಿಸದೇ ಒಪ್ಪಿಕೊಂಡರು. ಈ ಒಪ್ಪಿಗೆಯಲ್ಲಿ ಮುಗ್ಧತೆಯೂ ಇತ್ತು ಮತ್ತು ಹೆದರಿಕೆಯೂ ಕೆಲಸ ಮಾಡಿತು. ಪೂಜಾ ಸಂಸ್ಕೃತಿಯವರಿಗೆ ಯಾವ ತಂತ್ರಜ್ಞಾನದ ಗಂಧಗಾಳಿಯೂ ಇರಲಿಲ್ಲ. ಅವರು ಅಕ್ಷರಸ್ಥ ಪ್ರಜ್ಞಾವಂತರಾದರೂ ತಂತ್ರಜ್ಞಾನದ ಒಳ ಅರಿವು ಇಲ್ಲದಿದ್ದ ಕಾರಣ ಬ್ರಿಟಿಷ್‌ರನ್ನು ಪ್ರಶ್ನಿಸಲಿಲ್ಲ. ಭಾರತದ ದೊಡ್ಡ ಸಂಪತ್ತಾದ ತಂತ್ರಜ್ಞಾನವನ್ನು ಕಳಕೊಂಡವರೆಂದರೆ ಕುಶಲ ಕರ್ಮಿಗಳು, ಕೃಷಿಕರು, ಗ್ರಾಮೀಣ ವೈದ್ಯರು ಮತ್ತು ಮಹಿಳೆಯರು.

ಪೂಜೆ ಆರ್ಥಿಕ ಚಟುವಟಿಕೆ ಅಲ್ಲ. ಅದಕ್ಕೆ ಆರ್ಥಿಕ ಬಂಡವಾಳವೇನೂ ಬೇಕಾಗಿಲ್ಲ ; ಒಂದು ಗಂಟೆ ಮತ್ತು ಒಂದು ಸೌಟು ಸಾಕು. ಆದರೆ ವೃತ್ತಿ ಜನಪದಗಳು ಬದುಕಬೇಕಾದರೆ ಹೊರಗಿನ ಬಂಡವಾಳಕ್ಕಿಂತ ಅವರೇ ಸ್ವತಃ ಬಂಡವಾಳವಾಗುವ ತಾಕತ್ತನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಸಾಂಸ್ಕೃತಿಕ ರಾಜಕೀಯದ ಬೆನ್ನು ಹತ್ತುವುದು ಅನಿವಾರ್ಯವಾಗುತ್ತದೆ. ಆ ಚಲನೆ ಈಗ ಬೇಕು.

ಈ ಕೆಳಕಂಡದ್ದನ್ನೆಲ್ಲ ಪಡೆದುಕೊಳ್ಳುವ ಮತ್ತು ಅದನ್ನು ಸಮಕಾಲೀನ ಸಂಸ್ಕೃತಿ

ಭಾರತಕ್ಕೆ ದೊರಕಿಸಿಕೊಡುವ ನಮ್ಮ ಪ್ರಯತ್ನವೆ ನಮ್ಮ ಜಾನಪದ; ಜ್ಞಾನ-ವಿಜ್ಞಾನ ಶೋಧ ಮಾಲೆಯ ಪುಸ್ತಕ ಪ್ರಕಟಣಾ ಯೋಜನೆ. ನಾವಿಲ್ಲಿ ಜನಪದ ಪ್ರಕಾರ, ಜನಪದ ಸಿದ್ಧಾಂತ, ಜಾನಪದ ಅನ್ವಯಿಕತೆ, ಜಾನಪದ ಗ್ರಹಿಕೆ, ಜನಪದ ಆಟ, ಜನಪದ ಪಾನೀಯ, ಜನಪದ ಆಹಾರ, ಜನಪದ ವೈದ್ಯ, ಜನಪದ ತಂತ್ರಜ್ಞಾನ ಮುಂತಾದ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಹೊರತರುತ್ತಿದ್ದೇವೆ. ಈ ಸಂಬಂಧಿಸಿದ ಜಾನಪದ ಕ್ಷೇತ್ರದಲ್ಲಿ ಇದುವರೆಗೆ ಏನು ಕೆಲಸ ನಡೆದಿದೆ, ನಮ್ಮ ಜನಪದ ಜ್ಞಾನವನ್ನು ನಮ್ಮ ಜಾನಪದ ತಜ್ಞರು ಹೇಗೆ ಗ್ರಹಿಸಿ-ಸಂಗ್ರಹಿಸಿ ಮತ್ತು ವಿಶ್ಲೇಷಿಸಿ ಕೊಟ್ಟಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ನಾವು ಜಾನಪದ ತಜ್ಞರೆಂಬುವವರು ಬಹಳ ದೊಡ್ಡ ಕೆಲಸ ಮಾಡಿದ್ದೇವೆ ಎಂದು ಹೇಳಲಾರೆ. ನಾವು ಮಾಡಿರುವ ಕೆಲಸದಲ್ಲಿ ಸರ್ವತೋಮುಖ ಭಾರತವನ್ನು ಎಷ್ಟರಮಟ್ಟಿಗೆ ಗ್ರಹಿಸಬಹುದು ಮತ್ತು ಇದರ ಸಾಮಾನ್ಯ ಜ್ಞಾನವನ್ನು ಬಳಸಿಕೊಂಡು ಅಭಿವೃದ್ಧಿ ಭಾರತ ಹೇಗೆ ಮುನ್ನಡೆಯಬಹುದು ಎಂಬುದಕ್ಕೆ ಕೆಲವು ಸೂಚನೆಗಳು ಸಿಕ್ಕಿದರೆ ಅಷ್ಟು ಸಾಕು.

ಚೆಲ್ಲಿಕೊಂಡವರಿಗೆ ಮತ್ತು ಚೆಲ್ಲಿಕೊಂಡದ್ದಕ್ಕೆ ನೆಲೆ ಮತ್ತು ಕ್ರಿಯೆ ಇರುವುದಿಲ್ಲ. ನಮ್ಮ ಜಾನಪದ ಅಧ್ಯಯನ ಈಗ ಚೆಲ್ಲಿಕೊಂಡಿದೆ. ಅದನ್ನು ಒಂದು ನೋಟಕ್ಕೆ ಸಿಗುವ ಹಾಗೆ ಮಾಡುವುದು ಇಲ್ಲಿಯ ನಮ್ಮ ಮೊದಲ ಆದ್ಯತೆ. ಇದರಿಂದ ಜನಪದ ಭಾರತವನ್ನು, ನಮ್ಮ ಮಟ್ಟಿಗೆ ಜಾನಪದ ಕರ್ನಾಟಕವನ್ನು ಹೊರಗಿನ ಅಧ್ಯಯನಕಾರರು ಮತ್ತು ಒಳಗಿನ ಅಧ್ಯಯನಕಾರರು ಗಮನಿಸಬಹುದಾಗಿದೆ. ಬಹಳ ಮುಖ್ಯವಾಗಿ ಜಾನಪದ ಒಂದು ಸಮಗ್ರ ಜೀವನ ವಿಧಾನ ಮತ್ತು ಜ್ಞಾನ ಮಾರ್ಗ ಎಂಬ ಚಿತ್ರ ನಮ್ಮೆಲ್ಲರ ಗಮನಕ್ಕೆ ಬರುವುದು ಅವಶ್ಯಕವಾಗಿದೆ. ಈ ಪ್ರಯತ್ನಕ್ಕೆ ನಮ್ಮದು ಪ್ರಥಮ ಪ್ರಯತ್ನ, ಜಾನಪದ ವಿಷಯಕ್ಕೆ ಸಂಬಂಧಿಸಿದ ಅಕಾಡೆಮಿ ಮಾಡಬೇಕಾದ ಜವಾಬ್ದಾರಿ. ಇಂಥ ಪ್ರಯತ್ನದಲ್ಲಿ ನಾವು ಸಫಲರಾಗಿದ್ದೇವೆ ಎಂಬುದನ್ನು ಓದುಗರು, ಜ್ಞಾನಿಗಳು ನಿರ್ಧರಿಸಲಿ. ಈ ಕೆಲಸದಲ್ಲಿ ಮಿತಿಗಳಿದ್ದಲ್ಲಿ ಮುಂದಿನವರು ತುಂಬಿ ನಮ್ಮ ಪರಂಪರೆಯನ್ನು ನಡೆಸಿಕೊಡಲಿ.

ಶುದ್ಧ ಮತ್ತು ಆನ್ವಯಿಕ ಎಂಬ ಪರಿಕಲ್ಪನೆಗಳು ವಿಜ್ಞಾನ ವಿಷಯಗಳಿಂದ ದತ್ತವಾದುವು. ಮೂಲ ವಸ್ತು ಮತ್ತು ವಿಷಯಗಳನ್ನು ಕುರಿತು ಅಧ್ಯಯನ ಮಾಡುವವು ಶುದ್ಧ ಜ್ಞಾನಗಳು, ಆ ಜ್ಞಾನವನ್ನು ಅಭಿವೃದ್ಧಿಸಿ ಅನ್ವಯ ಮಾಡಿ ನೋಡುವವು ಆನ್ವಯಿಕ ಜ್ಞಾನ ವಿಷಯಗಳು. ಸಾಮಾಜಿಕ ಶಾಸ್ತ್ರಗಳಲ್ಲಿ ಆನ್ವಯಿಕ ದೃಷ್ಟಿಯನ್ನು ಬೆಳೆಸಿದವರು ಮಾನವ ಶಾಸ್ತ್ರಜ್ಞರು. ಅಲ್ಲಿಂದ ಇಲ್ಲಿಯವರೆಗೆ ಈ ಹೊಂದಿಸಿ

ನೋಡುವ ಕೆಲಸ ಎಲ್ಲ ಸಾಮಾಜಿಕ ವಿಷಯಗಳಲ್ಲೂ ನಡೆದಿದೆ. ಈ ದಿಕ್ಕಿನಲ್ಲಿ ಜಾನಪದ ಹಿಂದೆ ಬಿದ್ದಿಲ್ಲ. ಜಾನಪದ ಭೌತ ವಿಜ್ಞಾನದ ಮೂಲ ವಸ್ತುಗಳ ಹಾಗೆ ದತ್ತಾಂಶವಲ್ಲ. ಜಾನಪದ ಯಾವತ್ತೂ ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಹೊಂದಿಕೊಂಡು ಬದುಕುತ್ತಾ ಬಂದಿದೆ. ಅದು ಜನರಿಂದ ಜನರಿಗಾಗಿ ನಡೆದಿದೆ. ಕೋಲಾಟ ಎಂಬ ನೃತ್ಯವನ್ನು ನೋಡಿ ; ಮೂಲತಃ ಕೋಲು ವ್ಯವಸ್ಥಿತವಾಗಿ ಬಳಕೆಯಾದದ್ದು ಪೂರ್ವ ಮಾನವನ ಯುದ್ಧ ಆಯುಧವಾಗಿ, ಮೂಲತಃ ಕೋಲಾಟ ಮನೋಲ್ಲಾಸ ಕಲೆಯೂ ಯುದ್ಧಕ್ಕೆ ತಯಾರಾಗುವ ಒಂದು ಆಯುಧವೂ ಆಗಿ ಬೆಳೆದು ಬಂತು. ಕೋಲಿನ ಆಯುಧವನ್ನು ಕಲ್ಲಿನ ಆಯುಧಗಳು ಸ್ಥಾನಾಂತರ ಮಾಡಿದಾಗ ಕೋಲು ಮನೋಲ್ಲಾಸದ ಕಲೆಯಾಗಿ ಮಾತ್ರ ಉಳಿಯಿತು. ಹಿಂದಿನ ಕಾಲದ ನಮ್ಮ ಅನೇಕ ದೈವಾರಾಧನೆಯ ಕಲೆಗಳು ಈಗ ಮನೋಲ್ಲಾಸದ ಕಲೆಗಳಾಗಿ ಬದಲಾಗಿವೆ. ಅಂದರೆ ಧಾರ್ಮಿಕ ಆಶಯವೊಂದು ಲೌಕಿಕ ಆಶಯವಾಗಿ ಪರಿವರ್ತನೆಯಾದಂತಾಯಿತು.

ಹೀಗೆ ನೇರವಾಗಿ ಜನ ತಮ್ಮ ಜೀವನ ಆಶಯಗಳನ್ನು ಕಾಲಕ್ಕೆ ತಕ್ಕಂತೆ ಉಪಯೋಗಕ್ಕೆ ಒಳಪಡಿಸಿಕೊಂಡು ಬಂದಿದ್ದಾರೆ. ಶಿಷ್ಟ ವರ್ಗದವರು ಅನೇಕ ಜನಪದ ಆಶಯಗಳನ್ನು ತಮ್ಮ ಬದುಕಿಗೆ ಆನ್ವಯಿಕಗೊಳಿಸಿಕೊಂಡಿರುವುದೂ ಉಂಟು. ಮೂಲತಃ ವಡ್ಡಾರಾಧನೆಯ ಕಥೆಗಳು, ಪಂಚತಂತ್ರದ ಕಥೆಗಳು ಮತ್ತು ಧಾರ್ಮಿಕ ಕಾವ್ಯದೊಳಗೆ ಉಪದೇಶಕ್ಕೆ ಬಳಸಿಕೊಂಡಿರುವ ಕಥೆಗಳು ಜನಪದ ಕಥೆಗಳು. ನಮ್ಮ ವೈದಿಕ, ಜೈನ, ಬೌದ್ಧ ಮತ್ತು ಶೈವ ಧರ್ಮದಲ್ಲಿ ಇಂಥ ಅನೇಕ ಕಥೆಗಳು ಅವರವರ ಧರ್ಮದ ತತ್ವ ಪ್ರಚಾರಕ್ಕೆ ಅನ್ವಯವಾಗುವಂತೆ ಬಳಕೆಯಾಗಿವೆ. ನಾವು ಈ ಹೊತ್ತಿನ ಬಳಕೆದಾರರು ನಮಗೆ ಯಾವುದೆಲ್ಲ ಹೊಂದಬಹುದು ಎಂಬುದನ್ನು ಪರೀಕ್ಷಿಸಿ ಪ್ರಯೋಗಿಸಿಕೊಳ್ಳುತ್ತಿದ್ದೇವೆ. ಜಾನಪದದ ಆನ್ವಯಿಕತೆಯೂ ನಮ್ಮ ಆಧುನಿಕ ಬದುಕಿಗೆ ಮೂಲ ಜಾನಪದ ಹೇಗೆ ಹೊಂದಾಣಿಕೆಯಾಗಬಹುದು ಎಂಬುದನ್ನು ಪರಿಶೀಲಿಸಿದೆ.

ಜನಪದ ಜೀವನವೇ ಪ್ರಯೋಗಶೀಲ. ಅದು ಏಕ ಕಾಲದಲ್ಲಿ ಅನೇಕ ಚಿಂತನೆಗಳ ಜೊತೆಗೆ ಒಡನಾಡಿ ಸೂಕ್ತವೆನಿಸಿದ್ದನ್ನು ಆಯ್ದುಕೊಳ್ಳುತ್ತದೆ. ಈ ಕ್ರಿಯೆ ಅವಸರದ್ದಾಗಿರುವುದಿಲ್ಲ. 'ಪರೀಕ್ಷೆ ಮತ್ತು ಆಯ್ಕೆ' ಎಂಬ ನಿಯಮ ಅದನ್ನು ತೀರ್ಮಾನಿಸುತ್ತದೆ. ಆದರೆ ಅವಸರದಲ್ಲಿ ಓಡುತ್ತಿರುವ, ವರ್ಷ ವರ್ಷವೂ

ವೇಷಾಂತರ ಮಾಡುವ ಆಧುನಿಕ ವಸ್ತು ಮತ್ತು ವಿಜ್ಞಾನ ಚಿಂತನೆಗೆ ಜಾನಪದದ ಬೆಳವಣಿಗೆ ಕಣ್ಮುಂದೆ ಬೀಳುವುದಿಲ್ಲ. ಓಡುವವರಿಗೆ ತನ್ನ ಬೆನ್ನು ಹಿಂದುಳಿದಿದೆ ಎಂಬ ಅನಿಸಿಕೆಯಂತೆ, ಜನಪದ ಹೇಗೆ ಆಯಾ ಕಾಲಕ್ಕೆ ತನ್ನನ್ನು ಆನ್ವಯಿಕಗೊಳಿಸಿಕೊಳ್ಳುತ್ತದೆ ಎಂಬುದಕ್ಕೆ ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿರುವ ಸೋಮನ ಕುಣಿತವನ್ನು ನೋಡಬಹುದು. ಇಲ್ಲಿ ಗ್ರಾಮ ದೇವತೆ, ಗಾರುಡಿ ಗೊಂಬೆ ಮತ್ತು ಮೂರು ಸೋಮಗಳಿರುತ್ತವೆ. ಗ್ರಾಮದೇವತೆ ಗ್ರಾಮ ಸಂಸ್ಕೃತಿಯ ಯಜಮಾನಿ. ಅಂದರೆ ಮಾತೃ ಸಂಸ್ಕೃತಿಯ ಅಧಿದೇವತೆ. ಗಾರುಡಿಗೊಂಬೆ ಮಂತ್ರವಿದ್ಯೆ ಸಂಸ್ಕೃತಿಯ ಯಜಮಾನ, ಅಂದರೆ ಪ್ರಾಥಮಿಕ ವಸ್ತು ವಿಜ್ಞಾನದ ಅಧಿದೇವತೆ. ಸೋಮಗಳಲ್ಲಿ ಒಂದು ಸೋಮ ಕೆಂಪು ಬಣ್ಣದ್ದು. ಅದರ ಹಣೆಯ ಮೇಲೆ ಮೂರು ಉದ್ದ ನಾಮಗಳಿರುತ್ತವೆ. ಇವು ಶ್ರೀ ವೈಷ್ಣವ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಇದು ದಕ್ಷಿಣ ಕರ್ನಾಟಕದ ಮೇಲೆ ರಾಮಾನಾಜಾಚಾರ್ಯರ ಬೋಧನೆಗಳು ಉಂಟು ಮಾಡಿದ ಪರಿಣಾಮ. ಇನ್ನೊಂದು ಸೋಮ ಹಳದಿ ಬಣ್ಣದ್ದಾಗಿರುತ್ತದೆ. ಇದರ ಹಣೆಯ ಮೇಲೆ ಮೂರು ವಿಭೂತಿ ಗೆರೆಗಳಿರುತ್ತವೆ. ಇದು ಶೈವ ಸಂಸ್ಕೃತಿಯನ್ನು ಸೂಚಿಸುತ್ತದೆ. ಮತ್ತೊಂದು ಕರಿ ಸೋಮ. ಇದರ ಹಣೆಯ ಮೇಲೆ ಒಂದು ಕೆಂಪು ಬಣ್ಣದ ಬೊಟ್ಟು ಅಥವಾ ವಿಭೂತಿ ಗೆರೆಗಳಿರುತ್ತವೆ. ಇದು ತಳ ವರ್ಗದ ಜನರ ಧರ್ಮವನ್ನು ಸೂಚಿಸುತ್ತದೆ. ಈ ಮೂರು ಸೋಮಗಳು ಮೂರು ವರ್ಣ ಅಥವಾ ಮೂರು ಧರ್ಮಗಳನ್ನು ಪ್ರತಿನಿಧಿಸುತ್ತವೆ. ಅಂದರೆ ಇಡೀ ಸೋಮನ ಕುಣಿತ ಅನೇಕ ಕಾಲಗಳ ಮತ್ತು ಅನೇಕ ಧರ್ಮಗಳ ಹೊಂದಾಣಿಕೆಯ ಅಥವಾ ಸಹಯೋಗದ ಪ್ರದರ್ಶನ. ಇದರ ಅರ್ಥ ಜನಪದರಿಗೆ ಧರ್ಮ ಅಧಿಕಾರ ಅಥವಾ ಹಣ ಸಂಪಾದನೆ ಮಾಡುವ ಬಂಡವಾಳ ಅಲ್ಲ, ಧರ್ಮ ಎಂಬುದೊಂದು ಬದುಕಲು ಇರುವ ಕ್ರಿಯೆ ಎಂದು ಅವರು ತಿಳಿದಿದ್ದಾರೆ. ಜಡ ತತ್ವವನ್ನು ಆಯಾ ಧರ್ಮಗಳ ಪ್ರಭುಗಳಿಗೆ ಬಿಟ್ಟು ಕೊಟ್ಟು ತಮಗೆ ಅನ್ವಯವಾಗುವ ಸತ್ಯಗಳನ್ನು ಜನಪದರು ತಮ್ಮ ಕ್ರಿಯೆಯಲ್ಲಿ ಉಳಿಸಿಕೊಳ್ಳುತ್ತಾರೆ ಎಂಬುದಕ್ಕೆ ಸೋಮನ ಕುಣಿತ ಪ್ರದರ್ಶನ ಒಂದು ಉತ್ತಮ ಉದಾಹರಣೆ.

ನಿಜವಾದ ಧರ್ಮವಿದ್ದಲ್ಲಿ ಅದು ಯಾರಾದರೊಬ್ಬರನ್ನು ಒದ್ದು ಓಡಿಸಿ ಅಥವಾ ದೂರ ಇಡಿ ಎಂದು ಹೇಳುವುದಿಲ್ಲ, ಜನರೂ ಅಷ್ಟೆ. ಯಾವುದಾದರೊಂದು ಧರ್ಮ ಅಥವಾ ಅದರ ಒಳ್ಳೆಯ ನಡತೆ ಕಂಡರೆ ಅದನ್ನು ತಮ್ಮೊಳಗೇ ಕರೆದುಕೊಳ್ಳುತ್ತಾರೆ.

ನಮ್ಮ ಗ್ರಾಮೀಣ ಸಮಾಜದ ಹಬ್ಬಗಳಲ್ಲಿ 'ಸಿಹಿದಿನ' ಮತ್ತು 'ಕಾರಾ ದಿನ' ಎಂದು ಎರಡು ದಿವಸದ ಆಚರಣೆ ಮಾಡುತ್ತಾರೆ. ಮೊದಲ ದಿನ ತರಕಾರಿ ಅಡಿಗೆ ಮಾಡಿ ದೇವರಿಗೂ ಅರ್ಪಿಸಿ ತಾವೂ ಊಟ ಮಾಡುತ್ತಾರೆ. ಎರಡನೆಯ 'ಕಾರಾ ದಿನ'ದಂದು ಮಾಂಸದ ಅಡಿಗೆಯನ್ನು ಮಾಡಿಕೊಂಡು ಊಟ ಮಾಡುತ್ತಾರೆ. ಮೂಲತಃ ಉಪವಾಸಕ್ಕೂ ಮತ್ತು ರೈತರಿಗೂ ಯಾವ ಜೈವಿಕ ಸಂಬಂಧವೂ ಇಲ್ಲ. ದೈಹಿಕ ಶ್ರಮ ಆಹಾರವಿಲ್ಲದೆ ನಡೆಯದು. ಹಾಗಿದ್ದೂ ಪೂಜಾರಿಕೆ ಧರ್ಮದ ಸಹ್ಯವಾದ ಉಪವಾಸ ಮತ್ತು ಪೂಜೆಗಳನ್ನು ಅವರು ಸ್ವೀಕರಿಸಿದ್ದಾರೆ. ಅಂದರೆ ಯಾವುದೇ ಜನಪದ ಹಳೆಯದನ್ನು ಹೊಸ ಕಾಲಕ್ಕೆ ಮತ್ತು ಆಧುನಿಕವಾದುದನ್ನು ಸಮಕಾಲೀನತೆಗೆ ಆನ್ವಯಿಕಗೊಳಿಸಿಕೊಳ್ಳುವುದು ಸಾಮಾನ್ಯ ಸಂಗತಿ. ಆಧುನಿಕ ಶಿಷ್ಟ ಇದನ್ನು ಸಿದ್ಧಾಂತ ಮಾಡಿದೆ. ಜನಪದರಲ್ಲಿ ಇರುವ ಜೀವನವನ್ನು ನಾವು ಹೇಗೆ ಅನುಭವಿಸಬಹುದು ಎಂದು ನಾಗರೀಕ ಶಿಷ್ಟರಾದ ನಾವು ಕಾತುರ-ಆತುರರಾಗಿದ್ದೇವೆ.

**'ಸಂಸ್ಕೃತಿ ಜೀವನದ ಅಸ್ತಿತ್ವ**

ಮೊದಲಾಗಿ ಸಂಸ್ಕೃತಿ ಮತ್ತು ಜೀವನ ಬೇರೆಬೇರೆಯಲ್ಲ, ಇಲ್ಲಿ 'ಸಂಸ್ಕೃತಿ' ಜೀವನದ ನಂಬಿಕೆಯ ಭಾಗವನ್ನು 'ಜೀವನ' ಸಂಸ್ಕೃತಿಯನ್ನು ನಡೆದುಕೊಳ್ಳುವ ರೀತಿಯನ್ನು 'ಅಸ್ತಿತ್ವ' ಸಂಸ್ಕೃತಿ ಜೀವನದ ಭದ್ರತೆಯನ್ನೂ ಕುರಿತು ಹೇಳುತ್ತವೆ.

ಒಂದು ಜನಾಂಗ ಅಥವಾ ಜನವರ್ಗಕ್ಕೆ ಇರುವ ನಂಬಿಕೆ ಆ ಜನವರ್ಗದ ಬಹುದೊಡ್ಡ ಮೊತ್ತ (big capital). ಇದನ್ನು ಆ ಜನವರ್ಗದ ಸಾಮಾಜಿಕ ಬಂಡವಾಳ ಎಂದು ಕರೆಯಬಹುದು. ಜೀವನ ಎಂಬುದು ಆ ಜನವರ್ಗದ ಸಾಮಾಜಿಕ ಆರ್ಥಿಕ ಚಟುವಟಿಕೆ (Socio-economic activity) ಅಸ್ತಿತ್ವ ಎಂಬುದು ಆ ಜನ ವರ್ಗದ ರಾಜಕೀಯ ಶಕ್ತಿ (Political Power).

ಈ ಮೂರೂ ಅಂಗಗಳು ಅನ್ಯೋನ್ಯವಾಗಿ ಸೇರಿ ಕೆಲಸಮಾಡುತ್ತಿರುವ ಸಂಸ್ಕೃತಿಯ ನಡವಳಿಕೆಯನ್ನು ಸಂಸ್ಕಾರ ಎಂದು ಕರೆಯಬಹುದು. ಒಂದು ಜನವರ್ಗದ ನಂಬಿಕೆಗೂ ನಡುವಳಿಕೆಗೂ ಅದೇ ರೀತಿ ಅವರ ಶಕ್ತಿ ಪ್ರಯೋಗಕ್ಕೂ ಸುಸಂಬಂಧ ಇಲ್ಲದಿದ್ದಲ್ಲಿ ಅದು ಗತಿಗೆಟ್ಟ ಸಂಸ್ಕೃತಿಯಾಗಿರುತ್ತದೆ. ಉದಾ: ರೈತ ಸಂಸ್ಕೃತಿ, ರೈತರು ನಂಬಿಕೆಯಲ್ಲಿ ಪುರೋಹಿತ ವರ್ಗವನ್ನು ಅನುಸರಿಸುತ್ತಾರೆ. ಅವರ ಆರ್ಥಿಕ ಚಟುವಟಿಕೆ ಭೂಸಂಬಂಧದ ಉತ್ಪತ್ತಿ ಯಾಗಿರುತ್ತದೆ. ವೈದಿಕ ಸಂಸ್ಕೃತಿ, ಕಥೆ, ಪುರಾಣ, ನಂಬಿಕೆ ಭೂಮಿಯ ಹತ್ತಿರದಲ್ಲಿ ಇಲ್ಲ. ದಲಿತರಿಗೆ ನಂಬಿಕೆ ಸಂಸ್ಕೃತಿ ವೈದಿಕರದು, ನಡವಳಿಕೆ ಸಂಸ್ಕೃತಿ ರೈತರದು. ಹಾಗಾಗಿ ಅವರು ಸೇವಕರು, ಯಾವ ಸಂಸ್ಕೃತಿ ಬೇರೊಂದು ಸಂಸ್ಕೃತಿಯನ್ನು ತನ್ನ ನಂಬಿಕೆ, ನಡವಳಿಕೆಯಾಗಿ ಮತ್ತು ಶಕ್ತಿಯಾಗಿ ಒಪ್ಪಿಕೊಂಡಿರುತ್ತದೋ ಅದು ಸ್ವತಂತ್ರ ಸಂಸ್ಕೃತಿ ಆಗಿರುವುದಿಲ್ಲ, ಇನ್ನೊಂದು ಸಂಸ್ಕೃತಿಯನ್ನು ಅನುಕರಿಸುವುದು ಬೇರೆ, ಅದರ ಜೊತೆಗೆ ಒಡನಾಡುವುದು ಬೇರೆ ಈ

ಮೂಲಕ ನನ್ನ ಜ್ಞಾನವನ್ನು ಹೇಳುತ್ತಿದ್ದೇನೋ ಅಥವಾ ಅಜ್ಞಾನ ಪ್ರದರ್ಶನ ಮಾಡುತ್ತಿದ್ದೇನೊ ಎಂಬುದನ್ನು ಕೇಳುಗ ಚಿಂತಕರಾದ ನೀವೇ ಹೇಳಬೇಕು.

**ಬಹು ಸಂಸ್ಕೃತಿ ಚಿಂತನೆ ನಮಗೆ ಏನು ಹೇಳುತ್ತದೆ.?**

---

೧. ಹೊಸ ರಾಜಕೀಯ ಶಕ್ತಿಗಳ ಧೃವೀಕರಣವೊ

ಅಥವಾ

ಸಾಂಸ್ಕೃತಿಕ ರಾಜಕೀಯದ ಹೊಸ ಅವತಾರವೊ

9. ಹೊಸ ಅಭಿವೃದ್ಧಿ ಚಿಂತನೆಯೊ

ಅಥವಾ

ಮೂಲ ಮಾತೃಕಾವಾದವೊ (Archytypal)

(ಆಹಾರ ಮಾದರಿ, ಉಡುಪು ಮಾದರಿ, ಅಲಂಕಾರ ಮಾದರಿ.... ಉಳಿಸಿಕೊಳ್ಳುವ ಹಟ)

೩. ಕಾರಣ ಸಂಬಂಧಿ ಚಟುವಟಿಕೆಯೊ (Instrumental)

ಅಥವಾ

ಆದರ್ಶದ ಹೊಸ ಪರಿಕಲ್ಪನೆಯೊ (Ideological)

೪. ಕ್ರಿಯಾಧಾರಿತ ಜನ ಸಂಘರ್ಷವೊ

ಅಥವಾ

ಮಾದರಿ ಸ್ವರೂಪದ್ದೊ (Typological)

೫. ಸಾಂಸ್ಕೃತಿಕ ಪುನರುಜೀವನವೊ

ಅಥವಾ

ಸಂರಕ್ಷಣಾ ತತ್ವದ ಪುನರ್ ಪ್ರತಿಪಾದನೆಯೊ (Protectionist)

(ಎಲ್ಲವೂ ಚಕ್ರಗತಿಯಲ್ಲಿ ಬರುತ್ತದೆ: ಭಾರತದ ಕಾಲಕಲ್ಪನೆ) (Caste/Religion Production)

ಅಮೆರಿಕಕ್ಕೆ ಎರಡು ರೀತಿಯ ಪ್ರತಿಕ್ರಿಯೆ ಇದೆ ಎಂದು ನನ್ನ ತಿಳುವಳಿಕೆ; ಅದು ಹೇಳುತ್ತದೆ (i) Multi Culturalism is new racism, Next to





racism. (ii) Positive and desirable, rather than negative or threatening.

**ಬಹು ಸಂಸ್ಕೃತಿ ಎಂದರೆ ಯಾವುದು?**

ಸಂಖ್ಯೆಯಲ್ಲಿ ಸಂಸ್ಕೃತಿಗಳು ಹಲವು ಇವೆ. ಭೌಗೋಳಿಕ, ಚಾರಿತ್ರಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸೌಲಭ್ಯಕ್ಕೆ ಅನುಗುಣವಾಗಿ ಸಂಸ್ಕೃತಿಗಳು ಭಿನ್ನ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಸಂಸ್ಕೃತಿಗಳ ಈ ಭಿನ್ನತೆ ಅಥವಾ ಬಹುತ್ವಕ್ಕೆ ಅವುಗಳು ಒಪ್ಪಿಕೊಂಡ ಮೌಲ್ಯ ಮತ್ತು ವ್ಯವಸ್ಥೆ ಮುಖ್ಯ ಕಾರಣ. ಆದರೆ ಈಗ ಬಹು ಸಂಸ್ಕೃತಿಗಳು' ಎಂಬ ಪರಿಕಲ್ಪನೆ ತುಂಬ ಹೊಸದಾಗಿ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣ "ಏಕ" ಎಂಬ ಬಕಾಸುರ ಸಂಸ್ಕೃತಿ ಉಳಿದ ಸಂಸ್ಕೃತಿಗಳನ್ನು ಅಡವಿಟ್ಟುಕೊಂಡಿರುವುದರಿಂದ. 'ಏಕ ಸಂಸ್ಕೃತಿಗೆ' 'ಬಹುಸಂಸ್ಕೃತಿ'ಗಳ ಸವಾಲು ಎಂದರೆ ಯಜಮಾನ ಸಂಸ್ಕೃತಿಗೆ ಸಾಮಾನ್ಯ ಜನರ ಪ್ರತಿಭಟನೆ ಎಂದು ಅರ್ಥ.

ಬಹು ಸಂಸ್ಕೃತಿಯ ಆಲೋಚನಾಕ್ರಮ ಹುಟ್ಟಿಕೊಂಡಿರುವುದೆ ಏಕಾಧಿಪತ್ಯದ ಏಕಮಾದರಿ ಸಂಸ್ಕೃತಿಯ ಒತ್ತಡದಿಂದ. ಜಗುತ್ತಿಗೆ ಜಾಗತೀಕರಣ ಮತ್ತು ಭಾರತಕ್ಕೆ ಹಿಂದೂ ಸಂಸ್ಕೃತಿ ಇಂಥ ಒತ್ತಡಗಳು,

ಬಹು ಸಂಸ್ಕೃತಿಗಳನ್ನು ಸಂರಕ್ಷಣಾ (Protection) ಸಿದ್ಧಾಂತದ ಮೇಲೆ ಗುರುತಿಸಿಕೊಳ್ಳಬಾರದು. ಅವು ಇತರ ಪ್ರಸ್ತುತ ಎಲ್ಲ ಸಂಸ್ಕೃತಿಗಳ ಜೊತೆಗೆ ಭಾಗವಹಿಸುವಿಕೆ ಮತ್ತು ಸೃಜನಶೀಲವಾಗುವ ನೆಲೆಯಿಂದ ವಿವರಿಸಿಕೊಳ್ಳಬೇಕು. ಈಗ ನಮ್ಮ ಸ್ಥಿತಿಯಲ್ಲಿ ಬಹುಸಂಸ್ಕೃತಿ ಪರಿಕಲ್ಪನೆಯನ್ನು ಎರಡು ಸ್ತರದಲ್ಲಿ ನಿರ್ವಹಿಸಿಕೊಳ್ಳಬಹುದು.

೧. ದೇಶೀ ಏಕಸ್ವಾಮ್ಯ ಸಂಸ್ಕೃತಿಗೆ ಎದುರಾಗಿ

೨. ಅನ್ಯದೇಶಿ ಏಕಸ್ವಾಮ್ಯ ಸಂಸ್ಕೃತಿಗೆ ಎದುರಾಗಿ

ಎದುರಾಗಿ ಎಂದರೆ ಆ ಯಜಮಾನ ಸಂಸ್ಕೃತಿಗೆ ಜ್ಞಾನಕ್ಕೆ ಸೃಜನಾತ್ಮಕ ಮುಖಾಮುಖಿಯಾಗಿ; ಯುದ್ಧದ ರೀತಿಯಲ್ಲಿ ಮುಖಾಮುಖಿಯಾಗಿ ಅಲ್ಲ. ಏಕಸ್ವಾಮ್ಯ ಸಂಸ್ಕೃತಿ ಬಹು ಸಂಸ್ಕೃತಿಗಳನ್ನು ಹೇಗೆ ಸಂಪನ್ಮೂಲಗಳನ್ನಾಗಿ ಮಾಡಿಕೊಂಡು ಬೊಜ್ಜು ಬೆಳಸಿಕೊಂಡಿದೆಯೊ ಅದನ್ನು ಇಳಿಸುವ ಮತ್ತು ತಾವು ದೃಢಕಾಯವಾಗುವ ಸ ಸಲುವಾಗಿ.

ಆದರೆ ಬಹುಸಂಸ್ಕೃತಿಯ ಪರವಾಗಿ ಎರಡು ಆತಂಕಕಾರಿ ಪ್ರವೃತ್ತಿಗಳು ಎದ್ದು ಕಾಣುತ್ತಿವೆ. ಬಹು ಸಂಸ್ಕೃತಿಗಳ ಸಂರಕ್ಷಣೆ (Protecting Multicultures) ರಾಷ್ಟ್ರೀಯವಾದಿಗಳ ದೃಷ್ಟಿ (Nationals approach) ಬಹು ಸಂಸ್ಕೃತಿಗಳ ನಿರ್ವಹಣೆ (Managing Multicultures) ಬಹುರಾಷ್ಟ್ರೀಯವಾದಿಗಳ ದೃಷ್ಟಿ (Multinationals approach).





ಮೊದಲ ಪ್ರವೃತ್ತಿಯವರು ಸನಾತನ ಸಂಸ್ಕೃತಿಯನ್ನು ಸಂರಕ್ಷಿಸಬೇಕೆಂಬ ಮೂಲಭೂತವಾದಿಗಳು. ಎರಡನೆಯ ವರ್ಗದವರು ಆಧುನಿಕ ಮೂಲಭೂತವಾದಿಗಳು. ಇವರ ಉದ್ದೇಶ ಬಹು ಸಂಸ್ಕೃತಿಯ ಒಳಾವರಣವನ್ನು ತಮ್ಮ ವ್ಯಾಪಾರಕ್ಕಾಗಿ ಹೇಗೆ ಬಳಸಿಕೊಳ್ಳಬೇಕು ಎಂಬುದು.

ಆದರೆ ನಮ್ಮ ಕಾಳಜಿ ಒಂದು ಸಂಸ್ಕೃತಿ ಅಲ್ಲ ; " * " ಬಹು ಸಂಸ್ಕೃತಿಗಳು ತಮ್ಮದೇ ನೆಲೆಯಿಂದ ಹೇಗೆ ಸಮಕಾಲೀನ ಅಭಿವೃದ್ಧಿಗೆ ಬರಬೇಕು ಎಂಬುದು ನಮ್ಮ ಚಿಂತನೆ.

ನಾವು, ಬಹು ಜನರು ಸಂಸ್ಕೃತಿಯ ಬಗ್ಗೆ ಮಾತನಾಡುವಾಗ ಅದರ ಸ್ತಬ್ದ ಭಾಷೆಯ (ಸ್ಥಿತಿ) ಬಗ್ಗೆ ಮಾತನಾಡುತ್ತ ಅದನ್ನು ಕೊಂಡಾಡುತ್ತ, ಮುದ್ದಾಡುತ್ತ ಮೋಹಗೊಳ್ಳುತ್ತೇವೆ. ಆಗ, ಅಲ್ಲಿ ನಾವು ಕುಂತಿರುತ್ತೇವೆ, ಹೆಚ್ಚೆಂದರೆ ಎದ್ದು ನಿಂತಿರುತ್ತೇವೆ. ಸಂಸ್ಕೃತಿಯನ್ನು ಒಂದು ಮೂರ್ತ ರೂಪ ಎಂದು ಆಲೋಚಿಸುವ ಕಾರಣದಿಂದ ಈ ತಪ್ಪು ಮಾಡುತ್ತೇವೆ. ಇಂಥ ಕಡೆ ಸಂಸ್ಕೃತಿ ಒಂದು ಧಾರ್ಮಿಕ ಪಂಥ, ಒಂದು ಜಾತಿ, ಅಥವಾ ಒಂದು ವರ್ಗದ ಹಕ್ಕು, ಸ್ವಾಮ್ಯ, ನಿಯಮ ಅಥವಾ ಕೆಲವು ತೀರ್ಮಾನಗಳ ಮೊತ್ತವಾಗಿರುತ್ತದೆ. ಇದನ್ನು ಇರುವ ಹಾಗೆಯೆ ಎಲ್ಲ ಕಾಲಕ್ಕೂ

ಕೊಂಡೊಯ್ಯುವ ಹಟವನ್ನು ಅದರ ಯಜಮಾನರು ಮಾಡುತ್ತಾರೆ. ಇವುಗಳನ್ನೆ ಬಹುಸಂಸ್ಕೃತಿಯ ಮಾದರಿಗಳನ್ನಾಗಿ ಇಟ್ಟುಕೊಂಡು ಮುನ್ನಡೆದರೆ ನಾವು ನಮ್ಮೊಳಗಿನ ಒಬ್ಬರನ್ನೊಬ್ಬರು ವೈರಿಗಳಾಗಿ ಎದುರುಗೊಳ್ಳಬೇಕಾಗುತ್ತದೆ.

ಏಕ ಮಾದರಿಯ ಧಾರ್ಮಿಕ ಸಂಸ್ಥೆಗಳಾದ ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ ಮತ್ತು ಯಹೂದಿಯ ಹಾಗೆಯೆ ಏಕಮಾದರಿ ವೈಜ್ಞಾನಿಕ ಪರಿಭಾಷೆಗಳಾದ ಕಮ್ಯೂನಿಸಂ, ಬಂಡವಾಳಶಾಹಿ ಮತ್ತು ಜಾಗತೀಕರಣಗಳಂಥವುಗಳು ಕೂಡ ಬಹುಜನರ ಅಭಿವೃದ್ಧಿ ವಿರೋಧಿಗಳಾಗಿವೆ. ಇವು ಬಹುಜನರನ್ನು ಕೂಡಿಸಿಕೊಳ್ಳುತ್ತವೆ, ನಿಜ. ಆದರೆ ಅವರನ್ನು ಸೃಜನ ಶೀಲರನ್ನಾಗಿ ಮಾಡುವುದಿಲ್ಲ. ಬಹು ಜನರನ್ನು ಕಾರ್ಮಿಕ ವರ್ಗ ಅಥವಾ ಕಾರ್ಮಿಕ ರಾಜ್ಯ ಮಾಡುವುದಿದ್ದರೂ ಅವರು ದುಡಿಯುವ ವರ್ಗವಾಗಿ ನಿರ್ವಚಿಸಲ್ಪಡುತ್ತಾರೆ. ಈ ಮೊತ್ತದ ಚಿಂತನೆಯೆ ಅವರು ತಮ್ಮ ತಮ್ಮ ನೆಲೆಯಲ್ಲಿ ಸೃಜನಶೀಲರಾಗುವ ಅವಕಾಶವನ್ನು ಕಳೆದು ಕೊಳ್ಳುತ್ತಾರೆ. ಇವರು ಒಂದು ಪ್ರಗತಿಯ ಏಕತತ್ವಕ್ಕಾಗಿ ಕೆಲಸ ಮಾಡುವವರೇ ಹೊರತು ತಮ್ಮ ಹುಟ್ಟು ನೈಪುಣ್ಯವನ್ನು ಪ್ರದರ್ಶಿಸುವವರಲ್ಲ. ಈ ಥರದ ಏಕಾಕಾರ ಅಭಿವೃದ್ಧಿ ಚಿಂತನೆಯ ಇಷ್ಟೆಲ್ಲ ಬಹುಜನರ ನಿಷ್ಕ್ರಿಯತೆಗೆ ಕಾರಣವಾಗಿದೆ. ಬ್ರಾಹ್ಮಣ, ವೈಶ್ಯ, ಶೂದ್ರ, ನೌಕರ, ಕಾರ್ಮಿಕ, ಶಿಕ್ಷಕ.... ಇವರೆಲ್ಲ ಸತ್ತು ಬದುಕಿರುವುದು ಏಕರೂಪದ ಅಭಿವೃದ್ಧಿ ಸಿದ್ಧಾಂತದ ಬೇರೆ ಬೇರೆ ಮಾದರಿಗಳಾಗಿರುವುದರಿಂದ.





**ಸಂಸ್ಕೃತಿ : ಪಿತೃ ವಾಕ್ಯಪರಿಪಾಲನೆ ಅಥವಾ ಮಾತೃ ಭಕ್ತಿಯ ಸೂತ್ರವಾಗಿರುವುದಿಲ್ಲ.**

ರಾಮ, ಶ್ರೀರಾಮನಾದದ್ದು ಪಿತೃವಾಕ್ಯ ಪರಿಪಾಲನೆಯಿಂದ ಅಲ್ಲ; ಅವನು ಪಯಣದಲ್ಲಿ ಮುಖಾಮುಖಿಯಾದ ಬಹುಸಂಸ್ಕೃತಿಗಳ ಒಡನಾಟದಿಂದ. ಅವನಿಗೊಂದು ರಾಜ್ಯವು, ಚರಿತ್ರೆಯೂ ಸೃಷ್ಟಿಯಾದುದು ಅವನು ತನ್ನನ್ನು ಇತರರೊಡನೆ ವಿವರಿಸಿಕೊಂಡದ್ದರಿಂದ. ಹಾಗೆ ಸಂಸ್ಕೃತಿ ಸತ್ಯಗಳ ಸಾಕ್ಷಾತ್ಕಾರವೊ ಅಥವಾ ಸುಳ್ಳುಗಳ ಸರ ಮಾಲೆಯೋ ಆಗಿರುವುದಿಲ್ಲ. ಅದು ಹುಟ್ಟಿಸಿಕೊಂಡವರಿಗೆ ಪರವಾಗಿರುವಂತೆ ಹೊರಗಿನವರಿಗೆ ಒಂದು ಮಾದರಿಯಾಗಿಯೂ ಕ್ರಿಯೆಯಲ್ಲಿ ಸೃಜನಾತ್ಮಕ ವಿರೋಧಿಯಾಗಿಯೂ ಕೆಲಸ ಮಾಡುತ್ತದೆ. ಆದರೆ ಸಂಸ್ಕೃತಿ ಕೂಡುವಲ್ಲಿ ಒಂದು ಮಹತ್ವದ ಜನಪರ ಅಶಯ ಇರುತ್ತದೆ. ಅದು ತನ್ನ ಗುಂಪಿನ ಪರವಾಗಿರುವಂತೆ ಜನರು ಸಾಂಘಿಕವಾಗಿ ಇರಲೇಬೇಕಾದ ಒಂದು ಸತ್ಯದ ಮಾದರಿಯೂ ಆದ ಸಾರ್ವತ್ರಿಕ ಸತ್ಯವಾಗಿರುತ್ತದೆ.

ಇಂಥದೊಂದು ಸಂಸ್ಕೃತಿ ಸಮಾಜದ ವೈಶಿಷ್ಟತೆ (distinction). ಇದು ಅಪರಾಧೀಕರಣಗೊಂಡಾಗ ತಾರತಮ್ಯ (disorimination) ವಾಗುತ್ತದೆ. ಈ ಹೊತ್ತಿನ ಸಂಸ್ಕೃತಿಗಳು ಬಹುಬೇಗ ರಾಜಕೀಯ ಅಪರಾಧೀಕರಣಕ್ಕೆ ಒಳಗಾಗುತ್ತಿವೆ. ಸಾಂಸ್ಕೃತಿಕ ಏಕಸ್ವಾಮ್ಯವೆಂದರೆ ಅದು ರಾಜಕೀಯ ಅಪರಾಧೀಕರಣವೇ ಆಗಿದೆ. ಈ ಹಿಂದೆ ನಾವು ಜನಾಂಗ (race) ಜಾತಿ (caste) ವರ್ಣ (colour) ಮತ್ತು ಧರ್ಮ (religion) ಸಾಮಾನ್ಯರಿಗೆ ಅಪರಾಧಿ ಸ್ಥಾನದಲ್ಲಿದ್ದವು ಎಂದು ಹೇಳುತ್ತಿದ್ದೆವು. ವೈಜ್ಞಾನಿಕ ಚಿಂತನೆ ಅದನ್ನು ಒಡೆಯಿತು. ಆದರೆ ಈಗ ಅದೇ ಜಾಗತೀಕರಣವೆಂಬ ಬಹುದೊಡ್ಡ ಸಾಂಸ್ಕೃತಿಕ ರಾಕ್ಷಸನನ್ನು ಸೃಷ್ಟಿಸಿದೆ.

ಯಾಹೊತ್ತೂ ಈ ರಾಕ್ಷಸ ಬಳಸುವುದು, ತಿನ್ನುವುದು ಮತ್ತು ಬೇಡವಾದುದನ್ನು ಕಸವಾಗಿ ರಾಶಿ ಹಾಕುವ ಮೂಲಕ ಹೊರಮುಖವಾಗಿ ಏರು ಬೆಳವಣಿಗೆಯಲ್ಲಿದ್ದಾನೆ. ಇವನಲ್ಲಿ ಬಹುಮುಖ ಬೆಳವಣಿಗೆ ಇಲ್ಲ, ಒಳಗೆ ಅಂತರಂಗವೆಂಬುದೇ ಇಲ್ಲ, ಜಗತ್ತನ್ನು ಈತ ದೊಡ್ಡ ಕಸದ ತೊಟ್ಟಿಯನ್ನಾಗಿ ಮಾಡುತ್ತಿದ್ದಾನೆ. ಈ ಏಕಾಧಿಪತಿ ಸಂಸ್ಕೃತಿ

೧. ಅಗತ್ಯತೆಗಳಿಗಿಂತ ಅನನ್ಯತೆಗಳಿಗೆ ಒತ್ತು ಕೊಟ್ಟಿದೆ.

೨. ದುರಾಸೆಯನ್ನು ಬಿತ್ತುತ್ತಿದೆ.

೩. ಭೂಮಿಯಲ್ಲಿಯ ಮತ್ತೆ ಸೃಷ್ಟಿಸಿಕೊಳ್ಳಲಾಗದ ಸಂಪತ್ತನ್ನು ಬರಿದು ಮಾಡುತ್ತಿದೆ.

೪. ಹಿಂಸೆಯನ್ನು ಹೆಚ್ಚಿಸುತ್ತಿದೆ.





೫.ದೊಡ್ಡದು, ದೊಡ್ಡದು ಬೇಕೆಂಬ ಅವಾಂತರ ಸೃಷ್ಟಿಸಿದೆ.

೬. ಉದ್ಯಮವನ್ನು ಅಪರಾಧೀಕರಣ ಮಾಡುತ್ತಿದೆ.

೭. ಪರಿಸರವನ್ನು ಕಚ್ಚಾಮಾಲು ಎಂದು ಭಾವಿಸಿದೆ.

೮. ಅಭಿವೃದ್ಧಿ ಎನ್ನುವುದನ್ನು ಒಂದು ಭಯೋತ್ಪಾದಕ ಚಟುವಟಿಕೆಯಾಗಿ ಮಾಡಿದೆ.

೯. ಮಾನವ ಕೇಂದ್ರಿತವಾಗಿ ಜೀವಿಜಗತ್ತನ್ನು ನಿರಾಕರಿಸಿದೆ.

೧೦. ಮೆದುಳು ಪ್ರಧಾನವಾಗಿ ಹೃದಯ ಹೀನವಾಗಿದೆ.

೧೧. ಸ್ಥಳೀಯತೆಯನ್ನು ಮುಳುಗಿಸಿದೆ.

೧೨. ಬದುಕನ್ನು ಅಮಾನವೀಯಗೊಳಿಸುತ್ತಿದೆ.

೧೩. ಬಳಕೆಯಷ್ಟೆ ಮಾನವ ಚಟುವಟಿಕೆ ಎನ್ನುವಂತೆ ಮಾಡಿದೆ.

೧೪. ಜಗತ್ತಿನ ಸಮಾಜಗಳ ಮಧ್ಯೆ ಇರುವ ಅನ್ಯೋನ್ಯ ನಿಯಮಗಳನ್ನು ನಾಶಮಾಡಿದೆ.

೧೫. ವಸ್ತು ಜಾಗತೀಕರಣ ಮಾಡುತ್ತಿದೆ, ಮಾನವನ ಜಾಗತೀಕರಣವನ್ನು ಮರೆಮಾಚಿದೆ.

೧೬. ಭವಿಷ್ಯವನ್ನು ಮಂಪರಿನಲ್ಲಿಟ್ಟು ಅತಿ ವರ್ತಮಾನವನ್ನು ಕೀರ್ತಿಸಿದೆ.

೧೭. ಇದು ಹೊರಗಿನ ಬೆಳವಣಿಗೆ ಮಾತ್ರವಾಗಿದೆ. ಮನುಷ್ಯನ ಒಳಗೆ ಬೆಳೆಯಬೇಕಾದ ಅಂತಃಕರಣವನ್ನು ಹಿಸುಕಿ ಹಾಕಿದೆ.

**ಬಹು ಸಂಸ್ಕೃತಿಗಳ ಮಿತಿಯನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ.**

೧. ನಿಷ್ಕ್ರಿಯ ಸಂಸ್ಕೃತಿಗಳು ( ಜಿಗಿತ ಸಾಧ್ಯವಿಲ್ಲದ ; ಆಧುನಿಕತೆ ಒಂದು ಜಿಗಿತ)

೨.ಭಾಗಿಗಳಾಗುವ ಗುಣ ಇಲ್ಲ (ಆದ್ದರಿಂದಲೆ ಜಾಗತೀಕರಣ ವಿರೋಧಿಸುತ್ತೇವೆ)

೩.ಬಂಡವಾಳವಿಲ್ಲದ (ದುಡಿಮೆ ಸಾಲದ)

೪. ಸ್ಪರ್ಧೆ ಇಲ್ಲದ

೫. ಅನ್ವೇಷಣಾ ಮನೋಧರ್ಮ ಕಾಣದ

೬. ಭಾವನೆಗಳನ್ನು ನಿರ್ಬಂಧಿಸಿಕೊಂಡ

೭.ಧಾರ್ಮಿಕ

೮.ತುಂಬ ಗಂಡು ಪ್ರಧಾನ

ಪುರದ ಪುಣ್ಯ

೯. ಸಂಪನ್ಮೂಲ ಸಂಸ್ಕೃತಿಗಳು (ಅಭಿವೃದ್ಧಿ ಸಂಸ್ಕೃತಿಗಳಲ್ಲ)

೧೦. ರಕ್ತ ಸಂಬಂಧಿ

ಇವುಗಳನ್ನು ಅಭಿವೃದ್ಧಿ ಸಂಸ್ಕೃತಿಗಳನ್ನು (High context cultures, Low Con- text culture) ಎಂದೂ ಕರೆದಿದ್ದಾರೆ.

ದತ್ತಕಗಳ ಮೇಲೆ ಹೆಚ್ಚು ಒತ್ತು ಹಾಕುವ ಸಂಸ್ಕೃತಿಗಳು ಎತ್ತರ ಪ್ರಬಲ ಸಂದರ್ಭ ಸಂಸ್ಕೃತಿಗಳು : ಉದಾ: ಭಾರತ, ರಾಮು, ಹಿಂದುತ್ವ, ಭಾರತ ಪ್ರಕಾಶಿಸುತ್ತಿದೆ. ದತ್ತಕಗಳನ್ನು ಸಮಕಾಲೀನ ಬದುಕುವ ಮಾದರಿಗಳನ್ನಾಗಿ ಮಾಡಿಕೊಳ್ಳುವ ಸಂಸ್ಕೃತಿಗಳು ಕೆಳಸಂದರ್ಭದ ಸಂಸ್ಕೃತಿಗಳು, ಉದಾ; ಜಪಾನ್, ಅಮೆರಿಕಾ ಇತ್ಯಾದಿ ನನಗೆ ಅನಿಸುವ ಹಾಗೆ, ಭಾರತದ ಸಂದರ್ಭದಲ್ಲಿ ಬಹುಸಂಸ್ಕೃತಿ ಚಿಂತನೆ ಜಾತಿ ಧರ್ಮದ ಪುನರುತ್ಥಾನಕ್ಕೆ ಅವಕಾಶ ನೀಡಬಾರದು ಮತ್ತು ಹಾಗೆ ಇಲ್ಲ. ಭಾರತದ ಬಹುಸಂಸ್ಕೃತಿ ಚಿಂತನೆ

೧. ಶಕ್ತಿಯ ವಿತರಣೆ

೨. ಜ್ಞಾನದ ಪಾಲಿಗಾಗಿ ತಹತಹಿಸಿದೆ.

ನನ್ನ ಜಾನಪದ ಅಧ್ಯಯನದಲ್ಲಿ ಇದೇ ಕೆಲಸಮಾಡಿದ್ದೇನೆ. ಉದಾ : ಅಕೆಡೆಮಿಯ ಕಾರ್ಯಕ್ರಮದ ಸಂದರ್ಭದಲ್ಲಿ ಬರೆದ ಬರಹಗಳು.

ತಲೆಮಾರು ಕೃತಿಗೆ : ಒಂದೆ ಚಿತ್ತದಿಂ ನೆನೆದು

ಜ್ಞಾನ ಶೋಧ ಮಾಲೆಗೆ: ಪುರದಪುಣ್ಯಂ ಪುರುಷ ರೂಪಿದೆ ಪೋಗುತಿದೆ

ಜಾನಪದ ಪರಿಕಲ್ಪನೆಗೆ : ನಮ್ಮ ಹಣತೆಗಳೇಕೆ ಉರಿಯುತ್ತಿಲ್ಲ

ವಿಚಾರ ಸಂಕಿರಣದ ಆಶಯ ಭಾಷಣದಲ್ಲಿ ;

೧. ನಮ್ಮ ಮನೆಯಲ್ಲಿ ಜ್ಞಾನದ ಸದ್ದು ಕೇಳುತ್ತಿದೆ (ಚಿತ್ರದುರ್ಗ)

೨. ಅಮ್ಮ ಮತ್ತು ಯುದ್ಧ (ದಾವಣಗೆರೆ)

೩. ಆಧುನಿಕ ಸಂದರ್ಭದಲ್ಲಿ ಜನಪದ ದೇವತೆಗಳ ಅನಿವಾರ್ಯತೆ (ಚಾಮರಾಜನಗರ)

೪. ಸಂಸ್ಕೃತಿ ಸೋರುತ್ತಿದೆ

೫. ಜಾನಪದ ಜೀವಂತ ಪಳಯುಳಿಕೆ ಎಂದು ಹೇಳಿ ಜನಪದ ಕಲೆಗಳನ್ನು ಕೊಂದೆವು(ಕುವೆಂಪು ವಿ. ವಿ.)





ಜಾಗತೀಕರಣ ಮತ್ತು ಬಹುಸಂಸ್ಕೃತಿಯ ಸಂದರ್ಭದಲ್ಲಿ ನನಗೆ ನಾನೇ ಹಾಕಿಕೊಳ್ಳುವ ಪ್ರಶ್ನೆಗಳಿವು:

೧. ೫೦೦% ಲಾಭ ಕೊಟ್ಟು ಆರೋಗ್ಯ ಉಪಚಾರ ಪಡೆಯಬೇಕೆ?

9. ಧರ್ಮ, ರಾಮ, ಕ್ರಿಸ್ತ ಅಥವಾ ಮಹಮದ್ ಆಗುವ ಅವಶ್ಯಕತೆ ಇದೆಯೆ?

೩. ಮಹಿಳೆ ಪರ ಅಥವಾ ವಿರೋಧಿ ನೆಲೆಯ ಹೊರಗೆ ತನ್ನ ನೆಲೆಯನ್ನು ಕಂಡು ಕೊಳ್ಳಲು ಆಗದೆ?

೪. ಆರ್ಥಿಕತೆ ಎಂದರೆ ಸೌಲಭ್ಯಗಳ ನಿರಂತರ ಹೆಚ್ಚಳೀಕರಣವೆ ಅಥವಾ ದೊಡ್ಡದು (೧೦೦, ಮತ್ತು ದೊಡ್ಡವರಾಗುವ ಚಲನೆಯೆ?

೫. ರಾಜಕಾರಣ ಹಿಂಸೆ (violence) ಆಗಿಯೇ ಇರಬೇಕೆ?

೬. ವಿಜ್ಞಾನ ಎಂಬುದು ಇತರ ಜ್ಞಾನ ಪದ್ಧತಿಗಳು ಮತ್ತು ಪರಿಸರವನ್ನು ಸಂಪನ್ಮೂಲ ಓದಂಡಿ ಮಾಡಿಕೊಂಡಲ್ಲದೆ ಬೆಳೆಯದೆ ?

**ಅಲೆಮಾರಿಗಳು; ಇರವು ಮತ್ತು ಅರಿವು**

---

ಕನ್ನಡ ವಿಶ್ವವಿದ್ಯಾಲಯವು ೧೬, ೧೭ ಮತ್ತು ೧೮ ಸೆಪ್ಟೆಂಬರ್ ೨೦೦೩ರಂದು ಬೀದರ್‌ನಲ್ಲಿ ನಡೆಸುತ್ತಿರುವ ದೇಸಿ ಸಮ್ಮೇಳನ ಚಾರಿತ್ರಿಕ ಮಹತ್ವವನ್ನು ಹೊಂದಿದೆ. ಈ ಸಮ್ಮೇಳನದಲ್ಲಿ ಅಲೆಮಾರಿಗಳ ಜೀವನ ಕ್ರಮವನ್ನು ಆಧುನಿಕ ಅಭಿವೃದ್ಧಿ ಕ್ರಮದ ಜೊತೆಗೆ ಜೋಡಿಸಿ ಚರ್ಚಿಸಲಾಗುತ್ತಿದೆ. ಅಲೆಮಾರಿಗಳ ಸ್ಥಿತಿ ದೇಶಿ ಎಂದೂ ಆಧುನಿಕ ಬದುಕು ವಿದೇಶಿ ಎಂದೂ ಭಾವಿಸಿಕೊಂಡ ಚಿಂತನಕ್ರಮದ ಪ್ರಸ್ತುತತೆಯೂ ಇಲ್ಲಿ ಚರ್ಚೆಗೆ ಒಳಗಾಗಬೇಕಿದೆ. ನಾವು ಕಟ್ಟಿಕೊಂಡ ವೈರುಧ್ಯ ನೆಲೆಗಳ ಚಿಂತನೆ ನಮ್ಮನ್ನು ಯಾವ ಧೈವಕ್ಕೆ ಎಳೆದೊಯ್ಯಬಹುದು ಎಂಬ ಆತಂಕ ನಮ್ಮೊಳಗೆ ಇರುವುದು ಅಗತ್ಯ.

ನಮ್ಮ ಈಗಿನ ಲೆಕ್ಕದ ಕರ್ನಾಟಕದ ಅಲೆಮಾರಿ ಜನಾಂಗಗಳೆಂದರೆ, ಸುಡುಗಾಡು ಸಿದ್ದರು, ಕವಲೆತ್ತಿನವರು, ವೇಷಗಾರರು, ಲಂಬಾಣಿಗಳು, ಬುಡಬುಡಿಕೆಯವರು, ಹಕ್ಕಿ ಪಿಕ್ಕಿಯವರು, ದುರುಗ ಮುರುಗಿಯರು, ಹಾವಾಡಿಗರು, ದೊಂಬಿದಾಸರು, ಕಿಳ್ಳೇಕ್ಯಾತರು, ಬುಡಗ ಜಂಗಾಲರು, ಕಿನ್ನರಿ ಜೋಗಿಗಳು, ಕೊರವರು, ಕುರುಮಾಮ, ದೊಂಬರು, ಡಕ್ಕಲಿಗರು, ರಾಜಗೊಂಡರು ಇತ್ಯಾದಿ ಇತ್ಯಾದಿ. ಬುಡಕಟ್ಟು ಜನರು, ಅಲೆಮಾರಿಗಳು ಮತ್ತು ಅಂಚಿನಲ್ಲಿರುವ ಜನರನ್ನು ಅಕಾಲಿಕರೆಂದೂ, ನಾವು ಅಂದರೆ ಜಗತ್ತಿನ ಸೌಲಭ್ಯಗಳಿಗೆ ತೆರೆದುಕೊಂಡವರು ಸಕಾಲಿಕರೆಂದೂ ಪ್ರಜ್ಞಾಪೂರ್ವಕವಾಗಿ ಘೋಷಿಸಿಕೊಂಡಿದ್ದೇವೆ. ಈ ಸಂದರ್ಭ ನಮ್ಮನ್ನು ಎಷ್ಟು ಕುರುಡರನ್ನಾಗಿ ಮಾಡಿದೆ ಎಂದರೆ ನಮ್ಮ ಥರ ಅಲ್ಲದ್ದು ವಾಸ್ತವ ಬದುಕು ಅಲ್ಲ. ಅದು ಇದ್ದರೆ ಸಾಮಗ್ರಿಯಾಗಿರಬೇಕು ಇಲ್ಲವೆ ನಮ್ಮ ಉದ್ದಿಮೆ ಬದುಕಿಗೆ ಸಂಪನ್ಮೂಲವಾಗಿರಬೇಕು ಎಂದು ಗಾಢವಾದ ಮೂಢ ತಿಳಿವಳಿಕೆಗೆ ತಲುಪಿದ್ದೇವೆ. ಈ ಕೇಂದ್ರ ಚಿಂತನೆ ನಮ್ಮ

ಹಳೆಯ ಪ್ರಭು, ಪುರೋಹಿತ ಮತ್ತು ಮಾಲೀಕ ಜೀವನ ಚಿಂತನೆಗೆ ಭಿನ್ನವಾದುದೇನೂ ಅಲ್ಲ, ಕೇಂದ್ರ ಬದಲಾಗಿದೆ ಅಷ್ಟೆ, ಸ್ಥಳೀಯ ಯಜಮಾನ ಕಳೆದುಹೋಗಿ ಅವನ ಸ್ಥಾನದಲ್ಲಿ ಆಧುನಿಕ ಜಾಗತಿಕ ಪ್ರಭು ಕೇಂದ್ರವನ್ನು ವಶಪಡಿಸಿಕೊಂಡಿದ್ದಾನೆ. ಈ ಪ್ರಭುವಿಗೆ ಹೊರಗೆ ನಿಲ್ಲುವವರೆಲ್ಲ ದೇಸಿ ಆಗ ಹೊರಟಿದ್ದಾರೆ. ಈ ದೇಸಿಗಳು ಮತ್ತು ಅಲೆಮಾರಿ ಎಂಬ ದೇಸಿ ಬೇರೆ ಬೇರೆ ಎಂಬುದನ್ನು ನಾವು ಸ್ಪಷ್ಟವಾಗಿ ಗ್ರಹಿಸಿಕೊಳ್ಳಬೇಕು. ಆದ್ದರಿಂದ ಮೊದಲು

೧) ನಮ್ಮೊಳಗಿನ ದೇಸಿ ಗ್ರಹಿಕೆ ಮತ್ತು ಪರಿಕಲ್ಪನೆ ಎಂಥದು?

೨) ಆಧುನಿಕ ಅಭಿವೃದ್ಧಿ ಪರಿಕಲ್ಪನೆಯಲ್ಲಿ ಅಲೆಮಾರಿಗಳನ್ನು ಎಲ್ಲಿ ನಿಲ್ಲಿಸುತ್ತೀರಿ?

ಎಂಬುದನ್ನು ಸ್ಪಷ್ಟ ಮಾಡಿಕೊಳ್ಳಬೇಕು.

ಈಗ

೧) ಪೂಜೆಯನ್ನು ಪುನರುಜೀವಿಸುತ್ತಿರುವ ಪುರೋಹಿತ

೨) ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತ

೩) ಖಾಸಗಿ ಒಡೆತನದಲ್ಲೂ ಮೀಸಲಾತಿ ಕೇಳುತ್ತಿರುವ ದಲಿತ

೪) ವಿ.ಆರ್.ಎಸ್. ಭಯದಲ್ಲಿ ಮುಂದಿನ ಭವಿಷ್ಯ ಹುಡುಕುತ್ತಿರುವ ನೌಕರ

೫) ದೇಸೀ ಕೈಗಾರಿಕೆಗಳ ಬಂಡವಾಳವನ್ನು ಹಿಂತೆಗೆದುಕೊಂಡು ಬಹುಜನರನ್ನು ಉದ್ಯಮಕ್ಕೆ ತೊಡಗಿಸುತ್ತೇನೆಂದು ತಾನು ಭದ್ರವಾಗುತ್ತಿರುವ ರಾಜಕಾರಣಿ.

ಇವರ-ಈ-ದೇಶೀಯತೆಯ ಮಧ್ಯೆ ಅಲೆಮಾರಿಗಳು ನಿಲ್ಲುವುದೆಲ್ಲಿ?

ಇದಕ್ಕೆಲ್ಲ ನಮ್ಮದೊಂದು ಜಾನಪದ ದೃಷ್ಟಿ ಇದೆ ಎಂದು ಹೇಳುತ್ತೇವೆ. ಆದರೆ ನಮ್ಮ ಜಾನಪದ ದೃಷ್ಟಿಯೆ ಮಂಜಾಗಿದೆ. ನಮಗೆ ಎರಡು ಕಣ್ಣುಗಳಿವೆ. ಒಂದು, ಜಾನಪದ (ಪುರಾತನ - ಪರಂಪರೆಯ) ಸಾಮಗ್ರಿ. ಎರಡು, ಜಾನಪದ ನಮ್ಮ 'ಜೀವನಶ್ರೀ' ಎಂದು ನೋಡುವುದು.

ಈ ಎರಡೂ ಕೂಡ ದತ್ತ ಚಿಂತನೆಗಳ ಹೊರತು, ಪ್ರಾಯೋಗಿಕ ವಾಸ್ತವತೆಗಳಲ್ಲ. ನಮ್ಮ ಜಾನಪದ ಚಿಂತನೆ ಸಂಗ್ರಹ (collect) ಮಾಡುವ ಭೋಗಿಸುವ ಬಗ್ಗೆ ಹೇಳುತ್ತದೆಯೇ ಹೊರತು ಕೊಡುವ ಬಗ್ಗೆ ಏನಾದರೂ





ಹೇಳುತ್ತದೆಯೆ? ಈ ದಾರಿಯಲ್ಲಿ ನಡೆದರೆ ನಾವು ಅಲೆಮಾರಿಗಳನ್ನು ಸಂಗ್ರಹಿಸಬಹುದು, ನಮ್ಮೊಟ್ಟಿಗೆ ಇಟ್ಟುಕೊಳ್ಳಲು ಆಗದು.

ನಮ್ಮ ಈ ಹೊತ್ತಿನ ಜಾನಪದ ದೃಷ್ಟಿ ಸ್ಥಳೀಯ ವಸಾಹತು ಮನೋಧರ್ಮ, ನಾವು ಅಮೆರಿಕಕ್ಕೆ ಜಾನಪದ ಸಾಮಗ್ರಿಗಳು, ನಮಗೆ ಅಲೆಮಾರಿಗಳು ಜಾನಪದ ಸಾಮಗ್ರಿಗಳು, ಅಂದರೆ ನಮ್ಮ ಹಿಂದಿನ ಪ್ರಭುತ್ವ ಬಳಸಿ ಬಿಸಾಡಿದ ಸಾಮಗ್ರಿಗಳ ಈ ನಮ್ಮ ಅಲೆಮಾರಿಗಳು. ನಮ್ಮ ದೇಶೀ ಕೇಂದ್ರದಲ್ಲಿ ಪ್ರಭು, ಪುರೋಹಿತ ಮತ್ತು ಮಾಲೀಕ ಎಂಬ ಮೂರು ನಿರ್ದೇಶಕ ಕೇಂದ್ರಗಳಿದ್ದವು. ಅವು ತಮ್ಮ ಅಸ್ತಿತ್ವ ಮತ್ತು ಮುಂದುವರಿಕೆಗಾಗಿ ಕೆಲವು ಕಡ್ಡಾಯ ಸೇವೆಗಳನ್ನು ಹುಟ್ಟು ಹಾಕಿಕೊಂಡವು, ಬಳಸಿಕೊಂಡವು, ಬೇಡವಾದಾಗ ಬಿಸಾಕಿದವು. ಈ ಹಿನ್ನೆಲೆಯಲ್ಲಿ ದೇಶೀಯ ಪ್ರಭುತ್ವ ಬಳಸಿಕೊಂಡು ಬಿಸಾಡಿದ ಜನವರ್ಗದವರೆ ಈ ಹೊತ್ತಿನ ಅಲೆಮಾರಿಗಳು ಎಂದು ನಾನು ಹೇಳುತ್ತೇನೆ.

ಹೇಗೆ ಈ ಅಲೆಮಾರಿಗಳು ಬಳಕೆಯಾದರು ಎಂಬುದನ್ನು ಗಮನಿಸಿ. ಇವರು ಸೇವಕರಾಗಿದ್ದರು. ಇವರ ಸೇವೆಗಳೆಂದರೆ

೧) ಬೇಹುಗಾರಿಕೆ ಸೇವೆ

೨) ಧಾರ್ಮಿಕ ಸೇವೆ

೩) ಆರ್ಥಿಕ ಸೇವೆ

೪) ಕಲಾ ಸೇವೆ

೫) ವೃತ್ತಿ ಸೇವೆ

೬) ಜನ ಧರ್ಮ ಸೇವೆ

೭) ಭವಿಷ್ಯ ಸೇವೆ

೮) ಸೈನಿಕ ಸೇವೆ.

ಬೇಹುಗಾರಿಕೆ ಸೇವೆಯ ಫಲಾನುಭವಿ ಪ್ರಭು, ಧಾರ್ಮಿಕ ಸೇವೆಯ ಫಲಾನುಭವಿ ಪುರೋಹಿತ. ಎಲ್ಲ ಯಜಮಾನರುಗಳೂ ಕಲಾಸೇವೆಯ ಫಲಾನುಭವಿಗಳು. ದೊಂಬಿದಾಸರು, ಹಗಲು ವೇಷದವರು, ದೊಂಬರು ಮತ್ತು ಲಂಬಾಣಿ ಜನರ ಒಳಹೊಕ್ಕು ನೋಡಿ. ಇವರು ರಾಜರಿಗಾಗಿ ಒಂದಿಲ್ಲೊಂದು ಬಗೆಯ ಬೇಹುಗಾರಿಕೆ ಮಾಡುತ್ತಿದ್ದರು. ಈಗಲೂ ದೊಬಿದಾಸರಲ್ಲಿ ಬೇಹುಗಾರಿಕೆಯ





ವಿಶೇಷ ಭಾಷೆ ಇದೆ. ಇವರೆಲ್ಲ ಆ ಕಾಲದಲ್ಲಿ ಈಗಿನ ನಮ್ಮ ಭಾರತದ ಬೇಹುಗಾರರು ಪಡೆಯುವ ಗೌರವ ಮತ್ತು ಸ್ಥಾನಮಾನವನ್ನು ಹೊಂದಿದ್ದರು. ಇವರಿಗೆ ಸಂಬಂಧಿಸಿದ ಪ್ರಭುಗಳು ಮತ್ತು ರಾಜ್ಯಗಳು ಪತನಗೊಂಡಂತೆ ಇವರು ಇದ್ದಲ್ಲಿಯೆ ಅನಾಥರಾದರು. ಬಹುಶಃ ಈಗ ಅಮೆರಿಕ ಪತನಗೊಂಡರೆ ಜಗತ್ತಿನಾದ್ಯಂತ ಇರುವ ಅದರ ಬೇಹುಗಾರರು ಅವರು ಇರುವ ದೇಶದಲ್ಲಿಯೇ ಅತಂತ್ರರಾಗಿ ಅಲೆಮಾರಿಗಳಾಗುತ್ತಾರೆ. ಇದನ್ನು ನಾವು ಅವಿಕಾಸ (devolution) ಎನ್ನುತ್ತೇವೆ. ಈಗ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸಿದ್ದಿಯರನ್ನು ಬುಡಕಟ್ಟು ಜನ ಎನ್ನುತ್ತಾರೆ. ಹೈದರಾಬಾದ್ ನಿಜಾಮರ ಆಡಳಿತವಿದ್ದಾಗ ಈ ಜನ ಒಂದು ವಿಶೇಷ ಸೈನಿಕ ಬೆಟಾಲಿಯನ್ ಆಗಿತ್ತು.

ಜನಸಾಮಾನ್ಯರ ಮಧ್ಯೆ ನಡವಳಿಕೆಯ ರೂಪದಲ್ಲಿ ಇರುವ ಧರ್ಮ ಜನಪದ ಧರ್ಮ, ಮತಧರ್ಮ ಎಂಬುವು ಬಂಡವಾಳ ಸ್ವರೂಪದವು. ಈ ಧರ್ಮದ ಹೆಗ್ಗುರುಗಳು ತಮ್ಮ ಧರ್ಮ ಪ್ರಚಾರಕ್ಕಾಗಿ ಕೆಲವು ಜನರನ್ನು ನೇಮಿಸಿಕೊಂಡು ಹಳ್ಳಿಗಳ ಕಡೆಗೆ ವಲಸೆ ಕಳಿಸುತ್ತಿದ್ದರು. ಅವರು ಭಿಕ್ಷೆ ಮಾಡುತ್ತ, ಧರ್ಮ ಹೇಳುತ್ತ ಅಲೆಯುತ್ತಿದ್ದರು. ತಮ್ಮ ಭಿಕ್ಷೆಯ ಸ್ವಲ್ಪ ಭಾಗವನ್ನು ಮೂಲ ಮಠಕ್ಕೆ ಕೊಡುತ್ತಿದ್ದರು. ಅಂಥ ಅಲೆಮಾರಿಗಳು ಈಗಲೂ ನಮ್ಮಲ್ಲಿದ್ದಾರೆ. ಶ್ರೀಶೈಲ ಮಠಕ್ಕೆ ನಡೆದುಕೊಳ್ಳುವ ಕವಲೆತ್ತಿನವರು, ಬುಡಗ ಜಂಗಾಲರು, ಕುರುಮಾಮ ಅಲೆಮಾರಿಗಳು ಈ ವರ್ಗಕ್ಕೆ ಸೇರಿದವರು.

ಪ್ರಭುಗಳಿಗೆ ಆರ್ಥಿಕ ಸೇವೆ ಸಲ್ಲಿಸುತ್ತಾ ಬಂದ ಪ್ರಮುಖ ಅಲೆಮಾರಿ ಜನಾಂಗವೆಂದರೆ ಲಂಬಾಣಿಗಳು. ಇವರು ಹಿಂದೂ ಮತ್ತು ಮುಸ್ಲಿಂ ಪ್ರಭುಗಳ ಸೈನ್ಯಕ್ಕೆ ನಿಷ್ಠೆಯಿಂದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತ ಬಂದರು. ಸೈನಿಕ ಸೇವೆ ಹಾಗೂ ಮಾಹಿತಿ ಸಂಗ್ರಾಹಕರಾಗಿಯೂ ಕೆಲಸ ಮಾಡಿದ್ದಾರೆ.

ಯಾವ ಬಗೆಯ ಪ್ರಭುವೆ ಆಗಲಿ ಆತನಿಗೆ ವಿಶೇಷ ಕಲಾರಂಜನೆ ಒಂದು ಅನಿವಾರ್ಯ ಅಪೇಕ್ಷೆಯಾಗಿರುತ್ತದೆ. ರಾಜನ ಆಸ್ಥಾನದಲ್ಲಿ ರಾಜನರ್ತಕಿಯರು, ಸಂಗೀತಗಾರರು, ಕವಿಗಳು ಮತ್ತು ವಿದೂಷಕರಿದ್ದುದನ್ನು ಕಾಣುತ್ತೇವೆ. ಅದೇ ರೀತಿ ಜನಪದ ಕಲಾರಂಜಕರೂ ಸೇವೆ ಸಲ್ಲಿಸಿದ್ದಾರೆ. ಹಗಲು ವೇಷದವರು, ಕಿನ್ನರಿಜೋಗಿಗಳು, ಕಿಳ್ಳೆಕ್ಯಾತರು ಮತ್ತು ದೊಂಬರು ಇಂಥ ಅಲೆಮಾರಿಗಳು.

ಮಾನವರ ವೃತ್ತಿ ವಿಕಾಸದಲ್ಲಿ ಬೇಟೆ ಮೊದಲ ವೃತ್ತಿ. ಇದರಲ್ಲಿ ಮೀನು ಬೇಟೆ,

ಪುರದ ಪುಣ್ಯ

ಪ್ರಾಣಿ ಬೇಟೆ ಮತ್ತು ಪಕ್ಷಿ ಬೇಟೆ ಎಂದು ಮೂರು ಪ್ರಧಾನ ವೃತ್ತಿಗಳಿದ್ದವು. ಪ್ರಾಣಿ ಬೇಟೆಗಾರರಿಗೆ ವಿಕಾಸ ಹೊಂದುವ ಎರಡನೆ ಅವಕಾಶ ಸಿಕ್ಕಿತು. ಅವರು ಬೇಟೆಯಾಡುತ್ತಿದ್ದ ಪ್ರಾಣಿಗಳೆ ಅವರಿಗೆ ಹೊಸದಾದ ಪ್ರಾಣಿ ಸಾಕುವ ವೃತ್ತಿಯನ್ನು ಕಲಿಸಿದವು. ಈ ಪ್ರಾಣಿ ಸಾಕಣೆ ಅವರಿಗೆ ಬೇಸಾಯದಂತಹ ವೃತ್ತಿಯನ್ನು ಕಲಿಸಿ ಮೂರನೆಯ ಹಂತದ ವಿಕಾಸಕ್ಕೆ ದಾರಿ ಮಾಡಿಕೊಟ್ಟಿತು. ದನ ಮೇಯಿಸುವಾಗ, ಮೋಟಾದ ಹುಲ್ಲು ಮತ್ತೆ ಬೆಳೆಯುವಾಗ ಕಂಡ ಜ್ಞಾನ ನಾವೂ ಸಸ್ಯಗಳನ್ನು ಮತ್ತೆ ಬೆಳೆಯಬಹುದೆಂಬುದನ್ನು ಕಂಡುಕೊಂಡರು. ಮೀನು ಬೇಟೆಗಾರರಿಗೆ ಈ ಅವಕಾಶ ಸಿಗಲಿಲ್ಲ. ಅವರು ಒಂದು ಕಡೆ ನೆಲೆಸಿ ಮೀನುಗಾರರಾದರು. ಹಕ್ಕಿಪಿಕ್ಕಿಯವರಿಗೂ ವಿಕಾಸದ ಮಾರ್ಗದರ್ಶನ ಸಿಗಲಿಲ್ಲ. ಅವರು ಹಕ್ಕಿಗಳನ್ನು ಹುಡುಕಿ ಅಲೆದಾಡುವ ವೃತ್ತಿಯಲ್ಲೇ ಉಳಿಯಬೇಕಾಯಿತು. ಇವರನ್ನು ಈ ಕಾರಣಕ್ಕೆ ವೃತ್ತಿ ಅಲೆಮಾರಿಗಳು ಎಂದು ಕರೆಯಬಹುದು.

ಜನಧರ್ಮ ಪ್ರಸಾರಕರಾದ ಅಲೆಮಾರಿ ಜನವರ್ಗವನ್ನು ಇಲ್ಲಿ ಗುರುತಿಸಬಹುದು. ದೇವರು ಮತ್ತು ಧರ್ಮಗಳಲ್ಲಿ ಮಾತೃ ಧರ್ಮ ಮೊದಲನೆಯದು. ಅದಕ್ಕೆ ಪ್ರತಿಯಾಗಿ ಹುಟ್ಟಿಕೊಂಡದ್ದು ಮಾರಿಧರ್ಮ. ಅಮ್ಮ ಗ್ರಾಮದೇವತೆ. ಅವಳು ಸಂರಕ್ಷಕ ದೇವತೆ. ಮಾರಿ ಕೆಡುಕು ಮಾಡುವ ದೇವತೆ. ಜನರನ್ನು ಹೆದರಿಸಿ ಸೇವೆ ಮಾಡಿಸಿಕೊಳ್ಳುವವಳು. ಅಮ್ಮ ಶಿಷ್ಟ ಶಕ್ತಿ (Good spirit) ಮಾರಮ್ಮ ದುಷ್ಟ ಶಕ್ತಿ (Evil spirit) ಅಮ್ಮನಿಗೆ ಪ್ರಚಾರ, ಪ್ರಸಾರ, ವಿಶೇಷ ಸೇವೆ ಬೇಕಿಲ್ಲ. ಮಾರಿಗೆ ಇದರ ಅಗತ್ಯವಿದೆ. ಮಾರಮ್ಮನ ಸಂಸ್ಕೃತಿಯನ್ನು ಹಿಡಿದು ಜನರನ್ನು ಬೆಚ್ಚಿಸಿ ಜೀವನ ಮಾಡ ಹೊರಟ ಅಲೆಮಾರಿಗಳೆಂದರೆ ದುರುಗ ಮುರುಗಿಯರು. ಬುಡಗ ಜಂಗಾಲರು ಕೂಡ ಮಾರಿ ಆರಾಧಕರು. ಅಲೆಮಾರಿಗಳಲ್ಲಿ ಹೆಚ್ಚಿನ ಜನ ಮಾರಿ ಸ್ವರೂಪದ ದೈವಾರಾಧಕರು. ಆದರೆ ದುರುಗಮುರುಗಿಯ ಮಾರಿಯನ್ನು ಮನೆ ಮುಂದೆ ತಂದು ಮಾತೃ ದೇವತೆಗೆ ವಿರುದ್ಧವಾದ ಧರ್ಮವನ್ನು ಪ್ರಸಾರ, ಪ್ರಚಾರ ಮಾಡಿದ ಕಾರಣವಾಗಿ ಅವರನ್ನು ಮೂಲ ಸಮಾಜದಿಂದ ಹೊರಗಿರಿಸಿದಂತೆ ಕಾಣುತ್ತಿದೆ. ಹಾವಾಡಿಗರು ಮೇಲು ನೋಟಕ್ಕೆ ಮನರಂಜಕರಂತೆ ಕಂಡರೂ ಅವರು ಕೂಡ ಭಯದ ದೇವತೆಯಾದ ಹಾವನ್ನು ಆಡಿಸುವ ಕೆಲಸದಲ್ಲಿ ತೊಡಗಿದ್ದರಿಂದ ಜನಪದರು ಅವರನ್ನು ತಮ್ಮೊಳಗಿಂದ ಹೊರಗೆ ಇರಿಸಿದ್ದಾರೆ.

ಬುಡುಬುಡಿಕೆಯವರು, ಸುಡುಗಾಡು ಸಿದ್ದರು ಮತ್ತು ಕುರುಮಾಮಗಳು ಭವಿಷ್ಯ ಹೇಳುವ ವರ್ಗಕ್ಕೆ ಸೇರಿದ ಅಲೆಮಾರಿಗಳಾಗಿದ್ದಾರೆ. ಮೊದಲೆರಡು ಗುಂಪಿನವರು ಶಕ್ತಿ

ಪಂಥಕ್ಕೆ ಸೇರಿದವರು, ಪ್ರಕೃತಿ ಆರಾಧಕರು. ಸುಡುಗಾಡುಸಿದ್ದರು ಶೈವಶಕ್ತಿ ಪಂಥಕ್ಕೂ, ಬುಡುಬುಡುಕೆಯವರು ಮಾಂತ್ರಿಕ ಶಕ್ತಿ ಪಂಥಕ್ಕೂ ಸೇರಿದ್ದಾರೆ. ಶಿಷ್ಟರ ದೃಷ್ಟಿಯಿಂದ ಇವರ ಕೆಲಸ ವಾಮಾಚಾರ. ಇದು ವೇದಾಚಾರಕ್ಕೆ ವಿರುದ್ಧವಾದುದಾದುದರಿಂದ ಈ ವರ್ಗದವರ ಆರಾಧನೆ, ಪೂಜೆ ಮತ್ತು ನಡವಳಿಕೆಯನ್ನು ಭಯದಿಂದ ನೋಡಲಾಯಿತು. ಹೀಗೆ ಭಯ ಹುಟ್ಟಿಸುವ ಜನ ಎನ್ನುವ ಕಾರಣಕ್ಕೆ ಮುಖ್ಯ ಜೀವನ ವಿಧಾನದಿಂದ ಇವರನ್ನು ಹೊರಗಿಡಲಾಯಿತು. ಅನಿವಾರ್ಯ ಎಂಬಂತೆ ಇವರು ಅಲೆಮಾರಿಗಳಾದರು. ಹೀಗೆ, ಯಾವುದೇ ಸಮಾಜದಲ್ಲಿ ಅಲೆಮಾರಿಗಳಾಗುವುದಕ್ಕೆ ಇರುವ ಕಾರಣ ಸಾಂಸ್ಥಿಕ ನೆಲೆಯಿಂದ ಹೊರಗೆ ಬೀಳುವುದು. ನಮ್ಮಲ್ಲಿ ಇರುವ ಅಲೆಮಾರಿಗಳು ಕೂಡ ಒಂದಲ್ಲ ಮತ್ತೊಂದು ಕಾರಣಕ್ಕೆ ವ್ಯವಸ್ಥಿತ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿದ್ದಾರೆ.

ಎಲ್ಲಿ ಸಂಸ್ಕೃತಿ ನೆಲೆ ನಿಲ್ಲುತ್ತದೋ ಆಗ ಅದು ಕೈಗಾರಿಕೆಯಾಗುತ್ತದೆ. ಸಾಕು ಪ್ರಾಣಿಗಳ ಸಂಸ್ಕೃತಿ ಮತ್ತು ಕೃಷಿ ಸಂಸ್ಕೃತಿಗಳು ಉದ್ಯಮಗಳೇ ಆದುವು. ಜೊತೆಯಲ್ಲಿ ಒಂದು ನಿರ್ದಿಷ್ಟ ಕೇಂದ್ರ ಪರಿಕಲ್ಪನೆ ಹಾಗೂ ಒಡೆತನ ಶುರುವಾಯಿತು. ಗೋವುಗಳ ರಕ್ಷಕ ಗೊಲ್ಲಗೌಡ, ಕುರಿಗಳ ರಕ್ಷಕ ಗೊರವೇಗೌಡ, ಕೃಷಿ ರಕ್ಷಕ ಭೂಮಿಗೌಡ ಹುಟ್ಟಿಕೊಂಡರು. ಹಾಲಕ್ಕಿ ಜನ ಭೂಮಿ ಹಿಡಿದುದರಿಂದ ಹಾಲಕ್ಕಿ ಒಕ್ಕಲು ಗೌಡರಾಗಿ ನಿರ್ದೇಶಿತರಾದರು. ಅಂದರೆ ವೃತ್ತಿ ಎನ್ನುವುದು ಒಂದು ಕೇಂದ್ರದಲ್ಲಿ ಒಂದು ಉದ್ಯಮ ಆಯಿತು. ಅದರ ವಿಸ್ತರಣೆ ಅಭಿವೃದ್ಧಿ ಸಿದ್ಧಾಂತವಾಯಿತು. ಹೀಗೆ ಪ್ರಕೃತಿಯನ್ನು ಉದ್ಯಮಸಂಸ್ಕೃತಿಯನ್ನಾಗಿ ಪರಿವರ್ತಿಸಿಕೊಂಡವರು ವೃತ್ತಿಯವರಾಗಿ ಒಂದು ಕೇಂದ್ರದಲ್ಲಿ ನೆಲೆ ನಿಂತರು. ಆಗದವರು ಹೊರಗೆ ಬಿದ್ದು ಅಲೆಮಾರಿಗಳಾದರು.

ದೇಶಿ ಎನ್ನುವುದು ಕೂಡ ಒಂದು ಪ್ರಭುತ್ವ ಮತ್ತು ಅಭಿವೃದ್ಧಿ ಸಿದ್ಧಾಂತ. ನಮ್ಮ ದೇಶವನ್ನೇ ತೆಗೆದುಕೊಂಡರೆ ಸ್ವಾತಂತ್ರ ಪೂರ್ವಕ್ಕೆ ದೇಶಿ ಎನ್ನುವುದು ಪ್ರಭು ಸಂಸ್ಕೃತಿಯ ಪರಾಯ ಚಿಂತನೆಯಾಗಿತ್ತು. ಬ್ರಿಟಿಷರು ಭಾರತವನ್ನು ಆಳುತ್ತಿದ್ದಾಗ ದೇಸಿ ಎಂಬುದು ಭಾರತದ ಮೇಲುವರ್ಗದ ಒಂದು ಕೂಟವಾಗಿತ್ತು. ಗಾಂಧೀಜಿ, ಅದನ್ನು ಹಳ್ಳಿಗಳ ವಿಕೇಂದ್ರೀಕರಣದ ಮಟ್ಟಕ್ಕೆ ತಂದರು. ಕನ್ನಡ ಸಾಹಿತ್ಯ ಇತಿಹಾಸದಲ್ಲಿ ದೇಶಿ ಮತ್ತು ಮಾರ್ಗಗಳು ವಿಶೇಷವಾಗಿ ಭಾಷಾಭಿವ್ಯಕ್ತಿ ವಿಧಾನಕ್ಕೆ ಸಂಬಂಧಪಟ್ಟಂತೆ ದ ಬಳಕೆಯಾಗಿದ್ದವು. ಒಮ್ಮೊಮ್ಮೆ ದೇಶಿ ಎಂಬುದು ರಾಜಭೋಗಕ್ಕೆ ಬೇರೆಯಾದ ನೈಸರ್ಗಿಕ ಬದುಕು ಎಂಬ ಅರ್ಥ ಬರುವಂತೆ ಬಳಕೆಯಾಯಿತು. ಬ್ರಿಟಿಷರ ವಿರುದ್ಧ

ಪುರದ ಪುಣ್ಯ

ಭಾರತೀಯರು ಸ್ವಾತಂತ್ರಕ್ಕಾಗಿ ಹೋರಾಡುತ್ತಿದ್ದ ಸಂದರ್ಭದಲ್ಲಿ ಇಡೀ ಭಾರತ ದೇಶ-ದೇಶೀಯತೆಯ ಪರಿಕಲ್ಪನೆಯನ್ನು ಹೊಂದಿತ್ತು. ಸ್ವಾತಂತ್ರಾನಂತರ ಭಾರತದ ಆಡಳಿತ ವ್ಯವಸ್ಥೆ ಪಶ್ಚಿಮದ ಕಡೆಗೆ ಮುಖ ಮಾಡಿದ್ದರಿಂದ ಪರದೇಶೀಯತೆ ಹೆಚ್ಚಾಯಿತು. ಭಾರತ ನೇರ ವಸಾಹತುಶಾಹಿಯಿಂದ ಪರೋಕ್ಷ ವಸಾಹತು ಶಾಹಿಗೆ ಒಳಗಾಯಿತು. ಬಡತನದ ಪ್ರಮಾಣ ಕಡಿಮೆಯಾಗಲಿಲ್ಲ. ಹೆಚ್ಚು ಜನರು ಅಭವೃದ್ಧಿಯಲ್ಲಿ ಪಾಲುದಾರರಾಗಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಆರ್ಥಿಕ ಪಾಲುದಾರಿಕೆ ಎಂಬ ಹಕ್ಕು ಪ್ರತಿಪಾದನೆಯ ಮಾರ್ಗ ಹಿಡಿದು ದೇಶೀಯ ಅಭಿವೃದ್ಧಿ ಪರಿಕಲ್ಪನೆ ಹುಟ್ಟಿಕೊಂಡಿತು.

ಈಗ ದೇಶಿ ಸಿದ್ಧಾಂತದ ಬಗ್ಗೆ ಮಾತನಾಡುತ್ತಿರುವ ನಾವು ವಸಾಹತು ವಿಜ್ಞಾನ ಮಾದರಿಗಳಿಗೆ ವಿರುದ್ಧವಾಗಿ ಮಾತನಾಡುತ್ತಿದ್ದೇವೆ. ಅವು ಬೇಡ ಎಂದಲ್ಲ, ಅವು ಎಲ್ಲ ಜನರನ್ನೂ ಒಳಗೊಳ್ಳುವುದಿಲ್ಲ ಎಂಬ ಕಾರಣಕ್ಕೆ. ವಸಾಹತು ವಿಜ್ಞಾನ ಇತ್ತೀಚೆಗೆ ಬಂಡವಾಳ ಸಂಗ್ರಾಹಕರಿಗೆ ಮಾತ್ರ ನೆರವಾಗುತ್ತಿದೆ. ಕೊನೆಯ ಮನುಷ್ಯ ಮತ್ತೆ ಹಿಂದೆ ಸರಿದು ಮೊದಲ ಮನುಷ್ಯ ಆದ್ಯತೆಗೆ ಬರುತ್ತಿದ್ದಾನೆ. ಇದನ್ನು ಪ್ರಗತಿ ಎಂದು ಕರೆಯಲಾಗುವುದಿಲ್ಲ. ಇದು ಭಾಗಿಕ ಪ್ರಗತಿಯೆ ಹೊರತು ಇಂಟೆಗ್ರೇಟೆಡ್ ಪ್ರಗತಿ ಅಲ್ಲ. ಇಂಟೆಗ್ರೇಟೆಡ್ ಪ್ರಗತಿ ತತ್ವ ಇದ್ದರೆ ಅದು ದೇಶಿ ಸಿದ್ಧಾಂತ ಎಂಬ ನೆಲೆಗೆ ತಲುಪಿದ್ದೇವೆ. ಭಾರತದಲ್ಲಿ ಈ ಸಿದ್ಧಾಂತ ಅನುಷ್ಠಾನಗೊಳ್ಳುವಾಗ ಮೇಲು ಜಾತಿ ಮತ್ತು ಮೇಲು ವರ್ಗದ ಅಭಿವೃದ್ಧಿ ಸಿದ್ಧಾಂತವಾಗಿ ಬಿಟ್ಟರೆ ಅಪಾಯ ಎಂಬ ನಂಬಿಕೆಯೂ ಇದೆ. ದೇಶೀ ಸಿದ್ಧಾಂತವನ್ನು ಈಗಾಗಲೇ ರಾಜಕೀಯ ಪಕ್ಷವೊಂದು ಬಂಡವಾಳ ಮಾಡಿಕೊಳ್ಳ ಹೊರಟಿದೆ. ದೇಶಿವಾದ ಹೊಸ ಜಾತಿ ಸಿದ್ಧಾಂತವಾಗಿಬಿಟ್ಟರೆ ಮತ್ತೂ ಅಪಾಯವಿದೆ.

ದೇಶಿ ಚಿಂತನೆ :

ನಗರ

ಜಾತಿ

ಗ್ರಾಮ

ಅಕ್ಷರ ಕೇಂದ್ರಗಳಲ್ಲಿ ನೆಲೆ ನಿಲ್ಲಬಾರದು.

ಈ ಪ್ರತಿಯೊಂದು ಕೇಂದ್ರವೂ ಭಾರತದ ಅಭಿವೃದ್ಧಿಯ ಸ್ತಬ್ಧ ಕೇಂದ್ರಗಳು. ಅಲ್ಲಿ ಭಾರತೀಯ ಸಾಂಪ್ರದಾಯಿಕ ಯಜಮಾನಿಕೆಯ ಕೇಂದ್ರಗಳಿವೆ ಎಂಬ ಧೋರಣೆ



ವ್ಯಕ್ತವಾಗುತ್ತಿದೆ. ದೇಸೀಯತೆ ಎನ್ನುವುದು 'ದೇಶಶಾಹಿ' ಆಗ ಬಾರದು. ದೇಶಿ ಸಂಸ್ಕೃತಿ ಮತ್ತು ಅಭಿವೃದ್ಧಿ ಎನ್ನುವುದು ಪಟೇಲ ಶಾನುಭೋಗರ, ಬಹುಸಂಖ್ಯಾತರ, ಮತೀಯ ಯಜಮಾನರು, ರಾಜಕೀಯ ಪಕ್ಷದ ಅಥವ ಸ್ವದೇಶಿ ಕೈಗಾರಿಕೋದ್ಯಮಗಳ ಅಭಿವೃದ್ಧಿ ಸಿದ್ಧಾಂತ ಅಲ್ಲ, Be Indian, buy Indian ಎಂಬ ತತ್ವಬೋಧನೆ ಮಾಡಿ ಭಾರತೀಯ ಬಳಕೆದಾರರನ್ನು ಗರಿಷ್ಠ ಮಟ್ಟದಲ್ಲಿ ಶೋಷಿಸಿದ ದೇಶೀಯ ಕೈಗಾರಿಕೋದ್ಯಮ ನಮಗೆ ಕೆಲವು ನೆನಪನ್ನು ಉಳಿಸಿದೆ. ಸೂಜಿ ಚೆನ್ನದ್ದಾದ ಮಾತ್ರಕ್ಕೆ ಅದು ಹೂವೆ?

## ಅಲೆಮಾರಿಗಳು ಮತ್ತು ಸಂಸ್ಕೃತಿ ಅರ್ಥಶಾಸ್ತ್ರ

'ಚಲಿಸುವ ಕಲ್ಲಿಗೆ ತೂಕ ಇರುವುದಿಲ್ಲ'

(Rolling stone gather's no mass)

೧) ನೆಲ ಇಲ್ಲದವರು

೨) ನೆಲೆ ಇಲ್ಲದವರು

ಅಸ್ತಿತ್ವದಲ್ಲಿ ಇರುವುದಿಲ್ಲ

ನೆಲ : ಪ್ರದೇಶ, ದೇಶ - ಇತ್ಯಾದಿ

ನೆಲೆ : ವಾಸ, ಸಂಸ್ಕೃತಿ - ಇತ್ಯಾದಿ

ಯಾರಿಗೆ ನಿರ್ದಿಷ್ಠ ನೆಲ, ನೆಲೆ ಇರುವುದಿಲ್ಲವೋ ಅವರಿಗೆ ಸಂಪತ್ತು, ಆಧಿಪತ್ಯ, ಪಾರುಪತ್ಯ, ಭದ್ರತೆ ಬೆಳವಣಿಗೆ ಸಿಗುವುದಿಲ್ಲ. ನೆಲ ಇಲ್ಲದ ಕಾರಣಕ್ಕೆ ದಲಿತರು ಮೀಸಲಾತಿ ಎಂಬ ನೆಲೆಯನ್ನು ಕೇಳುತ್ತಿದ್ದಾರೆ. ಅದು ತಮ್ಮ ಜೀವನ ಸಂಸ್ಕೃತಿ ಆಗಬೇಕು ಅನ್ನುತ್ತಿದ್ದಾರೆ. ದಲಿತರು ಅಲೆಮಾರಿಗಳ ರೀತಿಯಲ್ಲಿ ಅನಾಥರೂ ಅಲ್ಲ ತಿರಸ್ಕೃತರೂ ಅಲ್ಲ, ಐಡೆಂಟಿಟಿ ಇಲ್ಲದವರೂ ಅಲ್ಲ ; ದೂರ ಇಡಲ್ಪಟ್ಟವರು. ಇವರ ಸೇವೆ ಎಂದೂ ನಗಣ್ಯವಾಗಿರಲಿಲ್ಲ, ಉತ್ಪತ್ತಿಯಲ್ಲಿ ಇವರದು ಸಿಂಹಪಾಲು, ಒಡೆತನ ಕೊಡಲಿಲ್ಲ ಅಷ್ಟೆ.

ನೆಲ ಮತ್ತು ನೆಲೆ ಇಲ್ಲದವರು ಒಂದು ಸಮಾಜದ ಮುಖ್ಯ ಸ್ಥಾನದಲ್ಲಿ ಸ್ಥಾಪಿತವಾಗಲು ಸಾಧ್ಯವಾಗುವುದಿಲ್ಲ. ಅವರು ಮುಖ್ಯ ಉತ್ಪತ್ತಿಯಲ್ಲಿ ತೊಡಗಲು, ಪಾಲುದಾರರಾಗಲೂ ಆಗುವುದಿಲ್ಲ. ಅಲೆಮಾರಿ ಜನಾಂಗ ಎಂದೂ ಮುಖ್ಯ ಉತ್ಪತ್ತಿಯಲ್ಲಿ ತೊಡಗಿಲ್ಲ, ಬೇರೆಯವರ ಉತ್ಪತ್ತಿಯ ಉಳಿತಾಯಕ್ಕೆ ಕೈಚಾಚಿದ್ದಾರೆ.





ಅವರ ಕೆಲಸ ಎಂದೂ ಪ್ರಧಾನ ಅಲ್ಲ ಪೂರಕ ಕ್ರಿಯೆಗಳಾಗಿವೆ. ಉದಾ : ವೇಷ ಹಾಕುವುದು, ಆಹಾರ ಸರಬರಾಜು ಮಾಡುವುದು. ಔಷಧ ಕೊಡುವುದು, ಶಾಸ್ತ್ರ-ಶಕುನ ಹೇಳುವುದು ಕಲಾ ಸೇವೆ ಮಾಡುವುದು, ಮಾಟ ಮಂತ್ರ ಮಾಡುವುದು. ಕಸೂತಿ ಹಾಕುವುದು, ಹಾಡುವುದು, ವಾದ್ಯ ನುಡಿಸುವುದು ಇತ್ಯಾದಿ.

ಅಲೆಮಾರಿಗಳು ತಮ್ಮ ಸಾಂಸ್ಕೃತಿಕ - ಆರ್ಥಿಕ ಅನನ್ಯತೆಯನ್ನು ತಾವೇ ನಿರಾಕರಿಸಿ ಕೊಳ್ಳುತ್ತಿರುವ ಅಂಶಗಳೂ ಇವೆ.

೧) ಬಹುತೇಕ ಹೊರರಾಜ್ಯಗಳಿಂದ ವಲಸೆ ಬಂದವರು ಹಾಗೂ ಅದನ್ನು ಹೋಗಲಾಡಿಸಿಕೊಳ್ಳದವರು.

೨) ಊರ ಹೊರಗೆ ವಸತಿ ಹೂಡುವವರು.

೩) ಬಂದ ರಾಜ್ಯದ ಭಾಷೆ, ಸಂಸ್ಕೃತಿ ಮತ್ತು ಆಡಳಿತವನ್ನು ಅವಲಂಬಿಸಿದವರು.

೪) ಧಾರ್ಮಿಕವಾಗಿ ಮೇಲು ಜಾತಿಯ ಪುರಾಣ ಮೂಲಕ್ಕೆ ಕಟ್ಟದಾಗಿ ಜೋಡಿಸಿಕೊಂಡವರು.

೫) ಭಿಕ್ಷೆಯನ್ನೆ ಉತ್ಪತ್ತಿ ಎಂದುಕೊಂಡವರು.

ಕೂಲಿ ಮಾಡಿ ಜೀವಿಸಲಿ ಭಿಕ್ಷೆಗೆ ಮಾತ್ರ ಹೋಗಬಾರದು. ಈ ದೇಶದ ಸಂಸ್ಕೃತಿಯಲ್ಲಿ ಬ್ರಾಹ್ಮಣರನ್ನು ಬಿಟ್ಟರೆ ಬೇರೆಯವರಿಗೆ ಭಿಕ್ಷೆ ಗೌರವದ ಕೆಲಸ ಅಲ್ಲ ಎಂಬ ತತ್ವ ನೆಲೆ ನಿಂತಿದೆ. ಕೂಲಿ ಉತ್ಪತ್ತಿ ಮೂಲ. ಆದರೆ ಯಾಕೆ ಈ ಅಲೆಮಾರಿಗಳು ಕೂಲಿ ಮಾಡುವುದಿಲ್ಲ? ಹಿಂದೆ ಇವರು ಬೇರೆ ಬೇರೆ ಕಾರಣಕ್ಕೆ ಧಾರ್ಮಿಕವಾಗಿ-ಸಾಂಸ್ಕೃತಿಕವಾಗಿ ಗೌರವಿಸಲ್ಪಟ್ಟವರು. ಈಗ ಆ ಇತಿಹಾಸ ಮುಗಿದು ಹೋಗಿದೆ.

ಆದ್ದರಿಂದಲೇ ಇವರಲ್ಲಿ ಸಂಪತ್ತು ನಿರ್ದೇಶಕ ಯಾವ ಆಶಯಗಳೂ ಇಲ್ಲ.

ಇವರಲ್ಲಿ :

೧) ಜಾತಿ ಇಲ್ಲ

೨) ಮೊತ್ತದ ಧರ್ಮ, ಮಠ ಇಲ್ಲ

೩) ಸಂಪತ್ತು (ಬೆಳ್ಳಿ ಚೂರು ಬಿಟ್ಟರೆ) ಇಲ್ಲ





೪) ಕೂಡಿಡುವ ಮನೋಧರ್ಮ ಇಲ್ಲ

೫) ಇವರ ಕೆಲಸ - ಉತ್ಪಾದಕತೆ ಅಲ್ಲ

೬) ಸ್ಥಿರ ಉದ್ಯೋಗ - ವೃತ್ತಿ ಇಲ್ಲ

೭) ಅಭದ್ರತೆ ಇದೆ (ಉದಾ : ಬಾಲ್ಯವಿವಾಹ)

೮) ಉದ್ಯಮಶೀಲತೆ ಇಲ್ಲ

೯) ಪಾನಭೋಗ ಇದೆ

೧೦) ಪೈಪೋಟಿ ಇಲ್ಲ

**ಅಸ್ತಿತ್ವದ ಅಭಿವೃದ್ಧಿ ನೆಲೆಗಳು**

''ಸಂಘಶಕ್ತಿ ಕತಾಯುಗೇ

(ಕಲಿಯುಗದಲ್ಲಿ ಸಂಘಶಕ್ತಿಯ ಶಕ್ತಿ)

ಭಾರತದಂಥ ದೊಡ್ಡ ದೇಶದಲ್ಲಿ

ದೊಡ್ಡ ಕೇಂದ್ರ ಶಕ್ತಿಯಲ್ಲಿ

ಬಹುಸಂಖ್ಯೆಯ ದೇಶದಲ್ಲಿ

ಬಹುಮತದ ದೇಶದಲ್ಲಿ

ಬಹು ಸಂಸ್ಕೃತಿಯ ದೇಶದಲ್ಲಿ

ಉದ್ಯಮ ಉಮೇದು ಇಲ್ಲದಲ್ಲಿ

**ಅಲೆಮಾರಿಗಳು**

ನಗಣ್ಯರು

ಅನಾಥರು

ಅನುತ್ಪಾದಕರು

ಅಸಂಘಟಿತರು

ಅನ್ಯ ಭಾಷಿಕರು ಆಗಿ ದೂರ ಸರಿಯುವುದು ಸಹಜ

**ಇವರು ಹಠ ಹಿಡಿದು**

೧) ರಾಜ್ಯತ್ವ

೨) ಭಾಷಿಕತ್ವ ಮತ್ತು





೩) ಹಕ್ಕು ಪ್ರತಿಪಾದನೆ ಮಾಡಿಕೊಳ್ಳಬೇಕು.

ಎರಡು ಬಗೆಯ ಅಭಿವೃದ್ಧಿ ಯೋಜನೆಗೆ ಇವರು ಸಿದ್ಧರಾಗಬೇಕು

೧) ದೇಸೀ ನೆಲೆಯ ಅಭಿವೃದ್ಧಿ,

೨) ಅಂತರ್ ದೇಶೀ ಸಂಬಂಧಿ ಅಭಿವೃದ್ಧಿ

೧) ತಮ್ಮನ್ನು ಅಲೆಮಾರಿ ಎಂಬ ಐಡೆಂಟಿಟಿಯಲ್ಲಿ ಅಭಿವೃದ್ಧಿಗೆ ತೊಡಗುವುದು ಮತ್ತು ಆಗ್ರಹಿಸುವುದೇ ದೇಶೀ ವಿಧಾನ.

೨) ತಮ್ಮ ಮೂಲವನ್ನು ಮೂಲಜ್ಞಾನವನ್ನು ನಿರಾಕರಿಸುವ ಮೂಲಕ ಆಧುನಿಕತೆಯೊಂದಿಗೆ ಬೆರೆತು ಹೋಗುವುದು ಅನ್ಯದೇಶೀಯತೆ.

ಈಗಿರುವ ಪರಿಸ್ಥಿತಿಯಲ್ಲಿ ಅಲೆಮಾರಿಗಳು ಅನ್ಯದೇಶೀಯರಾಗಲು ಸಾಧ್ಯವಿಲ್ಲ. ತಮ್ಮ ಸಮೀಪವೇ ಇರುವ ಜಾತಿ, ವರ್ಗ ಮತ್ತು ಶಕ್ತಿ ಕೇಂದ್ರಗಳೆಂಬ 'ಸ್ಥಳೀಯ ವಿದೇಶಿಯತೆ'ಯ ಜೊತೆಗೆ ಅವರು ಹೋರಾಡಿ ಗೆಲ್ಲಬೇಕು. ಆನಂತರ ಅವರ ಜೊತೆಗೆ ಸಾಧ್ಯವಾದ ಆಧುನಿಕ ಸೌಲಭ್ಯಗಳನ್ನು ಪಡೆಯಬೇಕು. ಇದಕ್ಕೆ ಆರಂಭಿಕವಾಗಿ ಎಲ್ಲ ಅಲೆಮಾರಿ ಮಕ್ಕಳು ಕಡ್ಡಾಯವಾಗಿ ಪ್ರೌಢಶಿಕ್ಷಣದವರೆಗೆ ಓದಬೇಕು ಆ ಮೂಲಕ ತಾವಿರುವ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು.

ಅಲೆಮಾರಿಗಳು ಸಂಘಟಿತರಾಗಬೇಕು ಮತ್ತು ಆ ಸಂಘಟನೆಗೆ ಅಂತ ಸಂಬಂಧಿ ನಾಯಕತ್ವ ಬೇಕು. ಅದು ಸಮುದಾಯದ ಒಳಗಿಂದ ಬರಬಹುದು ಅಥವ ಶ್ರೀ ದೇವರಾಜ ಅರಸು ಥರ ರಾಜಕೀಯ ಕೇಂದ್ರದಿಂದಲೂ ಬರಬಹುದಾಗಿದೆ. ಮೂರು ವಿಧದಲ್ಲಿ ಅವರು ಸಂಘಟಿತರಾಗಬೇಕಾಗುತ್ತದೆ.

೧) ಸಮುದಾಯ ಸಂರಕ್ಷಣೆಗಾಗಿ

೨) ಮತದಾರರಾಗಿ

೩) ಪಾಲುದಾರರಾಗಿ

೧) ಸಮುದಾಯ ಸಂರಕ್ಷಣೆ ಎಂದರೆ ಸ್ವ ಉದ್ಯೋಗ ಸೃಷ್ಟಿ ಮಾಡಿಕೊಳ್ಳುವುದು. ಬೇಡುವುದು ಉದ್ಯೋಗ ಆಗಬಾರದು. ತಮ್ಮದೆ ತಂತ್ರಜ್ಞಾನ, ಕಲೆ, ಸಂಗೀತ, ವೈದ್ಯ ಇವುಗಳನ್ನು ಸ್ಪರ್ಧಾತ್ಮಕ ಉದ್ಯೋಗಗಳನ್ನಾಗಿ ಬೆಳೆಸಿಕೊಳ್ಳುವುದು. ಅಂದರೆ ತಮ್ಮ ಪಾರಂಪರಿಕ ನೈಪುಣ್ಯವನ್ನು ಆಧುನೀಕರಿಸುವುದು.





ಇದಕ್ಕೆ ಸರ್ಕಾರದ ನೇರ ನೆರವು ಬೇಕು. ಜನಪದ ಔಷಧ ಜ್ಞಾನ ಬಹುತೇಕ ಅಲೆಮಾರಿಗಳಲ್ಲಿ ಇದೆ. ಇದು ಕ್ಷುಲ್ಲಕ ಅಲ್ಲ. ಇದನ್ನು ಅಲೋಪತಿ ಮತ್ತು ಆಯುರ್ವೇದದ ಜೊತೆಗೆ ಪರಾಯ ಎನ್ನುವಂತೆ ಬೆಳೆಸಬೇಕು. ಅಮೆರಿಕದಂಥ ದೇಶಗಳು ಅಲೋಪತಿ ಔಷಧಿಗೆ ಪತ್ಯಾಯ ಔಷಧಿ ಪದ್ದತಿಯನ್ನು ಹುಡುಕುತ್ತಿವೆ. ಅಲೋಪತಿ ನಿಶಕ್ತವಾದರೆ

ರೋಗಿಗಳ ಗತಿ ಏನು ಎಂಬ ಮುಂದಾಲೋಚನೆ ಅವರನ್ನು ಕಾಡುತ್ತಿದೆ. ಭಾರತೀಯರಾದ ನಮಗೂ ಇಂಥದೊಂದು ಪರಾಯ ಔಷಧ ಪದ್ಧತಿಯ ಅಗತ್ಯವಿದೆ. ನಮ್ಮಲ್ಲಿ ಔಷಧಿಗಾಗಿ ಭಾರಿ ಮೊತ್ತವನ್ನು ಖರ್ಚು ಮಾಡಲು ಆಗದ ಲಕ್ಷಾಂತರ ಜನ ಇದರಿಂದ ಉಪಯೋಗ ಪಡೆಯುವಂತಾಗಬೇಕು. ಅಲೆಮಾರಿಗಳು, ಆದಿವಾಸಿಗಳು ಮತ್ತು ಗ್ರಾಮೀಣ ಔಷಧ ನಿಪುಣರು ಈ ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳಬೇಕು. ಇವರೆ ಯಾಕೆ ಇಂಥ ಹೊಸ ಜವಾಬ್ದಾರಿ ಹೊರಬೇಕೆಂದರೆ, ಈ ವಿಷಯದಲ್ಲಿ ಅವರಿಗೆ ನೈಪುಣ್ಯ ಇದೆ ಬೇರೆಯವರು ಮತ್ತು ಇನ್ನೂ ಈ ಕ್ಷೇತ್ರವನ್ನು ಉದ್ಯಮ ಮಾಡಿಕೊಂಡಿಲ್ಲ.

ಅಲೆಮಾರಿಗಳಲ್ಲಿ ಅಪಾರ ಸಾಹಿತ್ಯ ಮತ್ತು ಸಂಗೀತ ಜ್ಞಾನವಿದೆ. ಇದು ಸಮುದಾಯ ಸಾಹಿತ್ಯ ಮತ್ತು ಸಂಗೀತ. ಜಡಗಟ್ಟುತ್ತಿರುವ ಹಾಗೂ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿರುವ ನಾಗರೀಕತೆಗೆ ಈ ಶ್ರವಣ ಬೇಕು. ಆದರೆ ಈ ಸಾಹಿತ್ಯ ಮತ್ತು ಹಾಡುಗಾರಿಕೆಯೊಳಗಿನ ವಸ್ತು ಸಮಕಾಲೀನವಾಗಿಲ್ಲ. ಹೊಸ ಕಥೆ-ವ್ಯಥೆ ಹೇಳುವ ಸಮುದಾಯ ಸಂಗೀತಗಾರರ ಪಾತ್ರವನ್ನು ವಸ್ತು ಸ್ವೀಕಾರದೊಂದಿಗೆ ವಹಿಸಿಕೊಳ್ಳಬಹುದಾಗಿದೆ. ತಮ್ಮದು ಕಳಪೆ ಎಂದು ನಾಚಿ ಕೊಂಡರೆ ನಿಮ್ಮ ಜೀವನವೇ ನಾಚಿ ಮುದುಡಿಕೊಳ್ಳುತ್ತದೆ.

ವಾದ್ಯ ವೈವಿಧ್ಯತೆಯೂ ಅಲೆಮಾರಿಗಳ ವಿಶೇಷ ಶೋಧನೆಯಾಗಿದೆ. ಈಗಿರುವ ವಾದ್ಯಗಳನ್ನು ಸಂಯುಕ್ತಗೊಳಿಸಿ. ಹೊಸ ವಾದ್ಯಮೇಳಗಳನ್ನು ಸಂಘಟಿಸಬಹುದು. ಕರ್ನಾಟಕದ ಒಟ್ಟು ಸಮೂಹವನ್ನು ಕ್ರಿಯೆಗೆ ತೊಡಗಿಸಬಲ್ಲ ನೃತ್ಯ ಮತ್ತು ಅಭಿನಯ ಚಾತುರ್ಯ ಅಲೆಮಾರಿಗಳಲ್ಲಿದೆ. ಆಹಾರ ಮತ್ತು ಆರೋಗ್ಯದ ದೃಷ್ಟಿಯಿಂದ ದಿನಕ್ಕೆ ಒಂದೇ ಸಾರಿ ಊಟ ಮಾಡುವ ಹಕ್ಕಿ ಪಿಕ್ಕಿ ಜನಾಂಗ ಮಾದರಿಯಾಗಿದ್ದಾರೆ. ಅವರು ದೃಢಕಾಯರು ಎಂದೂ ಹೇಳಲಾಗಿದೆ. ಅಲೆಮಾರಿಗಳಲ್ಲಿ ಇರಬಹುದಾದ ಇಂಥ ಆಹಾರ ಪದ್ಧತಿಗಳನ್ನು ಶೋಧಿಸಬೇಕಾಗಿದೆ.

ಸಂಬಂಧ ಪದ್ಧತಿ ಮತ್ತು ಒಕ್ಕೂಟ ನ್ಯಾಯ ಪದ್ಧತಿಗಳು ಅಲೆಮಾರಿ ಜನಾಂಗದ





ಸ್ಥಿರ ಮೌಲ್ಯಗಳಾಗಿವೆ. ಕೆಲವು ಕಠಿಣ ಶಿಕ್ಷೆಗಳನ್ನು ಹೊರತುಪಡಿಸಿದರೆ ಸಮುದಾಯ ಪ್ರಜ್ಞೆಯನ್ನು ಪ್ರಚೋದಿಸುವ ನೀತಿ, ನಿಯಮಗಳು ಉತ್ತಮವಾಗಿವೆ. ಮದುವೆಗೆ ಮೊದಲು ಲೈಂಗಿಕ ಸಂಬಂಧವನ್ನು ಹೊಂದಬಾರದು ಎಂಬ ತತ್ತ್ವ ಒಂದೆರಡು ಅಲೆಮಾರಿಗಳಲ್ಲಿ ಇದೆ. ಇದನ್ನು ಈ ಹೊತ್ತಿನ ಉನ್ಮಾದಗೊಂಡ ಆಧುನಿಕ ಜಗತ್ತು ಒಪ್ಪದಿರಬಹುದು.

ಸಹಜ ಸ್ಥಿತಿಯಲ್ಲಿ ಈ ನಿಯಮ ಅನಾಹುತಕಾರಿಯಲ್ಲ. ಇಂಥ ಉಪಯುಕ್ತ ನಿಯಮಗಳನ್ನು ಆಧುನಿಕರು ಪಡೆಯಬಹುದು ಹಾಗೂ ಅಲೆಮಾರಿಗಳು ತಮ್ಮದೊಂದು ಇಂಥ ಉತ್ತಮ ಕೊಡುಗೆ ಇದೆ ಎಂದು ಬೀಗಬಹುದು.

ಕುಲದೈವ ಆರಾಧನೆ ಈ ವರ್ಗದ ಜನರ ಮತ್ತೊಂದು ಕೊಡುಗೆ. ಇವರ ಪೂಜೆ ದುಬಾರಿ ಅಲ್ಲ, ದೈವ ದೊಡ್ಡ ಹೊರೆ ಅಲ್ಲ, ಧರ್ಮ ಒಂದು ನಿರ್ಬಂಧ ಅಲ್ಲ. ದೇವರ ಜೊತೆಗೆ ಕುಡಿಯುವ ಮತ್ತು ತಿನ್ನುವ ನಿಯಮ ಇವರನ್ನು ಎಲ್ಲ ಅಸ್ಪೃಶ್ಯತೆ ಮತ್ತು ಅರಾಜಕ ತತ್ವದಿಂದ ದೂರ ಇಟ್ಟಿದೆ. ಆದರೆ ಕುಡಿತವೆ ಮೌಲ್ಯ, ಮಾನ ಮತ್ತು ಅಂತಸ್ತು ಎಂಬ ತಿಳುವಳಿಕೆ ಅಪಾಯಕಾರಿಯಾದುದಾಗಿದೆ.

ಸಂಪತ್ತು ಸಂಗ್ರಹಿಸದ ಇವರ ಮನೋಧರ್ಮ ಈ ಹೊತ್ತಿನ ಆಧುನಿಕ ಭಯ-ಭೀತರಿಗೆ ಅಪರಾಧವೊ, ಅವಿವೇಕವೊ ಅಥವ ದೂರದರ್ಶಿತ್ವದ ಕೊರತೆಯೊ ಆಗಿ ಕಾಣಬಹುದು. ಒಂದು ದೇಶಕ್ಕೆ ಇಲ್ಲದ ಭವಿಷ್ಯದ ಭಯ ಒಬ್ಬ ವ್ಯಕ್ತಿ ಅಥವ ಒಂದು ಸಮುದಾಯದಲ್ಲಿ ಕಾಣಿಸಿಕೊಂಡರೆ ಅದು ಸ್ವಾರ್ಥ ಹಾಗೂ ದೇಶದ್ರೋಹ ಇಂಥವರು ತಮ್ಮ ಕಾರಣಕ್ಕೆ ದೇಶವನ್ನು ಮಾರಿ ತಮ್ಮನ್ನು ಉಳಿಸಿಕೊಳ್ಳುವಂಥವರು. ಕೆಲವು ವ್ಯಕ್ತಿಗಳ ಸಂಪತ್ತಿನ ದಾಹವೇ ಹಲವು ವ್ಯಕ್ತಿಗಳ ಮತ್ತು ದೇಶದ ಬಡತನಕ್ಕೆ ಕಾರಣವಾಗುತ್ತದೆ. ಒಂದು ದುಡಿಯುವ ಘಟಕ (ವ್ಯಕ್ತಿ, ಯಂತ್ರ, ಸಮುದಾಯ ಇತ್ಯಾದಿ) ಮಾತ್ರ ಒಂದು ದೇಶದ ಸಂಪತ್ತು ಎಂಬ ನಿಲುವು ದೇಶವನ್ನು ಕ್ರಿಯಾತ್ಮಕವಾಗಿ ಸಂಪದ್ಭರಿತ ಮಾಡಬಲ್ಲದು.

೧) ಮತದಾರರಾಗುವುದು ಎಂದರೆ ಚುನಾವಣಾ ಜ್ಞಾನವನ್ನು ಪಡೆಯುವುದು. ಎಂದರೆ, ಪ್ರಜಾಪ್ರಭುತ್ವದ ಹಕ್ಕು ಮತ್ತು ಕರ್ತವ್ಯಗಳ ಅರಿವನ್ನು ಗಳಿಸುವುದು. ಲಕ್ಷಗಳ ಸಂಖ್ಯೆಯಲ್ಲಿ ಮತದಾರರಿರುವ ಒಂದು ಸಮೂಹ ಮತ ಬ್ಯಾಂಕ್ ಆಗಲಾರದು. ಅದು ಆಧುನಿಕ ಸೌಲಭ್ಯಗಳಿಗೆ ತೆರೆದುಕೊಂಡಿದ್ದರೆ ತನ್ನಲ್ಲಿ ಅಸಂಘಟಿತತೆಯನ್ನು ಒಳಗೊಂಡಿರುತ್ತದೆ. ಲಿಂಗಾಯಿತ, ಒಕ್ಕಲಿಗ ಮತ್ತು ಕುರುಬ ಜನಾಂಗದ ವಿದ್ಯಾವಂತರ ಗುಂಪುಗಳು ತಾವು ಪ್ರತ್ಯೇಕವಾಗಿ





ಮಾತನಾಡಿಕೊಳ್ಳುವುದನ್ನು ಗಮನಿಸಿರಿ. ಲಿಂಗಾಯಿತ ಗುಂಪು ನಮ್ಮಲ್ಲಿ ಒಕ್ಕಲಿಗರಂತೆ ಒಗ್ಗಟ್ಟು ಇಲ್ಲ ಎನ್ನುತ್ತದೆ. ಒಕ್ಕಲಿಗರು ವೀರಶೈವರಂತೆ ನಮ್ಮಲ್ಲಿ ಒಗ್ಗಟ್ಟು ಇಲ್ಲ ಎನ್ನುತ್ತದೆ. ಹೀಗೆ ಕುರುಬರ ಗುಂಪೂ ಹೇಳುತ್ತದೆ. ಇವರ ಈ ಒಗ್ಗಟ್ಟಿನ ವಾದ ಅವಕಾಶವಾದವೆ ಹೊರತು ಅಭಿವೃದ್ಧಿ ಉದ್ದೇಶಿತ ಅಲ್ಲ. ಆ ಒಗ್ಗಟ್ಟು ಆಕ್ರಮಣಶೀಲವಾಗಿರುತ್ತದೆ.

ಅಲೆಮಾರಿಗಳು ಮತದಾರರಾಗುವುದೆಂದರೆ ತಮ್ಮ ಅಭಿವೃದ್ಧಿಗೆ ಮಾರ್ಗವನ್ನು ಕಂಡುಕೊಳ್ಳುವುದು ಎಂದಾಗುತ್ತದೆಯೆ ಹೊರತು ಆಕ್ರಮಣ ಅಥವ ಕೇಂದ್ರೀಯ ಶಕ್ತಿಯ ಅಪಹರಣ' ಎಂದಾಗುವುದಿಲ್ಲ. ಅಲೆಮಾರಿಗಳು ತಮ್ಮ ಜನಗಳ ಒಳಗೆ ಕೆಲಸ ಮಾಡಿ ಇಂಥ ಒಂದು ಶಕ್ತಿ ಸಂಚಯನ ಮಾಡಿಕೊಳ್ಳಬೇಕು. ಆದರೆ ಬೇಡಿ ತಿನ್ನುವವರೂ ಮತ್ತು ಮದ್ಯಪಾನಿ ವ್ಯಸನಿಗಳೂ ಆದ ಇವರು ಚುನಾವಣೆಯ ಒಂದು ದಿನಕ್ಕೆ ತಮ್ಮನ್ನು ಮಾರಿಕೊಂಡು ಮೂರನೆಯ ದಿನ ಬಿಸಾಕಲ್ಪಡುತ್ತಾರೆ ಎಂದು ಹೇಳಲಾಗುತ್ತಿದೆ.

೩) ಪಾಲುದಾರರಾಗುವುದೆಂದರೆ ದೇಶದ ಸಂಪತ್ತಿನ ಒಡೆತನದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದು ಎಂದಾಗುತ್ತದೆ. ಯಾರು ಯಾರು ಯಾವ ಥರದ ಆಸ್ತಿಯ ಒಡೆತನದಲ್ಲಿದ್ದಾರೆ. ಯಾವ ಆಸ್ತಿ ಚಲಿಸುವುದಾಗಿದೆ ಮತ್ತು ಯಾವುದು ಸ್ಥಿರ ಆಸ್ತಿ ಆಗಿದೆ ಎಂಬುದನ್ನು ತಿಳಿಯಬೇಕು. ತಾವು ಅಭಿವೃದ್ಧಿಯ ಕಡೆಗೆ ಹೊರಟರೆ ಸಮಕಾಲೀನವಾಗಿ ತಾವು ಯಾವ ಆಸ್ತಿಯ ಹಕ್ಕನ್ನು ಪ್ರತಿಪಾದಿಸಬೇಕು ಎಂದು ಸ್ಪಷ್ಟ ಮಾಡಿಕೊಳ್ಳಬೇಕು. ಅಪಾರ ಹೊರಬೇಕೆಂದು ಹೊರಟು ಅರ್ಕಿಲಸ್ ಥರ ಮತ್ತೆ ಇದ್ದ ಕಡೆಯೇ ಇರುವಂತಾಗಬಾರದು.

ಸಾಂಸ್ಕೃತಿಕವಾಗಿಯೂ ಆರ್ಥಿಕವಾಗಿಯೂ ಅಲೆಮಾರಿ ಜನಾಂಗ "ಓಡುವ ಕಲ್ಲಿಗೆ ತೂಕ ಇರುವುದಿಲ್ಲ'' (rolling stone gatheri's no mass) ಎಂಬಂತೆ ಇದ್ದಾರೆ. ಈಗ ಅವರಲ್ಲಿ ತಮ್ಮದೆಂಬ ಸಂಸ್ಕೃತಿಯೂ, ಆರ್ಥಿಕ ಶಕ್ತಿಯೂ ಇಲ್ಲ. ಸದ್ಯಕ್ಕೆ ಕಾಣುವಂತೆ ಅವರ ಕೈಗೆ ದುತ್ತನೆ ಸಿಕ್ಕಬಹುದಾದ ಯಾವ ಆಸ್ತಿ, ಸಂಪತ್ತು ಮತ್ತು ಅಧಿಕಾರ ಇಲ್ಲ. ಈ ಎಲ್ಲವೂ ಸ್ವಯಂ ಶ್ರಮ ಮತ್ತು ಹೋರಾಟದಿಂದ ಪಡೆಯಬಹುದಾದವುಗಳಾಗಿವೆ. ಇಂಥ ಸಂದರ್ಭದಲ್ಲಿ ಈ ಅಲೆಮಾರಿಗಳ :

೧) ಸಾಂಸ್ಕೃತಿಕ ನಿಲುವು

೨) ಆರ್ಥಿಕ ನಿಲುವು ಏನಾಗಿರಬೇಕು?

ನನಗೆ ಅನಿಸುವ ಹಾಗೆ ಮೊದಲು ಇವರು ಸಾಂಸ್ಕೃತಿಕವಾಗಿ ತಮ್ಮನ್ನು ಸ್ಪಷ್ಟ





ಪಡಿಸಿಕೊಳ್ಳಬೇಕು. ಅದೆಂದರೆ ತಮ್ಮೊಳಗೆ ವ್ಯಕ್ತಿತ್ವ (Personality) ಬೆಳೆಸಿಕೊಳ್ಳಬೇಕು. ತಾವು ಹುಚ್ಚರಲ್ಲ, ನೀಚರಲ್ಲಿ, ಭಿಕಾರಿಗಳಲ್ಲಿ ಭಿಕ್ಷುಕರಲ್ಲ, ಸೋಂಬೇರಿಗಳಲ್ಲ ಕುಡುಕರಲ್ಲ ಮತ್ತು ಅಮುಖ್ಯರಲ್ಲ ಎನ್ನುವುದನ್ನು ತಮ್ಮ ನೆರೆಹೊರೆಗೆ ಸಾದರಪಡಿಸುವುದು. ಇಂಥ ಯುವಕರು ಅಲೆಮಾರಿ ಸಮುದಾಯದೊಳಗೆ ಬೆಳೆಯಬೇಕು.

ಸುಲಭವಾಗಿ ಸಾಧ್ಯವಾಗುವ ರಾಜಕೀಯ ಪುಡಾರಿಗಿರಿಗೆ ಒಳಗಾಗಬಾರದು. ನಿಮ್ಮ ರಾಜಕೀಯ ನಿಲುವು ಸ್ಪಷ್ಟವಿರಬೇಕು. ನಿಮ್ಮ ಮತ ಮೌಲಿಕವಾದುದಾಗಬೇಕು. ಬಹುಸಂಖ್ಯಾತರಲ್ಲಿ ಕಾಣದ ತ್ಯಾಗ, ಹಟ ಮತ್ತು ಬದ್ಧತೆ ಎದ್ದು ಕಾಣಬೇಕು.

ಮಹಾಕವಿ ಚಿಂತಕ ಶ್ರೀ ಕುವೆಂಪು ಅವರಲ್ಲಿ ಒಂದು ಬೆಳಕು ನಿಮಗಾಗಿ ಇದೆ. ಶಂಭೂಕ ಶೂದ್ರ, ಏಕಲವ್ಯ ಬೇಡ, ಮಂಥರೆ ಅನಾಥೆ, ಜಲಗಾರ ಒಬ್ಬ ದಲಿತ ಇವರೆಲ್ಲ ತಳವರ್ಗದ ಸಾಂಪ್ರದಾಯಿಕ ಸೆರೆಮನೆಯಲ್ಲಿದ್ದ ಜನಪದರು. ಇವರನ್ನು ಶ್ರೀ ಕುವೆಂಪು ತಮ್ಮ ಕಾರ್ಯಗಳಲ್ಲಿ ಏನು ಮಾಡಿದರು? ತಿರಸ್ಕೃತರ ಪಟ್ಟಿಯಲ್ಲಿದ್ದ ಅವರನ್ನು ಪುರಸ್ಕೃತರ ಪಟ್ಟಿಗೆ, ಸ್ಥಾನಕ್ಕೆ ತಂದು ನಿಲ್ಲಿಸಿದರು. ಈ ಪ್ರತಿಯೊಬ್ಬನೂ ಆಧುನಿಕ ತತ್ವಜ್ಞಾನಿಯಾದನು. ಬೇರೆಯವರು ಎದುರು ಗುರುತಿಸುವ ಮತ್ತು ಗೌರವಿಸುವ ವ್ಯಕ್ತಿತ್ವವನ್ನು ಪಡೆದುಕೊಂಡರು.

ಇಲ್ಲಿ ಒಬ್ಬ ಅಲೆಮಾರಿಗೂ ಮತ್ತು ಒಬ್ಬ ಜಾನಪದ ವಿದ್ವಾಂಸನಿಗೂ ಸ್ಪಷ್ಟವಾದ ಮಾರ್ಗದರ್ಶನವಿದೆ. ಅಲೆಮಾರಿ ಒಂದು ಸಾಂಪ್ರದಾಯಿಕ ಜನಪದ. ಅದು ಹಿಂದುಳಿದೆ. ಆ ಹಿಂದುಳಿದಿರುವಿಕೆ ಯಾರಿಗೂ ಬಂಡವಾಳವಾಗಕೂಡದು. ಆದ್ದರಿಂದ ಅಲೆಮಾರಿ ವ್ಯಕ್ತಿತ್ವವನ್ನು ಪಡೆದುಕೊಳ್ಳಬೇಕು. ಎಂದರೆ, ಅವನಲ್ಲೂ ನಾಯಕತ್ವದ ಗುಣ ಬರಬೇಕು. ಆ ನಾಯಕತ್ವ ಪುರಾಣದ ನಾಯಕತ್ವದ ಥರ ಹೇಳಿಕೊಂಡು ಕೊಂಡಾಡುವುದು ಅಲ್ಲ, ಈಗ ಬದುಕುವ ಜನರ ಮಧ್ಯೆ ಮಾರ್ಗದರ್ಶಕವಾಗಬಲ್ಲ ನಾಯಕತ್ವ.

ಜಾನಪದ ವಿದ್ವಾಂಸನಿಗೆ ಶ್ರೀ ಕುವೆಂಪು ಅವರಿಂದ ಗಟ್ಟಿಯಾದ ಮಾರ್ಗದರ್ಶನವಿದೆ. ಜನಪದ ಸಾಹಿತ್ಯದ ಹಿರಿಮೆ ಮತ್ತು ಗರಿಮೆಯನ್ನು ಕುರಿತು ಬಿ.ಎಂ.ಶ್ರೀ, ಬೇಂದ್ರೆ, ಮಾಸ್ತಿ. ಇವರು ಕೊಂಡಾಡುತ್ತಾರೆ. ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯದ ಮೈಕೈ ತುಂಬಬೇಕು ಎನ್ನುತ್ತಾರೆ. ಜನಪದ ಸಾಹಿತ್ಯವನ್ನು ಕೈ ನೀಡಿ ಕರೆಯುತ್ತಾರೆ. ಮೈ ಒಡ್ಡಿ ಧರಿಸಿಕೊಳ್ಳುತ್ತಾರೆ. ಅದೇ ಕುವೆಂಪು ಸೋಬಾನೆ ಹಾಡುತ್ತಾ





ಕೂರಬೇಡಿ ಎನ್ನುತ್ತಾರೆ. ಎಂದರೆ ಕುವೆಂಪು ಜನಪದ ಸಾಹಿತ್ಯ ಮತ್ತು ಜಾನಪದದ ವಿರೋಧಿಗಳೆ? ಅಲ್ಲ, ಬಿ.ಎಂ.ಶ್ರೀ. ಮತ್ತು ಬೇಂದ್ರೆಯವರು ಜಾನಪದದ ವೈದಿಕ ಭಾಷೆ (Body language) ಬಗ್ಗೆ ಮಾತನಾಡುತ್ತಿದ್ದರೆ ಕುವೆಂಪು ಜಾನಪದದ ವಸ್ತು ಭಾಷೆ (Content language) ಬಗ್ಗೆ ಮಾತನಾಡುತ್ತಾರೆ. ಹೇಗೆ ಎಂದಿರ? ಅವರು ಶಂಬೂಕ, ಏಕಲವ್ಯ, ಮಂಥರೆ, ಜಲಗಾರರಲ್ಲಿ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಏರಿಸಿ ಬೇರೆಯವರಿಗೆ ಹೇಗೆ ಸಮಾನ ಎಂದು

ಹೇಳಿದರೂ ಆ ವ್ಯಕ್ತಿತ್ವಗಳು ಹುಟ್ಟಿ ಬೆಳೆದ ಜನಪದಗಳೂ ಸಮಕಾಲೀನ ವಸ್ತುವನ್ನು ಸ್ವೀಕರಿಸಿ, ಅಭಿವೃದ್ಧಿ ಹೊಂದಿ ಈ ಹೊತ್ತಿನ ಜನಪದಗಳಾಗಲಿ ಹಾಗೂ ಈ ಹೊತ್ತಿನ ಜಾನಪದವನ್ನು ಸೃಷ್ಟಿಸಲಿ ಎಂಬುದಾಗಿದೆ. ಸಾಮಗ್ರಿ ಆಧಾರಿತ ಜಾನಪದ ಚಿಂತಕನಿಗೂ ಸೃಜನಶೀಲ ಜಾನಪದ ವಿದ್ವಾಂಸನೂ ಹೇಗೆ ಭಿನ್ನ ಎಂಬುದಕ್ಕೆ ಸ್ಪಷ್ಟ ನಿರ್ದೇಶನ ಇಲ್ಲಿದೆ. ನಮ್ಮ ಜಡ ಜಾನಪದ ಚಿಂತಕರು ಪುರಾತನ ಜನರ ಪ್ರದೇಶವೆಂಬ ಕ್ಷೇತ್ರದಿಂದ ಜಾನಪದ ಕ್ಷೇತ್ರಕಾರ್ಯವನ್ನು ಕುವೆಂಪು, ತೇಜಸ್ವಿ, ದೇವನೂರು.. ವರೆಗೆ ವಿಸ್ತರಿಸಿಕೊಳ್ಳದಿದ್ದರೆ ನಿಮ್ಮ ಸಾವು ಸಮೀಪದಲ್ಲೆ ಇದೆ ಎಂದು ತಿಳಿದುಕೊಳ್ಳಬೇಕು.

**೧. ಆರ್ಥಿಕ ನಿಲುವು :**

ಹಾಗಿದ್ದಲ್ಲಿ ಅಲೆಮಾರಿಗಳ ಆರ್ಥಿಕ ನಿಲುವು ಯಾವುದಾಗಿರಬೇಕು? ಖಂಡಿತ ಈ ಬಗ್ಗೆ ನಿರ್ಣಾಯಕವಾದ ನಿಲುವೊಂದನ್ನು ನಾನು ಹೇಳಲಾರೆ. ನನಗಿರುವ ಕೆಲವು ಅನಿಸಿಕೆಗಳನ್ನಷ್ಟೆ ಹಂಚಿಕೊಳ್ಳಬಲ್ಲೆ. ನಮ್ಮ ಯಾವುದೇ ಆರ್ಥಿಕ ಚಟುವಟಿಕೆ ಉತ್ಪತ್ತಿ ಮತ್ತು ಉಳಿತಾಯವನ್ನು ಅವಲಂಬಿಸಿದೆ. ಅಲೆಮಾರಿಗಳಲ್ಲಿ ಉತ್ಪತ್ತಿ ಎಂಬುದು ಇಲ್ಲ. ಬೇರೆಯವರ ಉತ್ಪತ್ತಿಯನ್ನು ಭಿಕ್ಷೆ ಪಡೆವ ಮೂಲಕ ಹಂಚಿಕೊಳ್ಳುತ್ತಾರೆ. ಕೆಲವು ಅಲೆಮಾರಿಗಳು ಭಿಕ್ಷೆ ಸಿಗದಿದ್ದಾಗ ಮೀನು ಬೇಟೆ ಮಾಡುತ್ತಾರೆ. ಶಾಸ್ತ್ರ-ಶಕುನ ಹೇಳಿ ಪಡೆಯುವ ಆದಾಯ ತುಂಬಾ ನಗಣ್ಯವಾದುದು. ಸಾಂಸ್ಕೃತಿಕವಾಗಿ ಮೇಲುಗಾರಿಕೆಯನ್ನು ಮೆರೆಯುವ ಪುರೋಹಿತರು ಶಾಸ್ತ್ರ ಶಕುನ ಹೇಳುವ ಮೂಲಕ ದಾನದ ಹೆಸರಿನಲ್ಲಿ ಭಿಕ್ಷೆ ಪಡೆಯುವ ಮೂಲಕ, ಪೂಜೆ ಪುನಸ್ಕಾರಗಳಿಗೆ ಕಾಣಿಕೆ ಪಡೆಯುವ ಮೂಲಕ ಒಳ್ಳೆಯ ಜೀವನವನ್ನೇ ಸಾಗಿಸುತ್ತ ಬರುತ್ತಿದ್ದಾರೆ. ಅಲೆಮಾರಿಗಳದು ಈ ರೀತಿ ಸಾಂಸ್ಕೃತಿಕವಾಗಿ ನಿರ್ವಚಿಸದ ಭಿಕ್ಷೆ ಮತ್ತು ಬೇಡಿಕೆಯಾಗಿದೆ. ಇವರು ನಡೆಸಿಕೊಡುವ ಆಚರಣೆಯನ್ನು ಜನ ಗಂಭೀರವಾಗಿ ತೆಗೆದುಕೊಂಡಿಲ್ಲ, ಬುಡುಬುಡಿಕೆ, ಕುರುಮಾಮ ಮತ್ತು ಕೊರವಂಜಿಗಳ ಶಾಸ್ತ್ರ





ಎಂದರೆ ಬೀದಿ ಶಾಸ್ತ್ರ ಎಂದು ತಿಳಿದುಕೊಂಡಿದ್ದಾರೆ. ಒಳ್ಳೆಯ ವೇಷ ಮತ್ತು ಅಭಿನಯ ನೀಡಿದರೂ ವೇಷಗಾರರ ಬಗ್ಗೆ ಅಂಥ ಪವಾಡ ಇಲ್ಲ. ಅವರಿಗೆ ಕೊಡುವ ಸಂಭಾವನೆಯೂ ಕಡಿಮೆ.

ಅಲೆಮಾರಿಗಳಲ್ಲಿ ಈಗ ಕೆಲವರು ಕೂಲಿಗಳಾಗಿ ಕೆಲಸ ಮಾಡತೊಡಗಿದ್ದಾರೆ. ದಕ್ಷಿಣ ಕರ್ನಾಟಕದ ಬುಡು ಬುಡಿಕೆಯವರು ವ್ಯಾಪಾರದಲ್ಲಿ ಆಸಕ್ತರಾಗಿದ್ದಾರೆ. ಇನ್ನು ಕೆಲವು ಆದಿವಾಸಿಗಳು, ಕೃಷಿಯಲ್ಲಿ ತೊಡಗಿದ್ದಾರೆ. ಇನ್ನುಳಿದವರು ತಮ್ಮ ಆಸಕ್ತಿ ಮತ್ತು ನೈಪುಣ್ಯಕ್ಕೆ ಹೊಂದುವ ಬೇರೆ ಬೇರೆ ಕೆಲಸಗಳನ್ನು ಹಿಡಿಯುವುದು ಅಗತ್ಯವಿದೆ. ಬಹುತೇಕ ಅಲೆಮಾರಿಗಳಿಗೆ ಬೇಟೆಯ ಕಲೆ ಗೊತ್ತಿದೆ. ಪ್ರಾಣಿಗಳ ಜೀವನ ವಿವರಗಳು ಗೊತ್ತಿವೆ. ಆದ್ದರಿಂದ ನನ್ನಂಥವನಿಗೆ ಈ ಜನವರ್ಗ ಪ್ರಾಣಿ ಸಾಕಣೆಯನ್ನು ಉದ್ಯಮವನ್ನಾಗಿ ಮಾಡಿಕೊಳ್ಳಬಹುದು ಎನಿಸುತ್ತದೆ. ಮೀನು, ಕೋಳಿ ಮತ್ತು ಹಸುಗಳನ್ನು ಸಾಕುವುದು ಸದ್ಯಕ್ಕೆ ಅನುಕೂಲಕರ.

ಯಾವುದೇ ಉದ್ಯಮಕ್ಕೆ ಮೂಲ ಬಂಡವಾಳ ಮುಖ್ಯ. ಈ ಬಂಡವಾಳ ಸಮುದಾಯದ ಒಳಗಿನಿಂದ ಸೃಷ್ಟಿಯಾಗಬೇಕು. ಹಾಗೆಯೇ ಪೋಷಕ ಬಂಡವಾಳ ಸರ್ಕಾರ ಮತ್ತು ಸಹಕಾರ ಬ್ಯಾಂಕುಗಳಿಂದ ಬರಬೇಕಾಗುತ್ತದೆ. ಸುಮಾರು ತೊಂಬತ್ತು ಶತ ಅಲೆಮಾರಿಗಳು ಮದ್ಯಪಾನಕ್ಕಾಗಿ ೩೦ ರಿಂದ ೬೦ ಶತದವರೆಗೆ ಖರ್ಚು ಮಾಡುತ್ತಾರೆ ಎಂದು ಹೇಳಲಾಗುತ್ತಿದೆ. ಈ ಖರ್ಚಿನಲ್ಲಿ ಅರ್ಧಭಾಗಕ್ಕಿಂತ ಹೆಚ್ಚು ಉಳಿತಾಯವಾಗಬೇಕಿದೆ. ಅಂತರತವಾಗಿ ಸಂಘಟಿತವಾಗದಿದ್ದರೆ ಹೊರಗಿನ ಯಾವುದೇ ಸಹಕಾರ ನಿರರ್ಥಕವಾಗುತ್ತದೆ. ಅಲೆಮಾರಿಗಳು ಸ್ವತಃ ಒಂದು ಸಂಕಷ್ಟ ಸೂತ್ರಕ್ಕೆ ಒಳಪಡಬೇಕಾದ ಅಗತ್ಯವಿದೆ. ಒಂದು ಕಡೆ ನೆಲೆ ನಿಂತು ಉತ್ಪತ್ತಿಯಲ್ಲಿ ತೊಡಗುತ್ತೇವೆ ಎಂದಾಗ ಸಹಕಾರ ಸಾಧ್ಯವಾದ ಮಟ್ಟಿಗೆ ಸಿಗುತ್ತವೆ.

**ಜನಪದ ನಾಯಕತ್ವ**

**(ಸ್ಥಳೀಯ ನಾಯಕನೇ ನಿಜವಾದ ಜನಪದ ನಾಯಕ)**

---

ಈವತ್ತು ಬೆಂಗಳೂರಿನಲ್ಲಿ ಅನೇಕ ಲಕ್ಷ ಜನರಿದ್ದಾರೆ. ಅವರು ಬೀದಿಗಳಲ್ಲಿ ಮತ್ತು ತಂತಮ್ಮ ವ್ಯವಹಾರಗಳಲ್ಲಿ ನಿರತರಾಗಿದ್ದಾರೆ. ಅವರು ಇಲ್ಲಿ ನಮ್ಮ ಮಧ್ಯೆ ಇಲ್ಲ, ಅದ್ರೆ ನಾವಿಲ್ಲಿ ಬಹಳ ಕಡಿಮೆ ಜನ ಇದ್ದೇವೆ. ಯಾವತ್ತು ಕೂಡಾ ಸಮಾಜದಲ್ಲಿ ಅಬ್ಬರದ ಮಧ್ಯೆ, ಗಲಾಟೆಗಳ ಮಧ್ಯೆ ಎಷ್ಟೇ ಸಂದರ್ಭಗಳಲ್ಲಿ ನಮಗೆ ಗೊತ್ತಿಲ್ಲದ ಹಾಗೇನೆ ನಮ್ಮನ್ನ ನಾವು ಕಳಕೊಳ್ತಾ ಹೋಗ್ತಿವಿ. ಯಾಕಂದ್ರೆ ಒಂದು ಸಮಾಜದ ಬೆಳವಣಿಗೆಯ ನಿರ್ಣಯ ಅನ್ನುವಂಥದ್ದು ಗಲಾಟೆಗಳಲ್ಲಿ ಅಬ್ಬರಗಳಲ್ಲಿ ಮೆರವಣಿಗೆಗಳಲ್ಲಿ ತೀರಾನವಾಗೋಲ್ಲ. ಒಂದು ಸಮಾಜ ಯಾವ ಮೌಲಿಕ ಚಿಂತನೆಯನ್ನು ಒಳಗಡೆ ಬೆಳೆಸ್ತಾ ಇದೆ ಅನ್ನೋದರ ಮೂಲಕ ಆ ಸಮಾಜ ಗಟ್ಟಿಯಾಗ್ತಾ ಹೋಗ್ತದೆ. ಹಾಗಾಗಿ ನಾವು ಸಮಾಜದ ಬಗ್ಗೆ ಆಲೋಚನೆ ಮಾಡುವಂಥವರು ಸುಳಿವುಗಳನ್ನು ಹಿಡೀಬೇಕು ಮತ್ತು ಇಂಥ ಸುಳಿವುಗಳನ್ನು ಹಿಡಿಯುವುದರ ಮೂಲಕ ನಮ್ಮ ಸಮಾಜ ಯಾವ ರೀತಿಯಲ್ಲಿ ಯಾವ ದಿಕ್ಕಿನಲ್ಲಿ ಬದಲಾವಣೆ ಆಗಿದೆ ಅನ್ನುವುದನ್ನು ಗುರುತಿಸಬೇಕು. ಅನೇಕ ಸಂದರ್ಭಗಳಲ್ಲಿ ಚಿಂತಕರ ಬಗ್ಗೆ, ವೋಟನ್ನ ಪಡಕೊಳ್ಳೋರು ಒಂದ್ ಮಾತು ಹೇಳ್ತಾರೆ. " ನೀವು ಇಷ್ಟೆಲ್ಲಾ ಮಾತಾಡತೀರಲ್ಲ ; ನೀವೆಷ್ಟು ವೋಟು ಕೊಡಿಸ್ತೀರಿ ಅಂತ. ಪಾಪ ನಮಗೆ ಬಹಳ ಕಷ್ಟ ಅನಿಸುತ್ತೆ. ಅವ್ರು in terms of votes ವಿಷಯದಲ್ಲಿ ಮಾತಾಡ್ತಾರೆ. ನಾವು in terms of minds ಬಗ್ಗೆ ಮಾತಾಡ್ತಿದೀವಿ. ಹಾಗಾಗಿ ನಾವು ಮಾತಾಡಬೇಕಾಗಿರೋದು ಮನಸ್ಸುಗಳ ಬಗ್ಗೆ, ಮನಸ್ಸುಗಳನ್ನು ಗುರುತಿಸುವ, ಮನಸ್ಸುಗಳು ಚಲಿಸುವ ಬಗ್ಗೆ ನಾವು ಆಲೋಚನೆ ಮಾಡಬೇಕಾಗಿದೆ.

ಸಮಾಜದಲ್ಲಿ ಎಷ್ಟೇ ಜನಸಂಖ್ಯೆ ಇದ್ರು ಕೂಡಾ, ಆ ಸಮಾಜದ ಒಳಗಡೆ ಸಮಾಜವನ್ನು ನಿರ್ಣಯಿಸುವ, ನಿರ್ದೇಶಿಸುವ ಶಕ್ತಿ, ಆ ಶಕ್ತಿಯ ಹಿಂದಿನ ತಾತ್ವಿಕತೆ ಭಾಳ ಮುಖ್ಯವಾದದ್ದು. ಹಾಗಾಗಿ ಭಾರತದ ಸಂದರ್ಭದಲ್ಲಿ ನಾವಿವತ್ತು ಸ್ವಾತಂತ್ರ್ಯವನ್ನು ಪಡಕೊಂಡು ೫೦ ವರ್ಷಗಳನ್ನ





ದಾಟಿದ್ದೇವೆ. ಈ ೫೦ ವರ್ಷಗಳನ್ನು ದಾಟುವ ಮೂಲಕ ಹೊಸ ಸಾಮಾಜಿಕ, ರಾಜಕೀಯ ಚಿಂತನೆಗಳನ್ನು ಯೋಚೆ ಮಾಡ್ಕೊಂಡು ಬರತಾ ಇದ್ದೇವೆ. ಹೀಗೆಲ್ಲ ಯೋಚೆ ಮಾಡಕೊಂಡು ಬರುವ ಸಂದರ್ಭದಲ್ಲಿ ಕೂಡಾ ನಮ್ಮ ಗತಿ ಯಾವ ದಿಕ್ಕಿನಲ್ಲಿದೆ ಅನ್ನುವಂತದ್ದನ್ನ ಗುರುತಿಸಿಕೊಳ್ಳುವಂಥದ್ದು ನಮ್ಮ ಕಾರಣಕ್ಕೋಸ್ಕರವಾಗಿಯಾದರೂ ಅಥವಾ ನಮ್ಮ ಅಸ್ತಿತ್ವಕ್ಕೋಸ್ಕರವಾಗಿಯಾದರೂ ಬಹಳ ಮುಖ್ಯ ಅಂತ ನಾನು ಅಂದ್ಕೊಂಡಿದ್ದೇನೆ. ಇದರಲ್ಲಿ ಜನಪದ ನಾಯಕತ್ವ ಅಂತಂದ್ರೆ ಏನು ಅಂತ, ಈಗ ನಾವು ಪಕ್ಷದ ನಾಯಕತ್ವವನ್ನೇ ಗಮನಿಸಿದ್ದೇವೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ನಾಯಕತ್ವದ ಬಗ್ಗೆ ಮಾತಾಡತಿದ್ದೇವೆ. ಈಗ ನಾಯಕತ್ವದ ನೆಲೆ ಯಾವ ರೀತಿಯಲ್ಲಿದೆ ಮತ್ತೆ ನಾವು ನಮ್ಮಂಥ ದೇಶಗಳು ಯಾವ ನೆಲೆಯಲ್ಲಿ ಗುರುತಿಸಿಕೊಳ್ಳಬೇಕು ಅಂತ. ಯಾಕಂದ್ರೆ ನಾಯಕತ್ವದ ಪ್ರಶ್ನೆ ಯಾವಾಗಲೂ ಕೂಡಾ ಅಯಾ ದೇಶದ ಸಂಸ್ಕೃತಿಯನ್ನು ಅಂದರೆ ಸಾಂಸ್ಕೃತಿಕ ನೆಲೆಗಟ್ಟನ್ನು ಅವಲಂಬಿಸಿರುತ್ತೆ ಅನ್ನೋದನ್ನ ನಾವು ಗಮನಿಸಬೇಕು. ಬೇರೆ ದೇಶದ ನಾಯಕತ್ವ ಬಾಳ ಭಿನ್ನ ಆಗತಾವೆ. ಇದಕ್ಕೆ ಕಾರಣ ಇಲ್ಲಿರುವ ಸಂಸ್ಕೃತಿ, ಜನಾಂಗ, ಭಾಷೆಗಳು ಇವೆಲ್ಲ ಕೂಡಾ ಬಹಳ ಮುಖ್ಯವಾಗತಾವೆ. ಇಲ್ಲಿ ಜನಪದ ನಾಯಕ ಯಾರು ಅಂತ ಪ್ರಶ್ನೆ ಬಂದಾಗ ನಾನು ಆ ಅಂಶಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

ನಮಗೆ ಸ್ವಾತಂತ್ರ್ಯ ಬಂದ ಸಂದರ್ಭವನ್ನು ಗಮನಿಸ್ತಾ ಬನ್ನಿ; ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಅಂದ್ರೆ ವ್ಯಕ್ತಿತ್ವ ನಿಲ್ದಾಣದ ಪ್ರಶ್ನೆಯೇ ನಮ್ಮ ಮುಂದಿಲ್ಲದಿರುವುದು, ನಾವು ರಾಜಕೀಯವಾಗಿ, ಧಾತ್ಮಿಕವಾಗಿ ಒಂದು

ರೀತಿಯಲ್ಲಿ ವ್ಯಕ್ತಿತ್ವ ಇಲ್ಲದ, ಭಯಗಳಿಗೆ ಒಳಗಾಗತಾ ಇದ್ದೇವೆ. ದೇಶದಲ್ಲಿ ವ್ಯಕ್ತಿತ್ವ ನಿರ್ಮಾಣದ ಪ್ರಶ್ನೆ ಎದುರಾಗ್ತಾ ಇಲ್ಲ ಅಂದ್ರೆ, goods ಅನ್ನು ತಯಾರುಮಾಡಬೌದು. goods ಅನ್ನ renew ಮಾಡಬೌದು. ಆದ್ರೆ ವ್ಯಕ್ತಿತ್ವ ನಿರ್ಮಾಣವಾಗದೇ ಹೋದ್ರೆ ಆ ದೇಶಕ್ಕೆ ಭವಿಷ್ಯ ಇಲ್ಲ ಎನ್ನುವ ಅಂಶವನ್ನು ನಾವು ಗಮನಿಸಬೇಕು.

ಒಂದು ಕಾಲಕ್ಕೆ ಸ್ವಾತಂತ್ರ್ಯ ಹೋರಾಟದ ನಂತರದ ಸಂದರ್ಭದಲ್ಲಿ ನಮಗೆ ಕುವೆಂಪು ಅವರಾಗಲಿ. ಶಿವರಾಮ ಕಾರಂತರಾಗಲಿ, ಗೋವಿಂದ ಪೈಯವರಾಗಲಿ ಅವರೆಲ್ಲ ಒಂದು ಜಾತಿಯ ಹಿನ್ನೆಲೆಯಲ್ಲಿ ಬಂದೂ ಕೂಡಾ ನಮಗೆ ಅವರು ಜಾತ್ಯಾತೀತವಾಗಿ ಕಾಣತಾ ಇದ್ರು ಮತ್ತು ನಮ್ಮ ದೇಶದ ಬೆಳವಣಿಗೆಯ ಬಗ್ಗೆ, ಭಾಷೆಯ ಬಗ್ಗೆ, ಸಂಸ್ಕೃತಿಯ ಬಗ್ಗೆ messageನ್ನು ಅವ್ರು ಕೊಡ್ತಾ ಇದ್ರು. ಆದರೆ ಈವತ್ತಿನ ಸಂದರ್ಭದಲ್ಲಿ ಅಂಥ messageಗಳನ್ನ ಕೊಡುವ personalityಗಳು ಜಾತ್ಯಾತೀತವಾಗಿ, ವರ್ಗಾತೀತವಾಗಿ ಕಾಣತಾ ಇಲ್ಲ. ಈ ದೃಷ್ಟಿಯಿಂದ ನಮ್ಮಲ್ಲಿ ವ್ಯಕ್ತಿತ್ವದ ಭಯ ಇದೆಯಲ್ಲ ; ಆ ವ್ಯಕ್ತಿತ್ವದ ಭಯ ಸೃಷ್ಟಿಯಾಗ್ತಾ ಇದೆ.





ನಾವು ಈವತ್ತು ಧಾರ್ಮಿಕವಾದಂಥ ಸ್ವಾಸ್ಥ್ಯವನ್ನ ಬಯಸ್ತಾ ಇದೀವಿ. ಆದ್ರೆ ಧರ್ಮ ಅನ್ನುವಂಥದ್ದು ಕೂಡಾ ಜನರನ್ನು ಹೆದರಿಸ್ತಾ ಇದೆ. ನಾವು ಧರ್ಮಕ್ಕೆ ಬೇರೆ ಬೇರೆ ವ್ಯಾಖ್ಯಾನವನ್ನು ಕೊಡತಾ ಇದೇವೆ. ಧರ್ಮ ಸ್ವಾಸ್ಥ್ಯಕ್ಕೆ ಬಂತು, ಹೊಂದಾಣಿಕೆಗೆ ಬಂತು, ಅನಾಗರೀಕತೆಯನ್ನ refine ಮಾಡೋದಕ್ಕೆ ಬಂತು ಅಂತ ಹೇಳುತ್ತೇವೆ. ಆದರಿವತ್ತು ಧರ್ಮ ಜನರನ್ನು ಹೆದರಿಸ್ತಾ ಇದೆ. ಅದರಲ್ಲೂ ಬಹುಸಂಖ್ಯಾತರ ಧರ್ಮ, ಮೇಲು ಜಾತಿಯ ಧರ್ಮ ಹೆದರಿಸ್ತಾ ಇರೋದ್ರಿಂದ, ಭಯವನ್ನು ಹುಟ್ಟಿಸ್ತಾ ಇರೋದ್ರಿಂದ ಸಮಸ್ಯೆ ಏನಾಗಿದೆ ಅಂತಂದ್ರೆ, ಅನೇಕ ಕೆಳವರ್ಗಗಳಿಗೆ ನಮ್ಮದೇ ಆದಂಥ ಒಂದು ಧರ್ಮ ಇದೆಯ? ಎನ್ನುವಂಥ ಆತಂಕ, ಭಯ ಉಂಟಾಗತಾ ಇದೆ. ಧರ್ಮ ಅನ್ನುವಂಥದ್ದು ಮೂಲತಃ ನಂಬಿಕೆ. ಇವರು ಏನೇನೋ ವ್ಯಾಖ್ಯಾನ ಕೊಟ್ಟುಕೊಳ್ಳಲಿ. ಆದರೆ ನಮ್ಮದೇ ಆದಂಥ ಧರ್ಮ, ಸಂಸ್ಕೃತಿ ಇದೆಯಾ ಎನ್ನುವಂಥ ಆತಂಕಕ್ಕೆ ತಳನೆಲೆಗಳು ಒಳಗಾಗಿವೆ. ಯಾಕಂದ್ರೆ ಮೇಲು ಜಾತಿಯ ಧರ್ಮ ತಳನೆಲೆಯವರನ್ನ ಹೆದರಿಸ್ತಾ ಇದೆ. ಹಾಗಾಗಿ ಈವತ್ತು ತಮಗಿರುವಂಥ ನಂಬಿಕೆ ಬಗ್ಗೆನೆ ಭಯ ಪಡ್ತಿದಾರೆ. ಇದರರ್ಥ ಏನು ಅಂದ್ರೆ ಯಾರು ನಂಬಿಕೆಯನ್ನ ಕಳಕೊಂತಾರೋ ಅವು ಸಂಸ್ಕೃತಿಯ ಮೂಲಕ ತಮ್ಮ ಅಸ್ತಿತ್ವವನ್ನು ಕಳಕೋತಾರೆ. ಈ ಮೂಲಕ ನಾವು ಏನು ಮಾಡತಿದೀವಿ ಅಂದ್ರೆ, ಈ ದೇಶದಲ್ಲಿ ಬೇರೆ ಬೇರೆ ಸಂಸ್ಕೃತಿಗಳಿವೆ. ಬೇರೆ ಬೇರೆ ಧರ್ಮಗಳಿವೆ. ಅನ್ನುವಂಥದ್ದರ ಆಲೋಚನೆ ಕೂಡಾ, ಮಾನವೀಯತೆ ಕೂಡಾ sensitivity ಕೂಡಾ ಇಲ್ಲದೆ ಇರೋದ್ರಿಂದ, ನಾವು ಅವರೆಲ್ಲರನ್ನ ಕಳೆಯುವಂತ wash out ಮಾಡುವಂಥ ಪರಿಸ್ಥಿತಿಯನ್ನ ನಿರ್ಮಾಣ ಮಾಡ್ತಾ ಇದೀವಿ. ಒಂದು ಕಡೆ ಜಾಗತೀಕರಣ ಈ

ಕೆಲಸವನ್ನ ಮಾಡತಾ ಇದ್ರೆ ಇನ್ನೊಂದ್ ಕಡೆ ಧಾರ್ಮಿಕ ಜಾಗತೀಕರಣ ಉಂಟು ಮಾಡುವುದರ ಮೂಲಕ ಈ ಥರದ ಸ್ಪಂದನಗಳನ್ನ ನಾವು ಕಳಕೊಳತಾ ಇದೀವಿ.

ಈಗ ನಾವು ಭಾಷೆಯ ಬಗ್ಗೆ, ಎಷ್ಟು ಬೇರೆ ಬೇರೆ ಭಾಷೆಗಳಿವೆ ಎಂಬುದರ ಬಗ್ಗೆ, ಹಾಗೆಯೇ ಭಾಷೆ ಕಳೆದು ಹೋಗುತ್ತಿರುವುದರ ಬಗ್ಗೆ ಮಾತಾಡತಾ ಇದೀವಿ. ಒಂದು ಭಾಷೆಯನ್ನ ಸೃಷ್ಟಿ ಮಾಡುವಂಥದ್ದು ಒಂದು ವಿಶಿಷ್ಟತೆಯನ್ನ ಸೃಷ್ಟಿ ಮಾಡಿದಂತೆ, ಇದು ವ್ಯಾಪಾರಿಗಳಿಗೆ, ಜಾಗತೀಕರಣದ ಪ್ರಭುಗಳಿಗೆ ಗೊತ್ತಾಗೋಲ್ಲ, ಯಾಕೆಂದರೆ ಅವ್ರು ಒಂದೇ modelನ್ನು ಸೃಷ್ಟಿ ಮಾಡುವಂಥವರು. ಈ ದೇಶದಲ್ಲಿ ಅನೇಕ ಸಂಸ್ಕೃತಿಗಳು, ಭಾಷೆಗಳು ಸೃಷ್ಟಿಯಾಗಿವೆ ಅಂತಂದ್ರೆ ಅದು ಈ ದೇಶದ ಸಂಸ್ಕೃತಿಯ ವೈಶಿಷ್ಟ್ಯ. specificಗಳನ್ನ ಯಾರು ಸೃಷ್ಟಿ ಮಾಡತಾರೆ ಅಂತಂದ್ರೆ ಯಾರಲ್ಲಿ creativity ಇರುತ್ತೋ ಅವ್ರು specific ಗಳನ್ನ ಸೃಷ್ಟಿ ಮಾಡ್ತಾರೆ. ಎಲ್ಲಿ ಪುನರ್ ನಿರ್ಮ್ಮಾಣ ಶಕ್ತಿ ಇರುತ್ತೋ ಅಲ್ಲಿ ಪುನರ್ ಚಿಂತನೆ ಶಕ್ತಿ ಇರುತ್ತೆ. ಅಂತಹ ಕಡೆ ಹೊಸ specific ಗಳು, ವಿಶಿಷ್ಟತೆಗಳು ಸೃಷ್ಟಿಯಾಗುತ್ತವೆ. ಆದ್ರೆ ನಾವು ಎಲ್ಲ ವಿಶಿಷ್ಟತೆಗಳನ್ನು ನಾಶ ಮಾಡತಾ ಇದ್ದೀವಿ.





ಮತ್ತೊಂದು ನೆಲೆಯಲ್ಲಿ ರಾಷ್ಟ್ರೀಯತೆ ಎನ್ನುವಂಥದ್ದು ಸ್ಥಳೀಯ ನಾಯಕತ್ವವನ್ನು ಹಾಳು ಮಾಡತಾ ಇದೆ. ಸ್ಥಳೀಯತೆ ಎನ್ನುವಂಥದ್ದು ನೋಯತಾ ಇದೆ. ಸ್ಥಳೀಯತೆಯನ್ನು ನಾವು ಕಡೆಗಣಿಸ್ತಾ ಇದೀವಿ. ರಾಷ್ಟ್ರೀಯತೆ ಎನ್ನುವುದು ಒಂದು ಮೋಹ, ಪ್ರೀತಿ, ಒಗ್ಗಟ್ಟು, ನಿಜವಾದ knowledge ಎನ್ನುವಂಥದ್ದು ಸ್ಥಳೀಯತೆಯಲ್ಲಿರುತ್ತೆ. ಸ್ಥಳೀಯ ನಾಯಕನೇ ನಿಜವಾದ ಜನಪದ ನಾಯಕನಾಗಿರತಾನೆ. ಅವನ knowledge ನ್ನ, ಅಸ್ತಿತ್ವವನ್ನ, ಅವನ ಸಂಸ್ಕೃತಿಯನ್ನ ನಿರ್ನಾಮ ಮಾಡುವುದರ ಮೂಲಕ ನಾವು ಸಂಸ್ಕೃತಿಯನ್ನ ಒಟ್ಟಾಗಿ ನಾಶ ಮಾಡ್ತಾ ಇದೀವಿ. ಗೊತ್ತಾಗೋಲ್ಲ. ಅದು ನಮಗೆ ಒಳಗಡೆ ಕ್ಯಾನ್ಸರ್ ರೀತೀಲಿ ಹೇಗೆ ಹುಳುಗಳು ತಿನ್ತಾ ಇರತವೆ. ದೇಹವನ್ನ ಹೇಗೆ ತಿಂತವೆ ಅನ್ನುವುದು ಗೊತ್ತಾಗೋದಿಲ್ಲ. ಹಾಗಾಗಿ ನಾವು ingradients ಬಗ್ಗೆ ಯೋಚೆ ಮಾಡ್ತಾ ಇಲ್ಲ. ಸ್ಥಳೀಯತೆ ಎನ್ನುವಂತದ್ದು ಬೇರೆ ಬೇರೆ ಸಣ್ಣ ಜನಾಂಗಗಳ ಸೃಜನೆ ಮತ್ತು ಅವುಗಳ ಜ್ಞಾನ. ಅದನ್ನ ನಾವು ನಾಶ ಮಾಡತಾ ಇದೀವಿ. ಇನ್ನೊಂದು ಸಮಸ್ಯೆ ಏನಾಗತಾ ಇದೆ ಅಂತಂದ್ರೆ ಈ ಸ್ಥಳೀಯ ನಾಯಕತ್ವವನ್ನ ವಸ್ತುಗಳ ಮೂಲಕ ತರತಾ ಇದೆ. ಆಧುನಿಕ ತಂತ್ರಜ್ಞಾನದ ಮೂಲಕ ತರತಾ ಇದೆ. ಅಕ್ಕಪಕ್ಕದವುಗಳನ್ನು ಆದು ಗಮನಿಸತಾ ಇಲ್ಲ. ಹಾಗಾಗಿ ಕೆಲವರು ತಿಳಕೋತಾರೆ: ಸ್ಥಳೀಯ ನಾಯಕತ್ವ ಹೋದ್ರೂ ಪರವಾಗಿಲ್ಲ, ರಾಷ್ಟ್ರೀಯ ನಾಯಕತ್ವ, ರಾಜ್ಯದ ನಾಯಕತ್ವ ಉಳಕೊಂಡ್ರೆ ಸಾಕು ಅಂತ. ಆದ್ರೆ ಜಾಗತೀಕರಣ ರಾಜಕೀಯವನ್ನ, ರಾಜಕೀಯ ನಾಯಕರುಗಳನ್ನು

middlemenಗಳಾಗಿ, Agentಗಳನ್ನಾಗಿ convert ಮಾಡುತ್ತೆ ಈ ದೃಷ್ಟಿಯಿಂದ ಸ್ಥಳೀಯ ನಾಯಕತ್ವದ ಹಿನ್ನೆಲೆಯನ್ನು ಯೋಚ್ನೆ ಮಾಡಬೇಕು. ದೇಶೀಯ ನಾಯಕತ್ವದ ಹಿನ್ನೆಲೆಯಲ್ಲಿ ಒಬ್ಬರನ್ನೊಬ್ಬರು ವಂಚಿಸುವಂಥ ಕೆಲಸವನ್ನು ಮಾಡಬಾರದು.

ಅಭಿವೃದ್ಧಿಯ ಬಗ್ಗೆ ನಾವು ಯೋಚ್ನೆ ಮಾಡುತಿರುವಾಗ, ನಾವೆಲ್ಲಾ ಈವತ್ತು ಕೇವಲ borrowers ಆಗ್ತಾ ಇದ್ದೀವಿ. ಏರುಮುಖ ಅಭಿವೃದ್ಧಿಯ ಬಗ್ಗೆ ಆಲೋಚ್ನೆ ಮಾಡ್ತಾ ಇದೀವಿ. ಯಾವುದೋ ಒಂದು ಕಾಲದಲ್ಲಿ ಆರಂಭದಲ್ಲಿ ಸಂಸ್ಕೃತಿಯ ಬಗ್ಗೆ, evolution ಬಗ್ಗೆ ಮಾತನಾಡಿದಂಥವರು ಸಂಸ್ಕೃತಿ ಹೀಗೆ ಬೆಳೆಯುತ್ತೆ ಅಂದುಬಿಟ್ರು. ಆದ್ರೆ ಅವನ್ಯಾರು ಹೇಳಿದವರು ಅಂದ್ರೆ ವಸಾಹತುಷಾಹಿಗಳು. ಅವರುಗಳು ಹೇಗೆ ಬೆಳೀತಾರೋ ಸಂಸ್ಕೃತಿಯೂ ಹಾಗೆಯೇ ಬೆಳೆಯುತ್ತೆ ಎನ್ನುವುದು ಅವರ ಅಭಿಪ್ರಾಯ. ಸಂಸ್ಕೃತಿಯ ಬೇರೆ ಬೇರೆ ಮಗ್ಗಲುಗಳು ಹೇಗೆ ಬೆಳೀತವೆ ಎಂಬುದನ್ನು ಅವರೆಂದೂ ಪ್ರಸ್ತಾಪ ಮಾಡಲಿಲ್ಲ. ಆ ಹಿನ್ನೆಲೆಯಲ್ಲಿ ಈವತ್ತು ನಾವು ಬೇರೆ ಮಾರ್ಗದಲ್ಲಿ ಆಲೋಚನೆ ಮಾಡದೆ ಹೋದ್ರೆ ಅಕ್ಕಪಕ್ಕದಲ್ಲಿರುವುದೆಲ್ಲವನ್ನು ನಾವು ಕಳಕೋತೀವಿ, ಒಂಟಿಯಾಗಿ ನಿಂತುಕೊಳ್ಳಬೇಕಾದ ಪರಿಸ್ಥಿತಿ ಬರುತ್ತೆ. ಆದ್ರಿಂದ ಸಂಸ್ಕೃತಿಯನ್ನು ಹುಡುಕುವುದರ ಮೂಲಕ ಮತ್ತೆ ನಾವು, ನಮಗೆ ಬೇಕಾದ





ನಾಯಕತ್ವವನ್ನು ಹುಡುಕಿಕೊಳ್ಳಬೇಕಾಗಿದೆ. ಇನ್ನೊಂದು ಬಹು ಮುಖ್ಯವಾದಂಥ ಅಂಶ ಎಂದರೆ, ಈವತ್ತು ಬರುತ್ತಿರುವಂಥ ಬಳಸು ಮತ್ತು ಎಸೆ use & throw ಅನ್ನುವಂಥ ಸಂಸ್ಕೃತಿ ಬರತಿದೆ. ಈ ಸಂಸ್ಕೃತಿ ಏನು ಮಾಡುತ್ತೆ ಅಂತಂದ್ರೆ ಯಾವ್ಯಾವ ಫಲವತ್ತತೆಗಳಿವೆಯೋ, ಅವುಗಳೆಲ್ಲವನ್ನೂ maximum explore ಮಾಡಿ ಬಳಸಿ ಬಿಸಾಕುತ್ತೆ. ಅವೆಲ್ಲವನ್ನ ಕಚ್ಛಾ ವಸ್ತುಗಳನ್ನಾಗಿ ಮಾಡಿ ಬಳಸಿ ಬಿಸಾಕ್ತಾ ಇದೆ. ಬಹುಶ: ಈ ಬಳಸು ಮತ್ತು ಎಸೆಯುವ ಕ್ರಿಯೆಯಲ್ಲಿ ಅತ್ಯಂತ ತೀವ್ರವಾದ ಶೋಷಣೆಗೆ ಮೊದಲು ಒಳಗಾಗುವವಳು ಹೆಣ್ಣು. ಯಾಕಂದ್ರೆ, ಹೆಣ್ಣನ್ನ ಬಹಳ ಪವಿತ್ರತೆಯ ನೆಲೆಯಲ್ಲಿ ನಾವು ಪರಿಭಾವಿಸಿದ್ದೇವೆ. use & throw culture ಬರುವಂತಾದ್ರೆ ಹೆಣ್ಣು sex worker ಆಗಿ ಪರಿವರ್ತಿತವಾಗುವಂಥ ದುಸ್ಥಿತಿ ಬರುವ ಸಾಧ್ಯತೆಗಳಿವೆ. ಮೊದಲು ಹೆಣ್ಣು ನಂತರ ಭೂಮಿ ಶೋಷಣೆಗೆ ಒಳಗಾಗುತ್ತವೆ. ಬಳಸು ಮತ್ತು ಎಸೆ ಸಂಸ್ಕೃತಿಯು ಯಾವ ಥರದ ನಿರುದ್ಯೋಗಗಳನ್ನ ಸೃಷ್ಟಿ ಮಾಡುತ್ತೆ ಅಂದರೆ ಉದ್ಯೋಗಗಳ ನಿರುದ್ಯೋಗವಲ್ಲ. ಪುನರ್ ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲದಿರುವಂಥ ಸ್ಥಿತಿಯನ್ನ ಸೃಷ್ಟಿ ಮಾಡಿದ್ರೆ ಅಲ್ಲಿ ಉದ್ಯೋಗಗಳು ಸೃಷ್ಟಿಯಾಗೋಲ್ಲ; ಈ ಹಿನ್ನೆಲೆಯಲ್ಲಿ ಮತ್ತೆ ಕೆಲವು ಆಂಶಗಳನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ಈಗ ಮೂರನೆಯ ಜಗತ್ತು ಒಂದು ಕಠಿಣ ಸವಾಲಿಗೆ ಎದುರಾಗಿದೆ. ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ದಾಟಿಕೊಂಡುದು ಒಂದು ದೊಡ್ಡ ಸಾಧನೆ. ಪ್ರಜಾಪ್ರಭುತ್ವವಾದಿಗಳೇ ನಿರ್ಮಿಸಿದ್ದ ವಸಾಹತು ಪ್ರಭುತ್ವವನ್ನ ಮೀರಿ ತಮ್ಮದೆ ಪ್ರಜಾಪ್ರಭುತ್ವವನ್ನು ನಿರ್ಮಿಸಿಕೊಂಡದ್ದಾಯಿತು. ಅದೇ ವಸಾಹತು ಪ್ರಭುಗಳು ಜಾಗತೀಕರಣವೆಂಬ ಹೊಸ ವಸಾಹತು ಸೈನ್ಯವನ್ನು ಈಗಾಗಲೇ ನಮ್ಮೊಳಗೆ ನುಗ್ಗಿಸಿದ್ದಾರೆ. ಈ ಸೈನ್ಯ ವ್ಯಕ್ತಿ ರೂಪದಲ್ಲಿ ಇಲ್ಲ. ವಸ್ತು ರೂಪದಲ್ಲಿದೆ. ಅದರ ಎದುರು ನಿಂತು ಯುದ್ಧ ಹೂಡುವ ಅವಕಾಶ ಇಲ್ಲ. ಆದ್ದರಿಂದ ಒಪ್ಪಿಗೆ ಅಥವಾ ಸೋಲು ಅನಿವಾರ್ಯ. ಈ ಅವ್ಯಕ್ತ ಯುದ್ಧ ಇಪ್ಪತ್ತೊಂದನೆಯ ಶತಮಾನದ ನವನವೀನ ಶೋಧವಾಗಿದೆ. ಈ ಸೈನ್ಯ ಶತೃವೊ ಆಥವಾ ಮಿತ್ರನೊ ಎಂದು ಗುರುತಿಸುವುದು ಕೂಡ ಕಷ್ಟವಾಗಿದೆ. ಈತ ನಾಯಕನೋ ಅಥವಾ ಪ್ರತಿನಾಯಕನೊ ಎಂದು ಹೆಸರಿಸುವುದು ಕೂಡ ಸಾಧ್ಯವಾಗುತ್ತಿಲ್ಲ. ತಮ್ಮನ್ನು ಮರೆತು, ಜನ ಇವನನ್ನು ಆಹ್ವಾನಿಸುತ್ತಿದ್ದಾರೆ. ಈತ ಗೋಪಿಕೆಯರ (ಅಪೇಕ್ಷೆಯ) ಕೃಷ್ಣನೊ ಅಥವಾ ಸದ್ದಾಂಗೆ ಅವತರಿಸಿದ ಜಾರ್ಜ್ ಡಬ್ಲ್ಯು ಬುಷ್ ಇನ್ನೂ ತಿಳಿಯಬೇಕಿದೆ.

ಸಂಸ್ಕೃತಿ ಸಂದರ್ಭದಲ್ಲಿ ಒಂದು ವ್ಯಕ್ತಿತ್ವ ಮತ್ತೊಂದು ವ್ಯಕ್ತಿತ್ವವನ್ನು ಗುರುತಿಸುವುದು ಅಥವಾ ನಿರಾಕರಿಸುವುದು ಸುಲಭ. ವ್ಯಕ್ತಿತ್ವವೇ ಕಣ್ಣಿಗೆ ಬೀಳದಿರುವುದು, ಮನಸ್ಸಿಗೆ ತಟ್ಟದಿರುವುದು, ಬಾಂಧವ್ಯಕ್ಕೆ ಈಡಾಗದಿರುವುದು ಯಾರನ್ನಾದರೂ ಆತಂಕಕ್ಕೆ ಈಡು





ಮಾಡುವುದು ಸಹಜ. ನಮ್ಮ ಸಂಸ್ಕೃತಿಯಲ್ಲಿ ನಮ್ಮದೇ ಆದ ಭಗವಂತನನ್ನು ಕಲ್ಪಿಸಿ ಕೊಂಡಿದ್ದೇವೆ. ಅವನು ವಿಘ್ನ ನಿವಾರಕ ಹಾಗೂ ಸುಖ ಪ್ರದಾಯಕನಾಗಿ ಸಂಕೇತಿಸಲ್ಪಟ್ಟಿದ್ದಾನೆ. ಆದರೆ ಈ ಜಾಗತಿಕ ಅನ್ನುವವನು ನಮಗೆ ನೇರವಾಗಿ ಸಿದ್ಧ ವಸ್ತುವಿನ ರೂಪದಲ್ಲಿ ಕಾಣಿಸಿಕೊಂಡಿದ್ದಾನೆ. ಪ್ರತಿಯೊಂದು ಸಂಸ್ಕೃತಿಯೊಳಗೆ ಅವಶ್ಯವೆನಿಸಿದ ಸಿದ್ಧ ವಸ್ತುಗಳಿವೆ ಮತ್ತು ವ್ಯಕ್ತಿಗಳಿದ್ದಾರೆ. ಇವು ಆ ಸಂಸ್ಕೃತಿಯ ಉತ್ಪತ್ತಿ, ಹಂಚಿಕೆ ಮತ್ತು ಬಳಕೆಯ ನಿಯಮಕ್ಕೆ ಒಳಪಟ್ಟಿವೆ. ಈ ನಿಯಮವೆ ಇಲ್ಲಿನ ನಾಯಕ. ದುಡಿದು ತಿನ್ನು, ಹಸಿದವನಿಗೆ ಅನ್ನ ಹಾಕು, ಬಡವನಿಗೆ ಭಿಕ್ಷೆ ನೀಡು, ಹಾಸಿಗೆ ಇದ್ದಷ್ಟು ಕಾಲು ಚಾಚು, ಉಪ್ಪು ತಿಂದವನು ನೀರು ಕುಡಿಯುತ್ತಾನೆ ಇಂಥ ಹೊಂದಾಣಿಕೆ ಮತ್ತು ನಿರಾಕರಣೆಗಳ ಮೊತ್ತವೆ ಸಂಸ್ಕೃತಿಯಾಗಿರುತ್ತದೆ. ಈ ಸಂಸ್ಕೃತಿ ಅಥವಾ ನಾಯಕ ಇಲ್ಲದಿದ್ದರೆ ಏನೇ ಉಂಡುತಿಂದು ಸುಖಪಡುತ್ತೇನೆ ಎಂದರೂ ಆ ಜನರ ಮನಸ್ಸಿಗೆ ನೆಮ್ಮದಿ ಅಥವಾ ಸಮಾಧಾನ ಎಂಬುದು ಇರುವುದಿಲ್ಲ. ಎಲ್ಲೆಲ್ಲಿ ಎಷ್ಟೆಲ್ಲ ಅದ್ದೂರಿಯಾಗಿ ಬದುಕಿದರೂ ಒಬ್ಬ ವ್ಯಕ್ತಿ ತನ್ನ ಮನೆ ಅಥವಾ ತನ್ನ ನೆಲೆಯಲ್ಲಿ ಇದ್ದು ಸಾಯಬೇಕು ಅನ್ನುತ್ತಾನಲ್ಲ ಯಾಕೆ, ಅವನನ್ನು ಗುರುತಿಸುವ ಒಂದು ಸಂಸ್ಕೃತಿ ಅಥವಾ ನಾಯಕ ಇರುತ್ತಾನೆ ಎಂದಲ್ಲವೆ?

ಜಾಗತಿಕ ಎನ್ನುವ ನಾಯಕ ನಮ್ಮ ಈ ಸಂಸ್ಕೃತಿ ನಾಯಕನ ಉತ್ಪತ್ತಿ, ಹಂಚಿಕೆ ಮತ್ತು ಬಳಕೆಯನ್ನು ಕಿತ್ತುಕೊಂಡರೆ ಅವನು ಎಲ್ಲಿರುತ್ತಾನೆ? ಈ ಪ್ರಶ್ನೆಯಿಂದಲೆ ಜನಪದ ನಾಯಕನ ಅಸ್ತಿತ್ವದ ಪ್ರಶ್ನೆ ಉಂಟಾಗಿದೆ. ಇದು ಒಂದು ದೇಶದ ಸಾಂಸ್ಕೃತಿಕ ಅಸ್ತಿತ್ವದ ಪ್ರಶ್ನೆ ಮಾತ್ರವಲ್ಲ ಆ ದೇಶದ ರಾಜಕೀಯ ಹಾಗೂ ಅಭಿವೃದ್ಧಿಯ ಪ್ರಶ್ನೆ ಕೂಡ ಆಗುತ್ತದೆ. ಈ ನಿಟ್ಟಿನಲ್ಲಿಯೇ ನಾವು ಇಂದು ಜನಪದ ನಾಯಕನನ್ನು ಗುರುತಿಸ ಹೊರಟಿದ್ದೇವೆ.

ಈ 'ಜನಪದ' ಎಂದರೆ ಯಾವುದು ? 'ಜನಪದ ಎಂಬುದು ಒಂದು ಸಂಸ್ಕೃತಿ ಸಮೂಹ. ಒಂದು ಭೌಗೋಳಿಕ ಪ್ರದೇಶದಲ್ಲಿ ಬಹಳ ಬದುಕುತ್ತಾ, ಆ ಪ್ರದೇಶದ ಆರ್ಥಿಕ ಸೌಲಭ್ಯಗಳಿಗೆ ಅನುಗುಣವಾದ ಸಾಮಾಜಿಕ ವ್ಯವಸ್ಥೆ ಮತ್ತು ಅದಕ್ಕೆ ಹೊಂದುವ ನಡವಳಿಕೆಗಳನ್ನು ಎಂದರೆ, ಸಂಸ್ಕೃತಿಯನ್ನು ರೂಪಿಸಿಕೊಂಡಿರುವ ಸಮಾಜ. ಹಾಗಿದ್ದಲ್ಲಿ ಜನಪದ ನಾಯಕ ಎಂಬುವವನು ಯಾರು? ಈ ಸಂಸ್ಕೃತಿಯು ಹಾಳಾಗದಂತೆ ಹಾಗೂ ಅದು ಸಮಕಾಲೀನವಾಗಿ ಪ್ರಸ್ತುತವಾಗಿ ಉಳಿಯುವಂತೆ ನೋಡಿಕೊಳ್ಳುವವನೇ ಜನಪದ ನಾಯಕ. ಈ ನಾಯಕ ಒಟ್ಟು ಆ ಸಮಾಜವೇ ಆಗಿರಬಹುದು ಅಥವಾ ಒಟ್ಟಾಗಿ ಆ ಸಮಾಜವನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿಯಾಗಿರಬಹುದು. ಈತನನ್ನು ಅವಶ್ಯ (need) ನಾಯಕ ಎಂದು ಕರೆಯಬಹುದು. ಈತ ಆಯ್ಕೆಯಾದ (elected) ನಾಯಕ ಅಲ್ಲ, ಆಯ್ಕೆಯಲ್ಲಿ ಒಡಕು ಇರುತ್ತದೆ. ಅವಶ್ಯಕತೆಯಲ್ಲಿ ಒಟ್ಟು ಸಮೂಹದ ಸ್ವ ಇಚ್ಛೆ ಇರುತ್ತದೆ. ಉದಾಹರಣೆಗೆ,





ರಾಜಕೀಯ ಮುಖಂಡನೊಬ್ಬ ಎಷ್ಟೇ ದೊಡ್ಡವನಿದ್ದರೂ ಸಮಾಜವನ್ನು ಒಟ್ಟಾಗಿ ಉದ್ದೇಶಿಸುವಾಗ ಆ ಸಮಾಜದ ಮುಖಂಡನನ್ನು ಮುಂದಿಟ್ಟುಕೊಳ್ಳುತ್ತಾನೆ. ರಾಜಕೀಯ ನಾಯಕನ ಹತ್ತಿರ ಅಭಿವೃದ್ಧಿ ಸಿದ್ಧಾಂತಗಳಿದ್ದರೆ, ಸಮಾಜ ಮುಖಂಡನ ಹತ್ತಿರ ಸಾಮಾಜಿಕ ಭದ್ರತೆಯ ಹೊಣೆಗಾರಿಕೆ ಇರುತ್ತದೆ. ಇಲ್ಲಿ ಧರ್ಮ ಎಂಬುದು ಮೇಲೆದ್ದು ಬರುವುದಿಲ್ಲ. ಸಮಾಜದ ಒಳಗೆ ಅದೊಂದು ಬದುಕುವ ವಿಧಾನ ಮಾತ್ರವಾಗಿರುತ್ತದೆ.

ಒಂದು ಸಮಾಜದ ಸುಸ್ಥಿರತೆ ಎಂಬುದು ಆರ್ಥಿಕ ಸಾಮಾಜಿಕ ಭದ್ರತೆ, ಮತ, ಧರ್ಮ, ಪಂಥ ಎಂಬವು ಗುರುತುಗಳು ಮಾತ್ರ. ಈ ಗುರುತು ಅಥವಾ ಸಂಕೇತಗಳೇ ಪ್ರಧಾನವಾದರೆ ಕುದುರೆಗಿಂತ ಲದ್ದಿಯೇ ಬಿರುಸು ಎಂದಂತಾಗುತ್ತದೆ. ಕುದುರೆ ಓಡುತ್ತ ಹಿಂದೆ ಲದ್ದಿ ಬೀಳುತ್ತಿದ್ದರೆ ಸ್ವತಃ ಲದ್ದಿ ತಾನೇ ಸ್ಪೀಡ್ ಅಂದುಕೊಳ್ಳುತ್ತದಂತೆ - ಹಾಗೆ.

ಈಗಲೂ ಅಮೆರಿಕ, ಜಪಾನ್, ಫ್ರಾನ್ಸ್, ಸ್ವಿಡರ್‌ಲೆಂಡ್, ಉತ್ತರ ಕೊರಿಯ ಇಂಥ ದೇಶಗಳು ತಮ್ಮ ಆರ್ಥಿಕ ಸಾಮಾಜಿಕ ಭದ್ರತೆಯನ್ನೆ ಕೇಂದ್ರ ಚಿಂತನೆಯನ್ನಾಗಿ ಇಟ್ಟು ಕೊಂಡಿವೆ. ಕಾರಣವಾಗಿ ಜಗತ್ತಿನ ನಾಯಕತ್ವ ಆ ಕಡೆಯಿಂದಲೇ ಪ್ರಾಯೋಜಿತವಾಗುತ್ತಿದೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಹಾಗೂ ಯಾವ ನೆಲೆಯಿಂದ ನಮ್ಮ ನಾಯಕತ್ವ ಎದ್ದು ನಿಲ್ಲಬೇಕು ಎಂಬುದನ್ನು ಚಿಂತಿಸಬೇಕಾಗಿದೆ.

ನಮ್ಮದು ಜಾತಿ ನಾಯಕತ್ವದ ದೇಶ, ಸ್ವಾತಂತ್ರ್ಯ ಹೋರಾಟದ ಸಂದರ್ಭವನ್ನು ಹೊರತುಪಡಿಸಿದರೆ ರಾಜಕೀಯವಾಗಿಯೂ ನಮ್ಮ ನಾಯಕತ್ವ ಜಾತಿ ಮೂಲದ್ದೆ ಆಗಿದೆ. ಆದರೆ ಜಾತಿ ನಿಜವಾದ ಧರ್ಮವೂ ಅಲ್ಲ, ಸಂಸ್ಕೃತಿಯೂ ಅಲ್ಲ, ಜಾತಿಗೆ ಆಗಮನ ದ್ವಾರವೂ ಇಲ್ಲ, ನಿರ್ಗಮನ ದಾರಿಯೂ ಇಲ್ಲ. ಇದೊಂದು ಪಕ್ಕಾ ನಂಬಿಕೆ ಆಗಬಹುದೇ ಹೊರತು ಸಂಸ್ಕೃತಿ ಆಗಲಾರದು. ಜನರ ಮಧ್ಯೆ ಗುಲಾಮಿತನ ಅಸ್ತಿತ್ವದಲ್ಲಿದ್ದರೆ ಮತ್ತು ಇದ್ದಾಗ ಈ ವ್ಯವಸ್ಥೆ ಅಸ್ತಿತ್ವದಲ್ಲಿ ಇರುತ್ತದೆ. ಜಾತಿ ಮಾತ್ತು ಪ್ರಭುಶಾಹಿಗಳು ಸೇರಿ ನಮ್ಮನ್ನು ಆಳಿದವು. ಈಗ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆ. ಗಾಂಧಿ, ಲೋಹಿಯಾ, ಅಂಬೇಡ್ಕರ್, ಜಯಪ್ರಕಾಶ್ ನಾರಾಯಣ್ ಅವರನ್ನು ಬಿಟ್ಟರೆ ನಮ್ಮಲ್ಲಿ ದೇಶಮಟ್ಟದ ಸಾಂಸ್ಕೃತಿಕ ನಾಯಕತ್ವ ಆಮೇಲೆ ಹುಟ್ಟಲೇ ಇಲ್ಲ. ನಮ್ಮ ಜಾತಿ ವ್ಯವಸ್ಥೆ ಈ ಚಿಂತಕರನ್ನು ಆಡಳಿತದ ಒಳಕ್ಕೆ ಬಿಟ್ಟುಕೊಳ್ಳಲೇ ಇಲ್ಲ. ಹಳೆಯ ವ್ಯವಸ್ಥೆ ಬದಲಾಗುವುದು ಮತೀಯವಾದಿಗಳಿಗೆ ಇಷ್ಟ ಇರಲಿಲ್ಲ. ಆದರೂ ಜನತಾ ಪಕ್ಷ ಮತ್ತು ಭಾರತೀಯ ಜನತಾ ಪಕ್ಷ ಹುಟ್ಟುವವರೆಗೆ ನಾವು ನಮ್ಮ ದೇಶ ಆರ್ಥಿಕ ಸಾಮಾಜಿಕ ಭದ್ರತೆಯ ಜನಪದ ಆಗಿತ್ತು ಎನಿಸುತ್ತದೆ.

ಈಗ ಇಡೀ ದೇಶದ ವಿದ್ಯಮಾನಗಳನ್ನು ಗಮನಿಸುತ್ತಿದ್ದರೆ, ಆರ್ಥಿಕ ಸಾಮಾಜಿಕ





ಭದ್ರತೆಯ ಭಾರತ ಉಳಿದಿಲ್ಲ ಎನಿಸುತ್ತದೆ. ಮುಂದೇನು ಎಂಬ ಆತಂಕ ಎದುರಾಗಿದೆ. ಈಗ

ಜನ

೧. ಬಹುಮತ (Majority)

೨. ರಾಷ್ಟ್ರೀಯತೆ (Nationality)

೩. ಜಾಗತೀಕರಣ (Globalisation)

ಎಂಬ ತ್ರಿಮೂರ್ತಿಗಳಿಗೆ ಹೆದರಿದ್ದಾರೆ. ಸೃಷ್ಟಿಕರ್ತರಾಗಬಹುದಾಗಿದ್ದ ಈ ಮೂರು ಯಾರಿಗೆ ನಾಮ ಹಾಕಬಹುದು ಎಂಬ ತಳಮಳದಲ್ಲಿದ್ದಾರೆ. ಯಾಕೆ?

೧. ಬಹುಮತವೆಂಬುದು ಬಹುಮತೀಯರ ರಾಜಕೀಯ ಕೇಂದ್ರೀಕರಣವಾಗಿದೆ. ಇದರಲ್ಲಿ ಮತೀಯ ಹಾಗೂ ಮಠಮಾನ್ಯಗಳ ಶಕ್ತಿ ಸಂಚಯವೂ ಸೇರಿದೆ. ಇವು ನಮ್ಮ ಅಸ್ತಿತ್ವದ ಪುನರ್ ಪ್ರತಿಪಾದನೆಗಾಗಿ ಜಾತಿ-ಧರ್ಮದ ರಾಜಕಾರಣವನ್ನೇ ಸಂಸ್ಕೃತಿ ರಾಜಕಾರಣ ಎಂದು ಹೇಳುತ್ತಿವೆ. ನಿಜವಾದ 'ಸಂಸ್ಕೃತಿ ರಾಜಕೀಯ'ವೆಂದರೆ ಜನಪದ ನಾಯಕತ್ವದ ರೂಪೀಕರಣ. ಎಂದರೆ, ಭಾರತದ ಬಹುಪಂಗಡಗಳ ಒಳಗಿಂದ ನಾಯಕತ್ವವನ್ನು ಹೊರಡಿಸುವುದು. ಅಮೆರಿಕದ ತಾಂತ್ರಿಕ ಜಾಗತೀಕರಣದಿಂದ ನಮ್ಮ ಮತ ಸಂಸ್ಕೃತಿ ನಾಶವಾಗಬಹುದೆಂಬ ಭಯದಿಂದ ಭಾರತೀಕರಣದ ಮಾತುಗಳನ್ನು ಆಡುತ್ತಿದ್ದಾರೆ. ನಿಜವಾದ ಭಾರತೀಕರಣವೆಂಬುದು ಬಹುಪಂಗಡ ಅಥವಾ ಜನಪದಗಳನ್ನು ಆರ್ಥಿಕ ಸಾಮಾಜಿಕ ಕ್ರಿಯಾಶೀಲತೆಯಲ್ಲಿ ತೊಡಗಿಸುವುದೇ ಆಗಿದೆ. ಆದರೆ ನಿಜವಾದ ಭಾರತೀಕರಣ ಅಥವಾ ಸಾಂಸ್ಕೃತಿಕ ರಾಜಕೀಯವನ್ನು ಮರೆಮಾಚುವ ಕಾರಣಕ್ಕೆ ಧಾರ್ಮಿಕರಣ ಅಥವಾ ಮತೀಯವಾದವನ್ನು ಮುಂದೆ ತಂದು ಜನರನ್ನು ಮತ್ತೊಂದು 'ಯುಗಮರವಿಗೆ' ತಳ್ಳಲು ಸಂಚು ಹೂಡಲಾಗಿದೆ. ಬಹುಮತ ಯಾಕೆ ಪ್ರಶ್ನಿತವಾಗಿದೆ ಎಂದರೆ ಅದು ಭಾರತದಲ್ಲಿ ಜಾತಿ ಮತ ಮತ್ತು ಬಹು ಸಂಖ್ಯಾತರ ಸ್ವರೂಪದಲ್ಲಿದೆ. ಈ ಬಹುಮತ ಸಣ್ಣ ಸಣ್ಣ ಜನಪದ ಸಮೂಹಗಳನ್ನು ರಾಜಕೀಯ ಮುಖ್ಯವಾಹಿನಿಗೆ ತರುತ್ತಿಲ್ಲ. ಅವು ತಮಗೆ ಸಮಾನ ಭಾಗವಹಿಸುವಿಕೆ ಸಾಧ್ಯವಾಗಿಲ್ಲ ಎಂದು ಹೇಳುತ್ತಿವೆ. ಈವರೆಗೆ ತಮಗೆ ತಮ್ಮದೇ ನಾಯಕತ್ವ ಇಲ್ಲ ಎಂಬ ಮನೋಭಾವ ಉಂಟಾಗಿದೆ. ಈಗಿರುವ ರಾಜಕೀಯ ತಮ್ಮನ್ನು ಅಂತರದಲ್ಲಿ ಇಟ್ಟಂತೆ ರಾಜಕೀಯ ಅಂತರವನ್ನು ಉಳಿಸಿಕೊಂಡಿದೆ. ಇದಕ್ಕೆ ಪರಿಹಾರ ತಮ್ಮದೇ ಜನಪದದ ಒಳಗಿಂದ ಸಾಂಸ್ಕೃತಿಕ ಅಥವಾ ಜನಪದ ನಾಯಕತ್ವವನ್ನು ಹುಟ್ಟುಹಾಕುವುದು. ಪ್ರಭು ಸಂಸ್ಕೃತಿ ಆಚರಣೆಯಲ್ಲಿ ಇದ್ದಾಗ, ಅರಸು, ಕಲಚೂರ್ಯ... ಮುಂತಾದ ಚಿಕ್ಕ ಜನಪದಗಳು ಕೂಡ ರಾಜ್ಯಾಧಿಕಾರವನ್ನು ಹಿಡಿದಿದ್ದವು. ಆದರೆ ಈ ಪ್ರಜಾಪ್ರಭುತ್ವದಲ್ಲಿ ಅದು





ಸಾಧ್ಯವಾಗದಿರುವುದು ಶೋಚನೀಯ. ಇದಕ್ಕೆ ಬಹುಮತ ರಾಜಕೀಯ ಕಾರಣವಾಗಿದೆ ಮತ್ತು ಈ ಬಹುಮತ ಜಾತಿಯ ಸ್ವರೂಪದಲ್ಲಿದೆ ಎಂದು ಅವರು ತಿಳಿದಿದ್ದಾರೆ. ಇತ್ತೀಚಿನ ದಿನಗಳಲ್ಲಿ ತಿಗಳ, ಬೆಸ್ತ, ಅಗಸ, ಬೇಡಜಂಗಮ ಈ ಮುಂತಾದ ಜಾತಿಗಳು ಮಠಗಳ ಸ್ಥಾಪನೆಗೆ ಹೊರಟಿರುವುದರ ಉದ್ದೇಶ ಭಾರತದಲ್ಲಿ ತಾವೂ ಕೂಡ ಸಾಂಸ್ಕೃತಿಕ ಯಜಮಾನಿಕೆಯನ್ನು ಉಳಿಸಿಕೊಳ್ಳಬೇಕು ಎಂಬುದೇ ಆಗಿದೆ. ದುರ್ದೈವವಶಾತ್ ಮಠ ತಮ್ಮ ಅಭಿವೃದ್ಧಿಯ ಕಂಟೆಂಟ್ ಹೊಂದಿಲ್ಲ ಎಂಬುದು ಈ ಸಮುದಾಯಗಳ ಗಮನಕ್ಕೆ ಬಂದಿಲ್ಲ, ಬ್ರಾಹ್ಮಣಿಕೆಗೆ ಹೊರತಾದ ಸಾಂಸ್ಕೃತಿಕ ಅಭಿವೃದ್ಧಿ ತಂತ್ರ ಮತ್ತು ಸಲಕರಣೆಗಳನ್ನು ಕಂಡುಕೊಳ್ಳದ ಮಾನಸಿಕ ದಾರಿದ್ರವೇ ಇದಕ್ಕೆ ಕಾರಣ ಎನ್ನುವುದು ನನ್ನ ಅಭಿಪ್ರಾಯ.

೧. ರಾಷ್ಟ್ರೀಯತೆ ಎನ್ನುವುದು ಬಹುಮತದ ತೀರ್ಮಾನ. ಇದೊಂದು ಆಡಳಿತಾತ್ಮಕ ಸಂಸ್ಕೃತಿಯ ಆದರ್ಶ. ಇನ್ನೊಂದು ಅರ್ಥದಲ್ಲಿ ಉದಾರವಾದಿ ಜನಪ್ರತಿನಿಧಿಗಳ ರಾಜ್ಯಭಾರ, ರಾಷ್ಟ್ರೀಯತೆ ಎನ್ನುವುದೇ ಒಂದು ಮೊತ್ತದ ಪರಿಕಲ್ಪನೆ. ಎಲ್ಲವೂ ಬೃಹತ್ ಉದ್ಯಮದ ರೀತಿಯಲ್ಲಿ ನಡೆಯುವ ಚಟುವಟಿಕೆಗಳು, ಸಣ್ಣ ಸಣ್ಣ ಜನಸಮೂಹಕ್ಕೆ ರಾಷ್ಟ್ರೀಯತೆ ಎನ್ನುವುದು ಎಟುಕಲಾರದ ಕಲ್ಪನೆ. ಹಳ್ಳಿ, ದಿಲ್ಲಿಯಲ್ಲಿ ಭಾಗವಹಿಸುವ ಅವಕಾಶ ಸುವರ್ಣಾವಕಾಶ ಎನಿಸಿಕೊಳ್ಳುತ್ತದೆಯೇ ಹೊರತು ತಮ್ಮ ಜಾತ್ರೆಯಂತೆ ಸಹಜ ಅಲ್ಲ. ನಿಜವಾದ ರಾಷ್ಟ್ರೀಯತೆ ಎಂಬುದು ಕಿರುಸಮೂಹಗಳಲ್ಲಿ ಉಳಿದಿರುತ್ತದೆ. ರಾಷ್ಟ್ರೀಯತೆ ಬೃಹತ್ ಉದ್ಯಮದ ರೀತಿಯ ಚಟುವಟಿಕೆ ಆಗಿದ್ದು ಕೆಳ ಹಾಗೂ ತಳನೆಲೆಯ ಕಸುಬುಗಳನ್ನು ಗುಜರಿಗೆ ತಳ್ಳಿಬಿಡುತ್ತದೆ. ಈ ಕಸಬುದಾರರ ನೈಪುಣ್ಯ, ಉದ್ಯಮವಾಗುವ ಅವಕಾಶವನ್ನೆ ಪಡೆಯುವುದಿಲ್ಲ. ಕೊನೆಯ ಮನುಷ್ಯನಾಗಿ ಕಾಯುವುದೊಂದೇ ಅವನ ನಿರಂತರ ಕಾಯಕವಾಗುತ್ತದೆ. ಸಹಜವಾಗಿ ದೊಡ್ಡ ದೇಶದ ರಾಷ್ಟ್ರೀಯತೆಯಲ್ಲಿ ತಳಜನಪದಗಳು ಅವಕಾಶಗಳಿಂದ ದೂರ ಉಳಿದು ವಿಸಂಘಟಿತವಾಗುತ್ತಾ ಹೋಗುತ್ತವೆ. ಸಶಸ್ತ್ರ ಬಂಡಾಯ ಶುರುವಾಗುವುದು ಸಾಮಾನ್ಯವಾಗಿ ಇಂಥ ವರ್ಗಗಳಿಂದ. ನಿಜವಾದ ಆಸಕ್ತಿಯಿಂದ ಸಂಘಟಿಸಿದರೆ ರಾಷ್ಟ್ರೀಯತೆ ಒಂದು ವರ. ಇಲ್ಲದಿದ್ದಲ್ಲಿ ಸಂಯುಕ್ತ ರಷ್ಯಾಕ್ಕೆ ಅಥವಾ ಜಾತಿ ಆಧಾರಿತ ಭಾರತೀಯ ರಾಷ್ಟ್ರೀಯತೆಗೆ ಬಂದ ಮಿತಿ ಸ್ಥಿತಿ ಉಂಟಾಗುತ್ತದೆ. ಐವತ್ತೈದು ವರ್ಷಗಳ ನಂತರವೂ ಭಾರತದ ನಾಯಕತ್ವ ಎಷ್ಟು ಕೆಳವರ್ಗಗಳತ್ತ ಚಲಿಸಿದೆ, ಯೋಚಿಸಿ,

೨. ಜಾಗತೀಕರಣ ಬ್ರಿಟಿಷ್ ವಸಾಹತುಷಾಹಿ ಪರಿಕಲ್ಪನೆಯ ಮುಂದುವರಿದ ಬೃಹತ್ ರೂಪ. ಬ್ರಿಟಿಷ್ ವಸಾಹತು ಭಾರತದ ಕುಶಲಕರ್ಮಿಗಳ ಕೈ ಬರಿದು ಮಾಡಿದ ಸಂಗತಿ ನಮಗೆಲ್ಲ ತಿಳಿದಿದೆ. ಅವರ ಕಸುಬು ಮೇಲು ವರ್ಗದವರ ಬೃಹತ್ ಉದ್ಯಮವಾಗಿ ಮುಂದುವರೆಯಿತು. ಒಡೆಯರಾಗಿದ್ದ ಕುಶಲಕರ್ಮಿಗಳು ಇಂಥ ಉದ್ಯಮದಲ್ಲಿ ಕೂಲಿಗಳಾಗಲು





ಮಾತ್ರ ಸಾಧ್ಯವಾಯಿತು. ಈಗ ಅದು ತಾವು ಒಡೆಯರು ಅಂದುಕೊಂಡಿದ್ದ ರೈತರ ಮೇಲೆ ಎರಗಿ ಅವರ ಸಾವನ್ನು ಬಹಳ ಸುಲಭ ಮಾಡಿದೆ. ಯಾವೊತ್ತೂ ಈ ದೇಶದಲ್ಲಿ ಬಂಡವಾಳವನ್ನೇ ಕಾಣದ ದಲಿತರು ತಮ್ಮನ್ನು ಎಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಾಯುತ್ತಾ ಕೂರುವಂತಾಗಿದೆ. ಸರ್ಕಾರಿ ಉದ್ಯೋಗಗಳನ್ನು ಬಿಟ್ಟಲ್ಲಿ ಅವರು ಶತಮಾನಗಳಿಂದ ಅವರಿವರ ಮನೆಬಾಗಿಲು ಕಾದಂತೆ ಹಳೆ ವೃತ್ತಿಗೆ ಹಿಂತಿರುಗಬೇಕಾಗುತ್ತದೇನೊ.

ಬೇರೆಲ್ಲರಿಗಿಂತ ಭೂಮಿಯನ್ನು ಅವಲಂಬಿಸಿರುವವರು ಜಾಗತೀಕರಣಕ್ಕೆ ಬಹಳವಾಗಿ ಹೆದರಿಕೊಂಡಿದ್ದಾರೆ. ಅವರಲ್ಲಿ ಈಗ ಬಂಡವಾಳವೆ ಸಂಗ್ರಹವಾಗುತ್ತಿಲ್ಲ. ಹೀಗಾಗಿ ಅವರ ಸಾಂಪ್ರದಾಯಿಕ ಯಜಮಾನಿಕೆ ಕುಸಿದಿದೆ. ಏನೂ ಯೋಚನೆ ಇಲ್ಲದಂತೆ ಇರುವವರೆಂದರೆ ಕೂಲಿಯ ಜನ ಎಂದು ನನಗೆ ಅನಿಸುತ್ತದೆ. ನಾವು ಇರುವುದೆ ಹೀಗೆ ಎಂದು

ಅವರು ಸುಮ್ಮನಿದ್ದಿರಬಹುದು. ಇದೆಲ್ಲದರ ಪರಿಣಾಮ ಮೇಲು ಮತ್ತು ಮಧ್ಯಮ ಜಾತಿ ಮತ್ತು ವರ್ಗದವರು ತಮ್ಮ ಮುದಿ ಸಿಂಹವನ್ನು ಮುಂದೆ ಮಾಡಿಕೊಂಡು ಮುನ್ನುಗ್ಗುತ್ತಿರುವುದು, ಮತ್ತೊಂದು ಕಡೆ ಆಳದಿಂದ ಮತ್ತು ನಿಧಾನವಾಗಿ ಕೆಳ ಮತ್ತು ತಳ ಜನವರ್ಗಗಳು ತಮ್ಮ ನಾಯಕತ್ವದ ಹೊಸ ಸಾಧ್ಯತೆಗಳನ್ನು ಹುಡುಕುತ್ತಿದ್ದಾರೆ. ಇವರ ಈ ನಾಯಕತ್ವದ ಹುಡುಕಾಟಕ್ಕೆ ಬೆಂಬಲವಾಗಿರುವುದು ಇವರಿಗಿರುವ ಸಮೃದ್ಧ ಜಾನಪದ ಸಂಪತ್ತು ಮತ್ತು ಇತಿಹಾಸ. ಇವರು ಕತ್ತೆಯನ್ನು ಕುದುರೆ ಎಂದು ತಿಳಿದು ಹತ್ತಬಾರದಷ್ಟೆ!

ಜನಪದ ಎಂಬುದು ಒಂದು ಪ್ರದೇಶದಲ್ಲಿ ತನ್ನದೇ ಆದ ಸ್ವಂತ ಸಂಸ್ಕೃತಿಯನ್ನು ಇಟ್ಟುಕೊಂಡು ಅನೇಕ ಕಾಲಗಳಿಂದ ಬದುಕುತ್ತಾ ಬಂದಿರುವ ಒಂದು ಜನರ ಗುಂಪು. ಈ ಸಂಸ್ಕೃತಿ ತನ್ನದೆ ನಂಬಿಕೆ, ನಡವಳಿಕೆ, ವಿಚಾರ ಮತ್ತು ಆಚಾರಗಳನ್ನು ಹೊಂದಿರುತ್ತದೆ. ಈ ನಂಬಿಕೆ ಎಂಬುದು ಬೆಳಗಿನಾಗೆ ಎದ್ದು ಕೆಟ್ಟದ್ದನ್ನು ನೋಡಬೇಡಿ ಎಂಬ ಸಣ್ಣ ನಂಬಿಕೆ ಆಗಿರಬಹುದು. ಅಥವಾ ತನ್ನದೆಂಬ ದೇವರು, ಧರ್ಮ ಅಥವಾ ನಾಯಕ ಆಗಿರಬಹುದು. ಈ ನಂಬಿಕೆಯಂತೆ ನಡವಳಿಕೆ, ಅದರಂತೆ ವಿಚಾರ ಮತ್ತು ಆಚಾರಗಳು ಇರುತ್ತವೆ. ಜನಪದರಲ್ಲಿ ದೊಡ್ಡ ದೊಡ್ಡ ದೇವರು ಮತ್ತು ಧರ್ಮಕ್ಕಿಂತ ತಮ್ಮ ನಾಯಕನಲ್ಲಿ ಹೆಚ್ಚಿನ ನಿಷ್ಠೆ, ವೀರಣೆ ವರ ಬಸವಣ್ಣ, ದಲಿತರ ಅಂಬೇಡ್ಕರ್ ಮತ್ತು ಒಕ್ಕಲಿಗರಲ್ಲಿಯ ಕುವೆಂಪು ಅವರು ವಿಶಾಲ ಅರ್ಥದಲ್ಲಿ ಇದಕ್ಕೆ ಉದಾಹರಣೆ ಆಗಬಹುದು. ಇವರನ್ನು ಹೊಗಳುವ ಮತ್ತು ವಿಮರ್ಶಿಸುವ ಸಾಂಸ್ಕೃತಿಕ ಹಕ್ಕನ್ನು ಆ ಜನ ಹೊಂದಿರುತ್ತಾರೆ. ಆದಿವಾಸಿ ಗುಂಪುಗಳಲ್ಲಿ ಅವರ ಸಾಂಸ್ಕೃತಿಕ ನಾಯಕನ ಬಗ್ಗೆ ಇನ್ನಿಲ್ಲದ ಹೆಮ್ಮೆ ಮತ್ತು ಗೌರವ ಇದೆ.

ಈ ನಾಯಕ ಯಾರು? ಪುರಾಣ - ಪುಣ್ಯಕತೆಯ ನಾಯಕನಂತೆ ದೊಡ್ಡ ಆದರ್ಶದ,





ಸತ್ಯದ ಸಾಕಾರ ಮೂರ್ತಿಯಲ್ಲ, ತನ್ನ ಭೌತಿಕ ಅವಶ್ಯಕತೆ (need) ಯ ನಾಯಕ. ಸಾಮ್ರಾಜ್ಯ ಕಟ್ಟುವ ದುರಾಸೆ (greed) ನಾಯಕ ಅಲ್ಲ, ಅಥವಾ ನಮ್ಮ ಪ್ರಜಾಪ್ರಭುತ್ವದಂತೆ ಆಯ್ಕೆ (elect) ನಾಯಕ ಅಲ್ಲ, ಜನಾಂಗ, ಬುಡಕಟ್ಟು ಅಥವ ವರ್ಗದ ಜನರ ಅವಶ್ಯಕತೆಗಳ ಕೊರತೆಯನ್ನು ತುಂಬಲು ಹುಟ್ಟುವವನು. ದ್ರೌಪದಿಗೆ ಸೌಗಂಧಿಕಾ ಪುಷ್ಪವನ್ನು ತಂದು ಕೊಡುವ ಭೀಮನ ಹಾಗೆ, ಸತ್ಯಭಾಮಾಳಿಗೆ ಪಾರಿಜಾತ ತಂದು ಕೊಡುವ ಕೃಷ್ಣ ಜನಪದ ನಾಯಕರು. ಇಡೀ ಬ್ರಹ್ಮಾಂಡವೇ ತನ್ನ ಹೊಟ್ಟೆ ಒಳಗೆ ಇದೆ ಎಂದು ಬುರುಡೆ ಹೊಡೆಯುವ ಕೃಷ್ಣನಂತೆ ಅಲ್ಲ. ಅಷ್ಟೆಲ್ಲ ಚಾತುರ್ಯ ಜನಪದ ನಾಯಕನಿಗೆ ಅಗತ್ಯವಿರುವುದಿಲ್ಲ. ಯಾಕೆಂದರೆ ಅವನು ರಾಜ್ಯ-ಸಾಮ್ರಾಜ್ಯ ಕಟ್ಟುವವನಲ್ಲ, ಹೆಂಡತಿಗೆ

ಹೊಸ ಸೀರೆ ಮತ್ತು ರವಿಕೆ ತಂದು ಕೊಟ್ಟು ಅವಳನ್ನು ರಮಿಸುವಷ್ಟರ ಮಟ್ಟಿನ ಸರಳ ವ್ಯಕ್ತಿ, ಗಾಳಿ, ನೀರು, ಬೆಳಕು, ವಸತಿ, ಊಟ, ಸಾರಿಗೆಯಂಥ ಸಾಮಾನ್ಯ ಸೌಲಭ್ಯಗಳನ್ನು ಒದಗಿಸಿಕೊಡುವವನು ಮತ್ತು ಕೇವಲ ಭರವಸೆ ಕೊಡದಿರುವವನೆ ಜನಪದ ನಾಯಕ,

ಸಮಕಾಲೀನ ಸಾಮಾನ್ಯ ಅವಶ್ಯಕತೆಗಳನ್ನು ಪೂರೈಸಿಕೊಡುವ ನಾಯಕ ಜನಪದರ ಮಧ್ಯೆ ಜನಜನಿತವಾಗಿ ಉಳಿಯುತ್ತಾನೆ. ಇಲ್ಲದಿದ್ದಲ್ಲಿ ಜನ ನಿಧಾನವಾಗಿ ಅವನನ್ನು ತಮ್ಮ ಮನಸ್ಸಿನಿಂದ ಜಾರಿಸಿ ಬಿಡುತ್ತಾರೆ ಮತ್ತು ಮತ್ತೊಬ್ಬನನ್ನು ಕಷ್ಟವಿಲ್ಲದೆ ಹುಟ್ಟು ಹಾಕಿಕೊಳ್ಳುತ್ತಾರೆ. ಇವನು ಸಂಭವಾಮಿ ಯುಗೇ ಯುಗೇ ನಾಯಕ ಅಲ್ಲ, ಆತ ತನ್ನ ಜನಪದದ ಒಳಗಿನ ಅಮೂಲ್ಯ ಸಾಂಸ್ಕೃತಿಕ ಅಂಶಗಳನ್ನು ರಕ್ಷಿಸಬೇಕು. ಅಗತ್ಯವೆನಿಸಿದಲ್ಲಿ ಅಕ್ಕಪಕ್ಕದ ಜನಪದಗಳ ಸಾಂಸ್ಕೃತಿಕ ಅಂಶಗಳನ್ನು ಸ್ವೀಕರಿಸಬೇಕು. ಬಹಳ ಮುಖ್ಯವಾಗಿ ಹೊರಗಿನ ಆಕ್ರಮಣ ಸಂಸ್ಕೃತಿಗೆ ತನ್ನ ಸಂಸ್ಕೃತಿಯನ್ನು ಹಾಸಿಕೊಡಬಾರದು.

ಜನಪದವೊಂದಕ್ಕೆ ಸಂಸ್ಕೃತಿ ಎಂಬುದು ನಂಬಿಕೆ ಮತ್ತು ಆಚರಣೆ ಮಾತ್ರವಾಗಿರದೆ ಆ ಜನಾಂಗದ ಭೌತಿಕ ಜ್ಞಾನ - ವಿಜ್ಞಾನವೂ ಆಗಿರುತ್ತದೆ. ಪ್ರತಿಯೊಂದು ಜನಪದ ಅಥವ ದೇಶಕ್ಕೆ ಇಂಥದೊಂದು ಅನನ್ಯ ಸಂಸ್ಕೃತಿ ಇರುತ್ತದೆ. ಯೂರೋಕೇಂದ್ರಿತ ಭೌತಿಕ ಆಧುನಿಕತೆ ಬಂದ ಅನಂತರ ಮೂರನೇ ಜಗತ್ತಿನ ದೇಶಗಳು ಸ್ವಂತ ತಂತ್ರಜ್ಞಾನ ಶೋಧದಲ್ಲಿ ಹಿಂದೆ ಬಿದ್ದವು. ಕೊಳ್ಳುವ ಚಟದವನಿಗೆ ಸೃಷ್ಟಿಶೀಲತೆ ಕಷ್ಟವಾಗುತ್ತದೆ. ಹೀಗೆ ಹೊರಗಿನ ಜ್ಞಾನವನ್ನು ತಂತ್ರಜ್ಞಾನ ಎಂದು ಕರೆದು ಈ ರಾಷ್ಟ್ರಗಳು ನಮ್ಮದು ಸಂಸ್ಕೃತಿ ಮಾತ್ರ ಎಂದು ನಂಬಿಕೊಂಡವು. ನಮ್ಮ ದೇಶ ನಂಬಿ ಬದುಕಿದ್ದೆ ಹೊರತು ಪ್ರಶ್ನಿಸಿ ನಡೆದದ್ದಲ್ಲ. ಇಂಥ ಕಡೆ ವಿಜ್ಞಾನದ ಬೆಳವಣಿಗೆ ಬಹಳ ನಿಧಾನ. ಧರ್ಮಗಳ ಹುಟ್ಟು ಇಲಿಮರಿಗಳ ಥರ ಆಗುತ್ತದೆ. ವಸ್ತು ಪೈಪೋಟಿಗಿಂತ ನಂಬಿಕೆಗಳ ಬಗೆಯ ಪೈಪೋಟಿಯೇ ಮುಖ್ಯ. ಇಂಥ ಕಡೆ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ಹುಟ್ಟುವುದಿಲ್ಲ. ಮಾರುಕಟ್ಟೆಯ ವಸ್ತು ಎಂದರೇನೆ ಇವರು ಅನುಮಾನ





ಮತ್ತು ಆತಂಕಕ್ಕೆ ಒಳಗಾಗುತ್ತಾರೆ. ಒಳಗಿನದಕ್ಕೆ ಬೆಲೆ, ಹೊರಗೆ ಚಲಿಸಿದರೆ ಅಪಮಾನ.

ಜಾಗತೀಕರಣ ಕಾಲಿಟ್ಟಿರುವ ಈ ಸಂದರ್ಭದಲ್ಲಿ ಜನಪದ ಸಂಸ್ಕೃತಿಗಳು ಎರಡು ರೀತಿಯ ವಿವಂಚನೆಗೆ ಒಳಗಾಗಿವೆ.

೧) ಕೆಲವು ಜನಪದಗಳು ಜಾಗತೀಕರಣದಿಂದ ತಮಗೆ ಹೊಸ ಅನುಕೂಲಗಳು ಸಿಗುತ್ತವೆ ಎಂದು ತಿಳಿದಿವೆ. ಕೆಳ ಮತ್ತು ದಲಿತ ವರ್ಗದಲ್ಲಿ ಈ ನಂಬಿಕೆ ಹುಟ್ಟಿದೆ. ಜಾತಿ ಅಥವಾ ವರ್ಗಗಳ ಮೂಲಕವಾಗಿ ಬರದೆ ಈ

ಜಾಗತೀಕರಣ ನೇರವಾಗಿ ಎಲ್ಲರ ಎದುರೂ ಬರುವುದರಿಂದ ಸಾಂಪ್ರದಾಯಿಕ ಅಡೆ ತಡೆಗಳಿಂದ ನಮಗೆ ಬಿಡುಗಡೆ ಇದೆ ಎಂದು ತಿಳಿದಂತಿದೆ. ತಾವು ಕೊಳ್ಳಲು ಬೇಕಾದ ಉತ್ಪತ್ತಿಯ ಬಗ್ಗೆ ಇವರು ಯೋಚಿಸಿದಂತಿಲ್ಲ.

೧) ಹಲವು ಜನಪದಗಳು ತಮ್ಮ ಕೈಗೆಟುಕುವ ಮತ್ತು ತಮ್ಮ ಅಸ್ತಿತ್ವದಲ್ಲಿರುವ ತಂತ್ರಜ್ಞಾನವನ್ನು ಕಳೆದುಕೊಳ್ಳುವ ಭಯದಲ್ಲಿದ್ದಾರೆ. ತಮ್ಮ ಈ ಶೋಧ ತಮ್ಮ ಸಂಸ್ಕೃತಿಯ ಭಾಗ ಆಗಿದ್ದು ಅದನ್ನೂ ಕಳೆದುಕೊಂಡರೆ ನಮ್ಮಲ್ಲಿ ಉಳಿಯುವುದೇನು? ಬಹಳ ಮುಖ್ಯವಾಗಿ ತಮ್ಮ ಜನಾಂಗ, ಜಾತಿ, ಆಥವ ವರ್ಗದ ನಾಯಕತ್ವ ತಪ್ಪಿಹೋಗುತ್ತದೆ. ಜಾಗತೀಕರಣ ಎಂಬುದಕ್ಕೆ ನಿರ್ದಿಷ್ಟ ಸಂಸ್ಕೃತಿ ಎಂಬುದಿಲ್ಲ. ಅದು ಮಾರು ಹಾಗೂ ಸಂಪಾದಿಸುವ ದಲ್ಲಾಳಿ. ಅದಕ್ಕೆ ನಮ್ಮವರು ತಮ್ಮವರು ಎಂಬುವವರು ಇರುವುದಿಲ್ಲ. ಆಗ ತಮ್ಮನ್ನು ಹತ್ತಿರದಿಂದ ನೋಡುವವರು, ಮಾತನಾಡಿಸುವವರು ಮತ್ತು ರಕ್ಷಿಸುವವರು ಇಲ್ಲವಾಗುತ್ತಾರೆ. ಜಾಗತೀಕರಣದಿಂದ ಸ್ಥಳೀಯವಾಗಿ ಹುಟ್ಟುವ ನಾಯಕತ್ವ ಎಲ್ಲವನ್ನೂ ಬಿಕರಿ ಮಾಡುವದಾಗಿದ್ದು ನಮ್ಮ ಸಾಹಿತ್ಯ, ಸಂಸ್ಕೃತಿ, ವೈದ್ಯ, ಊಟೋಪಚಾರವನ್ನೆಲ್ಲ ಉದ್ಯಮ ಮಾಡಿ ಉದ್ಯಮಪತಿಗೆ ಮಾರಿಬಿಡಬಹುದು. ಹೆಣ್ಣು ಮಕ್ಕಳಿಗೂ ಇದೇ ಪರಿಸ್ಥಿತಿ ಬಂದರೆ 'ಪತಿ' ಎಂಬುವವನೂ 'ಸತಿ' ಎಂಬುವವಳೂ ಕಾಣೆಯಾಗಿಬಿಡುತ್ತಾರೆ. ಇಂಥ ಸಂದರ್ಭದಲ್ಲಿ ದೂರದ ಸ್ವರ್ಗವನ್ನು ಬಯಸಿ ಸ್ಥಳೀಯ ವಾಸ್ತವತೆಯನ್ನು ಮರೆತಂತಾಗುತ್ತದೆ. ಕಾರಣವಾಗಿ ನಮ್ಮ ಜನಪದದ, ಜಾತಿಯ, ಅಥವ ಪಂಗಡ ನಾಯಕತ್ವವನ್ನು ತಮ್ಮಲ್ಲೇ ಉಳಿಸಿಕೊಳ್ಳಬೇಕು ಎಂಬ ಮನೋಧರ್ಮ ಬೆಳೆಯುತ್ತದೆ. ಕರ್ನಾಟಕದ ಸಂದರ್ಭದಲ್ಲಿ ಪ್ರತಿಯೊಂದು ಜಾತಿ ಮತ್ತು ಪಂಗಡದ ಜನಪದರು ತಮ್ಮದೇ ಧರ್ಮಗುರು ಮತ್ತು ಮಠವನ್ನು ಕಟ್ಟಲು (ಧರ್ಮ ಯಾವುದು ಎಂಬುದು ಗೊತ್ತಾಗಿಲ್ಲ) ಹಾತೊರೆಯುತ್ತಿರುವ ಒಂದು ಸರಳ ಉದಾಹರಣೆಯನ್ನು ಇಲ್ಲಿ ಕೊಡಬಹುದು.

ಇನ್ನೊಂದು ಕಡೆ ಸಂಸ್ಕೃತಿ ವಿಮರ್ಶಕರು ಈ ಎರಡೂ ವರ್ಗದ ಜನಪದಗಳ ಮಧ್ಯೆ ಸ್ಥಳೀಯ ಮತ್ತು ದೇಶದ ಸಂದರ್ಭದಲ್ಲಿ ಆಗುತ್ತಿರುವ ಸಾಂಸ್ಕೃತಿಕ ಮತ್ತು ನಾಯಕತ್ವದ ಬಗ್ಗೆ





ಚರ್ಚೆ ನಡೆಸುತ್ತಿದ್ದಾರೆ. ಪ್ರತಿಯೊಂದು ಜನಪದ ಸಂಸ್ಕೃತಿಗೂ ಅಂತರಂಗ ಎಂಬುದೊಂದು ಇದೆ. ಅದು ತಮ್ಮೊಳಗೆ ಮತ್ತು ತನ್ನ ಸನಿಹದಲ್ಲಿ ಶಾಂತಿ, ಸಹಬಾಳ್ವೆ, ಸಹಕಾರ, ಅನ್ಯೋನ್ಯತೆ, ಅಂತಕರಣವನ್ನು ಬಯಸುತ್ತದೆ ಮತ್ತು ಆ ಮೂಲಕ ಮಾನವ ಸಂಬಂಧಗಳು ಮೌಲ್ಯ ಆಗುವುದನ್ನು ಬಯಸುತ್ತದೆ. ಆದರೆ ಜಾಗತೀಕರಣವೆಂಬುದು ಬಾಹ್ಯ ಬೆಳವಣಿಗೆಯ ಚೋದನ ಶಕ್ತಿಯಾಗಿದ್ದು ವಸ್ತುವಿನ ಅಳತೆಯ ಮೂಲಕ ವ್ಯಕ್ತಿಯನ್ನು ಅಳೆಯುತ್ತಿದೆ. ವ್ಯಕ್ತಿಗಳು ವ್ಯಕ್ತಿತ್ವಗಳಾಗದೆ ವಸ್ತುಗಳೇ ಆಗಿ ಬಿಟ್ಟರೆ ಯಾರೊಡನೆ ಮಾತನಾಡುವುದು ಎಂಬ ಚಿಂತನೆಗೆ ಬಿದ್ದಿದ್ದಾರೆ. ಜಾಗತೀಕರಣದ ಅಭಿವೃದ್ಧಿ ಚಿಂತನೆ ಮನುಷ್ಯ ಕೇಂದ್ರಿತ ಮತ್ತು ಏರುಮುಖ ಚಲನೆಯದಾಗಿದ್ದು ಅಕ್ಕ - ಪಕ್ಕ ಎಂಬ

ಮನುಷ್ಯ ಸಮಾಜ ಮತ್ತು ಜೀವ ಜಾಲ ಬಳಸುವ ಕಚ್ಚಾ ಮಾಲು ಆಗಿಬಿಟ್ಟರೆ; ಈ ಜಗತ್ತು ನೀರು,ನೆಲ, ಜಲ, ಖನಿಜ, ಮರ ಸಸ್ಯ, ಪ್ರಾಣಿ ಪಕ್ಷಿ..... ಎಷ್ಟು ಬೇಗ ತಿರುಪತಿ ತಲೆ ಆಗಿಬಿಡಬಹುದೋ ಎಂಬ ಭವಿಷ್ಯದ ಭಯಕ್ಕೆ ಒಳಗಾಗಿದ್ದಾರೆ.

ತಂತ್ರಜ್ಞಾನವಿಲ್ಲದೆ ಅಭಿವೃದ್ಧಿ ಎಂದೂ ಸಾಧ್ಯವಾಗದು. ಅದು ಜನೋದ್ದೇಶಿತವಾಗಿರಬೇಕು; ಉದ್ಯಮಪತಿಯ ಉದ್ದೇಶ ಅಲ್ಲ, ಯೂರೋ ದೊರೆಗಳು ಉದ್ಯಮಪತಿಗಳೇ ಹೊರತು ವಿಜ್ಞಾನಿಗಳೂ ಅಲ್ಲ, ಮನಷ್ಯರೂ ಇವರು ಮೊದಲು ನಾಶಮಾಡುವುದು ಮೂರನೆ ಜಗತ್ತಿನ ರಾಜಕೀಯವನ್ನು ಅಂದರೆ ನಾಯಕರನ್ನು, ಈ ನಾಯಕರನ್ನು ಮಧ್ಯವರ್ತಿಗಳನ್ನಾಗಿ ಪರಿವರ್ತಿಸಿದರೆ ಇಡೀ ರಾಜಕೀಯ ಶಕ್ತಿ ತಮ್ಮ ಲಾಭಕ್ಕೆ ನಿಲ್ಲುತ್ತದೆ. ಸ್ಥಳೀಯ ತಂತ್ರಜ್ಞಾನವನ್ನು ಆ ಮೂಲಕ ನಾಶಮಾಡಿ ತಮ್ಮ ನೆಲೆಯನ್ನು ಸ್ಥಾಪಿಸಬಹುದು. ಆಗ ಜನ - ಜನಪದ ಮತದಾರರಾಗಿ ಮಾತ್ರ ಉಳಿದು ಸಾಂಸ್ಕೃತಿಕ ಪ್ರಾತಿನಿಧಿಕತೆಯನ್ನು ಕಳೆದುಕೊಳ್ಳುತ್ತಾರೆ. ಇದು ಮೊಲದ ಮನೆಯ ಬಾಗಿಲು ತೆಗೆದಂತೆ. ಬಹುಜನ, ಬಹುಮನ ಮತ್ತು ಬಹು ಸಂಸ್ಕೃತಿಗಳನ್ನು ಏಕಾಕಾರಕ್ಕೆ ರೂಪಿಸಲು ಜಾಗತೀಕರಣಕ್ಕೆ ಬಾಗಿಲುಗಳು ತೆರೆದಿವೆ.ಆದರೆ ಈ ಕೆಳಜನ ಮತ್ತು ಸಂಸ್ಕೃತಿಯಿಂದ ಈಗ ತಾನೆ ಹುಟ್ಟುತ್ತಿರುವ ರಾಜಕೀಯ ನಾಯಕತ್ವ ಮೊಳಕೆಯಲ್ಲಿ ಹುಸಿ ಹೊಡೆದುಹೋಗುತ್ತದೆ. ಹುಟ್ಟುವ ಮಕ್ಕಳಲ್ಲಿ ನೆಲೆ ನಿಲ್ಲುವ ಆಸೆ, ಹೋರಾಡುವ ಮನಸ್ಸು ಉಳಿಯುವುದಿಲ್ಲ. ತನ್ನ ಸಂಸ್ಕೃತಿಯನ್ನು ಕಳಕೊಂಡವನು ನಂಬಿಕೆಯನ್ನು ಕಳೆದುಕೊಳ್ಳುತ್ತಾನೆ. ಇಂಥ ಸನ್ನಿವೇಶದಲ್ಲಿ ಜನಪದ ನಾಯಕತ್ವದ ಬಗ್ಗೆ ಚಿಂತಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂಬುದು ನನ್ನ ಭಾವನೆ. ಮೂರು ಸ್ಥರದಲ್ಲಿ ಈ ನಾಯಕತ್ವವನ್ನು ಹುಡುಕಬಹುದೆನಿಸಿದೆ.





**೧. ಸಂಸ್ಕೃತಿ ಇತಿಹಾಸ ಬಲ್ಲ ಜಾತಿಯೊಳಗಿನ ನಾಯಕನನ್ನು ಆಯ್ದುಕೊಳ್ಳುವುದು**

ಎಂದರೆ ಒಂದು ಜಾತಿಯಲ್ಲಿ ಹುಟ್ಟಿದ ಒಬ್ಬ ವ್ಯಕ್ತಿ ಅಪರಾಧಿ ಅಲ್ಲ. ಬೆಳೆಯುತ್ತ ಆತ ಭಾರತದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುತ್ತಾನಾದರೆ, ಈ ದೇಶದ ಎಲ್ಲ ಜನರ ಬಗ್ಗೆ ಹೇಗೆ ಸ್ಪಂದಿಸಬೇಕು ಎಂದು ತಿಳಿಯುತ್ತಾನೆ. ರಾಜಕೀಯವನ್ನು ಸಂಸ್ಕೃತಿಯ ಒಂದು ಭಾಗವಾಗಿ ನೋಡುವ ಜನಪ್ರತಿನಿಧಿಗಳು ಹೆಚ್ಚಾದರೆ ಅಷ್ಟರಮಟ್ಟಿಗೆ ನಮ್ಮ ಸಾಮಾಜಿಕ ಅಪರಾಧಗಳು ಕಡಿಮೆಯಾಗುತ್ತವೆ. ಧರ್ಮದ ಕೋಣಗಳ ಗುದ್ದಾಟವನ್ನು ಒಂದು ಕಡೆಗೆ ಇರಿಸಿ; ಅವು

ಧರ್ಮ ಮತ್ತು ರಾಜಕೀಯ ಕೇಂದ್ರೀಕರಣ ಪ್ರಾಪ್ತಿಗಾಗಿ ಹೋರಾಡುತ್ತಿವೆ; ಈ ಹೊತ್ತೂ ಒಂದೇ ಕೆರೆಯಲ್ಲಿ ದಲಿತನನ್ನು ನೀರು ಬಳಸಲು ಬಿಡುತ್ತಿಲ್ಲ ಎಂಬ ನೆನಪು ಮಾತ್ರ ಸಾಕು. ನಮ್ಮ ಸಾಂಸ್ಕೃತಿಕ ಬರ್ಬರತೆ ನಮ್ಮನ್ನು ತಲ್ಲಣಗೊಳಿಸುತ್ತದೆ. ನಾವು ಎಷ್ಟೇ ದೊಡ್ಡ ಯೋಜನೆಗಳನ್ನು ಹಾಕಿದರೂ ನಮ್ಮೊಳಗೆ ಕೂಡಿ ಬಾಳುವುದನ್ನು ಕಲಿಸದಿದ್ದರೆ ನಾವು; ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಕಳ್ಳತನ ಮಾಡುತ್ತಿದ್ದೇವೆ ಎಂದು ತಿಳಿಯಬೇಕು.

**೧. ಸ್ಥಳೀಯತೆಯಿಂದ ರಾಷ್ಟ್ರನಾಯಕನನ್ನು ಗುರುತಿಸುವುದು**

ಕೊನೆಯವನಿಗೆ ಅಧಿಕಾರ ಈಹೊತ್ತು ಸಾಧ್ಯವಾಗಿಲ್ಲ. ಶ್ರೀ ಜಗಜೀವನರಾಂ ಪ್ರಧಾನಿಯಾಗುವ ಸಂದರ್ಭಕ್ಕೆ ಜನತಾ ಪಕ್ಷ ವಿಸರ್ಜನೆಯಾಯಿತಲ್ಲ ಸ್ಥಳೀಯತೆ ಎನ್ನುವುದು ಕೇವಲ ಭೂಪ್ರದೇಶ ಅಲ್ಲ: ಜ್ಞಾನ ಮತ್ತು ಸಂಪನ್ಮೂಲಗಳ ಸೋಪಜ್ಞತೆ, ಸ್ಥಳೀಯ ಪಾಳೇಗಾರರು ಅಥವಾ ಪುಂಡುಪೋಕರಿಗಳನ್ನು ಗಮನದಲ್ಲಿಟ್ಟುಕೊಂಡು ಸೃಜನಭೂಮಿಯನ್ನು ನಿರಾಕರಿಸುವುದು ಅಥವಾ ಸಂಕುಚಿತವಾಗಿ ನೋಡುವುದು ಜಾತಿಶ್ರೇಷ್ಠ ಮತ್ತು ವರ್ಗ ಶ್ರೇಷ್ಠತೆಯಿಂದ ಬಂದ ಹುಂಬತನ. ಇಡೀ ದೇಶ ಪೊಟೆನ್‌ಷಿಯಲ್ ಆಗಬೇಕಾದರೆ ಸ್ಥಳೀಯತೆ ನೋಯದಂತೆ ನೋಡಿಕೊಳ್ಳಬೇಕು. ಸ್ಥಳೀಯತೆ ಎಂಬುದು ಈ ದೇಶದ ಭೂ ಭಾಗದಲ್ಲಿ ಅಲ್ಲದೆ ನಿರ್ಲಕ್ಷಿತ ಜಾತಿ, ಪಂಗಡ, ಪಿರ್ಕ, ಬಳಿಗಳ ಪಾರಂಪರಿಕೆ ಜ್ಞಾನವೂ ಆಗಿದೆ. ಒಂದು ಚಿಕ್ಕ ಸಮುದಾಯದ ಡಿ.ದೇವರಾಜ ಅರಸು, ಕರ್ನಾಟಕವನ್ನು ಮುಖ್ಯಮಂತ್ರಿಯಾಗಿ ಪ್ರತಿನಿಧಿಸಿದಾಗ ಕರ್ನಾಟಕ ಭಾರತದ ಭೂಪಟದಲ್ಲಿ ಹೇಗೆ ದಾಖಲಾಯಿತು ಎಂಬುದನ್ನು ನಾನು ಪ್ರತ್ಯೇಕ ತಿಳಿಸಬೇಕಾಗಿಲ್ಲ. ದಕ್ಷಿಣ ಭಾರತದವರು ಎಂದರೆ ಮದ್ರಾಸಿಗಳು ಎಂದು ತಿಳಿದಿದ್ದ ಉತ್ತರ ಭಾರತದವರಿಗೆ ಅರಸು ಹೊಸ ಪಾಠ ಕಲಿಸಿದರಲ್ಲ!

**೩. ಜನಪದ ನಾಯಕನ ಆವಿಷ್ಕಾರ**

ಜಾನ್ ಕೆನಡಿಯನ್ನು, ಗೊರ್ಬಚೆವ್ ಅವರನ್ನು, ಗಡಾಫಿ ಅವರನ್ನು ಯಾರೂ ಜಾತಿ





ಅಥವಾ ಒಂದು ಧರ್ಮದ ನಾಯಕ ಅನ್ನಲಿಲ್ಲ. ಭಾರತದಲ್ಲಿ ಮೂರು ತಿಂಗಳ ಪ್ರಧಾನಿಯನ್ನು ಬಿಟ್ಟರೆ ಆ ಸ್ಥಾನ ಮಡಿಯಾಗಿಯೇ ಉಳಿಯಿತಲ್ಲ! ಕಾರಣ ಕೇಳಿದರೆ, ಜಾತಿಯ ಹೊರಗೆ ಶ್ರೇಷ್ಠತೆ ನಿರ್ವಚಿಸಲ್ಪಟ್ಟಿಲ್ಲ, ಸ್ಥಳೀಯತೆ, ದಲಿತ ಮತ್ತು ಕೆಳ ತಳ ಪಂಗಡಗಳು ಕೇಂದ್ರ ಆಯ್ಕೆಗೆ ಮನ್ನಿಸಲ್ಪಟ್ಟಿಲ್ಲ, ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲೂ ನಮ್ಮಲ್ಲಿ ಜ್ಞಾನ, ಶ್ರೇಷ್ಠತೆ, ಸಂಪತ್ತು ಮತ್ತು ಸಂಬಂಧಾತ್ಮಕತೆಗಳು ಜಾತಿ ಶ್ರೇಷ್ಠತೆಯ ಮೇಲೆಯೇ ಪರಿಗಣಿಸಲ್ಪಡುತ್ತಿವೆ. ಈ ಭೂಮಿಯ ಜ್ಞಾನ ಮತ್ತು ಭೂಮಿ, ನಾಯಕ ಆಗದಿದ್ದಲ್ಲಿ ಜನಪದ ನಾಯಕ ಹುಟ್ಟುವುದು

ಎಲ್ಲಿ? ಈಗ ಭಾರತೀಕರಣ, ಸಂಸ್ಕೃತಿ ರಾಜಕಾರಣ ಎನ್ನುವಂಥದ್ದು ಈ ದೇಶದ ಎಲ್ಲರನ್ನೂ ಒಳಗೊಂಡ ನಾಯಕತ್ವವನ್ನು ಸೃಷ್ಟಿಸುವ ಪ್ರಶ್ನೆಯಾಗಿದೆ ಎನ್ನುವಂಥದ್ದನ್ನು ನಾವು ಈ ಹೊತ್ತು ಯೋಚನೆ ಮಾಡಬೇಕಾಗಿದೆ. ನಮ್ಮ ಅಬ್ಬರದಲ್ಲಿ ಇಂತಹ ಭಾರತೀಕರಣ, ಸಂಸ್ಕೃತಿ ರಾಜಕಾರಣ ಪರಿಕಲ್ಪನೆಗಳು ಕೂಡಾ ಯಾರೂ ರೆ ಕಿಡ್ನಾಪ್ ಮಾಡುತ್ತಿರುವಂಥ ವಿಷಯಗಳಾಗಿವೆ ಎನ್ನುವಂಥ ಎಚ್ಚರವನ್ನು ನಾವು ವಹಿಸಬೇಕು. ಈವತ್ತಿನ ಕ್ಯಾಪಿಟಲ್ ಜಾತಿ, ಕ್ಯಾಪಿಟಲ್ ವರ್ಗ, ಕ್ಯಾಪಿಟಲ್ ಅಭಿವೃದ್ಧಿ ಚಿಂತನೆಯ ಹೊರಗೆ ಸಮಾಜವನ್ನು ಸೃಷ್ಟಿ ಮಾಡಿಕೊಳ್ಳುವ ನೆಲೆಯಲ್ಲಿ ಜನ ಸಂಬಂಧಿಯಾಗಿ ಮಾತನಾಡುವ ಸಂದರ್ಭದಲ್ಲಿ ಒಬ್ಬ ಜನಪದ ನಾಯಕ ಇದ್ದಾನೆ. ಅವನನ್ನು ಕಂಡುಕೊಳ್ಳುವ ಮುಖಾಂತರ ನಾವು ಕಟ್ಟಿಕೊಳ್ಳುವಂಥ ಒಂದು ನಡೆಯನ್ನು, ಚಿಂತನೆಯನ್ನು ಮಾಡಬೇಕಾಗಿದೆ.



**ಜನರಿಗಾಗಿ ಪಾನೀಯ**

---

**ಜನಪದ ಪಾನೀಯಗಳು ಯಾವುವು?**

ಎಲ್ಲ ಜನ ಸಾಮಾನ್ಯರೂ ಸಾಮಾನ್ಯವಾಗಿ ಬಳಸುವ ಪಾನೀಯಗಳ ಜನ ಜನಪದ ಪಾನೀಯಗಳು, ನೀರು ಪಾನೀಯ ಆಗುವುದಿಲ್ಲ. ನೀರಿನೊಡನೆ ಇತರ ದ್ರವಗಳು ಬೆರೆತರೆ ಅದು ಪಾನೀಯ ಎನಿಸಿಕೊಳ್ಳುತ್ತದೆ. ದ್ರವಗಳು ಪ್ರಯೋಗಶಾಲೆಯಲ್ಲಿ ಸಿದ್ಧವಾಗಬೇಕೆಂದಿಲ್ಲ. ಪ್ರಯೋಗಶಾಲೆಯಲ್ಲಿ ಸಿದ್ಧವಾಗುವ ದ್ರವಗಳಿಂದ ಉತ್ಪತ್ತಿಯಾಗುವ

ಪಾನೀಯಗಳನ್ನು ಶಿಷ್ಟ ಪಾನೀಯಗಳು ಎನ್ನುತ್ತೇವೆ. ಅನುಭವದಿಂದ ಬಳಕೆಗೆ ಬಂದ, ಬಹಳ ಕಾಲದಿಂದ ಜನಸಾಮಾನ್ಯರ ಮಧ್ಯೆ ಉಳಿದು ಬಳಕೆಯಲ್ಲಿರುವ ದ್ರವ ಪಾನೀಯಗಳ ಜನಪದ ಪಾನೀಯಗಳು. ಈ ದ್ರವಗಳು ಎಲೆ, ಬಳ್ಳಿ, ಕಾಯಿ, ಹಣ್ಣು ಮುಂತಾದ ನೈಸರ್ಗಿಕ ವಸ್ತುಗಳಿಂದ ತಯಾರಾಗುತ್ತವೆ.

ಜನಪದ ಪಾನೀಯಗಳ ಮುಖ್ಯ ನಡವಳಿಕೆ ಎಂದರೆ ಎಲ್ಲರೂ, ಎಲ್ಲ ಕಾಲದಲ್ಲೂ ಮತ್ತು ಎಲ್ಲರಿಗೆ ಕಾಣುವಂತೆ ಕುಡಿಯುವ ಕುಡಿತಗಳು, ಶಿಷ್ಟ ಪಾನೀಯಗಳಂತೆ ಕದ್ದು ಮುಚ್ಚಿ, ಪ್ರತ್ಯೇಕ ಸ್ಥಳ ಮತ್ತು ಕಾಲಗಳಲ್ಲಿ ಹಾಗೂ ಪ್ರತ್ಯೇಕವಾಗಿ ಕುಳಿತು ಕುಡಿಯುವವುಗಳಲ್ಲ. ಜನಪದ ಪಾನೀಯಗಳ ಮುಖ್ಯ ಆಶಯ ಆರೋಗ್ಯ ವರ್ಧನೆ; ಶಿಷ್ಟ ಪಾನೀಯಗಳ ಹಾಗೆ ಮೋಜು ಮತ್ತು ಮನರಂಜನೆ ಅಲ್ಲ. ಜನಪದ ಪಾನೀಯಗಳ ಆರೋಗ್ಯ ವರ್ಧನೆಯಲ್ಲಿ ಸೌಂದರ್ಯ ವರ್ಧನೆ ಕೂಡ ಒಂದು ಪ್ರಮುಖ ಅಪೇಕ್ಷೆ.

ಈಗ ಜನಪದ ಪಾನೀಯಗಳು ಹಿಂದೆ ಸರಿಯುತ್ತಿವೆ. ಕುಡಿಯುವುದು ಮೋಜು, ಮಜ, ಮಾನಸಿಕ ಪರಿಹಾರ, ಅಂತಸ್ತು ಮತ್ತು ಪ್ರತ್ಯೇಕಗೊಳ್ಳುವುದು ಎಂಬುದು ಇವತಿನ ಪರಿಕಲ್ಪನೆ. ಆರೋಗ್ಯ ಇಲ್ಲಿಯ ಮುಖ್ಯ ಉದ್ದೇಶವಲ್ಲ;





ಮೋಜಿಗಾಗಿ ಆರೋಗ್ಯವನ್ನು ಬಲಿಕೊಡಲಾಗಿದೆ. ಇರುವಿಕೆಯ ಮಹತ್ವಕ್ಕಿಂತ ಅನುಭವಿಸುವ ಮಹತ್ವಕ್ಕೆ ಮಾನ್ಯತೆ ಕೊಡಲಾಗಿದೆ. ಅಮಲು ಇಲ್ಲಿಯ ಬಹು ಮುಖ್ಯ ಬೇಡಿಕೆ ಮತ್ತು ಆಶಯ. ಜನಪದ ಪಾನೀಯಗಳ ಮುಖ್ಯ ಆಶಯ ಆರೋಗ್ಯ ಎಂದರೆ ಜೀವನ ಸಂವರ್ಧನೆ. ಇದು ಜನಪದ ಬದುಕಿನ ಅಪೇಕ್ಷೆ ಮತ್ತು ಆಶಯ. ವ್ಯಕ್ತಿಗತವಾದ ಅಪೇಕ್ಷೆ ಯಾವಾಗಲೂ ಅಮಲು ಮತ್ತು ವೈಯಕ್ತಿಕ ಭೋಗವಾಗಿರುತ್ತದೆ. ಸಮೂಹ ಅಪೇಕ್ಷೆ ಸಾಮಾಜಿಕ ಒಳಿತನ್ನು ಕುರಿತುದಾಗಿರುತ್ತದೆ.

ಆರೋಗ್ಯ ಮತ್ತು ಬದುಕುವ ಭಾಗ್ಯಕ್ಕಾಗಿ ನಾವು ಜನಪದ ಪಾನೀಯಗಳನ್ನು ಪುನರುಜೀವಿಸಬೇಕಾಗಿದೆ. ಜನಪದ ಪಾನೀಯಗಳ ಪುನರುಜೀವನ ಎಂದರೆ ಏನು ಮತ್ತು ಏಕೆ ಎಂದು ನೀವು ಕೇಳಬಹುದು. ಈ ಹೊತ್ತು ಪಾನೀಯಗಳೆಂದರೆ ಕಾಫಿ, ಟೀಯನ್ನು ಹೊರತುಪಡಿಸಿ, ರಾತ್ರಿ ಹೊತ್ತಿನ ಕುಡಿತಗಳು ಎಂಬ ಅಭಿಪ್ರಾಯವಿದೆ. ಸ್ಥಳೀಯ ಹಾಗೂ ವಿದೇಶೀ ಮದ್ಯಗಳು ನಮ್ಮ ಸುತ್ತ ಅಮರಿಕೊಂಡಿವೆ. ರಾ ಕುಡಿಯುತ್ತಿದ್ದ ಸಾರಾಯಿಯನ್ನು ಹಗಲು ಹನ್ನೆರಡು ಗಂಟೆ ಹೊತ್ತು ಸೇವಿಸಲಾಗುತ್ತಿದೆ. ವಿದೇಶಿ ಮದ್ಯ ಸೇವಿಸುವುದು ಒಂದು ಬಗೆಯ ಅಂತಸ್ತು, ಆದರಲ್ಲೂ ವಿದ್ಯಾವಂತರು ಮತ್ತು ನೌಕರ ವರ್ಗದ ನಡವಳಿಕೆ ಎಂಬ ಮನೋಧರ್ಮ ಉಂಟಾಗಿದೆ. ಅಗತ್ಯಕ್ಕಿಂತ ಹೆಚ್ಚಾಗಿ ಈ ಮದ್ಯಗಳನ್ನು ಬಳಸಲಾಗುತ್ತಿದೆ. ಔಚಿತ್ಯ ಮೀರಿ ಕುಡಿಯಲಾಗುತ್ತಿದೆ. ಕುಡಿತ ಅಪರಾಧವಲ್ಲ. ಅದು ಅತಿಯಾದಾಗ ಅಪರಾಧವಾಗುತ್ತದೆ. ಹೆಣ್ಣು ಹೆಂಡ ಮತ್ತು ಖಂಡ ಎಂಬ ನುಡಿಗಟ್ಟು ಹುಟ್ಟಿಕೊಂಡು ಹೆಂಡದ ಜೊತೆಗೆ ಹೆಣ್ಣು ಮತ್ತು ಖಂಡವನ್ನು ನೆಂಚಿಕೆಯಾಗಿ ಬಳಸಲಾಗುತ್ತಿದೆ. ಇದರಿಂದ ಹೆಣ್ಣು ಬಲಿಯಾಗುತ್ತಿದ್ದಾಳೆ. 'ಖಂಡ' ತಿನ್ನುವುದು ಎಂದರೆ ಅನಗತ್ಯವಾಗಿ ಪ್ರಾಣಿಗಳ ಬಲಿಯಾಗುತ್ತಿದೆ. ಹೆಂಡ, ಖಂಡ, ಹೆಣ್ಣಿನ ಜೊತೆಗೆ ಸಿಗರೇಟು ಎಂಬ ಮತ್ತೊಂದು ದುಶ್ಚಟ ಸೇರಿಕೊಂಡು ಆರೋಗ್ಯ ದಿನೇ ದಿನೇ ಹಾಳಾಗುತ್ತಿದೆ. ಇಂಥ ಸಂದರ್ಭದಲ್ಲಿ ಆರೋಗ್ಯ ಮತ್ತು ಸಾಮಾಜಿಕ ಬದುಕನ್ನು ಹಸನುಗೊಳಿಸುವ ಪಾನೀಯಗಳ ಕಡೆಗೆ ಹೋಗಬೇಕಿದೆ.

ನಮ್ಮ ಜನರಲ್ಲಿ ಶತಮಾನಗಳಿಂದ ಪಾನೀಯಗಳ ಬಳಕೆ ಇದೆ. ದುಡಿದು ಬಂದು ರಾತ್ರಿ ಊಟದ ಜೊತೆಗೆ ಅಗತ್ಯಕ್ಕೆ ಬೇಕಾದ ಪಾನೀಯ ಕುಡಿದು ಸುಖ ನಿದ್ರೆ ಅನುಭವಿಸುವ ಹಾಗೂ ಬೆಳಿಗ್ಗೆ ಕೆಲಸಕ್ಕೆ ಹೋಗಲು ಫ್ರೆಶ್ ಆಗುವ ಈ ಪಾನೀಯಗಳು ಅಪರಾಧಗಳಲ್ಲ, ನಿದ್ರೆಗೆ ಬೇಕಾದ ಮತ್ತು ಬರಿಸುವ ಪಾನೀಯಗಳ





ಜೊತೆಗೆ ಮನಸ್ಸಿಗೆ ಮುದವನ್ನಷ್ಟೆ ಕೊಡುವ ಪಾನೀಯಗಳೂ ಜನಪದರಲ್ಲಿ ಅನೇಕ ಇವೆ. ಇವು ಸ್ಥಳೀಯ ಕೈಗಾರಿಕೋದ್ಯಮದ ಹಾಗೂ ಜಾಗತಿಕ ಕೈಗಾರಿಕೋದ್ಯಮದ ಪಾನೀಯಗಳ ಭರಾಟೆಯಿಂದ ಮೂಲೆಗೆ ತಳ್ಳಲ್ಪಟ್ಟಿವೆ. ಇತ್ತೀಚಿನ ಕೋಕಾಕೋಲ. ಪೆಪ್ಸಿ, ಸ್ಪೈಟ್, ಮಿರಿಂಡಾ, ಫಾಂಟಾಗಳಂಥ ವಿದೇಶೀ ಪಾನೀಯಗಳ ಒತ್ತಡದಿಂದ ನಮ್ಮ ಜನಪದ ಪಾನೀಯಗಳು ಮುಖ ಮರೆಸಿಕೊಳ್ಳುತ್ತಿವೆ. ಈ ನಮ್ಮ ಜನಪದ ಪಾನೀಯಗಳು ನಿನ್ನೆ ಮೊನ್ನೆಯವಲ್ಲ, ಅನೇಕ ಶತಮಾನಗಳ ಹಿಂದಿನಿಂದಲೂ ಜನಪದ ಜೀವನದ ನಡವಳಿಕೆಗಳಲ್ಲಿ ಸೇರಿಕೊಂಡು ಬಂದಿವೆ. ಬಾಯಾರಿ

ಬಂದವರಿಗೆ ಬೆಲ್ಲದ ನೀರು; ಪಾನಕ, ಮಜ್ಜಿಗೆ ಕೊಡುವುದರಿಂದ ಹಿಡಿದು ಬೇರೆ ಬೇರೆ ಸಂದರ್ಭದಲ್ಲಿ ಬಳಸುವ ನಾರು, ಬೇರು, ಎಲೆ, ಕಾಯಿ, ಹಣ್ಣು ಸಿಪ್ಪೆ, ಹೂವು ಮುಂತಾದ ಪದಾರ್ಥಗಳಿಂದ ಪಾನೀಯಗಳನ್ನು ತಯಾರಿಸಿ ಬಳಸುತ್ತಿದ್ದರು. ಅವುಗಳನ್ನು ನಾವು ಮತ್ತೆ ಬಳಕೆಗೆ ತರಬೇಕಾಗಿದೆ. ಸಾಮಾನ್ಯ ಬಳಕೆಗೆ ಅಲ್ಲದೆ ಉದ್ಯಮಗಳಾಗಿಯೂ ಅವುಗಳನ್ನು ಬೆಳೆಸಬೇಕಾಗಿದೆ.

ಜನಪದ ಪಾನೀಯಗಳ ಪುನರುಜ್ಜಿವನದ ಅನುಕೂಲಗಳು ಏನು ಎಂಬುದನ್ನು ಈಗ ಪರಿಶೀಲಿಸೋಣ :

**೧) ಹೊಸ ರುಚಿಗಳ ಶೋಧ :**

ನಿಮ್ಮ ಮೂಲ ರುಚಿ ಹಿಟ್ಟು ಮತ್ತು ಸಾರು, ರೊಟ್ಟಿ ಮತ್ತು ಪಲ್ಯ, ಬಾತು ಮತ್ತು ಒಗ್ಗರಣೆಗಳನ್ನು ನಾವು ಪ್ರಶ್ನಿಸುವಂತಿಲ್ಲ. ನಿಮ್ಮ ಪಾನಕ, ಪಾಯಸ, ಶರಬತ್ತುಗಳ ರುಚಿಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ ಬೇರೆ ಬೇರೆ ಪ್ರಾಂತ, ಪ್ರದೇಶ, ಬುಡಕಟ್ಟು ಹಾಗೂ ಒಕ್ಕಲುಗಳಲ್ಲಿ ಹಿಂದಿನಿಂದ ಅನೇಕ ಬಗೆಯ ಪಾನೀಯಗಳು ಬಳಕೆಯಲ್ಲಿವೆ. ಅವುಗಳ ಹೆಸರನ್ನು ಕೇಳಿಯೆ ನೀವು ಖುಷಿ ಪಡಬಹುದು. ಅಂಥ ಅನೇಕ ರುಚಿಗಳನ್ನು, ಆ ಮೂಲಕ ಅನೇಕ ಬಗೆಯ ಪೌಷ್ಠಿಕಾಂಶಗಳನ್ನು ನಮ್ಮ ಹಿರಿಯರು ಪಡೆಯುತ್ತಿದ್ದರು. ಅವರು ಮಾರಕ ರೋಗಗಳಿಗೆ ಔಷಧಿಗಳನ್ನು ಕಂಡು ಹಿಡಿದಿರಲಿಲ್ಲ ನಿಜ, ಆದರೆ ತಿನ್ನುವ ಉಣ್ಣುವ ವಿಷಯದಲ್ಲಿ ಬಡತನವಿದ್ದರೂ, ವೈವಿಧ್ಯತೆಯ ಕೊರತೆ ಇರಲಿಲ್ಲ. ನಮ್ಮ ಬ್ರಾಹ್ಮಣ ಸಮಾಜ ಅಡಿಗೆಯಲ್ಲಿ ಮಾಡಿರುವ ಬಹುಮುಖ ಶೋಧನೆಯನ್ನು ಜಗತ್ತಿನ ಬೇರಾವ ರಾಷ್ಟ್ರವೂ, ಪಂಗಡವೂ ಮಾಡಿರಲಾರದು ಎಂಬುದು ನನ್ನ ನಂಬಿಕೆ. ದೇಹವನ್ನು ದೃಢವಾಗಿ ಇಟ್ಟುಕೊಳ್ಳಲು ಮುಖ್ಯ ಆಹಾರದ ಜೊತೆಗೆ ಪಾನೀಯವನ್ನು ಒಂದು ಉಪ ಆಹಾರ ಪದ್ಧತಿಯಾಗಿ





ನಮ್ಮ ಜನ ಅಭಿವೃದ್ಧಿಪಡಿಸಿದ್ದರು. ನೀರು ಒಂದು ಪ್ರಮುಖ ಔಷಧ ಪದ್ಧತಿಯಾಗಿ ನಮ್ಮಲ್ಲಿ ಬೆಳೆದಿತ್ತು. ನೀರಿನ ಜೊತೆಗೆ ಇತರ ಬೇರು, ಹೂವು, ಹಣ್ಣುಗಳ ರಸವನ್ನು ಸೇರಿಸಿ ಕಷಾಯ ಮಾಡುವ ಪದ್ಧತಿ ತುಂಬ ವ್ಯಾಪಕವಾಗಿ ಬೆಳೆದಿತ್ತು. ರುಚಿಗಾಗಿಯೇ ಕೆಲವು ಪಾನೀಯಗಳನ್ನು ಕಂಡು ಕೊಂಡಿದ್ದರು. ಅಧುನಿಕ ಜ್ಞಾನದ ಮುಂದೆ ಇವೆಲ್ಲ ಕಳಪೆ ಎಂದು ತಿಳಿದು ಹತ್ತೊಂಬತ್ತನೆಯ ಶತಮಾನದ ಆರಂಭದ ಹೊತ್ತಿಗೆ ಇವೆನ್ನೆಲ್ಲ ಮರೆತರು ಅಥವ ಕೈಬಿಟ್ಟರು.

ನಮ್ಮತನವನ್ನು ಮರೆಸುವುದನ್ನು ಕಲಿಸುವುದರಲ್ಲಿ ಆಧುನಿಕ ಜ್ಞಾನ ಮಹತ್ವದ ಪಾತ್ರವನ್ನು ಹೊಂದಿದೆ. ಹದಿನೆಂಟು, ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಆಧುನಿಕತೆ, ಪಾಶ್ಚಾತ್ಯ ಶೋಧನೆಯ ಫಲವೇ ಹೊರತು ನಮ್ಮದೆಂಬ ಶೋಧನೆ ಅಲ್ಲ.

**೧) ಆರೋಗ್ಯವರ್ಧಕಗಳ ಶೋಧ :**

ಪಾನೀಯ ಎಂಬುದು ಕೇವಲ ಚಟಕ್ಕಾಗಿ ಕುಡಿಯುವುದಾಗಿರಲಿಲ್ಲ. ಅವುಗಳಲ್ಲಿ ಕೆಲವು ಆರೋಗ್ಯ ವರ್ಧಕಗಳೂ ಆಗಿದ್ದವು. ಶ್ರೀಮಂತ ಸಮಾಜದ ಹಾಗೂ ರಾಜ ಮನೆತನದ ಹೆಣ್ಣುಗಳು ತಮ್ಮ ಸೌಂದರ್ಯ ವರ್ಧನೆ ಬಗ್ಗೆ ಕಾಳಜಿ ಇರಲಿಲ್ಲವಾದರೂ, ಆರೋಗ್ಯವರ್ಧಕ ಪಾನೀಯಗಳ ಬಗ್ಗೆ ಅರಿವು ಇತ್ತು ಮತ್ತು ಅವರು ಅವುಗಳನ್ನು ಬಳಸುತ್ತಿದ್ದರು. ಇವುಗಳಲ್ಲಿ ಗಂಜಿ ರೂಪದ ಪಾನೀಯಗಳು ಇಂಥ ಮುಖ್ಯವಾಗಿವೆ. ಪಾನೀಯಗಳನ್ನು ನಾವು ಈ ಹೊತ್ತು ಪುನರುಜ್ಜಿವನಗೊಳಿಸಬೇಕಾಗಿದೆ. ಬಿಸಾಕುತ್ತಿರುವ ಅಥವ ಅನಗತ್ಯ ಎಂದು ನಿರಾಕರಿಸುತ್ತಿರುವ ನಾರು, ಬೇರು, ಬೀಜ, ಹೂಗಳನ್ನು ಈ ನಿಟ್ಟಿನಲ್ಲಿ ಬಳಸಿಕೊಳ್ಳಬೇಕಾಗಿದೆ.

**೩) ಮಹಿಳಾ ಉದ್ಯೋಗ ಅವಕಾಶ ಶೋಧ**

ಈ ಹೊತ್ತಿನವರೆಗೂ ಜನಪದ ಪಾನೀಯಗಳ ತಂತ್ರಜ್ಞರು, ಉತ್ಪಾದಕರು ಹಾಗೂ ವಿತರಕರು ಮಹಿಳೆಯರೇ ಆಗಿದ್ದಾರೆ. ಆದರೆ ಅವರು ತಯಾರಿಸುವ ಪಾನೀಯಗಳು ಮನೆ ಮಕ್ಕಳ ಸಂತೋಷ, ಸೌಂದರ್ಯ ಹಾಗೂ ಆರೋಗ್ಯ ವರ್ಧನೆಗೆ ಸೀಮಿತವಾಗಿವೆ. ಮನೆಯಿಂದ ಆಚೆಗೆ ಅವರ ಪಾನೀಯಗಳು ಚಲಿಸಿಲ್ಲ. ಪ್ರತಿ ಮನೆಯ ಗರತಿಯೂ ಈ ಬಗೆಯ ಜನಪದ ಪಾನೀಯಗಳ ತಯಾರಿಕೆಯಲ್ಲಿ ನಿಪುಣಳಾಗಿರುವುದರಿಂದ, ತನ್ನ ಪಾನೀಯವನ್ನು ಬೇರೆಯವರಿಗೆ ಕ್ರಯಕ್ಕಾಗಿ ಕೊಡುವ ಸಂದರ್ಭ ಒದಗಿ ಬಂದಿಲ್ಲ. ಆದರೆ ಹಾಗೆ ಮಾಡುವ ಅವಕಾಶ ಇದ್ದೇ





ಇದೆ. ಒಂದು ಪ್ರದೇಶದ ಪಾನೀಯಗಳು ಮತ್ತೊಂದು ಪ್ರದೇಶದಲ್ಲಿ ದೊರೆಯುತ್ತಿಲ್ಲ. ಭೌಗೋಳಿಕ ಪರಿಸ್ಥಿತಿಯು ಪಾನೀಯಗಳ ಮೂಲವಸ್ತುವಾದ ನಾರು, ಬೇರು, ಹಣ್ಣು ಹೂವು ಮತ್ತು ಕಾಯಿಗಳನ್ನು ನಿಯಂತ್ರಿಸುತ್ತದೆ. ಇದರ ಜೊತೆಗೆ ವಾತಾವರಣ ಕೂಡ ಮುಖ್ಯ. ಬೇಸಿಗೆ ಪಾನೀಯಗಳು ಹಾಗೂ ಚಳಿಗಾಲದ ಪಾನೀಯಗಳು ಬೇರೆ

ಬೇರೆಯಾಗಿರುತ್ತವೆ. ಇವುಗಳನ್ನು ಕಾಲಾತೀತವಾಗಿ ಮಾರುವ ಅವಶ್ಯಕತೆಯೂ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವ ಪಾನೀಯಗಳು ಅಪಾರ. ಇದೇ ಪಾನೀಯಗಳನ್ನು ಕರಾವಳಿಯ ... ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಕಾಣಲಾರೆವು. ಬಯಲು ಸೀಮೆಯ ಪಾನೀಯಗಳು ಬೇರೆ ಮತ್ತು ಅವುಗಳ ಸಂಖ್ಯೆ ಕಡಿಮೆ. ಆಧುನಿಕ ಪಾನೀಯಗಳು ಬಂದಿರುವುದರಿಂದ ಜನಪದ ಪಾನೀಯಗಳು ಕಾಣೆಯಾಗಿವೆ. ಈ ಎಲ್ಲ ಪಾನೀಯಗಳನ್ನು ಪ್ರಯೋಗಕ್ಕೆ ಒಳಪಡಿಸಿ, ಜೀವಕ್ಕೆ ಮಾರಕವಾದ ಅಂಶಗಳಿದ್ದಲ್ಲಿ ಅವುಗಳನ್ನು ತೆಗೆದು ಹಾಕಿ ಗೃಹ ಕೈಗಾರಿಕೆಯನ್ನಾಗಿ ಬೆಳೆಸಬಹುದು. ಮಹಿಳೆಯರೇ ಇವುಗಳ ತಜ್ಞರೂ ಮತ್ತು ಒಡೆಯರೂ ಆಗಿರುವುದರಿಂದ ಹೆಣ್ಣು ಮಕ್ಕಳ ಉದ್ಯೋಗವಾಗಿ ಜನಪದ ಪಾನೀಯಗಳನ್ನು ಬಳಸಬಹುದು. ಗೃಹಕೈಗಾರಿಕೆಯಾಗಿ ಬೆಳೆಸಬಹುದು. ಇಲ್ಲವೆ ಸಹಕಾರ ಸಂಘಗಳ ಮೂಲಕ ಹೊಸ ಸಂರಕ್ಷಣೆ ಮತ್ತು ವಿತರಣಾ ವ್ಯವಸ್ಥೆಯನ್ನು ಬೆಳೆಸಿ ಹೆಚ್ಚಿನ ಪ್ರಮಾಣದ ಉದ್ಯೋಗಾವಕಾಶಕ್ಕೆ ದಾರಿ ಮಾಡಬೇಕು.

ನಮ್ಮ ಗೃಹಿಣಿಯರು ಮಕ್ಕಳು ದೊಡ್ಡವರಾದ ಮೇಲೆ ನಿರುದ್ಯೋಗಿಗಳಾಗುತ್ತಾರೆ. ಗೃಹಕೃತ್ಯ ಉದ್ಯೋಗವೆ ಆದರೂ ಅದು ಅರೆಕಾಲಿಕ ಕೆಲಸ. ಉಳಿದಂತೆ ಅನಗತ್ಯ ತಿಕ್ಕುವ, ತೀಡುವ, ಉಜ್ಜುವ ತೊಳೆಯುವ ಹಾಗೂ ಬರಿದೆ ಮಾತನಾಡುವ ಕೆಲಸದಲ್ಲಿ ಅವರ ನೈಪುಣ್ಯ ಹಾಳಾಗಿ ಹೋಗುತ್ತಿದೆ. ಹೆಚ್ಚಿನ ಸಂಖ್ಯೆಯ ಮಹಿಳೆಯರು ನಿರುದ್ಯೋಗಿಗಳೇ ಆಗಿರುವುದರಿಂದ ಅವರ ನೈಪುಣ್ಯವಾದ ಪಾನೀಯಗಳನ್ನು ಉದ್ಯಮದಲ್ಲಿ ಬೆಳೆಸುವುದು ಅಗತ್ಯವಿದೆ.

**೪. ಪರಿಸರ ಸಂರಕ್ಷಣೆಯ ಕೆಲಸ**

ಜನಪದ ಪಾನೀಯಗಳ ಉದ್ಯಮೀಕರಣ ಎಂದರೆ ಸ್ಥಳೀಯ ಸಸ್ಯ ಸಂಪತ್ತನ್ನು ಉಳಿಸುವ ಕೆಲಸ ಎಂದೇ ತಿಳಿಯಬಹುದು. ಬಹುತೇಕ ಪಾನೀಯಗಳು ಸಾಂಪ್ರದಾಯಿಕ ಸಸ್ಯ ಮತ್ತು ಮರಗಳ ಉತ್ಪನ್ನಗಳಾಗಿರುವುದರಿಂದ ಇರುವ ಸಸ್ಯಗಳು ಉಳಿಯುತ್ತ ಹಾಗೂ ತಳಿಗಳ ಅಭಿವೃದ್ಧಿಯಾಗುತ್ತದೆ. ಮೇಲಾಗಿ ಋತುಮಾನಕ್ಕೆ





ತಕ್ಕುದಾದ ಸಸ್ಯ ಸಂಪನ್ಮೂಲವನ್ನು ಸಂರಕ್ಷಿಸಲು ಕೂಡ ನೆರವಾಗುತ್ತದೆ. ಉಪ್ಪಿನಕಾಯಿ ಉದ್ಯಮ ಬೆಳೆದರೆ ಮಾವು, ನಿಂಬೆ, ಹೆರಳೆ, ನೆಲ್ಲಿ ಮುಂತಾದ ಮರಗಳು ಉಳಿಯುತ್ತವೆ. ಮರ ಮುಟ್ಟು ಸಸ್ಯಗಳಿಗಿಂತ ಈ ಬಗೆಯ ಸಸ್ಯಗಳು ಹೆಚ್ಚು ಉತ್ಪಾದಕ ಸ್ವಭಾವದವುಗಳಾಗಿವೆ.

ಪರಿಸರ ರಕ್ಷಣೆ ಹೆಚ್ಚು ಜನರಿಗೆ ಅಲ್ಲದೆ ಬಡವರಿಗೆ, ಅದರಲ್ಲೂ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸುತ್ತದೆ. ನೀವು ದೊಡ್ಡ ಉದ್ಯಮಕ್ಕೆ ಹೋದರೆ ನಿಮ್ಮ ಸ್ಥಳೀಯ ಸಂಪನ್ಮೂಲ ಉದ್ಯಮಪತಿಯ ಲಾಭವಾಗಿ ಹೋಗುತ್ತದೆ. ಅದು ಸ್ಥಳದಲ್ಲೇ ಉಳಿದರೆ ನಿಮ್ಮ ಸಂಪತ್ತಾಗುತ್ತದೆ. ಆದರೆ ಈ ಸಂಪತ್ತನ್ನು ಇರುವ ಹಾಗೆ ಬಿಟ್ಟರೆ ಉಪಯೋಗವಿಲ್ಲ. ಅದನ್ನು ಪರಿಷ್ಕರಣೆ, ಅಭಿವೃದ್ಧಿ ಮತ್ತು ಹೊಸ ಮಾದರಿಗಳಲ್ಲಿ ರೂಪಿಸಬೇಕಾಗುತ್ತದೆ. ಆ ಜವಾಬ್ದಾರಿಯನ್ನು ಮಹಿಳೆಯರು ವಹಿಸಿಕೊಳ್ಳಬೇಕು.

**೫. ದೇಶೀಯ ಉತ್ಪಾದನಾ ಪದ್ಧತಿಯ ಪುನರುಜ್ಜೀವನ**

ಈ ಹೊತ್ತು ಜಾಗತೀಕರಣ ನಮ್ಮ ಸಾಂಪ್ರದಾಯಿಕ ಹಾಗೂ ದೇಶಿ ಉತ್ಪಾದನಾ ಮಾದರಿಗಳನ್ನು ನಾಶಮಾಡುತ್ತಿದೆ. ಇದರಿಂದ ನಮ್ಮ ಉತ್ಪಾದಕರು ನಿರುದ್ಯೋಗಿಗಳು ಮಾತ್ರವಲ್ಲ ಅನುತ್ಪಾದಕರು ಮತ್ತು ಬೇಡದವರಾಗಿ ಬಿಡುತ್ತಾರೆ. ಇಂಥ ಸಂದರ್ಭದಲ್ಲಿ ಅಗತ್ಯ ಬೇಕಾದ ಉತ್ಪಾದಕ ವಸ್ತುಗಳಿಗಾಗಿ ನಾವು ದೇಶೀಯ ಉತ್ಪನ್ನಗಳನ್ನು ಕಾಯ್ದಿರಿಸಿಕೊಳ್ಳಬೇಕಾಗುತ್ತದೆ. ಒಂದು ದೇಶ ಎಂದರೆ ಒಂದು ಭೂಗೋಳವೂ ಆಗಿದೆ. ಜನವೂ ಅದರಲ್ಲಿ ಸೇರಿದ್ದಾರೆ. ಭೂಭಾಗಕ್ಕೆ ಅನುಗುಣವಾದ ಸಂಪತ್ತು ಅಲ್ಲಿರುತ್ತದೆ. ಅದು ದೇಶದ ಬಹುಮುಖ್ಯ ಸಂಪತ್ತು. ಒಂದು ದೇಶ ರಫ್ತು ಮಾಡುವ ವಸ್ತುಗಳನ್ನು ಗಮನಿಸಿ, ಅವು ಆ ದೇಶದ ಭೂಗೋಳಕ್ಕೆ ಸಂಬಂಧಿಯಾಗಿರುತ್ತವೆ. ಭಾರತದ ಮೆಣಸು, ಏಲಕ್ಕಿ ಮುಂತಾದ ಸಾಂಬಾರ ಪದಾರ್ಥಗಳು ಬಹಳ ಕಾಲದಿಂದ ರಫ್ತು ಮಾಡುವ ಸಾಮಗ್ರಿಗಳಾಗಿದ್ದವು. ಇವುಗಳ ಗಮಲ ಹಿಡಿದೇ ಅರಬ್ ದೇಶಗಳ ಜನ ಈ ದೇಶಕ್ಕೆ ಬಂದರು.

ನಾವು ಇಂಥ ಉತ್ಪನ್ನಗಳನ್ನು ಯಥಾವಿಧಿ ಮಾರಿದರೆ ಆಗದು. ಅವುಗಳಿಂದ ಬೇರೆ ಬೇರೆ ಉತ್ಪನ್ನಗಳನ್ನು ತಯಾರಿಸಬೇಕು. ಅದಕ್ಕಾಗಿಯೆ ನಮ್ಮದೇ ಉತ್ಪಾದನಾ ಪದ್ಧತಿಗಳನ್ನು ಕಂಡುಕೊಳ್ಳಬೇಕು.





**೬. ನೈಸರ್ಗಿಕ ಸೌಂದರ್ಯವರ್ಧಕಗಳ ಶೋಧ**

ನಮ್ಮ ದೇಶದ ರಾಜ ಮನೆತನಗಳು ಸೌಂದರ್ಯ ವರ್ಧಕಗಳನ್ನು ಉತ್ಪಾದಿಸುವಲ್ಲಿ ಸಾಹಸದ ಕೆಲಸವನ್ನು ಮಾಡಿವೆ. ಹೊರಗಡೆಯಿಂದ ಸೌಂದರ್ಯ ವರ್ಧಕಗಳನ್ನು ತರಿಸಿಕೊಳ್ಳುವುದರ ಜೊತೆಗೆ ಸ್ಥಳೀಯ ಸಸ್ಯ ಹಾಗೂ

ಪ್ರಾಣಿ ಮೂಲದಿಂದ ಸೌಂದರ್ಯ ವರ್ಧಕಗಳನ್ನು ಉತ್ಪಾದಿಸಲು ನೆರವಾಗಿದ್ದಾರೆ. ಈ ಹೊತ್ತಿಗೂ ಅಂಥ ಉತ್ಪನ್ನಗಳು ಸಿಗುತ್ತವೆಯಾದರೂ ಅನೇಕ ಮಾದರಿಗಳು ಕಣ್ಮರೆಯಾಗಿವೆ.

ಇತ್ತೀಚಿನ ದಿನಗಳಲ್ಲಿ ನಮ್ಮ ಹೆಣ್ಣು ಮಕ್ಕಳಲ್ಲಿ ಸೌಂದರ್ಯ ವರ್ಧಕಗಳ ಅಪೇಕ್ಷೆ ಹೆಚ್ಚಾಗುತ್ತಿದೆ. ಆಧುನಿಕತೆಯ ಅನುಭೋಗಿ ಸಿದ್ಧಾಂತ ಬಂದ ಮೇಲಿಂದ ನಮ್ಮ ಹೆಣ್ಣು ಮಕ್ಕಳು ಹೆಚ್ಚು ಹೆಚ್ಚು ಆಕರ್ಷಕವಾಗಲು ಹವಣಿಸುತ್ತಿದ್ದಾರೆ. ಗಂಡಸರು ಹೆಂಗಸರ ಈ ಮನೋಧರ್ಮವನ್ನು ಶೋಷಣೆ ಮಾಡಲೋ ಎಂಬಂತೆ ಸೌಂದರ್ಯ ವರ್ಧಕಗಳ ಬಳಕೆಗೆ ಪೋಷಣೆ ಕೊಟ್ಟು ಹೆಣ್ಣನ್ನು ನಾನಾ ನೋಟ ಮತ್ತು ರುಚಿಗಳಲ್ಲಿ ಅನುಭವಿಸಲು ಕಾತರರಾಗಿದ್ದಾರೆ. ಇದರಿಂದಾಗಿ ಹೊರದೇಶದ ದುಬಾರಿ ಬೆಲೆಯ ಸೌಂದರ್ಯ ವರ್ಧಕಗಳು ಭಾರತೀಯ ಮಾರುಕಟ್ಟೆಗೆ ನುಗ್ಗುತ್ತಿವೆ. ಇದು ನಮ್ಮ ಸ್ಥಳೀಯ ಸಸ್ಯ ಸಂಪನ್ಮೂಲವನ್ನು ಬಳಸಿಕೊಂಡು ಸೌಂದರ್ಯ ವರ್ಧಕಗಳನ್ನು ಬೆಳೆಸಲು ಪ್ರೇರಣೆಯಾಗಿದೆ. ಜನಪದ ಪಾನೀಯಗಳಲ್ಲಿ ಕೆಲವು ಸೌಂದರ್ಯವರ್ಧಕಗಳಿವೆ, ಮತ್ತೆ ಕೆಲವನ್ನು ಶೋಧಿಸಿ ಬಳಸಿಕೊಂಡು ನಮ್ಮ ಆಮದು ಹಣವನ್ನು ಉಳಿಸಬಹುದು.

**೭. ಕಡಿಮೆ ಬಂಡವಾಳದಿಂದ ಹೆಚ್ಚಿನ ಉದ್ಯಮ**

ಜನಪದ ಪಾನೀಯಗಳಿಗೆ ಬೇಕಾದ ಕಚ್ಚಾ ವಸ್ತುಗಳು ಪರಿಸರದಿಂದ ಉಚಿತವಾಗಿದೆ. ಅದು ದೊರೆಯುತ್ತವೆ. ಪರಿಸರವು ನಿಸರ್ಗ ಕೊಟ್ಟ ಬಂಡವಾಳವಾಗಿದೆ. ಹಣದ ರೂಪದ, ಯಂತ್ರಗಳ ರೂಪದ ಅಥವಾ ಮತ್ತಾವುದೇ ರೂಪದ ಬಂಡವಾಳವನ್ನು ಹೂಡುವ ಅವಶ್ಯಕತೆಯಿಲ್ಲ. ಪ್ರಚಾರ ಮತ್ತು ಪ್ರಸಾರಕ್ಕಾಗಿ ಸ್ಥಳೀಯ ನೆಲೆಯಲ್ಲಿ ಸ್ವಲ್ಪ ಹಣ ತೊಡಗಿಸಬಹುದು. ಸ್ಥಳೀಯ ಉತ್ಪಾದಕರ ಸಹಕಾರ ಸಂಘಗಳನ್ನು ರಚಿಸಿಕೊಂಡರೆ ಪ್ರತಿಯೊಂದು ಸಣ್ಣ ಉತ್ಪಾದನಾ ಘಟಕದ ಪ್ರಚಾರ ಮತ್ತು ಪ್ರಸಾರ ಬಂಡವಾಳ ಕಡಿಮೆಯಾಗುತ್ತದೆ.

ಬೃಹತ್ ಉದ್ಯಮ ಮತ್ತು ರಫ್ತು ಆದಾಯದ ದೃಷ್ಟಿಯಿಂದ ಈ ಬಗೆಯ ಉದ್ಯಮಗಳು ಲಾಭದಾಯಕವಲ್ಲ ಎಂದು ಹೇಳುವವರಿದ್ದಾರೆ. ಆದರೆ ಮೂಲ





ಸಾಮಗ್ರಿ ಮತ್ತು ಬೃಹತ್ ಉತ್ಪಾದನಾ ವ್ಯವಸ್ಥೆಯ ಒಂದು ಮಧ್ಯಮ ವ್ಯವಸ್ಥೆಯನ್ನು ಉಳಿಸುವ ಹಾಗೂ ನೆಲದಲ್ಲಿರುವವರಿಗೆ ಉದ್ಯೋಗಾವಕಾಶ ಕಲ್ಪಿಸುವ ದೃಷ್ಟಿಯಿಂದಲಾದರೂ ಸ್ಥಳೀಯ ಸಣ್ಣ ಉತ್ಪಾದನಾ ವ್ಯವಸ್ಥೆಗೆ ಬೆಂಬಲ ಬರಬೇಕಾಗಿದೆ.

**೮. ಭಾರತೀಯ ವಿಶಿಷ್ಟತೆಗಳ ಅನ್ವೇಷಣೆ**

ಪ್ರತಿಯೊಂದು ಭೂಪ್ರದೇಶವೂ ತನ್ನದೇ ಆದ ಭಿನ್ನ ರೀತಿಯ ತಳಿಗಳನ್ನು ಹೊಂದಿರುತ್ತದೆ. ಇಂಥ ಸಸ್ಯ ತಳಿಗಳು ಇರುತ್ತವೆ ಎಂಬುದನ್ನು ಸಸ್ಯಶಾಸ್ತ್ರ ದೃಢಪಡಿಸಿದೆ. ಈ ಪ್ರಾದೇಶಿಕ ಭಿನ್ನತೆ ಎಂಬುದು ಒಂದು ವೈಶಿಷ್ಟ್ಯ. ಅದರ ಸಂಯೋಗ ಕೂಡ ಆ ಭೂ ಪ್ರದೇಶದ ವಾಯುಗುಣ, ಮಳೆ ಹಾಗೂ ಮತ್ತಿತರ ಪರಿಸ್ಥಿತಿಗಳಿಂದ ಕೂಡಿರುವುದಾಗಿದೆ. ಅವುಗಳಲ್ಲಿ ಏನೋ ಒಂದು ಸತ್ವ ಮತ್ತು ಸತ್ಯ ಇರುವುದು ಸಹಜವಾಗಿದೆ. ಅಂಥವುಗಳಿಂದ ಮಾನವನ ಅಭಿವೃದ್ಧಿ ಹಾಗೂ ಜಗತ್ತಿನ ಸಮತೋಲನ ಸಾಧ್ಯವೆಂಬ ಜ್ಞಾನ ಹುದುಗಿರಬಹುದು. ಈ ಬಗ್ಗೆ ಕಾಲದಿಂದ ಕಾಲಕ್ಕೆ ಅನುಭವ ಪ್ರಯೋಗ ಹಾಗೂ ಮತ್ತಿತರ ಅನ್ವೇಷಣೆಗಳು ಆಗಿರಲೂಬಹುದು. ಇಂಥ ವಿಶಿಷ್ಟತೆಗಳ ಹುಡುಕಾಟ ಮರೆತುಹೋದ ಅಥವ ಹೂತು ಹೋದ ಭಾರತದ ನೈಸರ್ಗಿಕ ಜ್ಞಾನದ ಹುಡುಕಾಟವಾಗಿರುತ್ತದೆ.

**೯) ಜ್ಞಾನಾನ್ವೇಷಣೆಗೆ ಪ್ರೇರಣೆ**

ಈ ಬಗೆಯ ಕೆಲಸ ಕೈ ಚೆಲ್ಲಿ ಕುಳಿತಿರುವ ಹೊಸ ಪೀಳಿಗೆಯ ಜನರನ್ನು ಎಚ್ಚರಿಸುವ ಕೆಲಸ ಕೂಡ ಆಗುತ್ತದೆ. ಹೊರಗಿನಿಂದ ನಮಗೆ ಆಧುನಿಕ ಜ್ಞಾನ ಸಿಗುತ್ತಿತ್ತು. ಜಾಗತಿಕ ಪ್ರಭುಗಳು ಈಗ ಜ್ಞಾನವನ್ನು ಹೊರಗಡೆಗೆ ಕೊಡುತ್ತಿಲ್ಲ. ಆ ಜ್ಞಾನದಿಂದ ತಯಾರಾದ ಸಿದ್ಧ ವಸ್ತುಗಳನ್ನಷ್ಟೇ ಹೊರದೇಶಗಳಿಗೆ ಮಾರುತ್ತಿದ್ದಾರೆ. ಆಸರ ಅಥವ ಅವರು ಬಳಸಿ ಬೇಡವಾದ ವಸ್ತುಗಳನ್ನು ತಿಪ್ಪೆಗೆ ಬಿಸಾಡಿದಂತೆ ನಮ್ಮ ದೇಶಗಳಿಗೆ ರಫ್ತು ಮಾಡುತ್ತಾರೆ. ನಮ್ಮಂಥ ದೇಶಗಳು ಆ ಮೂಲಕ ಉಳ್ಳವರ ದೇಶಗಳ ಕಸದ ತೊಟ್ಟಿಗಳಾಗುತ್ತಿವೆ. ಸಂಪತ್ತಿನ ಬಲ ಇರುವವರು ಈ ಕಸದ ನೆಲೆ ಬೇಡ ರಸ ಇರುವ ಕಡೆಗೆ ಹೋಗಿ ಬದುಕುತ್ತೇವೆ ಎನ್ನಬಹುದು. ಆದರೆ ಇಲ್ಲೇ ಅನಿವಾರ್ಯವೆಂಬಂತೆ ಬದುಕಬೇಕಾದವರ ಸ್ಥಿತಿ ಏನು? ಅವರಂತೂ ತಾವು ಇರುವ ಜಾಗವನ್ನು ಕಸದ ತೊಟ್ಟಿ ಮಾಡಿಕೊಳ್ಳಲಾರರು. ಕಸ ಎಸೆಯುವವರನ್ನು ಸುಮ್ಮನೆ ಬಿಡಲಾರರು. ಆದ ಕಾರಣ ಈ ದೇಶದ ಒಳಗೆ ಇಲ್ಲಿಯ ಮೂಲದ ಸಂಪತ್ತನ್ನು ಅಭಿವೃದ್ಧಿಪಡಿಸುವ ಜ್ಞಾನ ಶೋಧ ಹಾಗೂ ಅದರ ಮರು ಉತ್ಪಾದನೆ ಆಗಲೇಬೇಕಾಗಿದೆ.





**೧೦) ಹೆಣ್ಣು ಮಕ್ಕಳ ಕ್ರಿಯಾಶೀಲತೆ**

ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ದುಡಿಯುವ ಅಧಿಕಾರ ಗಂಡಿಗೆ ಮೀಸಲಾದಂತೆ ಇದೆ. ಹೆಣ್ಣನ್ನು ಒಳ ಮನೆಯ ಕೆಲಸಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಅವಳ ಸಾಮರ್ಥ್ಯ ಹಾಗೂ ನೈಪುಣ್ಯತೆಗಳು ಸಾಕಷ್ಟು

ಪ್ರಮಾಣದಲ್ಲಿ ಕ್ರಿಯಾಶೀಲವಾಗಿಲ್ಲ. ಮೂಲತಃ ಹೆಣ್ಣು ಸ್ಥಳೀಯಳು. ಅವಳು ನಿಂತ ನೆಲೆಯ ಸ್ಥಳೀಯತೆ. ಸ್ಥಳೀಯತೆಯನ್ನು ಅವಳಷ್ಟು ಚೆನ್ನಾಗಿ ಬಲ್ಲವರಿಲ್ಲ. ಸ್ಥಳೀಯ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಕೆಲಸವನ್ನು ಆಕೆಗೆ ವಹಿಸಿದರೆ ಅದನ್ನು ಒಂದು ಉತ್ತಮ ಉತ್ಪಾದನೆ ಭೂಮಿಕೆಯನ್ನಾಗಿ ರೂಪಿಸಬಲ್ಲಳು. ದುಡಿಯುವ ಸಂಸ್ಕೃತಿ ಅವಳಿಂದಲೇ ಪ್ರಚೋದಿತವಾಗಿರುವುದರಿಂದ ಅವಳ ಹೊಸ ರೀತಿಯ ತೊಡಗಿಸಿಕೊಳ್ಳುವಿಕೆ ಹೊಸ ತಲೆಮಾರಿನ ಮಕ್ಕಳು ಹಾಗೂ ಯುವಕರಲ್ಲಿ ಹೊಸ ಪ್ರೇರಣೆಗಳನ್ನು ಉಂಟು ಮಾಡಬಲ್ಲದು. ಸಂಸ್ಕೃತಿಯ ನೆಲೆಯಲ್ಲಿ ಸ್ಥಳೀಯ ಅಥವ ದೇಶವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ದೇಶ ಪ್ರೇಮ ಮತ್ತು ಶ್ರಮ ಸಂಸ್ಕೃತಿಯನ್ನು ಬೆಳೆಸಬಲ್ಲಳು. ಹೆಣ್ಣು ಸ್ಥಳೀಯ ಸಂಪನ್ಮೂಲದೊಡನೆ ಸಕ್ರಿಯವಾಗಿ ಚಲನಶೀಲವಾಗುವುದಕ್ಕೆ ನಾವು ಅವಕಾಶ ಕಲ್ಪಿಸಬೇಕು.



**ಆಧುನಿಕ ಸಂದರ್ಭದಲ್ಲಿ ಜನಪದ ದೇವತೆಗಳ ಅನಿವಾರ್ಯತೆ**

---

ಹಿಂದೆ ದೇವರು ಸೂತ್ರಧಾರ, ಮನುಷ್ಯ ಅವನ ಸೂತ್ರದಂತೆ ಆಡುವ ಗೊಂಬೆ ಎಂಬ ಅಭಿಪ್ರಾಯ ಇತ್ತು. ಈಗ ಮನುಷ್ಯ ಸೂತ್ರಧಾರ, ದೇವರು ಅವನು ಆಡಿಸುವ ಚಕ್ಕಳಗೊಂಬೆ ಎಂಬಂತಾಗಿದೆ. ಎಲ್ಲಿಂದೆಲ್ಲಿಗೆ ಬದಲಾವಣೆ.

ಶಕ್ತಿಕೇಂದ್ರದ ಬದಲಾವಣೆಯೊಂದಿಗೆ ಸಮಾಜದ ವ್ಯಕ್ತಿ, ವಸ್ತು ಮತ್ತು ಸಂದರ್ಭಗಳು ಬದಲುಗೊಂಡ ಸ್ಥಾನಮಾನವನ್ನು ಪಡೆಯುತ್ತವೆ. ಈಗ ಜಗತ್ತಿನ ಕೇಂದ್ರದಲ್ಲಿ ದೇವರು ಇಲ್ಲ ಮನುಷ್ಯ ಇದ್ದಾನೆ. ಆ ಮನುಷ್ಯರಲ್ಲೂ ಉದ್ಯಮಪತಿ ರಿಂಗ್ ಮಾಸ್ಟರ್ ಆಗಿದ್ದಾನೆ. ಬೆಂಗಳೂರಿನ ಯಶವಂತಪುರದ ಮಾರುಕಟ್ಟೆಯಲ್ಲಿ ಮಾರ್ವಾಡಿಗಳು, ಅಂಗಡಿ ಮಾಲೀಕರು, ದಲ್ಲಾಳಿಗಳು, ಹಮಾಲರು, ಮತ್ತು ರೈತರೆಲ್ಲ ಸೇರಿ ಅಲ್ಲಿ ಹೊಸದಾಗಿ ಹುಟ್ಟಿರುವ ಮೆಟ್ರೊ ಎಂಬ ಮಾರುಕಟ್ಟೆ ವಿರುದ್ಧ ಮೊನ್ನೆಯಿಂದ ಸಾಮೂಹಿಕ ಪ್ರತಿಭಟನೆ ಶುರು ಮಾಡಿದ್ದಾರೆ. ಆ ಮಾರುಕಟ್ಟೆ ಪತಿ ಜರ್ಮನಿಯವನಂತೆ.

ಇದೇ ಯಶವಂತಪುರ ಹಳೆಯ ಮಾರುಕಟ್ಟೆಯ ವ್ಯಾಪಾರಿಗಳು ಹಳ್ಳಿಯಿಂದ ಬಂದ ರೈತರನ್ನು ತಮ್ಮ ಕುತಂತ್ರ ಶಕ್ತಿಗೆ ಅನುಗುಣವಾಗಿ ಸಿಪ್ಪೆ ಸುಲಿದು ತಿನ್ನುತ್ತಿದ್ದರು. ಈಗ ಅವರನ್ನೂ ಸೇರಿಸಿಕೊಂಡಿದ್ದಾರೆ. ಅವರು ಹೇಳುವುದೇನು ಗೊತ್ತೆ ? ನಮ್ಮ ಮಾರುಕಟ್ಟೆಯ ಜೊತೆಗೆ ನಮ್ಮ ಸಂಸ್ಕೃತಿಯೂ ಹಾಳಾಗುತ್ತಿದೆ. ನಮ್ಮನ್ನು ಅವಲಂಬಿಸಿ ಈ ಪ್ರದೇಶದಲ್ಲಿ ಎಷ್ಟೋಂದು ದೇವಸ್ಥಾನಗಳು, ದೇವರುಗಳು, ಪೂಜಾರಿಗಳು ಮತ್ತು ನಮ್ಮಂಥ ಭಕ್ತರು ಇದ್ದರು. ಈ ಮೆಟ್ರೊ ಮಾರುಕಟ್ಟೆಯ ಹೊಡೆತದಿಂದ ನಾವುಗಳು ಕೆಲಕಾಲದವರೆಗಾದರೂ ಜೀವನ ಸಾಗಿಸಬಹುದು. ಆದರೆ ನಮ್ಮ ದೇವರುಗಳು ಎಕ್ಕುಟ್ಟಿ ಹೋಗುತ್ತವೆ. ಅವು ಹೋದರೆ ನಮ್ಮ ಪಾಪವನ್ನು ಯಾರ ತಲೆಮೇಲೆ





ಹೇರುವುದು ಎಂದು ಈ ಎಲ್ಲ ಸ್ಥಳೀಯ ವ್ಯಾಪಾರಿಗಳು ಕಂಗಾಲಾಗಿದ್ದಾರಂತೆ. ಅಂದರೆ ಈಗ ದೇವರು ನೇರವಾಗಿ ಮನುಷ್ಯನ ವ್ಯವಹಾರಕ್ಕೆ ಸಿಕ್ಕಿದ್ದಾನೆ. ಅವನನ್ನು ಉಳಿಸುವ ಇಲ್ಲವೆ ಬಿಡುವ ಸಾಮರ್ಥ್ಯ ಮನುಷ್ಯನ ಕೈಯಲ್ಲಿದೆ.

ಒಂದು ಕಾಲದಲ್ಲಿ ವಿಘ್ನೇಶ್ವರ ಮಿಂಚಿದ. ಒಂದು ವರ್ಗಕ್ಕೆ ಸೀಮಿತವಾಗಿದ್ದ ಅವನನ್ನು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಖಿಲ ಭಾರತ ಮಟ್ಟದ ದೇವರನ್ನಾಗಿ ಪ್ರಮೋಟ್ ಮಾಡಲಾಯಿತು. ಇವನಿಗಿಂತ ಮೊದಲು ಸ್ಥಳೀಯ ದೇವನಾಗಿದ್ದ ಹನುಮಂತ ರಾಮನ ಖಾಸಾ ಭಕ್ತನಾದ ಕಾರಣ ಅವನನ್ನು ಅಖಿಲ ಭಾರತ ಮಟ್ಟದ ದೇವರನ್ನಾಗಿ ಮೇಲೆತ್ತಲಾಯಿತು. ಎಷ್ಟೇ ಹಣವಂತನಾದರೂ ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ, ಮಂತ್ರಾಲಯದ ರಾಘವೇಂದ್ರ ಮತ್ತು ಕಾಶಿಯ ವಿಶ್ವನಾಥರು ಗಣಪತಿ ಮತ್ತು ಹನುಮಂತನ ಖ್ಯಾತಿಗೆ ಸಮ ಬರಲಿಲ್ಲ, ಅಂದರೆ ದೇಶದ ಜನ ಅವರ ಸ್ಥಾನಮಾನ ಮತ್ತು ಸಾಂಸ್ಕೃತಿಕ ರಾಜಕೀಯ ಎನ್ನುವುದು ದೇವರನ್ನು ಎಲ್ಲಿ ಮತ್ತು ಹೇಗೆ ಇಡಬೇಕೆಂಬುದನ್ನು ನಿರ್ಧರಿಸುತ್ತಾ ಬಂದಿದೆ. ಈಗ ಅಯೋಧ್ಯೆಯ ರಾಮನಿಗೆ ಶುಕ್ರದೆಶೆ ಬಂದಿದೆ. ಪಾಪ, ಯಾವಾಗ ಅವನನ್ನು ವಕ್ರದೆಸೆ ಕಡೆಗೆ ತಳ್ಳುತ್ತಾರೋ ಎಂಬ ಆತಂಕ ನನಗೆ. ಯಾಕೆಂದರೆ ನಾನೂ ಒಬ್ಬ ಅರ್ಧರಾಮ.

ರಾಮಚಂದ್ರೇಗೌಡನಾದ ನಾನು ಮೊದಲು ರಾಮ, ಆಮೇಲೆ ಚಂದ್ರ ಮತ್ತು ಕೊನೆಯಲ್ಲಿ ಗೌಡ ಆಗಿರುವುದರಿಂದ ಮೂಲ ರಾಮನ ಮೇಲಿನ ಕನಿಕರ ಮತ್ತು ನನ್ನ ಮೊದಲ ರಾಮನ ಅಸ್ತಿತ್ವದ ಪ್ರಶ್ನೆಯಾಗಿ ದೇವರುಗಳ ಬಗ್ಗೆ ಚರ್ಚೆಯನ್ನು ಕೈಗೆತ್ತಿಕೊಂಡಿದ್ದೇನೆ. ಆದರೆ ನೆನಪಿರಲಿ ಈ ಎಲ್ಲ ತಕರಾರುಗಳಲ್ಲಿ ಇರುವ ದೇವರುಗಳು ಅಖಿಲ ಭಾರತ ಮಟ್ಟದ ಶಿಷ್ಟ ದೇವತೆಗಳು. ನಮ್ಮ ಜನಪದ ದೇವತೆಗಳ ಬಗ್ಗೆ ಯಾವ ತಕರಾರೂ ಇಲ್ಲ, ಯಾಕೆಂದರೆ ರಾಮ, ಹನುಮಂತ ಮತ್ತು ಗಣೇಶರ ಹಾಗೆ ಈ ನಮ್ಮ ಜನಪದ ದೇವತೆಗಳು ಜನರ ಹೊರಗೆ ಗುಡಿಗಳಲ್ಲಿ ಇಲ್ಲ ಇವರು ನಮ್ಮ ನಿಮ್ಮ ಅಣ್ಣ-ತಮ್ಮಗಳಂತೆ ನಮ್ಮೊಳಗೆ ಇದ್ದಾರೆ. ಅವರ ಸಹೋದರತ್ವವನ್ನು ಮತ್ತೊಮ್ಮೆ ಅಸಲಿ ಮಾಡಿಕೊಳ್ಳುವುದೇ ಈ ನಮ್ಮ ವಿಚಾರ ಸಂಕಿರಣದ ಉದ್ದೇಶ. ಆದರೂ ದೇವರಿಗೆ ಹಿಂಸೆ, ಒತ್ತಡ ಕೊಡುತ್ತಿರುವವರ ಬಗ್ಗೆ ದೇವರನ್ನು ಬೇಟೆ ಯಾಡುತ್ತಿರುವವರ ಕುರಿತು ಭಯ ಇದೆ. ಆ ದೇವರನ್ನು ಬೇಟೆಯಾಡುತ್ತಿರುವವರು ಯಾವಾಗ ನಮ್ಮ ಪ್ರಾಣದೇವರ ಬೇಟೆಗೆ ಬರುತ್ತಾರೆ ಎಂದು.





ಈ ವಿಚಾರ ಸಂಕಿರಣದಲ್ಲಿ ನಾವು ಗಣಪತಿ, ಶಿವ, ಹನುಮಂತ ಮತ್ತು ಗಂಗೆ-ಗೌರಿಯರನ್ನು ಕುರಿತು ಮಾತನಾಡುತ್ತಿದ್ದೇವೆ. ಇವರ ಮೂಲ ಎಲ್ಲೇ ಇರಲಿ, ಇವರು ಜನರ ಮಧ್ಯೆ ಇರುವ ಜನಪದ ದೇವತೆಗಳು ಎಂಬುದು

ನಮ್ಮ ಗಮನಕ್ಕೆ ಬಂದಿದೆ. ಜಾನಪದ ತತ್ವವೇ ಹಾಗೆ, ಜನಪದದ ಮಧ್ಯೆ ಯಾವುದು ಕ್ರಿಯಾಶೀಲವಾಗಿರುತ್ತದೆ ಅದೆಲ್ಲ ಜಾನಪದವಾಗುತ್ತದೆ, ನಿಂತುಕೊಂಡದ್ದು ಶಿಷ್ಟಕ್ಕೆ ಹೋಗುತ್ತದೆ, ಮಲಗಿದ್ದು ಪಳಯುಳಿಕೆ ಆಗುತ್ತದೆ. ಪೂಜೆ ಮಾಡು ಎಂದಾಗ ಸೂಚಿಸುವ ಗಣಪತಿಯೆ ಬೇರೆ, ನಾನು ಕೊಡಲ್ಲ ಅಂದ್ರೆ ನನ್ ಗಣಪತಿ ಕೊಡನ ಎಂದಾಗ ಬರುವ ಅರ್ಥವೇ ಬೇರೆ. ಹನುಮ, ಹನುಮ ಎಂದು ಧ್ಯಾನಿಸುವಾಗ ಮನಸ್ಸಿಗೆ ಬರುವ ಹನುಮಂತನೆ ಬೇರೆ. 'ನೀನೆ ಕಣೋ ಹನ್ಮಂತ್ರಾಯ ಅನ್ನೊ ಹೊತ್ಗೆ... ಮ್ಯಾಲೆ ಪ್ರಸಾದ ಕೊಟ್ನಂತೆ' ಎನ್ನುವ ಗಾದೆ ಮಾತು ಧ್ವನಿಸುವ ಅರ್ಥವೇ ಬೇರೆ. ನೀವು ನಾವು ಪೂಜಿಸುವ ಚಾಮುಂಡಿಯೆ ಬೇರೆ, ಮಲೆಯ ಮಾದೇಶ್ವರ ಮೂದಲಿಸಿ ಬೈಯುವ ಚಾಮುಂಡಿಯೇ ಬೇರೆ. ಹಾಗೆ ಕೈಲಾಸದ ಗಂಗೆ ಗೌರಿ ಬೇರೆ ಮತ್ತು ನಮ್ಮ ಜನಪದರ ಮಧ್ಯೆ ಮುಂದಾಲೆ ಹಿಡಕೊಂಡು ಜಗಳವಾಡುವ ಗಂಗೆ ಗೌರಿಯರೇ ಬೇರೆ ಬಗೆಯವರು.

ಜಾತಿಯ ಮಡಿ, ಭಾಷೆಯ ಮಡಿ, ಊಟದ ಮಡಿ, ಈ ಎಲ್ಲ ಮನಸ್ಸು ಮುದುಡಿಕೊಂಡವರ ಆಚಾರಗಳು. ಜನಪದ ದೇವತೆಗಳು ನಾನು-ನೀವು ಎದುರಾದವರಂತೆ ಇರುತ್ತವೆ ಎನ್ನುವುದು ಅವು ನಮ್ಮ ಪಕ್ಕದಲ್ಲೇ ಇವೆ ಎನಿಸುತ್ತದೆ. ಯಾವಾಗ ಅವು ಅಧಿಕಾರ ರಾಜಕೀಯ ಮತ್ತು ಜಾತಿಯಿಂದ ದೂರಉಳಿದವೊ ಅಂದಿನಿಂದ ಮೂಲೆ ಸೇರಿದವು. ರಾಜಕೀಯ ಮಾಡುವ ದೇವತೆಗಳು ಈಗ ಮಠ-ಮಾನ್ಯ ಮತ್ತು ಕೇಂದ್ರದ ಸೌಲಭ್ಯಗಳಿಂದ ಶೃಂಗಾರಗೊಂಡು ಮೆರೆಯುತ್ತಿವೆ. ಮುಖ ತೋರಿಸಿಕೊಂಡು ಬದುಕುವವನೇ ಈ ಹೊತ್ತಿನ ನಾಯಕ ಆಗಿರುವಂತೆ ಮೆರವಣಿಗೆಯಲ್ಲಿ ಇರುವ ದೇವರುಗಳು ನಮ್ಮ ಮುಂದೆ ಮಿಂಚುತ್ತಿವೆ.

ಹಾಗಿದ್ದಲ್ಲಿ ಈ ನಮ್ಮ ಜನಪದ ದೇವತೆಗಳ ಸ್ಥಿತಿ ಮತ್ತು ಗತಿ ಏನು ಎಂಬುದನ್ನು ತಿಳಿದುಕೊಳ್ಳೋಣ.

೧. ಸ್ಥಿತಿ:

೧.ಸ್ಥಳ ಪ್ರತ್ಯೇಕತೆ ಇಲ್ಲ :

ಗರ್ಭಗುಡಿ ಸಂಸ್ಕೃತಿ - ಅಂಗಳ ಸಂಸ್ಕೃತಿ - ಹೊರಾಂಗಣ ಸಂಸ್ಕೃತಿ ಇಲ್ಲ.





ಎಂದರೆ ಬ್ರಾಹ್ಮಣರಿಗೆ ಒಂದು ಜಾಗ, ಶೂದ್ರರಿಗೆ ಒಂದು ಜಾಗ ಮತ್ತು ದಲಿತರಿಗೆ ಒಂದು ಜಾಗ ಎಂಬ ಸ್ಥಾನ - ಗುಡಿ ಈ ದೇವರುಗಳಿಗೆ ಇಲ್ಲ.

**೨. ಜನ ಪ್ರತ್ಯೇಕತೆ :**

ಪೂಜಾರಿ ಜಾತಿ - ಭಕ್ತ ಜಾತಿ ಸೇವೆ ಜಾತಿ ಎಂಬುವು ಇಲ್ಲ.

ಅಂದರೆ ಆದಾಯ ಮಾಡಿಕೊಳ್ಳುವವನು, ಕಾಣಿಕೆ ಕೊಡುವವನು ಮತ್ತು ಕಸ ತೆಗೆಯುವವನು ಎಂಬ ಜಾತಿ ನಿರ್ದೇಶನ ಇಲ್ಲ.

**೩. ಪ್ರದರ್ಶನ ಪ್ರತ್ಯೇಕತೆ :**

ಪೂಜೆಯಲ್ಲಿ ವೆರೈಟಿ ಮತ್ತು ರೇಟು ಫಿಕ್ಸ್ ಇಲ್ಲ.

ಅಂದರೆ, ಕಜ್ಜಾಯ ಪೂಜೆ ರೂ. ೨೫, ಪೊಂಗಲ್ ಪೂಜೆ ರೂ. ೨೦, ಚಿತ್ರಾನ್ನ ಪೂಜೆ ರೂ. ೧೦, ಮಸಾಲೆ ದೋಸೆ ಪೂಜೆ ರೂ. ೩೦, ಸೆಟ್ ದೋಸೆ ಪೂಜೆ ರೂ. ೧೫, ಮಂಗಳಾರತಿ ರೂ. ೫೦, ಬಿಲ್ವಾರತಿ ರೂ. ೧೦, ಹೀಗೆ ಇರುವುದಿಲ್ಲ.

ನಮ್ಮ ಹೋಟೆಲ್ ತಿಂಡಿ ಬೆಲೆಗಳ ಪಟ್ಟಿ, ದೇವಸ್ಥಾನದ ಪೂಜಾ ಸಾಮಗ್ರಿಗಳ ಪಟ್ಟಿ ಮತ್ತು ಅಂಗಡಿಯ ದವಸಧಾನ್ಯಗಳ ಪ್ರಕಟಣಾ July ಪಟ್ಟಿಯನ್ನು ಗಮನಿಸಿದರೆ ದೊಡ್ಡ ವ್ಯತ್ಯಾಸ ಇದೆ ಎಂದು ಅನಿಸುತ್ತದೆಯೆ ? ಈ ದೇವರ ಬಗ್ಗೆ ನಮ್ಮ ಅಭಿಪ್ರಾಯ ಏನು ? ಅಯ್ಯೋ ಪಾಪ ! ಜಗತ್ತೆಲ್ಲವನ್ನೂ ಕೊಟ್ಟ ಈ ದೇವರುಗಳು ಈ ಪೂಜಾರಿಗಳ ಕೈಗೆ ಸಿಕ್ಕಿ ಭಿಕ್ಷೆ ಎತ್ತುವಂತಾಯಿತೆ ? ಶಿವ-ಶಿವಾ !!.

**೪. ಶರಣಾಗತಿ :** ದೇವರಲ್ಲಿ ಶರಣು ಹೋಗಿ ತನ್ನನ್ನು ಕಳೆದುಕೊಳ್ಳುವುದಿಲ್ಲ.

ಬೇಡುವವನು ದೇವರಲ್ಲಿ ಒಂದು ಕುರುಹು ಕೇಳುತ್ತಾನೆ. ಸರಿಯಾದ ಸಮಯಕ್ಕೆ, ಸರಿಯಾದ ರೀತಿಯಲ್ಲಿ ಆ ಕುರುಹು ಮಾಡಿದವನು ದೇವರನ್ನು "ನೀನು ಸರಿಯಾಗಿ ಕುರುಹು ಕೊಡದಿದ್ದರೆ ನಿನ್ನ ಮುಖಕ್ಕೆ ಮೆಣಸಿನಕಾಯಿ ಹೊಗೆ ಹಾಕುತ್ತೇನೆ' ಎನ್ನುತ್ತಾನೆ.

**೫. ಮಾರುಕಟ್ಟೆ :** ಇಲ್ಲಿಯೆ ಪರಿಹಾರ ಸಿಗುವುದು ಬೇರೆ ಕಡೆ ಇಲ್ಲ ಎಂದು ಹೇಳದು.





ಎಂದರೆ ಯಾವುದೇ ಸಾಮಾನಿಗೂ ನಮ್ಮ ಅಂಗಡಿಗೆ ಬನ್ನಿ ಎಂದಂತೆ. ಒಳ್ಳೆಯ ಉದಾಹರಣೆ ಎಂದರೆ ವರ್ಷ ಭವಿಷ್ಯ ಪ್ರಕಟಿಸುವವರು ಆಯಾ ರಾಶಿಯ ದೋಷವನ್ನೂ ಹೇಳುತ್ತಾರೆ. ಅದಕ್ಕೆ ಪರಿಹಾರವಾಗಿ ಧರ್ಮಸ್ಥಳದ

ಮಂಜುನಾಥ, ಕುಕ್ಕೆ ಸುಬ್ರಹ್ಮಣ್ಯ, ತಿರುಪತಿ ತಿಮ್ಮಪ್ಪ ಮತ್ತು ರಾಘವೇಂದ್ರ ಸ್ವಾಮಿ ಕಡೆ ಹೋಗಿ ಎಂದು ಬರೆದಿರುತ್ತಾರೆ. ಯಾವ ಕಾರಣಕ್ಕೂ ನಮ್ಮೂರ ಕಾಳಮ್ಮ, ನಿಮ್ಮೂರ ಮಾರಮ್ಮ ಅಥವಾ ಪರವೂರ ಗ್ರಾಮದೇವತೆ ದೇವಮ್ಮನ ಕಡೆಗೆ ಹೋಗಿ ಎಂದು ಹೇಳುವುದಿಲ್ಲ. ಯಾಕೆಂದರೆ ಈ ದೇವರುಗಳೆಲ್ಲ ಮಾರುಕಟ್ಟೆಯನ್ನು ಕಳೆದುಕೊಂಡಿವೆ. ಈ ಬಗೆಯ ಮಾರುಕಟ್ಟೆ ನಡವಳಿಕೆಯನ್ನು ಸಾಂಸ್ಕೃತಿಕ ರಾಜಕೀಯ (Culture Politics) ಎಂದು ಕರೆಯುತ್ತೇವೆ. ಇತ್ತೀಚೆಗೆ ವ್ಯವಸಾಯಕ್ಕಿಂತ ಉದ್ಯೋಗ, ಉದ್ಯೋಗಕ್ಕಿಂತ ಮಾರುಕಟ್ಟೆ ಒಳ್ಳೆ ಉದ್ಯಮ ಆಗಿರುವುದರಿಂದ ಎಲ್ಲ ದೇವತೆಗಳ ಹೆಸರಿನಲ್ಲಿ ಎಲ್ಲಾ ಥರದ ಅಂಗಡಿಗಳೂ ಇವೆ. ಇನ್ನೂ ಇತ್ತೀಚೆಗೆ ತಮ್ಮ ತಮ್ಮ ಕುಲದೇವತೆಗಳ ಹೆಸರಿನಲ್ಲಿ ಹಂದಿಮಾಂಸದ ಹೋಟೆಲ್‌ಗಳು ಪ್ರಚಾರದಲ್ಲಿವೆ.

**೬. ವರ-ಶಾಪದಾನ :**

ಜನಪದ ದೇವತೆಗಳಲ್ಲಿ ವರ-ಶಾಪದಂಥ ಭಯಂಕರ ಆಯುಧಗಳು ಇಲ್ಲ. ಅವು ಏನಿದ್ದರೂ ಕಾಯಿಲೆ-ಕಸಾಲೆ ವಾಸಿ ಮಾಡುತ್ತವೆ. ಜನ ಹತ್ತಿರಕ್ಕೆ ಬರದಿದ್ದರೆ, ಸಣ್ಣ ಪುಟ್ಟ ಕಾಯಿಲೆ ಕಳಿಸುತ್ತವೆ. ಕ್ಯಾನ್ಸರ್ ಅಥವಾ ಏಡ್ಸ್ ಕಳಿಸುವ ಶಕ್ತಿ ಖಂಡಿತ ಇಲ್ಲ. ಇದೇನಿದ್ದರೂ ಅಂತರಾಷ್ಟ್ರೀಯ ದೇವತೆಗಳಿಗೆ ಸೇರಿದ ಅಧಿಕಾರ.

**೭. ಪ್ರದರ್ಶನ-ಪ್ರಚಾರ :**

ದೇವರು ಮತ್ತು ಭಕ್ತರ ಮಧ್ಯೆ ಮಧ್ಯವರ್ತಿಗಳು ಇರುವುದಿಲ್ಲ. ಹೇಳಿ-ಕೇಳಿ ಜನ ಬರುತ್ತಾರೆ. ತಮಗೆ ಕಂಡಂತೆ ಪೂಜೆ, ಕೊಟ್ಟಂತೆ ಕಾಣಿಕೆ ಅಷ್ಟೆ ಪೂಜಾರಿ. ಮೂಲದಲ್ಲಿ ಅಗಸ, ಕ್ಷೌರಿಕ, ಬಡಗಿ ಇತ್ಯಾದಿಗಳಿದ್ದರು.

**೮. ಅಮಾನವೀಯತೆ :**

ಮೂಢನಂಬಿಕೆಗಳು ಈ ದೇವರುಗಳ ಆಚರಣೆಯಲ್ಲಿ ಸೇರಿಕೊಂಡಿರುವುದರಿಂದ ಅಮಾನವೀಯ ನಡವಳಿಕೆಗಳಿವೆ.





**9. ಗತಿ :**

## ೧. ಅಯ್ಯೋ ಪಾಪ :

ಪಾರ್ವತಿ ಪರಮೇಶ್ವರರು ಇರುವ ಒಂಬತ್ತು ಕೋಟೆಗೆ ಅನ್ನಪಡಿ ಅಳೆದು ವಾಪಸಾಗುತ್ತಿದ್ದರು. ರಾತ್ರಿ ಸಮಯ ಒಂದು ಆರ್ತವಾದ ಗೋಳು ಕೇಳಿಸಿತು. ಪಾರ್ವತಿ ಅದೇನು ನೋಡ್ಡೋಣ ನಡೀರಿ ಅಂದಳು. ರಾತ್ರಿ ಸಮಯ, ಯಾವ ಪೀಡೆಯೊ, ಪಿಶಾಚಿಯೊ ನಡಿಯ ಮನೆಗೆ ಹೋಗೋಣ ಅಂದ ಶಿವ, ಪಾರ್ವತಿ ಕೇಳಲಿಲ್ಲ ನೋಡಿಯೇ ತೀರಬೇಕು ಎಂದಳು. ಆ ಅಳು ಬರುತ್ತಿರುವ ಜಾಗಕ್ಕೆ ಹೋಗಿ ನೋಡಿದರೆ ಅದೊಂದು ಸವೆದ ಸೌಟು, ಪಾರ್ವತಿ ಗೋಳು ಯಾಕೆ ಎಂದು ಕೇಳಿದಳು. ತನ್ನನ್ನು ಚನ್ನಾಗಿದ್ದಾಗ ಬಳಸಿಕೊಂಡು ಸವೆದ ಮೇಲೆ ಬಿಸಾಕಿದ್ದಾರೆ. ಇದು ನ್ಯಾಯವಾ ಎಂದು ಸೌಟು ಬಿಕ್ಕಿ ಬಿಕ್ಕಿ ಅಳುತ್ತಾ ಕೇಳಿತು. ಮನಕರಗಿದ ಪಾರ್ವತಿ ಆ ಸೌಟನ್ನು ಸುಂದರವಾದ ಹೆಣ್ಣನ್ನಾಗಿ ಮಾಡಿದಳು.

ಇದು ಜನಪದ ದೇವತೆಯ ಸ್ವಭಾವ. ಸೌಟು ತಪಸ್ಸು ಮಾಡಲಿಲ್ಲ, ವರ ಕೇಳಲಿಲ್ಲ ತನ್ನ ದುಃಖವನ್ನಷ್ಟೆ ತನ್ನ ಪಾಡಿಗೆ ತಾನು ತೋಡಿಕೊಂಡಿತು. ಆ ದುಃಖದ ಧ್ವನಿ ದೇವರಿಗೆ ಕೇಳಿತು ಎನ್ನುವ ವಿಷಯವೆ ಜನಪದ ದೇವತೆಯ ಹೃದಯ ಎಂಥದು ಎಂಬುದನ್ನು ತೋರಿಸುತ್ತದೆ.

## ೨. ತಗೊಂಡು ಹೋಗು

ಬಡವ ಕಾಡಿಗೆ ಹೋಗಿ ಸೌದೆ ತರುತ್ತಿದ್ದ. ಹೆಂಡತಿ ದೇವರಲ್ಲಿ ಬೇಡಿ ಏನಾದರೂ ದೊಡ್ಡದನ್ನು ತರ್ರಿ ಎಂದು ವರಾತು ಮಾಡುತ್ತಿದ್ದಳು. ಒಂದು ದಿನ ಮುದುಕನ ವೇಷದ ಶಿವ ಸಿಕ್ಕಿದ. ತಾತ ನನ್ನ ಹೆಂಡತಿಯ ಇರಾದೆ ತಡೀನಾರೆ ಏನಾದರೂ ವರಕೊಡು ಎಂದ. ವರಾಗಿರ ಅಂಥ ಏನೂ ನನ್ನ ಹತ್ತಿರ ಇಲ್ಲ, ಈ ಮೂರು ತೆಂಗಿನ ಕಾಯಿ ಇವೆ, ಕೊಡುತ್ತೇನೆ, ತೆಗೆದುಕೊಂಡು ಹೋಗಿ ಒಡಿ ನೀನು ಕೇಳಿದ್ದು ಬರುತ್ತೆ ಅಂದ.

ಬಡವ ಮನೆಗೆ ಬಂದು ಮನೆಗಿನ ಸಾರಿಸು, ಹಸೆಕಲ್ಲು ಸುದ್ದಿಮಾಡು ತೆಂಗಿನಕಾಯಿ ಒಡೆಯೋಣ, ಕೇಳಿದ್ದೆಲ್ಲ ಬರುತ್ತಂತೆ ಎಂದ. ಹೆಂಡತಿಗೆ ಒಡವೆಯ ಆಸೆ ಆಯಿತು. ರೀ ಒಡವೆ ಬರುವಾಂಗ ಕಾಯಿ ಒಡೆಯಿರಿ ಎಂದು ಒತ್ತಾಯ ಮಾಡತೊಡಗಿದಳು. ಬಡವನಿಗೆ ಸಿಟ್ಟು ಬಂತು. ತ...

ಬರಲಿ, ಸುಮ್ಮನೆ ಕೂರೆ ಅಂತ ಕಾಯಿ ಒಡೆದ. ಅವೇ ಬಂದು ಬಿಟ್ಟವು ಮನೆಯಲ್ಲೆಲ್ಲ. ಯಾರಾದರೂ ಮನೆಗೆ ಬಂದರೆ ನಾಚಿಕೆಯಾಗುತ್ತೆ ತ... ಎಲ್ಲಾ ಹೋಗಲಿ ಎಂದು ಒಡೀರಿ ಎಂದಳು. ಅವನದು ಸೇರಿ ಎಲ್ಲಾ ಹೋಗಿಬಿಟ್ಟವು. ಆಗ ಹೆಂಡತಿ ಅಯ್ಯೋ ಅವಿಲ್ಲೆ ಇದ್ರೆ ಹೆಂಗೆ, ಅವೆರಡೂ ಬರಲಿ ಸಾಕು ಅಂತ ಮೂರನೆ ಕಾಯಿ ಒಡೀರಿ ಅಂದಳು.

ದೇವರು ಇಲ್ಲಿ ದುರಾಸೆಯನ್ನು ಪರೀಕ್ಷಿಸಿದ್ದಾನೆ. ಶ್ರಮದಿಂದ ಬರುವ -ವ ಫಲ ದಕ್ಕುತ್ತದೆ. ಅನ್ಯಮಾರ್ಗದಿಂದ ಬರುವ ಫಲ ನಿಷ್ಪಲ ಎಂಬುದನ್ನು ತೋರಿಸಿದ್ದಾನೆ. ಆದರೂ ಅವನಿಗೆ ಬಡವನ ಇಷ್ಟ ಪೂರೈಸಬೇಕೆಂಬ - ಮನಸ್ಸು ಇದೆಯಲ್ಲಾ ಅದು ದೊಡ್ಡದು. ಬಡವನಿಗೆ ಏನಾದರೂ ಕೊಡಲು ಅವನ ಕಡೆಯಿಂದ ಏನನ್ನೂ ಬಯಸಲಿಲ್ಲವಲ್ಲ, ಈ ಹೊತ್ತಿನ ಪೂಜಾರಿಗಳು, ಧರ್ಮದರ್ಶಿಗಳು ಇಲ್ಲಿಂದ ಕಲಿಯುವುದು ಇದೆ ಅಲ್ಲವೆ ?

**೩. ಎಲ್ಲ ಬರಿ :**

ಜನಪದ ದೇವತೆಗಳು ಎಲ್ಲರನ್ನೂ ಕರೆಯುತ್ತವೆ. ಅವನವನ ಸಾಮರ್ಥ್ಯಕ್ಕೆ ತಕ್ಕಂತೆ ಪೂಜೆ ಮಾಡಬಹುದು. ಪೂಜೆಯನ್ನು ಆತ ಫಿಕ್ಸ್ ಮಾಡುವುದಿಲ್ಲ. ಈ ದೇವರುಗಳ ತೃಪ್ತಿಗಾಗಿ ಇಷ್ಟಪಟ್ಟವನು ೪ ಕಾಲಿನ ಬಲಿ, ೨ ಕಾಲಿನ ಬಲಿ, ಮೊಟ್ಟೆ ಬಲಿ, ಮೊಸರನ್ನ ತಳಿಗೆ ಪೂಜೆ, ಅದೂ ಇಲ್ಲದಿದ್ದರೆ ಐವತ್ತು ಪೈಸೆ ಒಂದು ರೂಪ ಹಾಕಬಹುದು. ಚಾಮುಂಡಿ ಬೆಟ್ಟದಲ್ಲಿ ಇದನ್ನು ನೀವು ನೋಡುವಿರಿ.

**೪. ನಿನ್ನ ಮುಂಡ ಮೋಯ್ತು :**

ದೇವರಿಗೆ ಹರಕೆ ಕಟ್ಟಿಕೊಂಡವಳ ಕೆಲಸ ಆಗಲಿಲ್ಲ ಎನ್ನಿ ಅಥವಾ ಅವಳಿಗೆ ನಿರಂತರ ಕಷ್ಟಗಳು ಬಂದವು ಅನ್ನಿ, ದೇವತೆಗೆ ಎಷ್ಟೇ ಬೇಡಿಕೊಂಡರೂ ಅವು ಪರಿಹಾರವಾಗಲಿಲ್ಲ ಎನ್ನಿ. ಆಗ ಸಿಟ್ಟುಗೊಂಡ ಅವಳು "ದೇವತೆಗೆ ನೀನೊಬ್ಬಳು ದೇವತೆ, ನೀನೂ ದೇವರ ನಿನ್ನ ಮುಂಡೆ ಮೋಚ'' ಎಂದು ಬೈಯುತ್ತಾಳೆ. ಈ ಥರ ರಾಘವೇಂದ್ರ ಸ್ವಾಮಿಗೆ, ಧರ್ಮಸ್ಥಳ ಮಂಜುನಾಥನಿಗೆ ಅಥವಾ ತಿರುಪತಿ ತಿಮ್ಮಪ್ಪನಿಗೆ ಬೈಯುವುದುಂಟಾ ! ಒಂದು ಪಕ್ಷ ಬೈದರೂ ಆ ದೇವರುಗಳು ಸುಮ್ಮನಾಗಬಹುದು, ಆದರೆ ಧರ್ಮದರ್ಶಿಗಳು, ಪೂಜಾರಿಗಳು ಮತ್ತು ಮಧ್ಯವರ್ತಿಗಳು ಸುಮ್ಮನಿದ್ದಾರಾ !!

**೫. ಇದ್ದದ್ದಾಯ್ತು :**

ನಮ್ಮ ಪ್ರಭುದೇವರುಗಳನ್ನು ನೋಡಿ. ಅವುಗಳಿಗೆ ಏನೇನು ಕೊಡಬೇಕು ಮತ್ತು ಬಾರದು ಎನ್ನುವ ಬಗ್ಗೆ ಪೂಜಾರಿಗಳು ಒಂದು ಲಿಸ್ಟ್ ಹಾಕಿರುತ್ತಾರೆ. ಆ ಅಂಶಗಳೆಲ್ಲಾ ಶುದ್ಧವಾದುವು ಮತ್ತು ಮೇಲ್ದರ್ಜೆಯವುಗಳಾಗಿರಬೇಕು. ಆದರೆ ನಮ್ಮ ಜನಪದ ದೇವತೆಯಾದ ಮಲೆಯ ಮಾದೇಶ್ವರನ ವಿಷಯ ಕೇಳಿ ಆತ ತನ್ನ ಪೂಜೆಗೆ, ತನ್ನ ತೃಪ್ತಿಗೆ ರಾಗಿ ಮುದ್ದೆ ಮತ್ತು ಸೀಗೆ ಸೊಪ್ಪಿನ ಸಾರು ಸಾಕು ಎನ್ನುತ್ತಾನೆ. ಅವನ ಪೂಜೆಗೆ ಒಬ್ಬ ಯಕಶ್ಚಿತ ಭಕ್ತ ಸಾಕು ಎನ್ನುತ್ತಾನೆ. ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ ಹುಟ್ಟಿ ಬೆಳೆದ ದೇವತೆಗಳಿವರು. ಶಿಷ್ಟರ ದೇವತೆಗಳು ಕಾರ್ಖಾನೆ ಸಿದ್ಧ ವಸ್ತುಗಳಂತೆ ರೆಡಿಮೇಡ್ ಮಾದರಿಗಳು, ಜನಪದ ದೇವತೆಗಳು ಜನರು ತಿದ್ದಿ-ತೀಡಿ ಉಳಿಸಿಕೊಂಡ ದೇವತೆಗಳು.

**೬. ಹಿಂಗೂ ಉಂಟಾ !**

ಬಾಲವಿರುವ ಹನುಮಂತ ಬಾಲ ಕಳಚಿಕೊಂಡು ರಾಮನ ಹಿಂದೆ ಬಿದ್ದ. ವಸ್ತುಸ್ಥಿತಿಯನ್ನು ಕಂಡು ಬೆರಗಾಗಿ ವಿಕಾಸದ ಶ್ರೇಷ್ಠತೆಯನ್ನು ಒಪ್ಪಿಕೊಂಡ. ರಾಮನನ್ನು ಹನುಮಂತ ಕಂಡಾಗ ಅವನಿಗೆ ಭಾರಿ ಅಶ್ಚರ್ಯವಾಯಿತು. ರಾಮ ತುಂಬಾ ಬಿಳಿ ವರ್ಣದವನಿದ್ದಾನೆ. ಬಾಲ ಉದುರಿ ಹೋಗಿದೆ. ಮುಖ ಸುಂದರವಾಗಿದೆ. ಕೈಯಲ್ಲಿ ತನ್ನ ಗದೆ ಎಂಬ ಆಯುಧಕ್ಕಿಂತ ಮುಂದುವರಿದ ಆಯುಧ ಇದೆ. ಇದೆಲ್ಲವನ್ನೂ ಕಂಡು ಪ್ರಕೃತಿಯಲ್ಲಿ ರಾಮ ನನಗಿಂತ ಹೆಚ್ಚು ವಿಕಾಸ ಹೊಂದಿದ್ದಾನೆ ಎನಿಸಿತು. ಇಂಥ ಬೆಳೆದ ಮನುಷ್ಯ ಮತ್ತು ಅವನ ಸಮೂಹದ ಜೊತೆಗೆ ಗುರುತಿಸಿಕೊಳ್ಳುವುದು ಉಚಿತ ಎನಿಸಿತು. ಅಂದಿನಿಂದ ಪ್ರಕೃತಿದತ್ತ ಆ ವೀರ ಸಾಂಸ್ಕೃತಿಕ ವಿಕಾಸದ ಪ್ರಭುವಿನೊಂದಿಗೆ ಜೊತೆಯಾದ. ಆತ ತಪ್ಪು ಮಾಡಲಿಲ್ಲ. ಸಹಜತೆಯನ್ನು ಗೌರವಿಸಿದ.

**೭. ಅವನತಿ :**

ಈ ಹೊತ್ತಿನ ಸಂದರ್ಭದಿಂದ ಜನಪದ ದೇವತೆಗಳ ಕೆಲವು ನಡೆವಳಿಕೆಗಳನ್ನು ಗಮನಿಸಿದಾಗ ಅವು ಎಷ್ಟೊಂದು ಕ್ರೂರ ಎನಿಸುತ್ತದೆ. ದೇವರಿಗೆ ತಲೆ ಕೊಡುವುದು, ಕೋಣನ ಬಲಿ ಕೊಡುವುದು, ಸಿಡಿ

ಆಡಿಸುವುದು, ಜಾತ್ರೆಯೊಂದರಲ್ಲಿ ಸಾವಿರಾರು ಪ್ರಾಣಿಗಳನ್ನು ಬಲಿ ಕೊಡುವುದು, ಬೆಂಕಿ ನುಂಗುವುದು, ತಲೆಮೇಲೆ ಬೆಂಕಿ ಸುರಿಯುವುದು... ಇವೆಲ್ಲ ವೈಚಾರಿಕ ಜಗತ್ತಿಗೆ ಅಮಾನವೀಯ ಎನಿಸುತ್ತದೆ. ಇದಕ್ಕೆ ಯಾರನ್ನು ನಿಂದಿಸಬೇಕು. ಜನರೇ ದೇವತೆಗಳನ್ನು ಹುಟ್ಟು ಹಾಕಿದವರು. ಅವರ ನಡವಳಿಕೆಗಳನ್ನೇ ದೇವರಿಗೂ ಆರೋಪಿಸಿದ್ದಾರೆ. ಜನ ಹಿಂದುಳಿದಿದ್ದರೆ ಅವರ ದೇವತೆಗಳ ನಡವಳಿಕೆಗಳೂ ಹಿಂದುಳಿದಿರುತ್ತವೆ. ನಮ್ಮಂತೆ ಆಧುನಿಕರಾದರೆ ನಮ್ಮ ದೇವತೆಗಳೂ ಸುಧಾರಿಸಿರುತ್ತವೆ. ಅಂದ ಮಾತ್ರಕ್ಕೆ ನಾವು ಮತ್ತು ನಮ್ಮ ದೈವಿಕ ನಡವಳಿಕೆಗಳು ಸರಿ ಎಂದು ಹೇಳಲಾಗದು. ಅನೇಕ ಶತಮಾನಗಳ ಪೌರೋಹಿತ್ಯ ೨೧ನೆಯ ಶತಮಾನದಲ್ಲಿ ಬದಲಾಗಿಲ್ಲ. ಸುಳ್ಳು ದೇವತೆಯಾದ ಸತ್ಯನಾರಾಯಣ ಪೂಜೆಯನ್ನು ಎಲ್ಲ ಜಾತಿಯ ಶ್ರೀಮಂತರು ಪೂಜಿಸುತ್ತಾರೆ. 'ದೇವರು' ಎಂಬ ಕೃತಿಯಲ್ಲಿ ನಮ್ಮ ಚಿಂತನಶೀಲ ಸಾಹಿತಿ ಪ್ರೊ. ಎ.ಎನ್.ಮೂರ್ತಿರಾಯರು ಸತ್ಯನಾರಾಯಣ ಒಬ್ಬ ಸುಳ್ಳು ದೇವರು ಎಂದು ಹೇಳಿರುತ್ತಾರೆ. ಆದರೆ ಪುಸ್ತಕ ಓದುವ, ವಿಜ್ಞಾನ ತಿಳಿದುಕೊಂಡಿರುವ ಎಷ್ಟು ಕತ್ತೆಗಳಿಗೆ ಇದು ಅರ್ಥವಾಗಿದೆ.

ಮಾರಿಗೆ ಕೋಣವನ್ನು ಕಡಿಯುವ ಸಂಪ್ರದಾಯ ವರ್ಣ ಸಂಕರಕ್ಕೆ ಪ್ರತಿಭಟನೆಯಾಗಿ ಮೇಲು ಜಾತಿಯವರು ಸೃಷ್ಟಿಸಿದ ಆಚರಣೆಯ ಹೊರತು ಜನ ಸಾಮಾನ್ಯರಲ್ಲ. ಬ್ರಾಹ್ಮಣ ಹುಡುಗಿಯನ್ನು ತಾನೂ ಬ್ರಾಹ್ಮಣನೆಂದು ಸುಳ್ಳು ಹೇಳಿ ಮದುವೆಯಾದ ಮಾದಿಗನೆ ಈ ಬಲಿಕೋಣ ಎಂಬುದನ್ನು ಮರೆಮಾಚಲಾಗುತ್ತದೆಯೆ, ವರ್ಷಕ್ಕೊಮ್ಮೆ ಜಾತ್ರೆ ಮಾಡಿ ಕುರಿ, ಕೋಳಿ ಬಲಿಕೊಟ್ಟು ಊಟ ಮಾಡುವ ಜನಸಾಮಾನ್ಯರ ಜೊತೆಗೆ ಪ್ರತಿದಿನವೂ ನೂರಾರು ಸಾವಿರಾರು ಕುರಿ-ಕೋಳಿ ಕಡಿದು ಹೆಂಡ ಮತ್ತು ಹೆಣ್ಣಿನೊಂದಿಗೆ ನಂಜಿಕೊಳ್ಳುವ ನಗರ ಸಂಸ್ಕೃತಿಯ ಖದೀಮರನ್ನು ಸಮದೂಗಿಸಲು ಸಾಧ್ಯವೆ?

ನಾವು ಈಗ ಪ್ರಸ್ತಾಪಕ್ಕೆ ತೆಗೆದುಕೊಳ್ಳುತ್ತಿರುವ ವಿಷಯ ''ಜಾತಿ, ಮತ ಮತ್ತು ಧರ್ಮದ ಹಿನ್ನೆಲೆಯಲ್ಲಿ ಜನಪದ ಮಹಾಕಾವ್ಯದ ನಾಯಕರು'' ಎಂಬುದು. ಈ ವಿಷಯದಲ್ಲಿ ಎರಡು ಚಿಂತನಾ ನೆಲೆಗಳು ಮುಖಾಮುಖಿಯಾಗುತ್ತಿವೆ. ಒಂದು, ಜಾತಿ, ಮತ ಮತ್ತು ಧರ್ಮ. ಎರಡು, ಜನಪದ ಮಹಾಕಾವ್ಯದ ನಾಯಕರು ಯಾಕೆ ಹೀಗೆ ನಾವು ವಿಷಯವನ್ನು ಯೋಚಿಸಿದೆವು ಎಂದರೆ ಮೊದಲ ಮೂರು ಮೂಲತಹ ಜೀವನ ದ್ರವ್ಯಗಳಾಗಿದ್ದವು. ಧರ್ಮ ಎಂಬುದು ಮೂಲತಹ ಒಂದು ನಂಬಿಕೆ. ನಂಬಿಕೆ ಎಂದರೆ ಹೌದು ಅಥವಾ ಇಲ್ಲ ಎಂಬ ಒಪ್ಪಿಗೆ. ಅಂದರೆ ಧರ್ಮ ನಂಬಿದರೆ ಉಂಟು ಇಲ್ಲದಿದ್ದರೆ ಇಲ್ಲ, ಆದರೆ ಧರ್ಮ ಇದೆ. ಅದು ಜೀವನ ಧರ್ಮ, ಅದು ಜನಪದರು ಅರ್ಥಾತ್ ಜನಸಾಮಾನ್ಯರು ತಮ್ಮ ದಿನ ನಿತ್ಯದ ಜೀವನದಲ್ಲಿ ಅನ್ನೋನ್ಯವಾಗಿ ಬದುಕಲು ಕಂಡುಕೊಂಡ ಒಂದು ವ್ಯವಸ್ಥೆ. ಆದರೆ ವ್ಯಕ್ತಿ ವೈಶಿಷ್ಟ್ಯ ಬಂದಂತೆ ಧರ್ಮ ಆ ವ್ಯಕ್ತಿಗಳ ನಂಬಿಕೆ, ತರ್ಕ ಅಥವಾ ವಿತರ್ಕಕ್ಕೆ ಅನುಗುಣವಾಗಿ ಜನರನ್ನು ಹಾಗೂ ಅವರ ಮನಸ್ಸನ್ನು ಭಾಗ ಮಾಡುವ ನಂಬಿಕೆಯಾಗಿ ಬಿಟ್ಟಿತಲ್ಲ ! ಏನು ಕಥೆ ?

ಈಗ ಧರ್ಮ ಎಂದರೆ ನಮ್ಮೆದುರಿಗೆ ಭಯೋತ್ಪಾದಕರೆ ಕಾಣಿಸುತ್ತಿದ್ದಾರಲ್ಲ, ಹಿಟ್ಲರ್ ಹೋದ, ಒಸಾಮ ಬಂದ, ಭಾರತದಲ್ಲಿ ಕೆಲವು ಜನ ಈಗ ಒಸಾಮ ಬಿನ್ ಲಾಡೆನ್ ಥರವೆ ಕಾಣುತ್ತಿದ್ದಾರೆ. ಅಂದರೆ ಧರ್ಮದೊಳಗಿಂದ ಶಿವ, ಶಕ್ತಿ ಮತ್ತು ಶುಭವನ್ನು ಸುಟ್ಟು ಹಾಕುವ ರಕ್ತ ಬೀಜಾಸುರರು ಹುಟ್ಟುತ್ತಿದ್ದಾರಲ್ಲ ಏನು ಮಾಡುವುದು. ಇವರನ್ನೇ ನಮ್ಮ ಧರ್ಮಾತ್ಮರು ಎಂದು ನಂಬುವುದೊ ಅಥವಾ ಬೇರೆ ಇದ್ದಾರೆ ಎಂಬುದನ್ನು ನಾವೀಗ ಹುಡುಕಬೇಕಾಗಿದೆ.

ಮತ ಎಂದರೆ ಸರಳವಾದ ಅರ್ಥದಲ್ಲಿ ಅಭಿಪ್ರಾಯ, ಗಂಭೀರ ಅರ್ಥದಲ್ಲಿ ಒಂದು ದೃಢವಾದ ಚಿಂತನೆ. ಪ್ರತಿಯೊಬ್ಬ ವ್ಯಕ್ತಿ ಸಮಾಜ ಹಾಗೂ ದೇಶಕ್ಕೆ ತನ್ನದೆಂಬ ಒಂದು ಅಭಿಪ್ರಾಯ ಅಥವಾ ಚಿಂತನೆ ಇರುತ್ತದೆ. ಆ ಬಹುಮತ ಅಥವಾ ಚಿಂತನೆಗಳನ್ನು ಇಟ್ಟುಕೊಂಡು ಬದುಕುವುದಿದೆಯಲ್ಲ ಅದನ್ನೇ ನಾವು ಜೀವನ ಧರ್ಮ ಎನ್ನುತ್ತೇವೆ. ಆದರೆ ಈಗ ಮತ ಎಂದ ತಕ್ಷಣ ಮತಿಗೆಟ್ಟವರೆ ನಮ್ಮ ಎದುರು ನಿಲ್ಲುತ್ತಾರೆ. ಅವರು ಚಿಂತನೆ ಮಾಡುತ್ತಿದ್ದಾರೆ ಅಥವಾ ಚಿತೆಯ ಸಿದ್ಧತೆ ನಡೆಸುತ್ತಿದ್ದಾರೆ ಎಂಬ ಅನುಮಾನ ಮೂಡುತ್ತಿದೆ.

ಇನ್ನು ಜಾತಿ, ಜಾತಿ ಎಂಬುದು ಲೇಟೆಸ್ಟ್ ಧರ್ಮ. ಇದು ಒಂದು ಜೀವನ ವಿಧಾನ ಅಥವಾ ಶ್ರದ್ಧೆಯಾದರೆ ಯಾರಿಗೂ ಅಪಾಯವಿಲ್ಲ. ತನ್ನ ಒಳಾವರಣ ಸೃಷ್ಟಿ ಮಾಡಿಕೊಳ್ಳಲು, ತನಗೆ ಇರುವ ಅನುಕೂಲಗಳನ್ನು ರಕ್ಷಿಸಿಕೊಳ್ಳಲು ಜಾತಿ ಎಂಬ ಧರ್ಮದ ಕಾಂಪೌಂಡ್ ಕಟ್ಟಿಕೊಂಡರೆ ತೊಂದರೆ ಇಲ್ಲ. ಆದರೆ ಸಿಕ್ಕ ಸಿಕ್ಕವರ ಮಧ್ಯೆ ಜಾತಿಯ ಗೋಡೆ ಹಾಕಿದರೆ ! ಸಿಕ್ಕ ಸಿಕ್ಕವರ ಸಂಪತ್ತನ್ನು ಆಕ್ರಮಿಸುವ ಸೂತ್ರಗಳನ್ನು ಮಾಡಿಕೊಂಡರೆ! ಅಂಥ ಜಾತಿ ಯಾರಿಗೆ ಬೇಕು. ಜಾತಿ ಪ್ರತಿಯೊಂದು ಭಾರತೀಯ ಪಂಗಡದ ಮಧ್ಯೆ ಹಾರದ ಗೋಡೆ ನಿರ್ಮಿಸಿಬಿಟ್ಟಿತಲ್ಲ, ಅದು ಎಂಥ ಪಾಪ ಮಾಡಿತು. ಆ ಪಾಪಕ್ಕೆ ನಾವು ಹೊರಜಗತ್ತಿನ ಮುಂದೆ ತಲೆ ತಗ್ಗಿಸಬೇಕಾಗಿದೆ. ಆದರೆ ಈಗ ಆ ಜಾತಿಯ ಮಂದಿ ನಾಚಿಕೆ ಇಲ್ಲದೆ ಹೇಸಿಗೆಯೆ ಶುದ್ಧ ಆಹಾರ ಅನ್ನುತ್ತಿದ್ದಾರಲ್ಲ!

ವಿಷಯದ ಒಳಗಡೆಗೆ ಬನ್ನಿ. ನಾವು ನಮ್ಮ ಈ ಹೊತ್ತಿನ ಚರ್ಚೆಗೆ ಮಂಟೇಸ್ವಾಮಿ, ಮಲೆಯ ಮಾದೇಶ್ವರ ಜುಂಜಪ್ಪ ಹಾಗೂ ಎಲ್ಲಮ್ಮ ಎಂಬ ನಮ್ಮ ಜನಪದ ಮಹಾಕಾವ್ಯದ ನಾಯಕರ ಜೀವನ ಇತಿಹಾಸವನ್ನು ತೆಗೆದುಕೊಂಡಿದ್ದೇವೆ. ಈ ಮಹಾಕಾವ್ಯಗಳು ಬರಹದ ಕವಿಗಳಂಥಲ್ಲ, ಈ ಮಹಾಕಾವ್ಯಗಳನ್ನು ಆಯಾ ಪಂಗಡದ ಇತಿಹಾಸ, ಸಂಸ್ಕೃತಿ ಅಥವಾ ಜೀವನಧರ ಎಂದು ಕರೆಯಬಹುದು. ಮಂಟೇಸ್ವಾಮಿ ಮತ್ತು ಮಲೆಯ ಮಾದೇವ ಹದಿನೇಳನೆಯ ಶತಮಾನದಲ್ಲಿ ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ನಡೆದಾಡಿದ ಶ್ರಮ ಸಂಸ್ಕೃತಿಯ ಚೇತನಗಳು. ಬಸವಣ್ಣನ ಕಲ್ಯಾಣದಿಂದ ಮಾತು ಕಲಿತು ತಮ್ಮ ನೆಲದ ಬುದ್ಧಿಯನ್ನು ಅರಳಿಸಿದವರು. ಮಂಟೇಸ್ವಾಮಿ ಯುದ್ಧ ಸಾಮಗ್ರಿಗಳಿಗಾಗಿ ಬಳಕೆಯಾಗುತ್ತಿದ್ದ ಕಬ್ಬಿಣವನ್ನು ಬೇಸಾಯದ ಉಪಕರಣದ ಸಲಕರಣೆಗೆ ಕೊಡಿ ಎಂದು ಅಂದಿನ ಕಬ್ಬಿಣ

ಉದ್ದಿಮೆದಾರರ ವಿರುದ್ಧ ಸೆಟೆದು ನಿಂತವನು. ಆ ಉದ್ದಿಮೆದಾರರ ಸಮಾಜದೊಳಗಿಂದ ಕೆಂಪಾಚಾರಿ ಎಂಬ ದೃಢ ಯುವಕನನ್ನು ಹೆಕ್ಕಿ ತೆಗೆದು ಸಿದ್ದಪ್ಪಾಜಿ ಎಂಬ ಹೆಸರಿನ ದೀಕ್ಷೆ ಕೊಟ್ಟು ಉದ್ದಿಮೆದಾರರಾದ ಪಾಂಚಾಳರ ವಿರುದ್ಧ ಸಮರ ಸಾರಿದವನು. ಅವನು ಬೇಸಾಯ ಬದುಕಿನ ಧರ್ಮಕ್ಕಾಗಿ ಹೋರಾಡಿದನೆ ಹೊರತು ಜಾತಿ, ಮತಗಳ ಧರ್ಮದ ಉತ್ಥಾನಕ್ಕಾಗಿ ಹೋರಾಡಿದವನಲ್ಲ. ತನ್ನ ಜಾತಿ, ಮತವನ್ನು ಆತ ಹೇಳಲಿಲ್ಲ. ಬೇರೆಯವರ ಜಾತಿ ಮತ ಏನೆಂದೂ ಕೇಳಲಿಲ್ಲ, ದುಡಿಯುವವರು ಎಲ್ಲ ಒಂದೇ ಎಂದು ಹೇಳುವುದಕ್ಕಾಗಿ ಅವನು 'ಒಕ್ಕಲು' ಗಳನ್ನು ಸಂಘಟಿಸಿದ. ಇವನ ಸಾಧನೆಯನ್ನು ಮನಃಪೂರ್ವಕವಾಗಿ ಮೆಚ್ಚಿದ ಆ ಸುತ್ತಿನ ವಾಸಿಗಳು ಹಾಡಿನ ಮೂಲಕ ಅವನ ಕಥೆಯನ್ನು ಉಳಿಸಿದರು; ಆಗ ಪೆನ್ನು, ಪೇಪರ್ ಇರಲಿಲ್ಲವಲ್ಲ.

ಮಲೆಯ ಮಾದೇಶ್ವರ ಒಬ್ಬ ಸಾಂಸ್ಕೃತಿಕ ನಾಯಕ. ಕಲ್ಯಾಣದಿಂದ ವ್ಯಕ್ತಿತ್ವ ಪಡೆದುಕೊಂಡು ಬಂದು, ವ್ಯಕ್ತಿತ್ವವನ್ನೇ ನಿರಾಕರಿಸಿದ್ದ ಜನರಿಗೆ ವ್ಯಕ್ತಿತ್ವ ಕೊಟ್ಟವನು. ಅವನು ಹೇಳುತ್ತಾನೆ "ನನ್ನ ಪೂಜೆಗೆ ಹಿಟ್ಟು ಮತ್ತು ಸೀಗೆ ಸೊಪ್ಪಿನ ಸಾರು ಸಾಕು? ಎಂದು, ಪಂಚಾಮೃತ, ಪಂಚಕಜ್ಜಾಯ, ಬೆಣ್ಣೆ ಸೇವೆ ಕೇಳಲಿಲ್ಲ. ಅದೇ ಶ್ರೇಷ್ಠ ಎಂಬುದನ್ನು ಒಪ್ಪಲಿಲ್ಲ. ನಮ್ಮ ರಾಗಿ ಮುದ್ದೆ ಹುರುಳಿಕಾಳು ಸಾರು, ಕರಿಮೀನು, ಸೀಗಡಿ ಸಾರು, ನಮಗೆ ರುಚಿ ಮತ್ತು ಅಭಿರುಚಿ ಎಂದು ಹೇಳಿಕೊಳ್ಳುವ ಸ್ವಾಭಿಮಾನವನ್ನು ಕಲಿಸಿದ. ಜೀವನ ಎಂದರೆ ಯಾರೋ ಕೆಲವರು ಹೇಳುವುದಲ್ಲ. ಪ್ರತಿಯೊಂದು ಪಂಗಡಕ್ಕೂ ಒಂದು ಜೀವನ ಇದೆ. ಅದು ಶ್ರೇಷ್ಟ ಹಾಗೂ ಸಮಾನ ಎಂಬ ಸಂದೇಶವನ್ನು ಕೊಟ್ಟು ಮಲೆಯ ಮಾದೇಶ್ವರನನ್ನು ಓದಿದ ನನಗೆ ಶ್ರೀ ಹೆಚ್. ಡಿ. ದೇವೇಗೌಡರು ರಾಷ್ಟ್ರದ ಅಶೋಕ ಹೋಟೆಲ್ ಗಳಲ್ಲಿ ರಾಗಿ ಮುದ್ದೆ ಊಟವನ್ನು ಜಾರಿಗೆ ತಂದ ನಿಲುವಿನ ಬಗ್ಗೆ ನನ್ನಲ್ಲಿ ಹೆಮ್ಮೆ ಹುಟ್ಟುತ್ತದೆ. ನಾವು ತಿನ್ನುವುದು ಏನೇ ಇದ್ದರೂ ಹೊಲಸಲ್ಲ. ನಾವು ಬದುಕುವ ಬದುಕು ಯಾವುದೇ ಮಾದರಿಯದಿದ್ದರೂ ಅದು ಕೀಳಲ್ಲ. ನಾವು ನಂಬಿರುವ ಧರ್ಮ ಎಂಥದೇ ಇರಲಿ ಅದು ಅಪಮಾನವಲ್ಲ ಎಂಬ ಸಾರ್ವಕಾಲಿಕ ಹಾಗೂ ಸರ್ವಜನ ಹಿತದ ಒಂದು ಸಂದೇಶವನ್ನು ಮಲೆಯ ಮಾದೇಶ್ವರ ನಮಗೆ ಕೊಟ್ಟಿದ್ದಾನೆ. ನಮ್ಮ ಈ ಹೊತ್ತಿಗೆ ಜಾತಿ, ಮತ ಮತ್ತು ಧರ್ಮ ಎಂಥ ಸರಕು ಎಂದು ಅಣಕಿಸುತ್ತಿರುವಂತಿದೆಯಲ್ಲವೆ ?

ಜುಂಜಪ್ಪನ ಕಾವ್ಯ ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ಕಾಡುಗೊಲ್ಲರಲ್ಲಿ ಹಾಗೂ ಮ್ಯಾಸಬೇಡರಲ್ಲಿ ತಮ್ಮ ಪೂರ್ವಾಪರ ಸಂಸ್ಕೃತಿ ಇತಿಹಾಸವಾಗಿ ಹಾಡಲ್ಪಟ್ಟಿದೆ.

ಜುಂಜಪ್ಪ ತನ್ನ ದನಗಳನ್ನು ಉಳಿಸಿಕೊಳ್ಳುವ ಕಾರಣಕ್ಕೆ ಹೋರಾಟ ನಡೆಸುತ್ತಾನೆ. ಅಂದರೆ ತನ್ನ ಆರ್ಥಿಕ ಉತ್ಪತ್ತಿಯ ಸಂರಕ್ಷಣೆಯ ಕೆಲಸ ಇದು. ಅಲ್ಲಿ ಅವನಿಗೆ ಜಾತಿ, ಮತ ಎಂಬುವದು ಇಲ್ಲ. ನೆನೆಸಿಕೊಳ್ಳುವ ಹಾಗೂ ಸಹಾಯ ಮಡುವ ದೈವಗಳು ಇವೆ. ಆರ್ಥಿಕ ಉತ್ಪನ್ನವನ್ನು ಬದುಕಿಗೆ ವ್ಯವಸ್ಥೆ ಮಾಡಿಕೊಳ್ಳುವುದೇ ಸಂಸ್ಕೃತಿ. ಅದರ ಅನುಕರಣೆಯೇ ಧರ್ಮ ಎಂದು ಈ ಕಾವ್ಯ ಹೇಳುತ್ತದೆ. ಆಕಾಶದಿಂದ, ಅನ್ಯಲೋಕ ಚಟುವಟಿಕೆಯಿಂದ ಧರ್ಮವನ್ನು ಕಟ್ಟಿಕೊಳ್ಳಲು ಹೋಗುವುದಿಲ್ಲ.

ಎಲ್ಲಮ್ಮ ಉತ್ತರ ಕರ್ನಾಟಕದ ಜನಮನದಲ್ಲಿ ನೆಲೆಸಿರುವ ಮಾತೃ ದೇವತೆ. ಮೇಲು ಜಾತಿ ಧರ್ಮಕ್ಕೆ ಅವಳು ಭೋಗವಸ್ತು ಇರಬಹುದು. ಎಲ್ಲ ತಳನೆಲೆಯ ಜನರಿಗೆ ಮಾತೃ ದೇವತೆ. ಅವಳ ನೆಲೆ ಬಡವರ ಮನೋರೋಗವನ್ನು ನಿವಾರಿಸುವ ಚಿಕಿತ್ಸಾಲಯ. ಮಾಂತ್ರಿಕ ಧರ್ಮದ ಮೂಲದಿಂದ ಉದ್ಭವವಾದ ಈ ದೇವತೆ ಅಂದಿನ ಮಹಾ ವೈದ್ಯೆ. ಆದರೆ ಶ್ರೀಮಂತರು ಮತ್ತು ಮೇಲು ಜಾತಿಯವರು ಕುಡಿಯುವ ನೀರಿಗೆ ಸಗಣಿ ಕಲಸಿದಂತೆ ಅಲ್ಲಿಗೆ ದೇವದಾಸಿ ಪದ್ಧತಿಯನ್ನು ತಂದು ಹಾಕಿದರು. ಇವರ ಭೋಗದ ಚಟ ಎಲ್ಲಮ್ಮ ದೇವಿಯನ್ನು ವೇಶ್ಯಾವಾಟಿಕೆ ನಡೆಸುವ ತಲೆಹಿಡುಕಿಯನ್ನಾಗಿ ಮಾಡಿತು.

ಈ ಮಹಾಕಾವ್ಯ ಮತ್ತು ಅಲ್ಲಿನ ನಾಯಕರ ಬಗ್ಗೆ ಇಷ್ಟೆಲ್ಲಾ ಹೇಳಲು ಇದೆಯೆ ಎಂದು ಕೇಳುವವರೆ ಈಗ ಜಾಸ್ತಿ, ಯಾಕಂದರೆ ಇವರ ಕಣ್ಣ ಮೇಲೆ ಪಾಶ್ಚಾತ್ಯ 'ಆಧುನಿಕತೆ' ಎಂಬ ಪೊರೆ ಬೆಳೆದಿದೆ. ಅದು ಜ್ಞಾನ, ನಮ್ಮದೆಲ್ಲ ಅಜ್ಞಾನ ಎಂಬ ಮರೆವಿಗೆ ಬಿದ್ದು ನರಳುತ್ತಿದ್ದಾರೆ. ಓಡುವವನಿಗೆ ನೆಲದ ಮೇಲೆ ನಿಂತ ಅನುಭವವಾಗುವುದಿಲ್ಲ; ಉಳುವವನಿಗೆ ಮಾತ್ರ ಗೊತ್ತು ನೆಲದ ಸತ್ವ ಎಂಥದ್ದು ಅಂತ. ಈ ಜನರಿಗೆ ನಮ್ಮದೆಂಬುದೆಲ್ಲ 'ಪ್ರಾಕೃತ' ಹೊರಗಿನಿಂದ ಬರುವುದು ಪ್ರಕೃತ ಸೃಷ್ಟಿ ಪುನರ್ ಸೃಷ್ಟಿಯ ಬಗ್ಗೆ ಕಾಳಜಿಯೇ ಇಲ್ಲ. ನಮ್ಮ ವಶಿಷ್ಠನಿಗೆ ಒಬ್ಬ ವಿಶ್ವಾಮಿತ್ರ ಇದ್ದ. ಅದು ಈಗ ಯಾಕೆ ಸಾಧ್ಯವಾಗುತ್ತಿಲ್ಲ ಎಂಬ ಅರಿವು ಇಲ್ಲ, ಈಗ ಪಾಶ್ಚಾತ್ಯ ಎಂಬುದು ವಶಿಷ್ಠ, ಅವನ ಕಡೆಯಿಂದ ಜ್ಞಾನ ಹಂಚಿಕೆಯಾಗುತ್ತಿಲ್ಲ. ಅವನು ನಮಗೆ ತೀರ್ಥ ಮತ್ತು ಪ್ರಸಾದ ಕೊಡುತ್ತಿದ್ದಾನೆ. ನಾವೇ ಅದನ್ನು ತಯಾರು ಮಾಡುವುದನ್ನು ಕಲಿಸುತ್ತಿಲ್ಲ. ಯಾಕೆಂದರೆ ಮಾರಾಟಮಾಡಿ ಬದುಕುವವರು ಅದರ ಗುಟ್ಟನ್ನು ಬೇರೆಯವರಿಗೆ ಕೊಡಬಾರದು. ಜಾಗತೀಕರಣ ಬರುತ್ತಿರುವುದು ಇಂಥ ರೂಪದಲ್ಲಿಯೆ.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಆಧುನಿಕತೆ ಹೊರಗಿನಿಂದ ಬರುವಾಗ ಅದು ಜ್ಞಾನ ಮಾದರಿಯಾಗಿ ಬಂತು. ಬಂತು. ಅದನ್ನು ಬಳಸಿಕೊಂಡು ನಮ್ಮಲ್ಲಿ ವ್ಯಕ್ತಿತ್ವಗಳು ಸಿದ್ಧವಾದವು. ಹಾಗೆಯೇ ವಸ್ತುಗಳೂ ಸಿದ್ಧವಾದವು. ಪಾಶ್ಚಾತ್ಯ ಆಧುನಿಕ ಜ್ಞಾನದಿಂದ ನೆಹರೂ, ವಲ್ಲಭಬಾಯಿ, ಗಾಂಧಿ, ಲೋಹಿಯಾ, ಅಂಬೇಡ್ಕರ್ ಮಹಾನ್ ವ್ಯಕ್ತಿತ್ವಗಳಾಗಿ ನಿರ್ಮಾಣಗೊಂಡರು. ನಮ್ಮಲ್ಲಿ ಆಧುನಿಕ ವಿಜ್ಞಾನದ ಜ್ಞಾನವನ್ನು ಪಡೆದು ಕೈಗಾರಿಕೆಗಳು ಹುಟ್ಟಿ, ನಮ್ಮ ಕಾರ್ಮಿಕರನ್ನು ಬಳಸಿಕೊಂಡು ನಮ್ಮವೆಂಬ ವಸ್ತುಗಳು ಸಿದ್ಧವಾದವು. ಆದರೆ ಈಗ ಆಧುನಿಕವೆಂಬ ಜಾಗತೀಕರಣ ಮೂಲ ಜ್ಞಾನವನ್ನು ಕೊಡುತ್ತಿಲ್ಲ, ಸಿದ್ಧವಸ್ತುಗಳನ್ನು ಮಾತ್ರ ಮಾರುಕಟ್ಟೆಗೆ ಬಿಡುತ್ತಿದೆ. ಇದರ ಉದ್ದೇಶ ಏನು ? ಲಾಭ ಮಾಡುವ ಏಕೈಕ ಗುರಿ, ಅಷ್ಟೆ. ಈ ವಸ್ತುಗಳು ಕೂಡ ದುಬಾರಿ. ಇವನ್ನು ನಮ್ಮ ಶ್ರೀಮಂತ ಜಾತಿ, ವರ್ಗದವರು ಸುಲಭವಾಗಿ ಕೊಳ್ಳಬಹುದು. ಬಂಡವಾಳದ ಮುಖವನ್ನೇ ಕಾಣದ ಕೆಳ ಹಾಗೂ ದಲಿತರು ಯಾವ ಬಂಡವಾಳ ತಂದು ಈ ದುಬಾರಿ ವಸ್ತುಗಳನ್ನು ಕೊಳ್ಳುತ್ತಾರೆ. ನಮ್ಮ ಜ್ಞಾನ ಉತ್ಪಾದನೆಗೆ ತೊಡಗದಿದ್ದರೆ ಆದಾಯ ಬರುವುದು ಎಲ್ಲಿಂದ ? ನಮಗೆ ಮಾರಲು ಯಾವುದಾದರೂ ಇದ್ದರೆ ತಾನೆ ಹಣ ಬರುವುದು. ಆದ್ದರಿಂದ ನಾವು ನಮ್ಮ ಎಲ್ಲ ಭೂಸಂಪತ್ತನ್ನು ಮಾರಿ ಜಾಗತಿಕ ಪ್ರಭುಗಳ ಮಾಲುಗಳನ್ನು ಖರೀದಿಸಲು ಹೊರಟಿದ್ದೇವೆ. ಅಂದರೆ ಈ ದೇಶ ಮಾರಾಟಕ್ಕೆ ಸಿದ್ಧವಾಗಿದೆ ಎಂದು ತಾನೆ !

ಈ ಸಂದರ್ಭದಲ್ಲಿ ನಾವು ಸೃಜನಶೀಲರಾಗಲು ನಮ್ಮ ಒಳಗಿನಿಂದ ನಮ್ಮದೆಂಬ ಜ್ಞಾನವನ್ನು ಹೆಕ್ಕಿ ತೆಗೆದು ಜಾತಿ, ಮತ ಮತ್ತು ಮೂರ್ಖ ಧರ್ಮದ ಕೊಳೆಯನ್ನು ಚೆಲ್ಲಿ ಎಲ್ಲರೂ ಪ್ರಗತಿ ಹೊಂದುವ ತತ್ವ ಚಿಂತನೆಯಲ್ಲಿ ತೊಡಗಬೇಕಾಗಿದೆ. ಅದು ನಮ್ಮ ಜನಪದ ಮಹಾಕಾವ್ಯಗಳೆಂಬ ನಮ್ಮ ಸಂಸ್ಕೃತಿಯಲ್ಲಿ ಸ್ವಲ್ಪ ಮಟ್ಟಿಗಾದರೂ ಸಿಗುತ್ತಿದ್ದರೆ ಅಥವಾ ಅಲ್ಲಿಂದ ಸಮಕಾಲೀನ ಚಿಂತನೆಗೆ ಬೆಳಕು ಕಾಣುತ್ತಿದ್ದರೆ ಅದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕಾಗಿದೆ. ಇಂಥ ಹೊಸ ಜ್ಞಾನದ ಹುಡುಕಾಟದ ಪ್ರಯತ್ನಕ್ಕಾಗಿ ಈ ಹೊತ್ತು ಇಂಥ ವಿಚಾರ ಸಂಕಿರಣ ಏರ್ಪಡಿಸಿದ್ದೇವೆ.

ನಮ್ಮ ಮನೆಯೊಳಗೆ ಜ್ಞಾನದ ಸದ್ದು ಕೇಳುತ್ತಿದೆ. ನಮ್ಮ ಉರಿವ ಹಣತೆಗಳ ಎಣ್ಣೆ ತೀರಿಲ್ಲ, ನಮ್ಮ ಉರಿವ ಒಲೆಗಳ ಬೆಂಕಿ ಆರಿಲ್ಲ; ನಾವಿನ್ನು ಉಸಿರಾಡುತ್ತಿದ್ದೇವೆ; ಈ ಜನಪದ ಮಹಾಕಾವ್ಯಗಳು ಹೇಳುತ್ತಿವೆ. ''ಸತ್ತವರು ನಾವಲ್ಲ ನೀವೆಂದು ಹೇಳುತ್ತಿವೆ''.

ಜ್ಞಾನದ ಸ್ಫೋಟ ಕಾರ್ಖಾನೆಯ ಒಳಗಿಂದ ಆಗುವುದಿಲ್ಲ, ಸೃಜನಶೀಲತೆಗೆ ಎದ್ದು ನಿಂತ ಜನರಿಂದ ಆಗುತ್ತದೆ. ಇದು ದೇಶ ಕಟ್ಟುವ ಮಾತಲ್ಲ. ಜ್ಞಾನವನ್ನು ಕಟ್ಟುವ ಮಾತು. ಬರೀ ದೇಶ ಕಟ್ಟುತ್ತೇನೆ ಎನ್ನುವವನು ರಾಕ್ಷಸದಾಹದ ರಾಜ, ಚಕ್ರವರ್ತಿ, ಪ್ರಧಾನಿ ಅಥವಾ ರಾಜಕೀಯ ಪಕ್ಷ. ನಮ್ಮ ದೇಶದಲ್ಲಿ ಬಹುಬೇಗನೆ ಈ ಜಾಗ ಆಕ್ರಮಿಸುವುದು ಜಾತಿ. ಅದರಲ್ಲಿ ಮುಂಚೂಣಿಯಲ್ಲಿ ಇರುವ ಜಾತಿ. ಆದ್ದರಿಂದ ನಮ್ಮ ಕಟ್ಟುವ ಕ್ರಿಯೆ, ಸೃಷ್ಠಿಸುವ ದಾಹ “ಮಹಾರಾಷ್ಟ್ರ' ಮತ್ತು "ಮಹಾನ್ ನಾಯಕ"ನನ್ನು ಸೃಷ್ಟಿಸುವ ಹುಂಬತನದಿಂದ ಕೂಡಿರಬಾರದು. ಒಟ್ಟು ಜನರನ್ನೇ ಸೃಜನಶೀಲತೆಯಲ್ಲಿ ತೊಡಗಿಸುವಂತಿರಬೇಕು. ಮಂಟೇಸ್ವಾಮಿ, ಮಲೆಯ ಮಾದೇಶ್ವರ ಕಾವ್ಯವನ್ನು ಹಗಲು ರಾತ್ರಿ ಹಾಗೂ ಹಲವು ರಾತ್ರಿಗಳಲ್ಲಿ ಹಾಡುತ್ತಾರಲ್ಲ ಅವರ ಹಾಗೆ.

ಮಾನವನ ಆರಂಭ ಜೀವನದಲ್ಲಿ ಸಂಗೀತ ಮತ್ತು ಸಾಹಿತ್ಯವು ಅಖಂಡವಾಗಿದ್ದವು. ಸಂಗೀತ ಮತ್ತು ಸಾಹಿತ್ಯದ ಹೊರಗೆ ಮನುಷ್ಯ ಇರಲೇ ಇಲ್ಲ. ಸಂಗೀತ ಮತ್ತು ಸಾಹಿತ್ಯ ಬೇರೆ ಬೇರೆ ಭಾಗಗಳಾಗಿರಲಿಲ್ಲ. ಸೊಲ್ಲು ಸಂಗೀತ, ಹಾಡು ಸಾಹಿತ್ಯವಾಗಿತ್ತು. ಧ್ವನಿ ಎತ್ತಿದರೆ ಸಂಗೀತ, ಧ್ಯಾನ ಮಾಡಿದರೆ ಸಾಹಿತ್ಯ ಸುರಿಸುತ್ತಿದ್ದವು. ಪ್ರತಿ ಮನೆಯೂ ಸಂಗೀತ- ಸಾಹಿತ್ಯದ ನೆಲೆಯಾಗಿದ್ದವು. ಮನೆಯ ಒಳ ಹೊರಗೆ ಮನಬಿಚ್ಚಿ ಎದೆ ತುಂಬಿ ಹಾಡುವುದು ಹವ್ಯಾಸವಾಗಿರಲಿಲ್ಲ. ಆನಂದ, ಆಹ್ಲಾದ ಹಾಗೂ ಜೀವನಕ್ಕೆ ಮುದ ಕೊಡುವ ಕ್ರಿಯೆಯಾಗಿತ್ತು.

ಹಾಡುವುದಕ್ಕೆ ಲಿಂಗಬೇಧ ತಾರತಮ್ಯ ಇರಲಿಲ್ಲ, ವಯಸ್ಸಿನ ತಾರತಮ್ಯ ಇರಲಿಲ್ಲ. ವರ್ಣ, ಜಾತಿ ಅಥವಾ ವರ್ಗದ ತರತಮ ಬೇಧ ಇರಲಿಲ್ಲ. ಹಾಡುವುದೊಂದು ಮನೋಲ್ಲಾಸ ಹಾಗೂ ಮನೋವಿಕಾಸ ಪ್ರಕ್ರಿಯೆಯಾಗಿತ್ತು. ಪ್ರತಿ ಹಾಡು ಮನಸ್ಸನ್ನು ಹೊಸತುಗೊಳಿಸುತ್ತಿತ್ತು. ಮರುಗಳಿಗೆಯನ್ನು ಮತ್ತು ನಾಳೆಯನ್ನು ಸುಗಮಗೊಳಿಸುತ್ತಿತ್ತು. ಹಾಡು ಜೀವನದ ನಿರಂತರತೆಯ ಮಾರ್ಗದರ್ಶಿಯಾಗಿತ್ತು. ತುಂಡು ಜೀವನವನ್ನು ಅಖಂಡತೆಗೆ ಜೋಡಿಸಿಕೊಡುತ್ತಿತ್ತು.

ಜನಪದದಲ್ಲಿ ಹಾಡು ಎಂದರೆ ಸಂಗೀತ ಮತ್ತು ಸಾಹಿತ್ಯವನ್ನು ಒಟ್ಟುಗೂಡಿಸಿಕೊಂಡ ಒಂದು ಜೀವನ ಧಾರೆ. ಸಂಗೀತವಿಲ್ಲದ ಮನುಷ್ಯ ಇಲ್ಲ. ಹಾಗೆ ಇರುವುದಾದರೆ ಆತ ಅಸಂಸ್ಕೃತ, ಸಂಗೀತ ಮತ್ತು ಸಾಹಿತ್ಯಗಳು ಸಂಸ್ಕೃತಿಯನ್ನು ನೆಲೆ ನಿಲ್ಲಿಸುವ ಧಾತುಗಳು. ಕ್ರೂರಿಯಾದ ಮನುಷ್ಯ ತಂಪಾದದ್ದು ಸಂಗೀತ ಮತ್ತು ಸಾಹಿತ್ಯದಿಂದ ಮನುಷ್ಯರ ಮಧ್ಯೆ ಸಹ್ಯವಾದ ಸಂವಾದ ಹುಟ್ಟಿಕೊಂಡದ್ದು ಸಂಗೀತ ಸಾಹಿತ್ಯ ಸಂಯೋಜಿತ ರೂಪವಾದ ಹಾಡಿನಿಂದ ಮನುಷ್ಯನನ್ನು ಕಾಡಿನಿಂದ ಭಿನ್ನ

ಮಾಡಿ ನಾಡಾಡಿಯಾಗಿ ಮಾಡಿದ್ದು ಹಾಡು. ಈಗ ಎಲ್ಲೆಲ್ಲೂ ಕಣ್ಣಿಗೆ ರಾಚುತ್ತಿದೆ. ಸಾರಾಯಿ ಅಂಗಡಿಗಳ ಸಂಖ್ಯೆಯನ್ನು ಈ ಚಿಕನ್ ಶಾಪುಗಳು ಮೀರಿಸುತ್ತಿವೆ. ಬಹುತೇಕ ಬಿ.ಎ. ಬಿ.ಎಸ್ಸಿ ನಿರುದ್ಯೋಗಿ ಪದವೀಧರರು ಇಲ್ಲಿ ಉದ್ಯೋಗಿಗಳಾಗಿರುವಂತೆ ಕಾಣುತ್ತದೆ. ಅಂದರೆ ಕೊಲೆಗಡುಕತನವೂ ಒಂದು ಗೌರವಾನ್ವಿತ ಉದ್ಯೋಗ ಆಗುತ್ತಿದೆಯಲ್ಲ ! ಇಲ್ಲಿನ ಮುಖ್ಯ ಸಂಗತಿ ಎಂದರೆ ಒಂದು ಕೋಳಿಯನ್ನು ಕಡಿಮೆ ಅವಧಿಯಲ್ಲಿ ಬೆಳೆಸಿ ಕೊಲೆಗೆ ಅಟ್ಟುವ ತತ್ವ. ಇದು ಕೋಳಿಯ ಸಹಜ ಬೆಳವಣಿಗೆ ಅಲ್ಲ ; ರಾಸಾಯನಿಕಗಳನ್ನು ತೂರಿಸಿ ಮಾಂಸ ಬೇಗ ಬೆಳೆಯುವಂತೆ ಮಾಡುವ ಕ್ರಮ. ಇದಕ್ಕಿಂತ ದೊಡ್ಡ ಅಮಾನವೀಯ ಕ್ರಿಯೆ ಎಂದರೆ ಅಂಥ ಕೋಳಿಗಳನ್ನು ಕಂತೆಗಳನ್ನು ಕಟ್ಟಿದಂತೆ ಸಾವಿರಾರು ಕೋಳಿಗಳನ್ನು ಕಟ್ಟಿ, ತಲೆಕೆಳಕಾಗಿ ನೇತು ಹಾಕಿಕೊಂಡು ಸಾಗಿಸುವುದನ್ನು ನೋಡಿದರೆ ಈ ಮನುಷ್ಯ ಮನುಷ್ಯನಾಗಿ ಉಳಿದಿದ್ದಾನೆಯೆ ಎಂಬ ದಿಗ್ಭ್ರಾಂತಿ ಹುಟ್ಟುತ್ತದೆ. ಮಾನವ ಹಕ್ಕುಗಳಿಗಾಗಿ ಹೋರಾಡುವ ನಮಗೆ ಪ್ರಾಣಿಗಳ ಬದುಕುವ ಹಕ್ಕು ಏಕೆ ಅರ್ಥವಾಗುತ್ತಿಲ್ಲ? ಈ ಕೆಲಸ ನಡೆಯುತ್ತಿರುವುದು ಬಹುತೇಕ ವಿದ್ಯಾವಂತ ನಾಗರಿಕರು ತುಂಬಿರುವ ನಗರಗಳಲ್ಲಿ ಎಂಬುದನ್ನು ನೆನೆಯಬೇಕು. ನಮ್ಮ ನಾಗರಿಕತೆ ಯಾವ ಮಟ್ಟವನ್ನು ತಲುಪಿದೆ.

ಆಧುನಿಕತೆ, ಆಧುನಿಕ ಸೌಲಭ್ಯಗಳು ಮನುಷ್ಯನಿಗೆ ವರ ಎಂದು ಹೇಳುತ್ತೇವೆ. ಈ ವರ ಯಾರ ತ್ಯಾಗದಲ್ಲಿ ಎಂದು ಸ್ವಲ್ಪವಾದರೂ ಯೋಚಿಸಿದ್ದೇವೆಯೆ? ಇತ್ತೀಚಿನ ನಗರ ವಾಸಿಗಳಿಗೆ ಆಡು, ಕುರಿ, ಕೋಳಿ, ಮೇಕೆ ಮಾಂಸದ ರುಚಿ ಸಾಕಾಗುತ್ತಿಲ್ಲ. ಕಾಡಿನಲ್ಲಿ ಆಡಿ-ಹಾಡಿಕೊಂಡು ಹಾರಾಡುತ್ತಿರುವ ಪುಟ್ಟ ಹಕ್ಕಿಗಳ ಕಡೆಗೂ ಹರಿದಿದೆ. ಅಂಥ ಹಕ್ಕಿಗಳನ್ನು ನೂರಾರು ಸಂಖ್ಯೆಯಲ್ಲಿ ಹಿಡಿದು ತಂದು ಹಿಡಿಯಾಗಿ ಸುಟ್ಟು ಮಾರುವ ಹೊಟೆಲುಗಳು, ಆ ಹಕ್ಕಿಗಳ ಆಕಾರ ನೋಡಿ ಮುದಗೊಂಡು ತಿನ್ನುವ ನಾಗರಿಕ ಸಭ್ಯರನ್ನು ನೋಡುತ್ತಿದ್ದರೆ ಇವರು ಮುಂದೊಂದು ದಿನ ತಮ್ಮ ಪುಟ್ಟ ಮಕ್ಕಳನ್ನು ಸುಟ್ಟು ತಿನ್ನಲು ಹೇಸುವುದಿಲ್ಲ ಅನಿಸುತ್ತಿದೆ.

**ಸಂಗೀತ ಸಾಧ್ಯತೆ**

ಈ ಹೊತ್ತು ಸಂಗೀತಕ್ಕೆ ಇನ್ನಿಲ್ಲದ ಪ್ರಾಮುಖ್ಯತೆ ಬಂದಿದೆ. ಇದಕ್ಕೆ ಕಾರಣ ಏನು? ಬದುಕು ಹಲವು ತುಂಡುಗಳಲ್ಲಿ ಒಡಕೊಂಡಿದೆ. ಮನುಷ್ಯ ತನ್ನ ವಿಶೇಷ

ಸುಖಕ್ಕಾಗಿ ಕಣ್ಣು ಕಿವಿ, ಮೂಗು, ಬಾಯಿ- ಈ ಎಲ್ಲವುಗಳನ್ನು ಬೇರೆ ಬೇರೆಯಾಗಿ ನೋಡ ಹೊರಟಿದ್ದಾನೆ. ಈ ಕಾರಣಕ್ಕಾಗಿ ತನ್ನ ಒಂದೇ ಮನಸ್ಸನ್ನು ತುಂಡು ತುಂಡು ಮಾಡಿ ಹಂಚಿಕೊಳ್ಳಲು ಪ್ರಯತ್ನಿಸಿದ್ದಾನೆ. ಕೆಲವರಿಗೆ ಹಣ ಮುಖ್ಯವಾದರೆ ಮತ್ತೆ ಕೆಲವರಿಗೆ ಅಧಿಕಾರ ಮುಖ್ಯವೆನಿಸಿದೆ, ಮತ್ತೆ ಕೆಲವರಿಗೆ ಕಾಮದಾಹ ಬಿಟ್ಟು ಮತ್ತಾವ ಫಲಾಪೇಕ್ಷೆಯೇ ಇಲ್ಲ. ಇದರಿಂದಾಗಿ ಜೀವನದ ಒಳಗೆ ನೈತಿಕತೆಯನ್ನು ಕಾಣದಾಗಿದ್ದಾರೆ. ಜೀವನವೆಂದರೆ ಬಳಸಿ ಬಿಸಾಡುವುದು ಎಂದರೆ; Use and throw ಎಂಬ ಸಾಮಗ್ರಿ ಸಿದ್ದಾಂತ ಮನುಷ್ಯನನ್ನು ಹುಚ್ಚನನ್ನಾಗಿ ಮಾಡಿದೆ. ಹಿರಿಯರಾದ ತಂದೆ ತಾಯಿಯರನ್ನು ಹೊರಗಟ್ಟುತ್ತಿರುವ ಮನುಷ್ಯ ತನ್ನ ಪರಂಪರೆಯ ಕೊಂಡಿಯಿಂದ ಕಳಚಿಕೊಳ್ಳುತ್ತಿದ್ದಾನೆ. ಮುಂದೊಂದು ದಿನ ತನ್ನ ಭವಿಷ್ಯದ ಕೊಂಡಿಗಳಾದ ಮಕ್ಕಳನ್ನು ಫ್ಯಾಕ್ಟರಿಯ ಗೂಡ್ಸ್‌ಗಳಂತೆ ಕಂಡರೆ ಆಶ್ಚರ್ಯವಿಲ್ಲ.

ತುಂಡು ತುಂಡು ಸಾಮಗ್ರಿ ಸೃಷ್ಟಿ, ಹಾಗೂ ತುಂಡು ತುಂಡು ಪುಂಡು ಸಂತೋಷದ ಮುಂದೆ ಮನುಷ್ಯ ಯಕಶ್ಚಿತ್ ಆಗಿದ್ದಾನೆ. ತಾನೇ ಸೃಷ್ಟಿಸಿಕೊಂಡ ಸಾಮಯಿಕ ವಸ್ತುಗಳಿಗೆ ಗುಲಾಮನಾಗಿದ್ದಾನೆ. ಮನುಷ್ಯನಿಗೆ ಪ್ರಾಧಾನ್ಯತೆ ಹೊರಟು ಹೋಗಿದೆ. ಈಗಿನ ಯುಗ ಸಾಮಗ್ರಿ ಪ್ರಧಾನ ಯುಗ. ಈ ಸಾಮಗ್ರಿಗಳ ಮಧ್ಯೆ ಗೋಡೌನ್‌ನಲ್ಲಿ ಮನುಷ್ಯನೂ ಒಂದು ಸಾಮಗ್ರಿ.

ಇದನ್ನು ಅರಿತೇ ಪ್ರಜ್ಞಾವಂತರು ಮತ್ತು ಸಂಸ್ಕೃತಿ ಸಂಪನ್ನರು ಹೆದರಿದ್ದಾರೆ. ಮನುಷ್ಯನೆ ಕಳೆದುಹೋದ ಮೇಲೆ ಭೂಮಿಗೆ ಯಾವ ಅರ್ಥವಿದೆ. ಮನುಷ್ಯತ್ವ ಮುಖ್ಯವಾಗದ ಅರ್ಥಶಾಸ್ತ್ರ ಕಲ್ಲು ಮಣ್ಣುಗಳ ಅರ್ಥಶಾಸ್ತ್ರ ಮನುಷ್ಯತ್ವವಿಲ್ಲದ ವಿಜ್ಞಾನ ರಾಕ್ಷಸತ್ವ, ಅಂಥ ರಾಕ್ಷಸತ್ವದ ಸುಖ ಸಂತೋಷಗಳು ಕ್ಷಣಿಕ.

ಮನುಷ್ಯನೆ ಏಕೆ? ಸಂಗೀತ - ಸಾಹಿತ್ಯದ ಅಭಿರುಚಿ ಇಲ್ಲದ ದೇವರುಗಳೆ ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ಅವು ತಮ್ಮದೆ ಹಾಡುಗಳನ್ನು ಹುಟ್ಟಿಸಿಕೊಂಡಿವೆ. ನಮ್ಮೂರ ಬೆಟ್ಟದ ಮೇಲಿನ ಗೋಪಾಲಸ್ವಾಮಿಗೆ ಶ್ರುತಿ ನುಡಿಸದ ಪೂಜೆ ಬೇಡ, ಈ ಶ್ರುತಿ ಸಂಗೀತವಾದರೆ ಪೂಜಾರಿಯ ಮಂತ್ರ ಸಾಹಿತ್ಯ, ಜೊತೆಗೆ ದೇವರಿಗೆ ಸ್ಪೆಷಲ್ ಆದ ಸಂಗೀತ ವಾದ್ಯವೂ ಉಂಟಲ್ಲ : ಗಂಟೆ. ಅದನ್ನು ಕೇಳಿಯೆ ಭಕ್ತರ ಗದ್ದಲ ಅಡಗಿ ಮೃದುಭಾವ ಹುಟ್ಟಿ ದೇವಸ್ಥಾನದ ವಾತಾವರಣವೆಲ್ಲ ಸಂಮೋಹನಗೊಳ್ಳುತ್ತದೆಯಲ್ಲ !

ದೇವರ ಜೊತೆಗೆ ಮಾತನಾಡಿ ಅವನನ್ನು ಗೆದ್ದ ಭಕ್ತರನ್ನು ನಾನು ಕಾಣೆ. ವರ ಕೇಳುವಾಗ ಮಾತ್ರ ಅವರು ಮಾತನಾಡುತ್ತಾರೆ. ಉಳಿದಂತೆ ದೇವರ ಜೊತೆಗೆ ಅವರು ಸಂವಾದಿಸುವುದು ಹಾಡಿನಲ್ಲಿ, ಪ್ರಾರ್ಥನೆ ಕೂಡ ಸಂಗೀತ - ಸಾಹಿತ್ಯದ ಸಂಲಗ್ನವಾದ ಹಾಡೇ ಆಗಿದೆ. ಅಂದರೆ ಸಂಗೀತ ಮತ್ತು ಸಾಹಿತ್ಯ ಮನೋಪರಿವರ್ತನೆಯ ಮಾಧ್ಯಮ ಎಂಬುದು ಸ್ಪಷ್ಟ ಸಂಗೀತ ಮತ್ತು ಸಾಹಿತ್ಯ ಕ್ರಾಂತಿ ಮಾಡುತ್ತವೆ ಎಂದು ಹೇಳಲಾಗದು. ಆದರೆ ಅವು ಪರಿವರ್ತನೆ ಮಾಡುತ್ತವೆ. ಪರಿವರ್ತನೆಯ ಹಾದಿ ಯಾವುದು ಎಂಬುದನ್ನು ಮಾತ್ರ ನಾವು ಹುಡುಕಿಕೊಳ್ಳಬೇಕು.

ಯಾವುದೋ ಒಂದು ಕೆಟ್ಟ ಕಾಲದಲ್ಲಿ ಸಂಗೀತ ಬೇರೆ ಮತ್ತು ಸಾಹಿತ್ಯ ಬೇರೆ ಎಂಬ ವಾದಗಳು ಹುಟ್ಟಿಕೊಂಡವು. ಇದು ಹೈಬ್ರಿಡ್ ಜನರ ವಾದ. ತಮ್ಮ ಪ್ರತ್ಯೇಕತೆಯನ್ನು ಕಾಯ್ದಿರಿಸಿಕೊಳ್ಳಲು ಮಾಡಿದ ತಪ್ಪು ಹೆಜ್ಜೆ ಮುಂದೆ ಸಂಗೀತ ಕೆಲವರ ಸೊತ್ತು ಎಂದಾಯಿತು. ಸಾಹಿತ್ಯ ಪೆನ್ನು ಹಿಡಕೊಂಡವರ ಕಾರ್ಯ ಎಂಬುದಾಯಿತು. ಇದೆಲ್ಲ ವಿಘಟಕರ ತತ್ವ.

ಜನಪದ ಸಂಗೀತ ಮತ್ತು ಸಾಹಿತ್ಯದ ಮಧ್ಯೆ ವಿಘಟನೆ ಇಲ್ಲ. ಅವು ಮನಸ್ಸು ಮತ್ತು ಹೃದಯದಂತೆ ಒಂದಾಗಿವೆ. ಜನಪದ ಮತ್ತು ಜೀವನ ಎನ್ನುವುದು ಯಾವತ್ತೂ ಒಂದೆ, ಅಖಂಡ.

**ನಾಗರಿಕ ಕೊಲೆ**

ಈಗ ಕೊಲೆಗಡುಕರು ಹೆಚ್ಚಾಗುತ್ತಿದ್ದಾರೆ. ತಮ್ಮ ಕೊಲೆಗಡುಕತನವನ್ನು ನಾಗರಿಕಗೊಳಿಸಲು ಹೊರಟಿದ್ದಾರೆ. ಒಂದು ಸಮಾಜ ಅಥವಾ ದೇಶದಲ್ಲಿ ಈ ರೀತಿಯ ಎರಡು ಥರನ ಕೊಲೆಗಳಿವೆ. ಒಂದು ಸಮಾಜದ ಒಳಗೆ ಮೌನವಾಗಿ, ಪ್ರಶ್ನಾತೀತವಾಗಿ ನಡೆಯುವ ಕೊಲೆ. ಇನ್ನೊಂದು ದೇಶದ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ತಾತ್ವಿಕತೆಯನ್ನು ಹೇರಿಕೊಂಡು ನಡೆಯುವ ಕೊಲೆ.

ದೇಶದ ಒಳಗೆ ಸಂಪತ್ತಿನ ಶೇಖರಕರಿಂದಾಗಿ ಕೆಳ ಹಂತದ ಜನ ಅರೆ ಹೊಟ್ಟೆ ಅಥವಾ ಹೊಟ್ಟೆಗಿಲ್ಲದೆ ಸಾಯುತ್ತಾರೆ. ರಾಜಕಾರಣದ ತಂತ್ರಗಾರಿಕೆ ಹಾಗೂ ಗೂಂಡಾಗಿರಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲಾಗದೆ ಬದುಕಿದ್ದೂ ದಿನನಿತ್ಯ ಸಾಯುತ್ತ ಬದುಕುವವರಿದ್ದಾರೆ. ಮತ್ತೊಂದು ಕಡೆ ಮನುಷ್ಯತರ ಜೀವಿಗಳನ್ನು ನಿರ್ದಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಈ ಜಗತ್ತು ಇರುವುದು ಮನುಷ್ಯನಿಗೆ ಮಾತ್ರ ಎಂಬ ರಾಕ್ಷಸ

ತತ್ವದಿಂದಾಗಿ ಮರ, ಗಿಡ, ಪ್ರಾಣಿ-ಪಕ್ಷಿಗಳನ್ನು ಮನ ಬಂದಂತೆ ಬಳಸಿಕೊಳ್ಳಲಾಗುತ್ತಿದೆ.

ಮಾಂಸಭಕ್ಷಕರ ಉದಾಹರಣೆಯನ್ನು ಇಲ್ಲಿ ಉಲ್ಲೇಖಿಸಬಹುದು. ಹಿಂದೆ ಜಾತಿಯ ಕಾರಣಕ್ಕೆ ಮಾಂಸ ಭಕ್ಷಕರು ಮತ್ತು ಸಸ್ಯ ಭಕ್ಷಕರು ಎಂಬ ಎರಡು ಪ್ರಭೇದಗಳಿದ್ದು ಸಸ್ಯಾಹಾರಿಗಳ ಕಾರಣ ಕೆಲವು ಪ್ರಾಣಿಗಳು ಉಳಿಯುತ್ತಿದ್ದವು. ಈಗ ಕೆಲವೆ ಮಂದಿಯನ್ನು ಬಿಟ್ಟರೆ ಮಾಂಸಾಹಾರಿಗಳ ಸಂಖ್ಯೆ ತುಂಬ ಜಾಸ್ತಿಯಾಗಿದೆ. ಅದೇ ರೀತಿ ಮಾಂಸವನ್ನು ಬಳಸುವ ಪ್ರಮಾಣ ಕೂಡ ಅತಿಯಾಗಿದೆ.ಈ ಮಾಂಸ ಭಕ್ಷಕರ ಅತುರ, ಅಪೇಕ್ಷೆಯನ್ನು ಪೂರೈಸಲು ಸಹಜ ಮಾಂಸ ಸರಬರಾಜಿನಿಂದ ಸಾಧ್ಯವಾಗುತ್ತಿಲ್ಲ. ಬಕಾಸುರರೇ ಹೆಚ್ಚಿದರೆ ಎಷ್ಟು ಏಕಚಕ್ರಿ ನಗರಗಳು ಬೇಕಾಗಬಹುದು?

ಅರ್ಜೆಂಟ್ ಮಾಂಸಕ್ಕಾಗಿ ಅರ್ಜೆಂಟ್ ಪ್ರಾಣಿಗಳನ್ನು ಬಳಸಲಾಗುತ್ತಿದೆ. ಬ್ರಾಯಿಲರ್ ಎಂಬ ನಲವತ್ತಾರು ದಿನದ ಅರ್ಜೆಂಟ್ ಚಿಕನ್ ಇದೆಲ್ಲ ಹಳಹಳಿಕೆ ಅಲ್ಲ; ಪಲಾಯನ ವಾದವಲ್ಲ, ವಿಜ್ಞಾನವನ್ನು ದೂರಸರಿಸಿ ಅಜ್ಞಾನದ ತಾರತಮ್ಯ ಬದುಕನ್ನು ಮತ್ತೆ ಸ್ವಾಗತಿಸಬೇಕೆಂಬುದಲ್ಲ, ವಿಜ್ಞಾನವನ್ನು ಸಂಸ್ಕೃತೀಕರಣಗೊಳಿಸಿಕೊಳ್ಳುವ ಸದ್ವಿವೇಕ. ಈ ಒಂದು ವಿವೇಕದ ದಾರಿಯಾಗಿ ಸಂಗೀತವನ್ನು ಶೋಧಿಸುವ ಹಾಗೂ ಅದನ್ನು ಮನೋಲ್ಲಾಸದ ಜೊತೆಗೆ ಮನೋವಿಕಾಸಕ್ಕೆ ಬಳಸಿಕೊಳ್ಳುವ ಪ್ರಯತ್ನ ನಡೆದಿದೆ. ಶಿಷ್ಟ ಸಂಗೀತದಲ್ಲಿ ಈ ಬಗೆಯ ಹೊಸ ಪ್ರಯೋಗಗಳು ನಡೆಯುತ್ತಿವೆ. ಸಂಗೀತ ಒಂದು ಔಷಧೋಪಚಾರವಾಗಿ ಮಾನ್ಯತೆ ಪಡೆಯುತ್ತಿದೆ. ಈ ಕೆಲಸ ಅಗತ್ಯ ಆಗಬೇಕು. ಈ ನಿಟ್ಟಿನಲ್ಲಿ ಅಪಾರ ಮಾದರಿಗಳಲ್ಲಿ ದೊರೆಯುತ್ತಿರುವ ಜನಪದ ಸಂಗೀತ ನಮಗೆ ಬಹುದೊಡ್ಡ ತವನಿಧಿಯಾಗಿದೆ.

ನಮ್ಮ ಜನಪದ ಸಮಾಜದಲ್ಲಿ ಬಹುತೇಕ ಹೆಣ್ಣು ಮಕ್ಕಳು ತಮ್ಮ ಹಾಗೂ ತಮ್ಮ ಕುಟುಂಬದ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬಂದಿರುವುದು ಅವರು ನಿರಂತರ ಹಾಡಿಕೊಂಡು ಬಂದಿರುವ ಜನಪದ ಸಂಗೀತ ಸಾಹಿತ್ಯದಿಂದ. ಮನೆಯ ಒಳಗೆ ಮಕ್ಕಳನ್ನು ಆಡಿಸುವುದು ಹಾಗೂ ತೂಗಿ ಮಲಗಿಸುವುದು ಸುಮಧುರ ಹಾಡುಗಳಿಂದ. ಮನೆಯ ಹೊರಗೆ ಕಳೆಕೀಳುವಾಗ, ಸಸಿ ನೆಡುವಾಗ ಬಿತ್ತುವಾಗ ದಿನವಿಡೀ ಅವರು ಹಾಡು ಹಾಡುತ್ತಾರೆ. ಅದು ಒಂದು ನೋಟದಿಂದ ಶ್ರಮ

ಪರಿಹಾರವಾದರೆ ಮತ್ತೊಂದು ನೋಟದಿಂದ ನೋಡಿದರೆ ಗಂಡಸರು ಹಾಗೂ ಗಂಡು ಪ್ರಧಾನವಾದ ಸಮಾಜ ಅವರ ಮೇಲೆ ಹೇರಿರುವ ಅನೇಕ ನಿರ್ಬಂಧಗಳಿಗೆ ಪರಿಹಾರವನ್ನು ತಮ್ಮ ಹಾಡುಗಾರಿಕೆಯ ಮೂಲಕ ಕಂಡುಕೊಳ್ಳುತ್ತಾರೆ. ನಮ್ಮ ಈ ಸ್ತ್ರೀಯರ ಸ್ವಾಸ್ಥ್ಯವೆ ನಿಜವಾದ ಅರ್ಥದಲ್ಲಿ ಸಮಾಜದ ಸ್ವಾಸ್ಥ್ಯವಾಗಿದೆ. ಗಂಡು ಎಂದೂ, ಎಲ್ಲೂ ನೆಲೆ ನಿಂತ ಪ್ರಾಣಿ ಅಲ್ಲ. ಸಮಾಜಕ್ಕೆ ಒಂದು ನೆಲೆ ಹಾಗೂ ಸ್ವಾಸ್ಥ್ಯವನ್ನು ತಂದುಕೊಟ್ಟವಳು ಹೆಣ್ಣು. ಅದು ನಮ್ಮ ಜನಪದ ಸಾಹಿತ್ಯ - ಸಂಗೀತದಿಂದ ಸಾಧ್ಯವಾಗಿದೆ.

ನೋವು ಆದಾಗ 'ಅಮ್ಮಾ'. ಇದು ಜನಪದರ ನುಡಿಗಟ್ಟು, ಇದರ ಅರ್ಥ ಏನು? ಸೃಷ್ಟಿ ಮತ್ತು ಸಂರಕ್ಷಣೆ. ಅಂದರೆ ಜನಜೀವನದ ಆಸ್ತಿತ್ವದ ನೆಲೆ ಮತ್ತು ನಿಯಮಗಳು. ಇನ್ನೊಂದು ಅರ್ಥದಲ್ಲಿ ಸಂಸ್ಕೃತಿ ಪ್ರಕೃತಿ. ಇದೇ ಅಮ್ಮ. ಈ ಅಮ್ಮ ಪ್ರತ್ಯೇಕವಾದ ಹೆಣ್ಣೂ ಅಲ್ಲ ಗಂಡೂ ಅಲ್ಲ ಸೃಜನಶೀಲ ನೆಲೆ. ಇದು ಅಮ್ಮನನ್ನು ನೋಡುವ ಮತ್ತು ಗ್ರಹಿಸುವ ವಿಧಾನ.

ಅಮ್ಮ ವ್ಯಯದಲ್ಲಿ ಇಲ್ಲ ಪ್ರತ್ಯಯದಲ್ಲಿ ಇದ್ದಾಳೆ. ಅಂದರೆ ಅಮ್ಮ ಸೇರಿಸುವ ಅಥವ ಕೂಡಿಸುವ ಪ್ರಕ್ರಿಯೆ. ಅಮ್ಮ ಬಂದು ಸೇರಿಕೊಂಡ ಕಡೆ ಕುಟುಂಬ, ಸಮಾಜ, ದೇಶ ಮತ್ತು ಅದರ ಉತ್ಪನ್ನವಾದ ದೇಶಿ ಜನ್ಮ ತಾಳುತ್ತದೆ. ಇದನ್ನು ಪುತ್ರಿ-ಪುತ್ರೋತ್ಸವ, ದೈವೋತ್ಸವ, ಜಾತ್ರೋತ್ಸವ, ಲಗ್ನೋತ್ಸವ ಮತ್ತು ಸಮಾಜೋತ್ಸವ ಎಂದು ಕರೆಯುತ್ತೇವೆ.

ಅಮ್ಮ ಕೇವಲ ಹೆಣ್ಣು ಅಲ್ಲ, ಗಂಡಿನಲ್ಲೂ ಅಮ್ಮ ಇದ್ದಾಳೆ. ಹೆಣ್ಣಿನಲ್ಲಿ ಗಂಡೂ ಇದ್ದಾನೆ. ಇವರು ಅಗಲಿಕೊಂಡಾಗ ಅವಾಂತರ, ಕೂಡಿಕೊಂಡಾಗ ಸೃಜನೆ ಸಾಧ್ಯವಾಗುತ್ತದೆ. ಸಮಾಜ ನೆಲೆ ನಿಲ್ಲುತ್ತದೆ. ಇಡೀ ಮಾನವ ಜಗತ್ತು ಮದುವೆ ಬಗ್ಗೆ ಯಾಕೆ ಅಷ್ಟು ಸಂಭ್ರಮಪಡುತ್ತದೆ ಎಂಬುದನ್ನು ಗಮನಿಸಿ. ಸೆಕ್ಸ್ ಹೆಣ್ಣಿಗೂ ಗಂಡಿಗೂ ಪ್ರತ್ಯೇಕವಾಗಿಯೇ ಇದೆ. ಅದು ಭಾವನೆ ಉನ್ಮಾದ, ಉತ್ಸಾಹ, ಹಸಿವು ಇನ್ನೂ ಏನೇನೋ ಆಗಿರುತ್ತದೆ. ಅದು ಚಕ್ರಕ್ಕೆ, ಗಾಡಿಗೆ, ಯಂತ್ರಕ್ಕೆ ಎಣ್ಣೆ ಅಥವ ಉರುವಲು ಇದ್ದಹಾಗೆ, ಅದು ಉಂಟು ಮಾಡಬಹುದಾದ ಸಾಂಸ್ಕೃತಿಕ ಚಲನಶೀಲತೆ ಇದೆಯಲ್ಲ ಅದು ಅಮ್ಮ.

ತನ್ಮಯತೆ ಮತ್ತು ಅದು ಜೀವನಧರ್ಮವಾಗುವಲ್ಲಿ ಅಮ್ಮ ಇದ್ದಾಳೆ.

ವಿಶ್ವಾಮಿತ್ರನಲ್ಲಿ ಅಮ್ಮ ಇಲ್ಲ ಜಮದಗ್ನಿಯಲ್ಲಿ ಅಮ್ಮ ಇಲ್ಲ ಪರಶುರಾಮನಲ್ಲಿ ಅಮ್ಮ ಇಲ್ಲ, ಶ್ರೀರಾಮನಲ್ಲಿ ಅಮ್ಮ ಇಲ್ಲ ಧರ್ಮರಾಯನಲ್ಲಿ ಭೀಷ್ಮನಲ್ಲಿ, ಶಬರಿಯಲ್ಲಿ ಊರ್ಮಿಳೆಯಲ್ಲಿ ಮಂಡೋದರಿಯಲ್ಲಿ ಅಮ್ಮ ಇದ್ದಾಳೆ. ಸೀತೆಯಲ್ಲಿ ಕೈಕೇಯಿಯಲ್ಲಿ ದೌಪದಿಯಲ್ಲಿ ಅಮ್ಮ ಕೊಲೆಯಾಗಿ ಹೋಗಿದ್ದಾಳೆ. ಶೂರ್ಪನಖಿ, ಕೀಚಕ, ಸೈಂಧವ ಇಂಥವರೆಲ್ಲ ಅಮ್ಮನ ಉಚ್ಛಿಷ್ಟಗಳು. ಎಲ್ಲಮ್ಮನಲ್ಲಿ ನಮ್ಮೆಲ್ಲರ ದೊಡ್ಡಮ್ಮ ಇದ್ದಾಳೆ. ಅವಳೊಳಗೆ ಎಷ್ಟೆಲ್ಲ ಜೀವ ರಾಶಿಗಳು ಜೀವನ ಮಾಡುತ್ತಿವೆ !

ನಡು ಸಮುದ್ರದಲ್ಲಿ ಹೆಪ್ಪುಗಟ್ಟಿದ ಮೋಡದಲ್ಲಿ ಕಗ್ಗತ್ತಲೆಯ ಆಳದಲ್ಲಿ ಮಿಂಚು ಗುಮ್ಮಿಕ್ಕುವಲ್ಲಿ, ಹೆಂಡ ಕುಡಿದು ಎಲ್ಲವನ್ನೂ ಮರೆತವನಲ್ಲಿ ತೌರುಮನೆಯ ಕನಸಿನಲ್ಲಿ ಹುಟ್ಟೂರಿನ ಗಾಢ ನೆನಪಿನಲ್ಲಿ ಜಾತಿ, ಮತ, ಧರ್ಮಗಳೆಂಬ ಚಿಲ್ಲರೆ ನಾಣ್ಯಗಳ ಮರೆತು ಮನುಷ್ಯ-ಮನುಷ್ಯ ಮೈಮನ ಕೂಡಿಸುವಲ್ಲಿ ಅಮ್ಮ ಇದ್ದಾಳೆ. ಕೊಂಬು ಕಹಳೆ, ಆರ್ಭಟಿಸುವ ಗುಡುಗು, ಭೋರ್ಗರೆವ ನದಿ, ಸಿಂಹದ ಬೇಟೆ ಮತ್ತು ರಾಜಕಾರಣದ ಎಲಕ್ಷನ್‌ನಲ್ಲಿ ಅಮ್ಮನಿಲ್ಲದ ಬರಿ ಅಪ್ಪ ಮಾತ್ರ ಕೆಂಡಗಣ್ಣಂತೆ ತಿವಿಯುತ್ತಾನೆ.

ವಿಜಯನಗರ ಕಾಲದ ಶಾಸನವೊಂದರಲ್ಲಿ ತಾಯಿಯೊಬ್ಬಳು ತನ್ನ ಹಸುಗೂಸಿಗೆ ಹಾಲುಣಿಸುತ್ತ ಅದರ ಕಿವಿಯಲ್ಲಿ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯವನ್ನು ಮಾಡಿಸು, ದುರ್ಬಲರಿಗೆ ಸಹಾಯ ಮಾಡು - ಹೀಗನ್ನುತ್ತಾಳೆ.

ಈ ಹೊತ್ತಿನ ಒಬ್ಬ ಪೂಜಾರಿ ಇದೇ ಮಾತನ್ನು ಹೇಗೆ ಹೇಳುತ್ತಿದ್ದ? ಕೆರೆಯಂ ಒಡೆಸು, ಒತ್ತುವರಿಯಂ ಮಾಡು, ಬಾವಿಯನ್ನು ಮುಚ್ಚಿಸು, ದೇವಸ್ಥಾನಮಂ ನೆಲಸಮ ಮಾಡು ಆಗದಿದ್ದರೆ ಆ ದೇವಸ್ಥಾನದ ಗೋಡೆಯ ಮೇಲೆ ಲೈಂಗಿಕ ಸಾಹಿತ್ಯ ಮಂ ರಚಿಸು, ಶರಣು ಬಂದವರನ್ನು ಹೆಂಡ ಹಂಚಲು ಎಲಕ್ಷನ್‌ಗೆ ಇಟ್ಟುಕೊ..!

ಅಮ್ಮನನ್ನು ಕುರಿತ ಇನ್ನೊಂದು ಸಂದರ್ಭವನ್ನು ಗಮನಿಸಿ 'ಹೆಣ್ಣನ್ನು, ಗೋವುಗಳನ್ನು ಬ್ರಾಹ್ಮಣರನ್ನೂ ಕೊಲ್ಲಬಾರದು' ಇದು ಶಾಸ್ರೋಕ್ತ ಮಾತು. ಮೇಲಿನ ಮೂವರನ್ನು ಯಾಕೆ ಕೊಲ್ಲಬಾರದು. ಬಹುಶಃ ಯುದ್ಧ ಸಂದರ್ಭವೊಂದರಲ್ಲಿ ಈ ಉಕ್ತಿ ಬರೆಯಲ್ಪಟ್ಟಿರಬೇಕು. ಮೇಲಿನ ಮೂರು ಅಂಶಗಳು ಯುದ್ಧದಲ್ಲಿ ನೇರವಾಗಿ ಭಾಗವಹಿಸಲಾರವು. ಯುದ್ಧಕ್ಕೆ ಆಹಾರವಾಗಬಹುದು ಅಥವ ಆಹುತಿ ಆಗಬಹುದು. ಆದರೆ ಯುದ್ಧಕ್ಕೆ ಬೇಕಾದ ಒಳಿತನ್ನು, ಕೆಡುಕನ್ನೂ ಇವು ಸೃಷ್ಟಿಸಬಹುದು.

ಪುರದ ಪುಣ್ಯ

ಭಾರತೀಯ ಸಮಾಜದಲ್ಲಿ ಮೇಲಿನ ಮೂರೂ ಅಂಶಗಳು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಸಂಪತ್ತುಗಳೆಂದು ಪರಿಗಣಿಸಲ್ಪಟ್ಟಿವೆ. ಹೆಣ್ಣು ಮತ್ತು ಗೋವು ಯಾಹೊತ್ತೂ ಆಧುನಿಕ ಅಣೆಕಟ್ಟುಗಳ ಹಾಗೆ ವಿವಿಧೋದ್ದೇಶ ನಿಲ್ಲಿಸಿ, ಪಳಗಿಸಿಕೊಂಡರೆ ಉಪಯುಕ್ತಗಳು. ಇವುಗಳನ್ನು ತಡೆದು ಕಲ್ಪವೃಕ್ಷ-ಕಾಮಧೇನುಗಳಿಗಿಂತಲೂ ಹೆಚ್ಚಿನ ಸುಖ ಮತ್ತು ಅನುಕೂಲವನ್ನು ಒದಗಿಸಬಲ್ಲವು. ಹೆಣ್ಣು ಅನೇಕ ವಿಧದಲ್ಲಿ ಅಂದರೆ ಕನ್ಯೆಯಿಂದ ಅಮ್ಮನವರೆಗೆ ಏನೆಲ್ಲ ಕೊಡುತ್ತಾಳೆ ಎಂಬುದನ್ನು ಗುರುತಿಸಿ; ಗಂಡಿಗೆ ಮಧು, ಮಗುವಿಗೆ ಅಮೃತ, ಮನೆಗೆ ಹೊಲಕ್ಕೆ ದುಡಿಮೆ, ಸಮಾಜಕ್ಕೆ ಸಂಸ್ಕೃತಿ ನಿರ್ಮಿಸಿಕೊಟ್ಟಿದ್ದಾಳೆ. ಗಂಡು ಅದನ್ನು ರಕ್ಷಿಸಿದ್ದಾನೆ ಇಲ್ಲವೆ ನಾಶ ಮಾಡಿದ್ದಾನೆ. ಒಬ್ಬ ಸದಾಶಯದ ಹೆಣ್ಣು ಹುಡುಗಿಯಿಂದ ಮುದುಕಿಯವರೆಗೆ ಅಮ್ಮ ಆಗಿರುತ್ತಾಳೆ ಎಂದರೆ, ಎಲ್ಲವನ್ನೂ ತಾಳಿಕೊಂಡಿರುತ್ತಾಳೆ ಮತ್ತು ಬಾಳನ್ನು ಕೊಡುತ್ತಾಳೆ. ಹೀಗೆ ಸಮಾಜಕ್ಕೆ ಬಾಳನ್ನು ಕೊಡುವವಳೇ ಅಮ್ಮ.

ಹಸು ಕೂಡ ಅಮ್ಮನೆ. ಒಂದು ಹಸು ಹಾಲು ಕೊಡುತ್ತದೆ, ಗೊಬ್ಬರ ಕೊಡುತ್ತದೆ. ದುಡಿಮೆ ಕೊಡುತ್ತದೆ ಹಾಗೂ ಆಹಾರವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಕೃಷಿ ಸಂಸ್ಕೃತಿಯ ನೆಲೆಯಾಗಿ ನಿಂತಿದೆ. ಹೀಗೆ ಸಾಂಸ್ಕೃತಿಕ ನೆಲೆಯನ್ನು ಒದಗಿಸುವವಳೇ ಅಮ್ಮ, ಬ್ರಾಹ್ಮಣರನ್ನು ಕೊಲ್ಲಬಾರದು ಎಂಬುದಕ್ಕೆ ಎರಡು ವ್ಯಾಖ್ಯೆಗಳಿವೆ. ಬ್ರಾಹ್ಮಣನ ಬಗ್ಗೆ ರಕ್ಷಕ ಮತ್ತು ಭಕ್ಷಕ ಎಂಬ ಎರಡು ಅಭಿಪ್ರಾಯಗಳು ಇವೆ. ಅವರು ಈ ದೇಶದ ಬೇರೆ ಬೇರೆ ಸಂಪತ್ತಿನ ಒಡೆಯರನ್ನು ರಕ್ಷಿಸಿದ್ದಾರೆ. ಗೌಡ, ಭೂಮಾಲೀಕ, ಪಾಳೇಗಾರ, ರಾಜ ಮತ್ತು ಚಕ್ರವರ್ತಿಗಳೆಂಬುವವರು ಇವರು ರಚಿಸಿದ ಪುರಾಣ-ಪುಣ್ಯ ಕಥೆಗಳ ಒಳಗೆ ಸುರಕ್ಷಿತವಾಗಿ ಬಾಳಿಬದುಕಿದ್ದಾರೆ. ಪರಸ್ಪರರು ಸುಖ-ಸಂತೋಷವನ್ನು ಹಂಚಿಕೊಂಡಿದ್ದಾರೆ. ದುಡಿವ ಜನರನ್ನು ದೂರದಲ್ಲಿಟ್ಟು ರಕ್ಷಿಸಿಕೊಂಡಿದ್ದಾರೆ. ಅಂದರೆ, ಯಾರು ಯಾರು ಎಲ್ಲಿರಬೇಕು, ಹೇಗಿರಬೇಕು ಮತ್ತು ಹೇಗೆ ನಡೆದುಕೊಳ್ಳಬೇಕೆಂಬ ಸಾಮಾಜಿಕ ನಡವಳಿಕೆಗಳನ್ನು ರಚಿಸಿ ತಮ್ಮ ಸುಖವನ್ನು ಕಾಯ್ದಿರಿಸಿಕೊಂಡಿದ್ದಾರೆ. ಪರೋಕ್ಷವಾಗಿ ದುಡಿದ ಜನರನ್ನು ಭಕ್ಷಿಸಿದ್ದಾರೆ. ಈ ಸಂದರ್ಭದಲ್ಲಿ ದುರ್ಬಲರನ್ನು ಕೊಲ್ಲಬಾರದು ಎಂಬ ನಿಯಮ ರಚಿಸಿ ಹೆಣ್ಣುಗಳನ್ನು, ಗೋವುಗಳನ್ನು ಕೊಲ್ಲಬಾರದು ಎಂದಿದ್ದಾರೆ ಅಥವ ಬಹು ಉತ್ಪತ್ತಿ ಮೂಲಗಳನ್ನು ನಾಶ ಮಾಡಬಾರದು ಎಂದಿದ್ದಾರೆ. ಇದು ಸರಿತಾನೆ? ಆದರೆ ಈ ಬ್ರಾಹ್ಮಣ ಎನ್ನುವ ಜನ ಹೇಗೆ ಬಹು ಉತ್ಪತ್ತಿಯ ಜನ ಎಂಬ ಪ್ರಶ್ನೆ ಏಳುತ್ತದೆ.

ಒಂದು ವ್ಯಾಖ್ಯಾನದ ಪ್ರಕಾರ ದುರ್ಬಲರೊಳಕ್ಕೆ ತಮ್ಮನ್ನು ಸೇರಿಸಿಕೊಂಡು ಸುರಕ್ಷಿತವಾದರು ಎನ್ನುತ್ತಾರೆ. ಹೆಣ್ಣು ಮತ್ತು ಗೋವನ್ನು ಕೊಂದರೆ ಪಾಪ ಬರುತ್ತದೆ. ಹಾಗೆಯೇ ಬ್ರಾಹ್ಮಣನನ್ನು ಕೊಂದರೆ ಪಾಪ ಬರುತ್ತದೆ ಎಂದು ನಂಬಿಕೆ ಸೃಷ್ಟಿ ಮಾಡಿಬಿಟ್ಟರೆ ಯಾರೂ ಹತ್ತಿರ ಬರುವುದಿಲ್ಲ. ನಂಬಿಕೆಯಂಥ ರಕ್ಷಕ ಜಗತ್ತಿನಲ್ಲಿ ಬೇರೊಬ್ಬನಿಲ್ಲ. ಅದರಲ್ಲೂ ನಂಬಿಕೆ ಮೂಲಕ ಪಾಪದ ಭಯ ಸೃಷ್ಟಿ ಮಾಡಿಬಿಟ್ಟರೆ ಶತ್ರು ಎಂಬುವವನೇ ಇರುವುದಿಲ್ಲ. ಇದು ಆಯುಧ, ಯುದ್ಧ ಏನೂ ಇಲ್ಲದೆ ರಕ್ಷಿಸಿಕೊಳ್ಳುವ ಮತ್ತು ಆರಾಮ ಇರುವ ವಿಧಾನ. ಮೇಲಿನ ಸೂತ್ರದ ಮೂಲಕ ಬ್ರಾಹ್ಮಣರು ಈ ಕೆಲಸ ಮಾಡಿಕೊಂಡರು ಎನ್ನಬಹುದು. ಮತ್ತೊಂದು ವ್ಯಾಖ್ಯೆ ಎಂದರೆ, ಬ್ರಾಹ್ಮಣರು ವಿದ್ಯೆ ಅಥವ ಅಕ್ಷರ ಕಲಿತ ಜ್ಞಾನಿಗಳು. ಪೂಜೆಯನ್ನು ಮಾಡುವ ಪುಣ್ಯವಂತರು ಎಂಬ ತಿಳುವಳಿಕೆಯಿಂದ ಅಥವ ಚಾರಿತ್ರಿಕವಾಗಿ ಪೂಜೆಗೆ ಮಹತ್ವ ಬಂದ ಕಾಲ ಸಂದರ್ಭದಲ್ಲಿ ಅಂದರೆ ಪಾಪ ಪರಿಹಾರ ಅಪೇಕ್ಷೆಗಳು ಆರ್ಥಿಕವಾಗಿ ಕಾಣಿಸಿಕೊಂಡ ಸಂದರ್ಭದಲ್ಲಿ ಬ್ರಾಹ್ಮಣರನ್ನು ರಕ್ಷಿಸಬೇಕು ಎಂಬ ನಿಯಮ ಬಂದಿರಬಹುದು. ಅಂದರೆ ಅಮ್ಮನ ಜೊತೆಗೆ ಸೇರಿಕೊಂಡು ಬ್ರಾಹ್ಮಣರು ರಕ್ಷಣೆ ಪಡೆದುಕೊಂಡರು ಎಂದಾಯಿತು. ಆ ಮೂಲಕ ಅಮ್ಮ ಸಂಸ್ಕೃತಿ ರಕ್ಷಕಿ ಎಂದಾಯಿತು. ಸಂಸ್ಕೃತಿಯನ್ನು ನೆಲೆ ನಿಲ್ಲಿಸುವವಳು ಮತ್ತು ನೆಲೆನಿಲ್ಲಿಸುವ ಸ್ಥಿತಿ ಇದೆಯಲ್ಲ ಅದು ಅಮ್ಮ.

ಇನ್ನೊಂದು ಪ್ರಸಂಗದಿಂದ ಅಮ್ಮನನ್ನು ಹುಡುಕೋಣ, ಅದು ಜನಪದ ಕಥೆಯೊಂದರ ಸಂದರ್ಭ. ರಾಜ ತನ್ನ ಹೆಂಡತಿ ಮತ್ತು ಆಕೆಯ ಹಸುಳೆ ಮಗುವನ್ನು ತೌರುಮನೆಗೆ ಕಳಿಸಿ ಬಾ ಎಂದು ಮಂತ್ರಿಯನ್ನು ಕಳಿಸಿಕೊಡುತ್ತಾನೆ. ರಾಜನ ಹೆಂಡತಿ, ಅಂದರೆ ಮಗುವಿನ ತಾಯಿ, ಒಂದು ಮಗುವಿಗೆ ಅಮ್ಮ ಆದವಳು ಮತ್ತು ಮಂತ್ರಿ ರಾತ್ರಿಯಾಗುತ್ತಲು ಒಂದು ಕಡೆ ಬೇರೆ ಬೇರೆ ಡೇರೆಗಳಲ್ಲಿ ಮಲಗುತ್ತಾರೆ. ಮಧ್ಯರಾತ್ರಿ ಆಗುತ್ತಲು ಮಂತ್ರಿಗೆ ತೀಟೆ ಹೆಚ್ಚಾಗುತ್ತದೆ. 'ಅಮ್ಮನ' ಡೇರೆಗೆ ನುಗ್ಗುತ್ತಾನೆ. ಸಿಕ್ಕ ಕಡೆ ಕೈಹಾಕುತ್ತಾನೆ. ದಾಳಿಗೆ ಹೆದರಿದ 'ಅಮ್ಮ' ಓಡಿ ಹೋಗಿ ಹತ್ತಿರದ ದೇವಸ್ಥಾನ ಸೇರಿಕೊಂಡು ಬಾಗಿಲು ಭದ್ರ ಮಾಡಿಕೊಳ್ಳುತ್ತಾಳೆ. ಮಂತ್ರಿ ಅವಳ ಮಗುವನ್ನು ಎಡಗೈಲಿ, ಬಲಗೈಲಿ ಕತ್ತಿ ಹಿಡಿದುಕೊಂಡು ದೇವಸ್ಥಾನದ ಬಾಗಿಲಿಗೆ ಬರುತ್ತಾನೆ. ನನ್ನ ವಶವಾಗು ಇಲ್ಲದಿದ್ದರೆ ಈ ನಿನ್ನ ಕಂದನನ್ನು ಕಳೆದುಕೊಳ್ಳುತ್ತೀಯಾ ಅನ್ನುತ್ತಾನೆ. ಅವಳು ಬಾಗಿಲು ತೆಗೆಯುವುದಿಲ್ಲ, ಮಂತ್ರಿ ದೇವಸ್ಥಾನದ ಆ ಬಾಗಿಲ ಎದುರೆ ಮಗುವನ್ನು ಕತ್ತರಿಸಿ ಹಾಕಿ ಹೊರಟು ಹೋಗುತ್ತಾನೆ. ಅವಳು ತಪ್ಪಿಸಿಕೊಂಡು ಹೋಗಬಹುದಾದ

ಜಾಗಗಳನ್ನು ಗುರುತಿಸಿ ಅಲ್ಲಿಗೆ ಕೊಲೆಗಡುಕರನ್ನು ನೇಮಿಸುತ್ತಾನೆ.

ಇವಳು ದೇವಸ್ಥಾನದಿಂದ ಹೊರಬರುತ್ತಾಳೆ. ತಾನು ಹೋಗಬಹುದಾದ ಜಾಗಗಳಿಗೆ ಹೋಗುತ್ತಾಳೆ. ಅಲ್ಲಿ ಕೊಲೆಗಡುಕರು ಎದುರಾಗುತ್ತಾರೆ. ಆ ಬಡ್ಡಿ ಹೈಕಗಳಿಗೆ ಚೆಡ್ಡಿ ಬೆಚ್ಚಗಾಗುವಂತೆ ಮಾತನಾಡಿ ತಪ್ಪಿಸಿಕೊಳ್ಳುತ್ತಾಳೆ. ಒಂದು ಅನ್ನ ಛತ್ರದಲ್ಲಿ ಫೋಟೋ ಇಡಿಸುತ್ತಾಳೆ. ಮೋಸ ಹೋದವರು ಆ ಫೋಟೋ ನೋಡಿ ಬೈಯುತ್ತ ಅಲ್ಲಿ ಕುಳಿತು ಕೊಳ್ಳುತ್ತಾರೆ. ಹೆಂಡತಿ ಹುಡುಕಿ ಬಂದ ಗಂಡ ಅವಳ ಫೋಟೋ ನೋಡಿ ಕಣ್ಣೀರು ಹಾಕುತ್ತಾನೆ. ಆಗ ಅವನನ್ನು ಸೇರುತ್ತಾಳೆ.

ಇಡೀ ಕಥೆಯಲ್ಲಿ ಹೆಂಡತಿ ಎಲ್ಲೆಲ್ಲಿ ಹೋಗಿದ್ದಳು ಏನೇನು ಅನಾಹುತ ಮಾಡಿರ ಬಹುದು ಎಂಬ ಚಿಕ್ಕ ಸಂಶಯ ಗಂಡನಿಗೆ ಬರುವುದಿಲ್ಲ. ಹೆಂಡತಿಗೆ ಕೂಡ. ಈಗ ಅಮ್ಮ ಎಲ್ಲಿದ್ದಾಳೆ? ಗುರುತಿಸಿ. ಮಗು ಸಾಯುತ್ತಿದ್ದರೂ ಪಾತಿವ್ರತ್ಯ ಉಳಿಸಿಕೊಂಡಿದ್ದರಲ್ಲಿ ಪೋಕರಿಗಳಿಗೆ ತನ್ನನ್ನು ಒಪ್ಪಿಸಿಕೊಳ್ಳದಿದ್ದ ಕಾರಣಕ್ಕೂ, ರಾಜ-ಮಂತ್ರಿ ಸ್ಥಾನದ ಅಂತಸ್ತು ಕಾಪಾಡಿಕೊಂಡಿದ್ದರಿಂದಲೋ, ತನ್ನನ್ನು ರಕ್ಷಣೆ ಮಾಡಿಕೊಂಡಿದ್ದರಿಂದಲೋ, ಗಂಡನನ್ನು ಬಹಳವಾಗಿ ಪ್ರೇಮಿಸಿದ್ದರಿಂದ ಅಥವಾ...? ಸರಳವಾಗಿ ಹೇಳಬೇಕೆಂದರೆ ಸಾಮಾಜಿಕ ನಿಯಮಗಳನ್ನು ಪಾಲಿಸಲು ಎನ್ನಬಹುದು. ಇನ್ನೂ ಒಳಕ್ಕೆ ಹೋಗಿ ಹೇಳಬಹುದಾದರೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ಎನ್ನಬಹುದು. ಇವೆಲ್ಲ ನಿರ್ಬಂಧಿತ ಮಹಿಳೆಯ ಸ್ವಭಾವಗಳು. 'ಸಹ್ಯ ಆಗುವುದಿಲ್ಲ'' ಎಂಬುದೊಂದೆ ನಿಜವಾದ ಸತ್ಯ. ಒಬ್ಬರನ್ನೊಬ್ಬರು ಪ್ರೀತಿ, ಬಂಧುತ್ವ, ಭ್ರಾತೃತ್ವ, ಸಂಪತ್ತು ಸೃಷ್ಟಿ ಯಾವುವೂ ಅಸ್ತಿತ್ವದಲ್ಲಿ ಇರುವುದಿಲ್ಲ. ಅವುಗಳಿಗೆ ಇರಬೇಕಾದ 'ಕಲರ್, ಕದರ್' ಇರುವುದಿಲ್ಲ. ಎಲ್ಲರೂ ಎಲ್ಲೆಲ್ಲೂ ಬೆತ್ತಲೆ ಇರುತ್ತಾರೆ. ಅವರನ್ನು ಭೋಗಿಸುತ್ತೀರಾ? ಆಗ ನಿಮ್ಮಲ್ಲಿ ಮನಸ್ಸು ಇರುವುದಿಲ್ಲ, ವ್ಯಕ್ತಿಗೆ, ಸಮಾಜಕ್ಕೆ ಮನಸ್ಸು ಕೊಡುವುದು 'ಅಮ್ಮ' ವ್ಯಕ್ತಿತ್ವ ಕೊಡುವುದು 'ಅಮ್ಮ'.

**ಚಿನ್ನದ ಕೊಡಕ್ಕೆ ಉಣ್ಣೆಯ ಬಾಯಾರ**

**ನನ್ನಿಂದ ನೀರ ತರಲಿಲ್ಲ.**

ಎನ್ನುತ್ತಾಳೆ ಹುಡುಗಿ. ಸಂದರ್ಭವನ್ನು ಭಾವಿಸಿಕೊಳ್ಳಿ. ಕುದಿತ ತಣ್ಣಗಾಗುವುದಕ್ಕೆ ಮಾತ್ರವೆ? ತಾಳಿಕೊಳ್ಳುವುದಕ್ಕೊ? ಗೂಡು ಕಟ್ಟುವುದಕ್ಕೆ. ಚಿಕ್ಕಪುಟ್ಟ ಹಕ್ಕಿಗಳು ಗೂಡು ಕಟ್ಟುವುದಕ್ಕೆ ಪಡುವ ತವಕವನ್ನು ಗಮನಿಸಿ. ಅಲ್ಲಿ ಚಿಲಿಪಿಲಿ ಸ್ವರವನ್ನು ಸವಿಯಿರಿ. ಜೀವನ ಎಂಥ ಪುಳಕ ಎನಿಸುವುದಿಲ್ಲವೆ? ಇಲ್ಲದಿದ್ದಲ್ಲಿ ಸೆಕ್ಸ್ ಕೂಡ ಶವ

ಎನಿಸುವುದಿಲ್ಲವೆ. ಜೀವನಕ್ಕೆ ಪುಳಕ ಹುಟ್ಟಿಸುವ ಹೆಣ್ಣು ಇದ್ದಾಳಲ್ಲ ಅಲ್ಲಿ 'ಅಮ್ಮ' ಇದ್ದಾಳೆ.

**ಇನ್ನೊಂದು ಪೂರಕ ಉದಾಹರಣೆ :**

ಹೆಂಡತಿ ಗಂಡನಿಗೆ ಕಾಡಿಗೆ ಹೋಗಿ ದೇವರ ಹತ್ತಿರ ವರ ಬೇಡಿ ಏನಾದರೂ ತನ್ನಿರಿ, ನಮ್ಮ ಬಡತನ ಕಡಿಮೆ ಮಾಡಿರಿ ಎಂದು ಒತ್ತಾಯಿಸುತ್ತಲೇ ಇದ್ದಳು. ಕಾಡಿಗೆ ಹೋಗಿ ಸೌದೆ ತಂದು ಮಾರುವಾಗಲೆಲ್ಲ ಹೆಂಡತಿ ಮಾತು ಕೊರೆಯುತ್ತಿತ್ತು. ಕಾಡಿನಲ್ಲಿ ಬಾವಿಯೊಂದರ ಪಕ್ಕ ಒಂದು ನಿಮಿಷ ಕೂತು ದೇವರು ಏನಾದರೂ ಕೊಡಲೊಲ್ಲನೆ ಎನ್ನುತ್ತಿದ್ದ. ಒಂದು ದಿನ ಒಬ್ಬ ಮುದುಕ ಬಂದು ಏನೊ ಬಡವ, ನಿನ್ನ ಚಿಂತೆ ಅಂದ. ಇಂಗಿಂಗೆ ಸ್ವಾಮಿ ಅಂದ ಬಡವ, ತಗೋ ಈ ಮೂರು ತೆಂಗಿನಕಾಯಿ, ನಿನಗೆ ಏನೇನು ಬೇಕೋ ಅದನ್ನು ಕೇಳಿ ಓಡಿ ಅಂದ ಮುದುಕ. ಪರಮಾನಂದವಾಯಿತು ಬಡವನಿಗೆ, ಮನೆಗೆ ಬಂದ. ನೆಲಸಾರೆ ರಂಗೋಲಿ ಬಿಡೆ, ಹಸೆಕಲ್ಲ ಚನ್ನಾಗಿ ತೊಳು ವಿಭೂತಿ ಹಚ್ಚೆ ಕಾಯೊಡಿಯ್ಯನ ಅಂದ. ಹೂಂಕಣಿ ಅಂದ್ಲು, ಅವಳಿಗೆ ಭಾಳಾ ಸಂತೋಷ ಆಗಿತ್ತು. ಹೆಚ್ಚಿನದೇನಾದರೂ ಪಡ್ಕೊಬೇಕು ಅಂತ ಇತ್ತು. ಅಂತ ಇತ್ತು. ಗಂಡ ಏನೇನೋ ನೆನೆದು ಕಾಯಿ ಒಡೆಯಲು ತಯಾರಾಗಿ ಹಸೆಕಲ್ಲ ಹತ್ರ ಇದ್ದ. ಇವಳು ರೀ ರೀ ವಡ್ಡೆ. ಒಳ್ಳೆ ಚಿನ್ನದ, ರನ್ನದ ಒಡ್ಡೆ ಬರಂಗೆ ಒಡಿರಿ ಎಂದು ಪೀಡಿಸಲು ಶುರು ಮಾಡಿದಳು. ಗಂಡನಿಗೆ ಸಿಟ್ಟು ಬಂತು ಒಡವಂತೆ ಒಡವೆ ಎಂದವನೆ ಸಿಟ್ಟು ತಡೆಯಲಾರದೆ ತರ್‌ಡ್ ಬರಿ ಅಂದ.

ಮನೆ, ಮೂಲೆ, ಸಂದು ಗೊಂದು, ಮುಖಮೂತಿ, ಮೈ ಎಲ್ಲ ಕಡೆ ಅವೇ ನೇತಾಡಿದವು. ಗಂಡ-ಹೆಂಡತಿ ನೋಡುತ್ತಾರೆ. ಮೈಗೆ ಮುಜುಗರ ಅಂಟಿಕೊಂಡಂತಾಯ್ತು, ಭಯವೂ ಆಯ್ತು, ಮನೆಯೊಳಕ್ಕೆ ಯಾರಾದರೂ ಬಂದು ನೋಡಿದರೆ ಅಂತ, ಇವೆಲ್ಲ ಎಲ್ಲಿಂದ ತಂದರು ಎಂದು ಯಾರಾದರೂ ಕೇಳಿದರೆ ಅಂತ ಗಾಬರಿ ಶುರುವಾಯಿತು. ಹೆಂಡತಿ ಅವಸರ ಮಾಡಿ ಎಲ್ಲ ಹೋಗಿಂತ ಇನ್ನೊಂದ್ ಕಾಯಿ ಒಡಿರಿ ಅಂತ ಒಂದೇ ಸಮನೆ ಒತ್ತಾಯ ಮಾಡಿದಳು. ಈ.. ಎಲ್ಲಾ ಹೋಗ್ಲಿ ಅಂತ ಗಂಡ ಇನ್ನೊಂದ್ ಕಾಯಿ ಹೊಡದ. ಸಮಾಧಾನ ಆಯ್ತು, ಮೇಲಕ್ಕೆ ಎದ್ದ. ದೇಹದಲ್ಲಿ ಸ್ವಲ್ಪ ಭಾರ ಕಡಿಮೆ ಆಗಿರುವುದು ಮನಸ್ಸಿಗೆ ಬಂತು. ಮುಟ್ಟಿ ನೋಡಿಕೊಳ್ಳುತ್ತಾನೆ ! ತನ್ನವೇ ಇಲ್ಲ.

ಹೆಂಡತಿ ಗಮನಿಸಿದಳು. ಆಯ್ಯಯ್ಯೋ ಅವಿಲ್ದೆ ಇದ್ರೆ ಹೆಂಗ್ರಿ? ಅವೆರ್ಡ್ ಬರ್ಲಿ

ಸಾಕು ಅಂತ ಇನ್ನೊಂದ್ ಕಾಯಿ ಒಡಿರಿ ಅಂದ್ಲು. ಇಬ್ಬರಿಗೂ ಅವೇ ಮುಖ್ಯ ಅನಿಸಿತು. ಅವೆರ್ ಬರಿ ಸಾಕು ಅಂತ ಗಂಡ ಕೊನೆ ಕಾಯಿ ಒಡೆದ.

ಮೇಲು ಪಾತಳಿಯಲ್ಲಿ ನೋಡಿದರೆ ಈ ಕಥೆ ಒಂದು ತಮಾಷೆ, ಒಂದು ತೀಟೆ, ಒಂದು ಅಸಹ್ಯ. ಆದರೆ ಬಹುಸಂಖ್ಯಾತ ಜನರು ಈ ಕಥೆಯನ್ನು ಅನೇಕ ಕಾಲಗಳಿಂದ ಹೇಳುತ್ತ ಅನುಭವಿಸುತ್ತ ಮತ್ತು ಕಲಿಯುತ್ತ ಬರುತ್ತಿದ್ದಾರಲ್ಲ ! ಮಡಿ ಮನುಷ್ಯ ಛೇ ಛೇ ಅಂದಾನು. ಜೀವನವನ್ನು ತಿಳಿದವನು ಸ್ವಾರಸ್ಯ ಇರುವುದು ಇಲ್ಲೇ ಎನ್ನುತ್ತಾನೆ. ನೀತಿ ಬೋಧಕ, ಮನುಷ್ಯನ ಅವಶ್ಯಕತೆ ಏನು ಎನ್ನುವುದನ್ನು ಶಿವ ತೋರಿಸಿಕೊಟ್ಟಿದ್ದಾನೆ ಅನ್ನುತ್ತಾನೆ. ಸಾಹಿತಿ ತುಂಬ ರುಚಿಯಾಗಿದೆ ಕಥೆ ಅಂದಾನು.

ಜಾನಪದೀಯ ಏನೆನ್ನುತ್ತಾನೆ? ಜೀವನ ಇದೆ. ಅದರ ಮುಂದುವರಿಕೆ ಇದೆ. ಮನುಷ್ಯರು ಕೇವಲ ಮನುಷ್ಯರೇ ಆಗಿದ್ದಾರೆ. ಇದು ಮಜ ಅನ್ನುತ್ತಾನೆ. ನಾವು ಜೋಡಿಸುವ ನೀತಿ-ನಿಯಮ, ಕಟ್ಟು-ಕಟ್ಟಳೆ, ಸ್ಥಾನ-ಮಾನ, ಸಂಪತ್ತು-ಸುಖ, ಎಲ್ಲ ಎಲ್ಲ ಎಕ್ಸ್‌ಟ್ರಾಗಳು ಅಥವ ಹೊರೆಗಳು. ಇರುವುದೊಂದೇ ಅದು ಜೀವನ. ಅದು ಇರಬೇಕು- ನಿರಂತರ, ಖುಷಿ, ನೆಮ್ಮದಿ ಕೊಡಬೇಕು. ಅಷ್ಟೆ, ಇನ್ನೇನು, ಏನನ್ನೂ ಅಲ್ಲ,

ಹೆಣ್ಣು ಗಂಡು ತನಗಾಗಿ ಮತ್ತು ತನ್ನವರಿಗಾಗಿ ಕಟ್ಟುವ ವೇಷ-ವೇಷಗಳು, ಅಲ್ಲಿ ಅಮ್ಮ ಇಲ್ಲ, ನೀವು ನಿಮ್ಮೊಳಗೆ ಮತ್ತೆ ಮತ್ತೆ ಹುಟ್ಟುತ್ತಿದ್ದರೆ ನಿಮ್ಮಲ್ಲಿ ಅಮ್ಮ ಇದ್ದಾಳೆ ಎಂದು ತಿಳಿಯಿರಿ. ದೇಶದ ಮಾತೂ ಅಷ್ಟೆ, ಅಮೆರಿಕ ಯಾಕೆ ರಾಕ್ಷಸನಂತೆ ವರ್ತಿಸುತ್ತಿದೆ? ಯಾಕೆಂದರೆ ಅದರೊಳಗೆ ಅಮ್ಮ ಇಲ್ಲ.

ಜಾನಪದ ತಲೆಮಾರಿನ ಮೂಲಕ ನಮ್ಮ ನಾಡೋಜರ ಕಥೆ ಹೇಳ ಹೊರಟಿದ್ದೇವೆ. ಅದು ನಾವು ಕಂಡಂತೆ. ನಿಮ್ಮದೊಂದು ಕಥೆ ಇರಬಹುದು! ಅದನ್ನು ಒಡೆಚೆರಿ ಎಂದು ಕೇಳುತ್ತೇವೆ. ಇಂಥ ತಲೆಮಾರಿನ ನೆನಪು ಯಾಕೆ ಎಂದು ನೀವು ಕೇಳಬಹುದು. ತಲೆ ಇರುವವರು ತಲೆಮಾರು ಸೃಷ್ಟಿಸುತ್ತಾರೆ. ಅದಿಲ್ಲದವರು ತಲೆಕೆಳಕಾಗಿರುತ್ತಾರೆ. ಈ ಥರ ''ನಾವು' ಆಗಿದ್ದೇವೆಯೆ ಅಥವಾ ಆಗುವ ಸ್ಥಿತಿಯಲ್ಲಿ ಇದ್ದೇವೆಯೆ ಎಂಬ ಪ್ರಶ್ನೆ ಹುಟ್ಟಬಹುದು. ನಾವು ತಲೆಮಾರನ್ನು ಕಟ್ಟಿಕೊಂಡು ಬಂದಿದ್ದೇವೆ, ಆದರೆ ಮಧ್ಯಂತರದಲ್ಲಿ ಅದನ್ನು ಕಳಕೊಳ್ಳುವ ಅಪಾಯಕ್ಕೆ ಒಳಗಾಗಿದ್ದೇವೆ.

'ಆಧುನಿಕ' ಎಂಬ ವಸ್ತು, ವ್ಯಕ್ತಿ ಮತ್ತು ಸಂದರ್ಭ ನಮ್ಮ ತಲೆಮಾರೆಂಬ ಹಳಮೆ, ಹಿರಿಮೆ, ಮಹಿಮೆ, ಮಹತ್ತು, ಸೌಶೀಲ... ಇಂಥಪ್ಪ ಗುಣ ಗೌರವವನ್ನು ನಿರಾಕರಿಸಿದೆಯಲ್ಲ ; ಅದರೊಡನೆ ''ನಾವು' ಎಂಬ ವ್ಯಕ್ತಿತ್ವಗಳೂ ನಿರಾಕೃತಾರ್ಥ ರಾಗಿದ್ದೇವಲ್ಲ ! ಜ್ಞಾನ ಶ್ರೇಷ್ಠ, ಹೌದು; ಜ್ಞಾನದ ಯಜಮಾನಿಕೆ ಶ್ರೇಷ್ಠವಲ್ಲ. ಆಧುನಿಕತೆ ಜ್ಞಾನವಾಗಿ ನಮಗೆ ಯಾಹೊತ್ತು ಬೇಕು, ಆದರೆ ಯಜಮಾನನಾಗಿ ಅಲ್ಲ. ಪರಂಪರೆ ಶ್ರೇಷ್ಠ ಆದರೆ ಅದರ ಸನಾತನತೆಯ ಪ್ರತಿಪಾದನೆ ಯಾಹೊತ್ತೂ ಅನಾಹುತಕಾರಿ. ನಾವು ಪರಂಪರೆ: ಜಾನಪದ ಎನ್ನುವಾಗ ಸನಾತನವಾದವನ್ನು ತಿರಸ್ಕರಿಸುತ್ತೇವೆ, ನಿರಂತರವಾದ, ನಿರ್ವಂಚಿತ ಸಾಂಸ್ಕೃತಿಕ ಇತಿಹಾಸವನ್ನು ಗೌರವಿಸುತ್ತೇವೆ. ಅದೇ ರೀತಿ ವಿಕಾಸ ಪ್ರಚೋದಿತ ಆಧುನಿಕತೆಯನ್ನು ಕೈ ನೀಡಿ ಸ್ವಾಗತಿಸುತ್ತೇವೆ. ವಿಜ್ಞಾನವನ್ನು ಸೆರೆಯಲ್ಲಿಟ್ಟುಕೊಂಡು ಉದ್ಯಮವಾಗಿಸಿರುವ ಅಧುನಿಕವೆಂಬ ಪ್ರವೃತ್ತಿಯನ್ನು ದೂರುತ್ತೇವೆ. ಒಂದು ದೇಶದ ಜ್ಞಾನ-ವಿಜ್ಞಾನವನ್ನು

ಅದರಿಂದ ಸಾಧಿತವಾಗುವ ತಲೆಮಾರನ್ನು ನಾವು ಗ್ರಹಿಸುವುದು ಮತ್ತು ಕಟ್ಟಿಕೊಳ್ಳುವುದು ಈ ಮೇಲಿನ ಚಿಂತನೆಯ ವಿವೇಕದಿಂದ.

ನಮ್ಮ ದೇಶದ ಶ್ರೇಷ್ಠತೆ ಎಂಬುದು ಜಾತಿ ಆಗಿದ್ದಾಗ ಕಲಿತ ಜಾತಿಯ ಒಂದು ಕೂಸು ಕಲಿಯದ ಜಾತಿಯ ಹಿರಿಯನನ್ನು ಏನೊ ಅಂದಾಗ ಆತ ಹಿನ್‌ತಲೆ ಕೆರೆದುಕೊಳ್ಳುತ್ತ ಏನೂ ಇಲ್ಲ ಬುದ್ಧಿ, ಎಲ್ಲ ತಮ್ಮದೇ 'ಎನ್ನುತ್ತಿದ್ದ. ಶ್ರೇಷ್ಠತೆ ಎಂಬುದು “ಆಧುನಿಕತೆ' ಆದ ಈ ಸಂದರ್ಭದಲ್ಲಿ ಒಂದು ಕೆಂಚ ಪ್ರಾಣಿ ಕಂಡರೂ ಕೂಡ ಭಗವಂತ ಭೂಮಿಗೆ ಬಂದಂತೆ ಕಂಡು ಉನ್ಮಾದಗೊಳ್ಳುತ್ತೇವೆಲ್ಲ ! ಹಾಗಿದ್ದಲ್ಲಿ ನಾವು ನಿರೀಕ್ಷಿಸುವ ಸಂಭವಾಮಿ ಯುಗೇ ಯುಗೇ' ಪುರುಷ ಇವನೆ ಎಂದು ತಿಳಿಯಬಹುದೆ? ಏನು ಹೇಳುವಿರಿ: ಯುಗಜ್ಞಾನವೆಂಬ ಕಾಲಗಳ ಸಂಪತ್ತು ಈ 'ಆಧುನಿಕ'ವೆಂಬ ಏಕಕಾಲ ಜ್ಞಾನದ ಮುಂದೆ ಮಂಡಿಯೂರಿ ಕುಳಿತುಬಿಟ್ಟಿತಲ್ಲ. ಇಂಥ ದೊಡ್ಡ ಧಾಳಿ ನೀವು ಕಂಡ ಹಾಗೆ ಯಾವತ್ತಾದರೂ ಹಿಂದೆ ನಡೆದುದುಂಟೆ!

ನಮ್ಮ ಜ್ಞಾನದ ಕುಸಿತ ನಮ್ಮ ಅಜ್ಞಾನದ ಏರಿಕೆಯ ಮೂಲ. ಈ ಕುಸಿತ ಎರಡು ರೀತಿಯದು. ಒಂದು, ನಮ್ಮ ಸಮಾಜದೊಳಗೆ ಏಕ ಮುಖ ಅಥವಾ ಪರಸ್ಪರ ಶೋಷಣೆಗೆ ತೊಡಗಿರುವುದು. ಎರಡು, ನಾವು ಕುಸಿದಿದ್ದೇವೆ ಎಂದು ಸ್ವಯಂ ಘೋಷಿಸಿಕೊಳ್ಳುವುದು. ಆಧುನಿಕತೆ ಜಾತಿ ಶ್ರೇಷ್ಠತೆಯನ್ನು ಒಡೆಯಿತು ಎಂಬುದು ಅಮೋಘ ಸಾಧನೆ, ಅದಕ್ಕೆ ಎಲ್ಲ ಬಡವರ ಧನ್ಯವಾದಗಳು. ಅದು ನಮ್ಮನ್ನೆಲ್ಲ ಅಜ್ಞಾನಿಗಳು ಎಂದು ಘೋಷಿಸಿತಲ್ಲ ಅದು ನಮ್ಮ ಮರಣ ಶಾಸನ. ನಾವೀಗ ನಮ್ಮ ಮರಣ ಶಾಸನವನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಾಡುತ್ತಿದ್ದೇವೆ.

ಆದರೆ ಜಾನಪದ ಜೀವಂತ, ಅದು ಸಾಯಲು ನಿರಾಕರಿಸುತ್ತದೆ. ಜಾನಪದ ಉಳಿಕೆ ಎಂದರು, ಕೆಲವರು ಪಳಯುಳಿಕೆ ಎಂದರು, ಮತ್ತೆ ಸ್ವಲ್ಪ ಜನ ಜೀವಂತ ಪಳಯುಳಿಕೆ ಎಂದರು. ಇದೇ 'ಆಧುನಿಕತೆ' ಬರೆದ ಮರಣ ಶಾಸನ, ವಿಜ್ಞಾನ ಹೀಗೆ ಹೇಳದು. ಯಾಕೆಂದರೆ ನಮ್ಮ ಆಧುನಿಕತೆ ಓಡುತ್ತಿರುವ ಚಕ್ರಗಳು. ನಮ್ಮ ಪುರಾತನರು ಕಂಡುಹಿಡಿದ ಚಕ್ರದ ಪರಿಷ್ಕೃತ ಚಲನೆಗಳು ಜ್ಞಾನ-ವಿಜ್ಞಾನ ಉದ್ಯಮವಾಗಿ ಉದ್ಯಮಪತಿಯ ವಶಕ್ಕೆ ಒಳಗಾದಾಗ ಅದು 'ಆಧುನಿಕ' ಎಂಬ ವಿಶೇಷ ಹೆಸರನ್ನು ಪಡೆದುಕೊಂಡು ಸಾಮಾನ್ಯವನ್ನು ಶೋಷಿಸುವ ಉದ್ಯಮದ ಚಿಹ್ನೆ ಆಗಿ ಬಿಡುತ್ತದೆ. ವಿಜ್ಞಾನ ವಿಶೇಷ ಎನ್ನುತ್ತೇವೆ. ಇದು ಸಾಮಾನ್ಯದ ಮತ್ತೊಂದು ಮುಖ. ಅದು ಸಾಮಾನ್ಯದ ಶೋಷಕ ಅಲ್ಲ: ಸಾಮಾನ್ಯದ ಸಾರ್ವಕಾಲಿಕ ಅಭಿವೃದ್ಧಿಯ

ಅಳತೆಗೋಲು, ಸಾಮಾನ್ಯ ಎಂಬುದು ಸಾರ್ವಕಾಲಿಕ ವಿಜ್ಞಾನ; ವಿಶೇಷವೆಂಬುದು ಸಮಕಾಲೀನ ವಿಜ್ಞಾನ, ವಿಜ್ಞಾನ ಇಲ್ಲದ ಬದುಕು ಇಲ್ಲ. ಈ ಜಾನಪದವೆಂಬುದು ಸಾರ್ವಕಾಲಿಕ ಜ್ಞಾನ -ವಿಜ್ಞಾನ. ಈ ಜ್ಞಾನದಲ್ಲಿ ಮೂಡುವ ವಸ್ತುಗಳು ಮತ್ತು ವ್ಯಕ್ತಿಗಳು ಸಾರ್ವಕಾಲಿಕ ಸತ್ಯದ ಕ್ರಿಯೆಗಳಾಗುತ್ತಾರೆ. ಇವುಗಳೊಳಗಿಂದ ಎದ್ದು ನಿಲ್ಲುವ ವ್ಯಕ್ತಿತ್ವಗಳು ಆ ಸಮಾಜದ ಮಾರ್ಗದರ್ಶಕ ತತ್ವಗಳಾಗಿರುತ್ತಾರೆ. ಮತ್ತೊಂದು ಅರ್ಥದಲ್ಲಿ ಸಾಂಸ್ಕೃತಿಕ ಪ್ರತಿನಿಧಿಗಳು.

ಹೀಗೆ ಒಂದು ಜನಪದ ಸಮಾಜವನ್ನು ಕಟ್ಟುವ ಮತ್ತು ಉಳಿಸುವ ಪ್ರಯತ್ನದಲ್ಲಿರುವವರೆಲ್ಲ ಜಾನಪದ ಗ್ರಹಿಕೆ ಮತ್ತು ಬೆಳವಣಿಗೆಯ ಮಾರ್ಗಸೂಚಿಗಳಾಗುತ್ತಾರೆ. ನಾವು ಈಗ 'ಜಾನಪದ ತಲೆಮಾರು' ಕೃತಿಯ ಮೂಲಕ ನಿಮ್ಮ ಮುಂದೆ ನಿಲ್ಲಿಸುತ್ತಿರುವ ವ್ಯಕ್ತಿತ್ವಗಳು ಜನಪದ ಮತ್ತು ಅದರ ಸಂಸ್ಕೃತಿಯನ್ನು ಉಳಿಸಲು ಹಳಹಳಿಸಿದವರು. ಆರ್ಥಾತ್ ಇಪ್ಪತ್ತನೆಯ ಶತಮಾನದ 'ಆಧುನಿಕ' ಎಂಬ ಉದ್ಯಮವಿಜ್ಞಾನದ ವಿರುದ್ಧ ಧ್ವನಿ ಎತ್ತಿದವರು. ಜನಪದಕ್ಕಿರುವ ನೆಲ ಮತ್ತು ನೆಲೆಯನ್ನು ಗಟ್ಟಿಯಾಗಿ ಪ್ರತಿಸಾದಿಸಿದವರು. ಆ ಮೂಲಕ ಪರಂಪರೆ ಯಾವ ಕಾರಣಕ್ಕೂ ಕಡಿತಗೊಳ್ಳಬಾರದು ಎಂದು ಅಹರ್ನಿಶಿ ದುಡಿದವರು. ಇವರು ವಿಜ್ಞಾನ ವಿರೋಧಿಗಳಲ್ಲ ; ವಿಜ್ಞಾನದೊಳಗಿನ ಅಜ್ಞಾನವನ್ನು ತೊಡೆಯಲು ಸದ್ದು ಮಾಡಿದವರು.

ಜನಪದರು ಲಕ್ಷಾಂತರ ವರ್ಷಗಳಿಂದ ಬದುಕಿ ಜಾನಪದವನ್ನು ಹುಟ್ಟಿಸಿ, ಸಾಕಿದ್ದಾರೆ ಮತ್ತು ಅದನ್ನು ಅನುಭವಿಸಿದ್ದಾರೆ. ಜಾನಪದವೆಂಬ ಪರಿಕಲ್ಪನೆ ಹುಟ್ಟಿದ್ದು ೧೮೪೬ರಲ್ಲಿ: ಭಾರತದಲ್ಲಿ ಇದರ ಗ್ರಹಿಕೆ ಶುರುವಾದದ್ದು ಹತ್ತೊಂಬತ್ತನೆಯ ಶತಮಾನದಲ್ಲಿ ಇದಕ್ಕೆ ಕಾರಣರು ಪಾಶ್ಚಿಮಾತ್ಯರು. ಅವರು ಜಾನಪದವನ್ನು ಸಾಮಗ್ರಿ ಎಂದು ಗ್ರಹಿಸಿ ಸಂಗ್ರಹಿಸಿದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಮ್ಮ ಜಾನಪದ ವಿದ್ವಾಂಸರೆಂಬುವವರು ಜಾನಪದವನ್ನು ಒಂದು ಕಡೆ ಸಾಮಗ್ರಿ ಎಂದು ಗ್ರಹಿಸಿದರು ಮತ್ತೊಂದು ಕಡೆ ನಮ್ಮದೆಂಬ ದೇಸಿ ಸಾಹಿತ್ಯ ಎಂದು ತಿಳಿದರು. ಸ್ವದೇಶಿ ಬಿಡುಗಡೆಗಾಗಿ ಸ್ವದೇಶಿಯಾದ ಜಾನಪದವನ್ನು ಸಂಗ್ರಹಿಸಿದರು ಮತ್ತು ಬಳಸಿಕೊಂಡರು. ಆ ಮೂಲಕ ದೇಶದ ಪರಿಕಲ್ಪನೆ ಬೆಳೆಯಲು ನೆರವಾದರು. ಸ್ವಾತಂತ್ರ್ಯ ಸಂಪಾದನೆ ಮತ್ತು ಸ್ವದೇಶಿ ಪರಿಕಲ್ಪನೆಯನ್ನು ಮೂಡಿಸುವಲ್ಲಿ ಪಾತ್ರವಹಿಸಿದ ಇವರನ್ನು ದೇಶಪ್ರೇಮಿಗಳು ಹಾಗೂ ದೇಶೋದ್ಧಾರಕರು ಎಂದು

ಕರೆಯಬಹುದು. ಇವರು ಸಾಮಾನ್ಯ ಸ್ವಾತಂತ್ರ ಹೋರಾಟಗಾರರಿಗಿಂತ ಭಿನ್ನರಾಗಿದ್ದಾರೆ. ಯಾಕೆಂದರೆ ಒಂದು ಕಡೆ ದೇಶದ ಬಿಡುಗಡೆಗೆ ನೆರವಾಗುತ್ತಿದ್ದಾರೆ ಮತ್ತೊಂದು ಕಡೆ ದೇಶೀ ಸಂಪತ್ತಿನ ಮೂಲಕ ದೇಶೋದ್ದಾರ ಎಂಬ ಒಂದು ಸ್ಥಳೀಯ ಅರ್ಥಶಾಸ್ತ್ರ ತತ್ವವನ್ನು ಇವರು ನಮ್ಮ ಮುಂದೆ ಇರಿಸಿದ್ದಾರೆ. ಈ ದೃಷ್ಟಿಯಲ್ಲಿ ಜಾನಪದವೆಂಬುದು ಸ್ವದೇಶಿ ಅರ್ಥಶಾಸ್ತ್ರ ಕೂಡ ಆಗಿದೆ. ಪಾಶ್ಚಾತ್ಯ ಜಾನಪದ ತತ್ವ ಮತ್ತು ಸಿದ್ಧಾಂತಗಳ ಹಿಡಿತದಿಂದ ಹೊರ ಬಂದ ಯಾವುದೇ ಜಾನಪದ ವಿದ್ವಾಂಸ ಜಾನಪದವನ್ನು ಸ್ವದೇಶಿ ವಿಜ್ಞಾನ ಮತ್ತು ಅರ್ಥಶಾಸ್ತ್ರ ಎಂದು ನೋಡುತ್ತಾನೆ. ಪಾಶ್ಚಾತ್ಯವನ್ನು ನೇರವಾಗಿ ಅನುಕರಿಸುವ ಜಾನಪದ ವಿದ್ವಾಂಸ ಒಬ್ಬ ಮುಗ್ಧ ತರ್ಜುಮೆಗಾರ ಮಾತ್ರ ಆಗಿರುತ್ತಾನೆ.

'ಜಾನಪದ ತಲೆಮಾರು' ಕೃತಿ ಸಂಪುಟಗಳನ್ನು ಹೊರತರುವ ಮೂಲಕ ಜಾನಪದ ತಜ್ಞರೆಂಬ ಈ ದೇಶಿ ತತ್ವ ಚಿಂತಕರು ಮತ್ತು ದೇಶಿ ಅರ್ಥ ಶಾಸ್ತ್ರಜ್ಞರನ್ನು ನಾವು ಗುರುತಿಸಿ ಗೌರವಿಸುತ್ತಿದ್ದೇವೆ. ಭವಿಷ್ಯದ ಭಾರತವನ್ನು ಕಟ್ಟಬಯಸುವ ರಾಜಕೀಯ ಮುಂದಾಳುಗಳು ಈ ಜಾನಪದ ತಜ್ಞರು ಒಟ್ಟಾಗಿ ಏನು ಹೇಳಿದ್ದಾರೆ ಎಂಬುದನ್ನು ಗಮನಿಸಲಿ. ದೇಶದ ಅಭಿವೃದ್ಧಿಯಲ್ಲಿ ಪಾಲುಗಾರರಾಗಬೇಕೆಂಬ ಈ ಸದುದ್ದೇಶದಿಂದಲೆ ಜಾನಪದ ಅಕೆಡೆಮಿ ಇಂಥ ಮಹತ್ವದ ಕೆಲಸಕ್ಕೆ ಕೈಯಾಕಿದೆ. ಕರ್ನಾಟಕದಾದ್ಯಂತ ಜಾನಪದ ಕಲಿಯುವವರು, ಸಂಗ್ರಹಿಸುವವರು ಮತ್ತು ಅಧ್ಯಯನ ಮಾಡುವವರು ಈ ಕೃತಿಗಳಿಂದ ಪ್ರಯೋಜನ ಪಡೆಯಲಿ ಎಂಬ ಪಾಠ ಕಲಿಸುವ ಮೇಸ್ತರಿಕೆ ಕೆಲಸದ ದೃಷ್ಟಿಯಿಂದ ಮಾತ್ರ ಈ 'ಜಾನಪದ ತಲೆಮಾರು' ಕೃತಿಗಳನ್ನು ಹೊರತರುತ್ತಿಲ್ಲ ಎಂಬುದನ್ನು ಓದುಗರು ಅರ್ಥಮಾಡಿಕೊಳ್ಳಲಿ.

ಜಾನಪದ ತಲೆಮಾರಿನ ಸಾಧಕರನ್ನು ನಾಲ್ಕು ಹಂತಗಳಲ್ಲಿ ಗುರುತಿಸಿ ನಾಲ್ಕು ಕೃತಿಗಳನ್ನು ಹೊರತರುತ್ತಿದ್ದೇವೆ. ಮೊದಲ ತಲೆಮಾರನ್ನು ೧೯೫೦ಕ್ಕೆ ಹಾಗೂ ಎರಡನೆಯ ತಲೆಮಾರನ್ನು ೧೯೭೦ಕ್ಕೆ ನಿಲ್ಲಿಸಿಕೊಂಡಿದ್ದೇವೆ. ೧೯೭೦ರಿಂದಾಚೆನದು ಮೂರನೆಯ ತಲೆಮಾರಿನ ಸಂಪುಟ. ತಲೆಮಾರಿನ ಲೆಕ್ಕವನ್ನು ಇಡುವಾಗ ಲೇಖನ ಅಥವಾ ಕೃತಿ ಪ್ರಕಟಣೆಯ ವರ್ಷವನ್ನು ಮಾನದಂಡವಾಗಿ ಇರಿಸಿಕೊಂಡಿದ್ದೇವೆ. ಮೊದಲ ಲೇಖನ ಅಥವಾ ಕೃತಿಯ ಪ್ರಕಟಣಾ ವರ್ಷ ಜ್ಞಾಪಕದಲ್ಲಿದ್ದು ಹಾಲಿ ಆ ಮಾಹಿತಿ ಸಿಗದಿದ್ದಾಗ ಜ್ಞಾಪಕದ ವರ್ಷದ ಆಧಾರದ ಮೇಲೆ ಹಿರಿತನವನ್ನು ಗೌರವಿಸಿದ್ದೇವೆ. ಮೊದಲಿಗೆ ನಮ್ಮ ಮಧ್ಯೆ ಸಾಧನೆಯಿಂದ ಪರಿಚಿತರಾದ ಜಾನಪದ ವಿದ್ವಾಂಸರನ್ನು ತಲೆಮಾರು ಕೃತಿಯಲ್ಲಿ ಸೇರಿಸಿದ್ದೇವೆ.

'ಜಾನಪದ ತಲೆಮಾರು' ಸಂಪುಟ ೧ರಲ್ಲಿ ಹಿರಿಯ ಜಾನಪದ ಚೇತನಗಳು ತಮ್ಮನ್ನು ತೋಡಿಕೊಂಡಿವೆ. ಕಟ್ಟುವ ಪ್ರತಿಭೆ ಅವರಲ್ಲಿ ತುಂಬಿ ತುಳುಕಿದೆ. ದೇಶ ಮತ್ತು ಜನತೆಯ ಮಧ್ಯೆನಿಂತು ಕಳಚಬೇಕಾದುದು ಹೊದಿಯಬೇಕಾದುದು ಯಾವುದು ಎಂದು ತುಲನೆ ಮಾಡಿದ್ದಾರೆ. ನಾವು ನಿಲ್ಲ ಬೇಕಾದ ನೆಲೆ ಯಾವುದು, ಅದು ಎಷ್ಟು ಸುರಕ್ಷಿತ ಎಂಬ ತಪಶೀಲು ನಡೆಸಿದ್ದಾರೆ. ಮೂರು ಪ್ರಧಾನ ಚಿಂತನಾ ನೆಲೆಗಳು ಇಲ್ಲಿ ನಮ್ಮನ್ನು ತಡಕುತ್ತವೆ. ಮಾದಲಾಗಿ ಶ್ರೀಯವರು 'ಜನವಾಣಿ ಬೇರು; ಕವಿವಾಣಿ ಹೂವು' ಎಂದರಲ್ಲ. ಕರ್ನಾಟಕದ ಸಾಹಿತ್ಯ ಚರಿತ್ರೆ ಬರೆದವರಿಗಾಗಿ ಬಂತು, ಬರೆಯದೆ ಹಾಡಿದವರನ್ನು ಚರಿತ್ರೆಯ ಮೊದಲ ಅಧ್ಯಾಯದ ಮೊದಲ ಅಕ್ಷರದಲ್ಲಿ ಇಟ್ಟರಲ್ಲ. ಸಾಹಿತ್ಯ ಮೀಮಾಂಸೆಗೆ ಹೊಸ ದಿಕ್ಕು ತೋರಿದರಲ್ಲ. ಆದರೆ ಮುಂದೆ ಬಂದವರು ತಮ್ಮ ಜಡತ್ವದಿಂದ ಹೊರಗೆ ಬಂದಂತೆ ಕಾಣಲಿಲ್ಲ. ಜನರಿಗಾಗಿ ಬರೆದ ಮಾಸ್ತಿ ಜಾನಪದದ ಬಗ್ಗೆ ತೋರಿಸಿದ ನಿಯತ್ತು ಬಹಳ ಬೆಲೆಯದು. ಶ್ರೀಯವರಿಗಿಂತ ಮುಂದೆ ಹೋಗಿ ಜನಪದ ಸಾಹಿತ್ಯವೆಂಬುದು ಒಂದು ಪ್ರತ್ಯೇಕ ಅನನ್ಯತೆ, ಅದನ್ನು ಬರಹ ಸಾಹಿತ್ಯದ ಮಾನದಂಡದಿಂದ ನೋಡಲು ಆಗದು ಎಂದರಲ್ಲ, ಇವರನ್ನು ಅರ್ಥೈಸಿ ಹೇಳಲು ನಮ್ಮಂಥ ಹೊಸ ತಲೆಮಾರಿನ ಜಾನಪದ ವಿದ್ವಾಂಸರೆ ಬರಬೇಕಾಯಿತು. ಜನಪದ ಸಾಹಿತ್ಯವನ್ನು ಇಟ್ಟುಕೊಂಡಂತೆ' ಮಾತನಾಡಬೇಡಿ. ಸಂಪನ್ಮೂಲ ಎಂದು ಉಪ ಸಾಹಿತ್ಯ ಸ್ಥಾನ ನೀಡಬೇಡಿ. ಅದು ಬಹುಕ್ರಮ ಸಮಾಜದ ಬಹು ಉತ್ಪತ್ತಿ ಎಂದು ತಿಳಿಯಲು ಮಾಸ್ತಿಯವರು ನೆರವಾಗಿದ್ದಾರೆ.

ಇದೇ ಸಂದರ್ಭದಲ್ಲಿ ಜಾನಪದ ಕುರಿತ ಒಂದು ಭಿನ್ನವಾದ ನೆಲೆ ಸಾಮಾನ್ಯನೆಂಬ ಜನಪದ 'ಶ್ರೀಸಾಮಾನ್ಯ' ನಾಗಬೇಕೆಂದರಲ್ಲಿ ಕುವೆಂಪು. ಅವರಿಗೆ ಹೇಳಿದರು; ''ಸೋಬಾನೆ ಹಾಡುತ್ತಾ ಕೂರಬೇಡಿ'' ಎಂದು. ಏನಿದರ ಅರ್ಥ? ಜಾನಪದ ವಿರೋಧವೆ ? ಅಲ್ಲ! ಜಾನಪದವೆಂಬುದು, ಜನರೆಂಬುವವರು ಹಳತು ಮತ್ತು ಹಳಬರಲ್ಲ, ಇರುವಾಗ ಜಾನಪದವೆಂಬುದು ಒಂದು ಸ್ಥಿತಿ, ಬೆಳೆಯುವಾಗ ಅದು ಸಮಕಾಲೀನ ಆಗಲೇಬೇಕು. ಆದ್ದರಿಂದ ಜನಪದರು ಕೂರಬಾರದು. ಜನಪದ ಸಮಾಜಗಳು ತಮ್ಮ ಮಹಾಸೃಷ್ಟಿಯ ಏಕಲವ್ಯನಂತೆ, ಜಲಗಾರನಂತೆ, ಶಂಬೂಕನಂತೆ, ಮಂಥರೆಯಂತೆ ಬೆಳೆಯಬೇಕು. ಬೇಡವಾದುದನ್ನು ಹಿಂದೆ ಚೆಲ್ಲಿ ಬೇಕಾದುದನ್ನು ಉಳಿಸಿಕೊಳ್ಳುವುದೇ ಜನಪದ-ಜಾನಪದದ ಅಸ್ತಿತ್ವ ಪ್ರತಿಪಾದನೆ. ಇಲ್ಲದಿದ್ದಲ್ಲಿ ನಮ್ಮ ಜಾತಿಶ್ರೇಷ್ಠ ಸಮಾಜದಲ್ಲಿಯ ಅಗಸರು, ಬೆಸ್ತರು, ಬೇಡರು, ಕುರುಬರು, ಕೊರಚರು, ದೀವರು ಈ ಜನಪದಗಳು ಪಳಯುಳಿಕೆಗಳೇ ಆಗಿ ಕಾಣುತ್ತವೆ. ಅವರನ್ನು ಹಾಗೆಯೆ

ಉಳಿಸಿ ಹೊಗಳುವ ಪಾಠ ಒಪ್ಪಿತವಾಗಿ ಬಿಡುತ್ತದೆ. ಅವರೂ ಕೂಡ ''ಶ್ರೀ'' ಆಗಬೇಕು. ಕುವೆಂಪು ಅವರ ಏಕಲವ್ಯನಂತೆ ಇವರೆಲ್ಲ ಮನೆಮನೆಯ ತಪಸ್ವಿಗಳಾಗಬೇಕು, ತಮ್ಮ ಸಮುದಾಯದ ಸಾಂಸ್ಕೃತಿಕ ನೇತಾರರಾಗಬೇಕು. ಆಗ ನಾವು ಒಟ್ಟು ಸಂಸ್ಕೃತಿಯ ಬೆಳವಣಿಗೆಯನ್ನು ಕಾಣುತ್ತೇವೆ. ಈ ಸಂಸ್ಕೃತಿ ಬೆಳವಣಿಗೆಯಿಂದ ಸಂವೃದ್ಧ ಜಾನಪದವನ್ನು ಕಾಣುತ್ತೇವೆ. ಅಂದರೆ ಜಾನಪದ ಬೆಳವಣಿಗೆಯನ್ನು ಕಾಣುತ್ತೇವೆ. ಹೀಗೆ ಜಾನಪದವನ್ನು ನೋಡದಿದ್ದರೆ ಹತ್ತೊಂಬತ್ತನೆ ಶತಮಾನದ ಮಾನವಶಾಸ್ತ್ರಜ್ಞರು ಹೇಳಿದ 'ಸಂಸ್ಕೃತಿ ಬೆಳೆಯುತ್ತದೆ, ಜಾನಪದ ಅಳಿಯುತ್ತದೆ (Culture evolves, Folkore devolves) ಎಂಬ ತಳಬುಡವಿಲ್ಲದ ತತ್ವಕ್ಕೆ ಬದ್ಧರಾಗಿ ಜಾನಪದವನ್ನು ಕಳೆದುಕೊಳ್ಳಬೇಕಾಗುತ್ತದೆ.

ದ.ರಾ. ಬೇಂದ್ರೆಯವರು ಜನಪದ ಸಾಹಿತ್ಯ, ಧ್ವನಿ, ಸಂಗೀತವನ್ನು ಧಾರಾಳವಾಗಿ ಬಳಸಿಕೊಂಡರು, ಬೆಳೆಸಿಕೊಂಡರು. ಇದೆಲ್ಲ ಜಾನಪದದ 'ದೇಹಭಾಷೆ'. (body language) ಕುವೆಂಪು ಅವರು ಮಾತನಾಡಿದ್ದು ಜನಪದ ಬೆಳೆಯಲು ಬೇಕಾದ ವಸ್ತು ಭಾಷೆ (content language) ಬಗ್ಗೆ, ಜನಪದ ಭಾಷೆ ಪ್ರದೇಶ ಮಿತ ಮತ್ತು ಹಿತ. ಜನಪದ ವಸ್ತು ಎಂಬುದು ಜನಪದವೊಂದರ ಅನನ್ಯತೆಯ ನೆಲೆ. ಮದುವೆ ಗಂಡಿಗೆ ''ಅದು'' ಇದ್ದಹಾಗೆ, ಶೃಂಗಾರ ಒಂದು ಸನ್ನಿವೇಶ ಮಾತ್ರ. ಹೀಗೆ ಜಾನಪದ ವಸ್ತು ವಿಷಯದ ಬಗ್ಗೆ ಮಾತನಾಡಿದ ಕುವೆಂಪು ಅವರು ನಮ್ಮ ಜಾನಪದ ತಲೆಮಾರಿನಲ್ಲಿ ಇದ್ದಾರೆ.

ಜಾನಪದ ಜೀವಂತ (lively) ಅದನ್ನು ಬೆಳವಣಿಗೆಯ ವಿವಿಧ ಹಂತಗಳಲ್ಲಿ ಪ್ರದರ್ಶಿಸುವ ನಿಜಸ್ಥಿತಿಯಲ್ಲಿಯೇ ಇಡುವುದು ಅಗತ್ಯ ಮತ್ತು ಅನಿವಾರ್ಯ. ಇಲ್ಲಿ ನಾವು ಜಗತ್ತಿನ ಇತಿಹಾಸವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದು. ಒಂದು ಜೀವನಕ್ರಮವನ್ನು ವಾಸ್ತವತೆಯಿಂದ ತೆಗೆದಿಟ್ಟು ಅಥವಾ ಐತಿಹಾಸಿಕ ನೆಲೆಯಿಂದ ಬೇರೆಯಿಟ್ಟು ಏಕಕೇಂದ್ರಿತ ವಸ್ತು ಸಂಗ್ರಹಾಲಯದಲ್ಲಿಡುವುದು ಅಚಾರಿತ್ರಿಕ ಮತ್ತು ಅವಾಸ್ತವ. ಯೂರೋಕೇಂದ್ರಿತ ಆಧುನಿಕತೆಯ ತತ್ವದ ಮೇಲೆ ಸಂಗ್ರಹಿಸಿಡುವ ಮತ್ತು ಪ್ರದರ್ಶಿಸುವ ಮನೋಧರ್ಮವನ್ನು ಜಾನಪದ ಚಿಂತನೆ ಒಪ್ಪುವುದಿಲ್ಲ. ಇದು ಇರುವುದರ ಜೊತೆಗೆ ಬಂದುದನ್ನು ಸೇರಿಸಿಕೊಂಡು ನಡೆಯುವಂಥದ್ದು. ಈ ಜೀವನ ಯಾವ ಕಾಲದಿಂದಲೂ ಪರಿಕ್ರಮವನ್ನು ನಮ್ಮ ಗ್ರಾಮ ಮುಂದುವರೆಸಿಕೊಂಡು ಬಂದಿದೆ. ಎಲ್ಲಿಯಾದರೂ ನಾವು ಜಾನಪದವನ್ನು ನೋಡಲು ಇಡುವುದು ಎಂದರೆ, ಈ ಬೆಳವಣಿಗೆಯ ಪರಿಕ್ರಮವನ್ನು ಅನುಸರಿಸುವುದೇ ಆಗಿರುತ್ತದೆ.

ಕರ್ನಾಟಕ ಕಲಾಗ್ರಾಮದಲ್ಲಿ ಜಾನಪದ ಸಂಬಂಧಿಯಾದ ವಸ್ತು ಸಂಗ್ರಹ, ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ; ಅದು ಹಳೆಯದು ಮತ್ತು ಸಂಗ್ರಹಿಸಿಟ್ಟಿದ್ದು ಎನ್ನುವ ರೀತಿಯಲ್ಲಿರುವುದನ್ನು ನಾವು ಒಪ್ಪುವುದಿಲ್ಲ. ಕರ್ನಾಟಕ ಜಾನಪದ ಕಲಾಗ್ರಾಮದಲ್ಲಿ ಲವಲವಿಕೆಯಿಂದ ಜೀವಿಸುತ್ತಿದೆ ಎಂಬುದನ್ನು ಪ್ರಸ್ತುತಪಡಿಸುವುದೇ ನಮ್ಮ ಉದ್ದೇಶವಾಗಿರುತ್ತದೆ. ಆ ದೃಷ್ಟಿಯಿಂದ ಪಾರಂಪರಿಕ ಚಿಂತನೆ; ಜೀವನ ಕ್ರಮವನ್ನು ಒಳಗೊಂಡ ಮತ್ತು ಈವತ್ತಿಗೂ ಪ್ರಸ್ತುತವಾಗಿರುವ ಗ್ರಾಮೀಣ ಹಾಗೂ ಈ ಪರಂಪರೆಯಲ್ಲಿ ಮುಂದುವರಿದ ಜೀವನ ವಿಧಾನವನ್ನು ಕಲಾಗ್ರಾಮದಲ್ಲಿ ಪ್ರಸ್ತುತಪಡಿಸಲು ಬಯಸುತ್ತೇವೆ.

ಪುರದ ಪುಣ್ಯ

ಕರ್ನಾಟಕದ ಜಾನಪದ ಚಿಂತಕರ ಅಭಿಪ್ರಾಯವನ್ನು ಒಳಗೊಂಡಂತೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಯೋಜಿತ ಸಭೆಯು ಕೆಳಕಂಡ ರೀತಿಯಲ್ಲಿ ಜಾನಪದ ಕಲಾಗ್ರಾಮವನ್ನು ನಮ್ಮೂರು ಎಂಬ ಶೀರ್ಷಿಕೆಯನ್ವಯ ರೂಪಿಸಬೇಕೆಂದು ಇಚ್ಛಿಸುತ್ತದೆ.

ಸುಮಾರು ಮೂರು ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಬಹುದಾದ 'ನಮ್ಮೂರು' (ಇದು ಯಾರ ಊರಾದರೂ ಆಗಬಹುದು. ಜಾನಪದೀಯವಾಗಿ ಬದುಕುವ ಬೆಂಗಳೂರು ಮೈಸೂರಿನಂಥ ಬೃಹತ್ ನಗರಗಳೂ ನಮ್ಮೂರಿನ ವ್ಯಾಪ್ತಿಯಲ್ಲಿಯೇ ಬರುತ್ತವೆ).

೧. ಮೂರು ಉದ್ದ ಹಾಗೂ ವಿಶಾಲವಾದ ಬೀದಿಗಳು

9. ಐದು ಅಡ್ಡ ಹಾಯುವ ಬೀದಿಗಳು

೩.. ಊರ ಮುಂಭಾಗ ಹೆಬ್ಬಾಗಿಲು (ಅಗಸೆ ಬಾಗಿಲು) ಇದರ ಎರಡೂ ಬದಿಗಳಲ್ಲಿ ಗೋವುಗಲ್ಲು, ವೀರಗಲ್ಲು, ಮಾಸ್ತಿಕಲ್ಲುಗಳನ್ನು ಸ್ಥಾಪಿಸುವುದು.

೪. ಹೆಬ್ಬಾಗಿಲನ್ನು ಹಾದು ಒಳಬಂದ ತಕ್ಷಣ ವಿಶಾಲವಾದ ಬಯಲು ಈ ಬಯಲಿನಲ್ಲಿ ದೊಡ್ಡಾಟ, ಸಾಮಗಾನ, ದೊಣ್ಣೆವರಸೆ, ಕತ್ತಿವರಸೆ, ಕುಣಿತಗಳು ಇತ್ಯಾದಿ ಕಲಾ ಪ್ರದರ್ಶನಗಳಿಗೆ ಅವಕಾಶವಿರಬೇಕು. ಈ ಬಯಲಿನ ಒಂದು ಕೊನೆಯಲ್ಲಿ ಮಾರಿಗುಡಿ ಇರಬೇಕು. ಗುಡಿಯ ಮುಂದೆ ಕಲ್ಲುಕಟ್ಟೆ, ಕಣಗಿಲು ಗಿಡ, ಬಿಲ್ವಪತ್ರೆ ಮರ, ಕೊಂಡಮಾವಿನ ಗಿಡ ಮತ್ತು ಬೇವಿನ ಮರ, ಕರಿಕಲ್ಲು ಗದ್ದಿಗೆ, ಕೊಂಡದ ಗುಂಡಿ, ಸಿಡಿಕಂಬ ಇರಬೇಕು.

೫. ಬಯಲಿನ ಮತ್ತೊಂದು ಕೊನೆಯಲ್ಲಿ ಬೇವು ಮತ್ತು ಅಶ್ವತ್ಥ ಮರಗಳನ್ನುಳ್ಳ ಅರಳೀಕಟ್ಟೆ, ನಾಗಬನ.

೬. **ಪಗೋಡಾ ಮಾದರಿಯ ಮೂರಂತಸ್ತಿನ ದೊಡ್ಡ ಮಾಳಿಗೆ ಮನೆ :**

೬.೧ ಈ ಮಾಳಿಗೆ ಮನೆಯ ಕೆಳ ಅಂತಸ್ತಿನಲ್ಲಿ ಜನಪದ ರಂಗಭೂಮಿ ಮತ್ತು ಜನಪದ ನೃತ್ಯ ಪ್ರಕಾರಗಳಿಗೆ ಸಂಬಂಧಪಟ್ಟ ಪಾತ್ರಗಳು ಮತ್ತು ವೇಷಭೂಷಣಗಳ ಪ್ರದರ್ಶನ.

೬೨ ಮೊದಲ ಅಂತಸ್ತಿನಲ್ಲಿ ಸಂಪೂರ್ಣ ಕತ್ತಲು-ಬೆಳಕು ಮತ್ತು ಸಂಗೀತ ಕರ್ನಾಟಕದಲ್ಲಿ ಇಲ್ಲಿ ಲಭ್ಯವಿರುವ ವ್ಯವಸ್ಥೆಯೊಂದಿಗೆ ತೊಗಲುಗೊಂಬೆಗಳ ವರ್ಣರಂಜಿತ ಲೋಕ.

೬.೩ ಇದೇ ಅಂತಸ್ತಿನ ಮತ್ತೊಂದು ಭಾಗದಲ್ಲಿ ಸೂತ್ರದ ಗೊಂಬೆಗಳು, ಸರಳು ಗೊಂಬೆಗಳು ಮತ್ತು ಕೀಲುಗೊಂಬೆಗಳ ಕತ್ತಲು-ಬೆಳಕು ಮತ್ತು ಸಂಗೀತ ವ್ಯವಸ್ಥೆಯೊಂದಿಗೆ ಕರ್ನಾಟಕದ ಎಲ್ಲಾ ಭಾಗಗಳ ಗೊಂಬೆಗಳ ಜಗತ್ತು.

೬.೪ ಮಾಳಿಗೆ ಮನೆಯ ಎರಡನೆಯ ಅಂತಸ್ತಿನಲ್ಲಿ ಜನಪದ ಆಭರಣಗಳು, ಸೂಕ್ಷ್ಮ ಕುಸುರಿ ಕೆತ್ತನೆಗಳು, ಕರಕುಶಲ ಕಲೆಗಳು (ಬುಟ್ಟಿ ಚಿತ್ತಾರ, ಗಾಜಿನಿಂದ ಮಾಡಿದ ಕೆತ್ತನೆಗಳು, ಪ್ರಾಣಿ ಪಕ್ಷಿಗಳ ಅಂಗಾಂಗಗಳಿಂದ ತಯಾರಿಸಿದ ಕೆತ್ತನೆಗಳು, ಇನ್-ಲೇ ಕಲೆ, ದಂತ ಕೆತ್ತನೆ, ಚನ್ನಪಟ್ಟಣದ ಬಣ್ಣದ ಗೊಂಬೆಗಳು) ಇತ್ಯಾದಿಗಳ ಪ್ರದರ್ಶನ.

೭. **ತೊಟ್ಟಿಮನೆ** : ಹನ್ನೆರಡು ಕಂಬಗಳ ತೊಟ್ಟಿಮನೆ. ಐದು ಭಾಗಗಳನ್ನಾಗಿ ಒಳಾವರಣವನ್ನು ವಿಂಗಡಿಸಿಕೊಳ್ಳಬೇಕು. ಮಧ್ಯದಲ್ಲಿ ಸಾಕಷ್ಟು ದೊಡ್ಡದಾದ ತೊಟ್ಟಿ ಇರಬೇಕು. ಇದರಲ್ಲಿ

೧) ಮರದಿಂದ ತಯಾರಿಸಿದ

೨) ಲೋಹದಿಂದ ತಯಾರಿಸಿದ

೩) ಶಿಲೆಗಳಿಂದ ತಯಾರಿಸಿದ

೪) ಮಣ್ಣಿನಿಂದ ತಯಾರಿಸಿದ

೫) ಬಿದಿರಿನಿಂದ ತಯಾರಿಸಿದ

ಸಣ್ಣ ಹಾಗೂ ದೊಡ್ಡ ಕಲಾಕೃತಿಗಳನ್ನು ಈ ತೊಟ್ಟಿ ಮನೆಯ ಆವರಣಗಳಲ್ಲಿ ಪ್ರದರ್ಶಿಸುವುದು.

೮. **ಗರಡಿಮನೆ** : ಗರಡಿ ಮನೆಯು ವರ್ತುಲಾಕಾರದಲ್ಲಿರಬೇಕು. ಮಧ್ಯದಲ್ಲಿ ಮಟ್ಟಿ ಇರಬೇಕು. ಮಟ್ಟಿಯ ಸುತ್ತ ಓಡಾಡಲು ಮತ್ತು ಕುಳಿತುಕೊಳ್ಳಲು

ವೇದಿಕೆಯನ್ನು ಸಿದ್ಧಪಡಿಸುವುದು. ಕನಿಷ್ಠ ೫೦ ರಿಂದ ೧೦೦ ಮಂದಿ ಈ ವರ್ತುಲಾಕಾರದ ವೇದಿಕೆಯ ಮೇಲೆ ಕೂರುವಂತಿರಬೇಕು. ಗರಡಿ ಮನೆಯ ವರ್ತುಲಾಕಾರದ ಹೊರ ಪ್ರಾಕಾರದಲ್ಲಿ ಕೊಠಡಿಗಳನ್ನು ನಿರ್ಮಿಸಿ ಅಲ್ಲಿ ಎಲ್ಲಾ ಬಗೆಯ ಗರಡಿ ಮನೆ ಸಾಧನಗಳು ಮತ್ತು ಆಯುಧಗಳನ್ನು ಪ್ರದರ್ಶಿಸಬೇಕು. ಗರಡಿ ಮನೆಗೆ ಹೊಂದಿಕೊಂಡಂತೆ ಶೌಚಾಲಯ, ಸ್ನಾನದ ಕೊಠಡಿಗಳು ಮತ್ತು ವಿಶ್ರಾಂತಿ ಕೊಠಡಿಗಳು ಇರಬೇಕು.

೯. **ಅಡುಗೂಳಜ್ಜಿ ಮನೆ :** ಊರನ್ನು ಪ್ರವೇಶಿಸಿದ ತಕ್ಷಣ ಎಡಭಾಗದಲ್ಲಿ ಅಡುಗೂಳಜ್ಜಿ ಮನೆ ಇರಬೇಕು. ಅಡಗೂಳಜ್ಜಿ ಮನೆಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಬೇಕು. ಮೊದಲ ಭಾಗದಲ್ಲಿ ಸಂದರ್ಭಕ್ಕನುಗುಣವಾಗಿ ಜನಪದ ತಿಂಡಿ, ತಿನಿಸು, ಆಹಾರ ಪದಾರ್ಥಗಳು, ಪಾನೀಯಗಳು ಇತ್ಯಾದಿಗಳನ್ನು ತಯಾರಿಸಿಕೊಡುವ ಅಜ್ಜಿ ಇರುವ ಮನೆ (ಉಪಾಹಾರ ಮಂದಿರ) ಮತ್ತೊಂದು ಭಾಗದಲ್ಲಿ ಅಡುಗೆಮನೆ ಸಾಧನಗಳು, ಇನ್ನೊಂದು ಭಾಗದಲ್ಲಿ ಕಣಜ, ಕೊಮ್ಮೆ, ಪೆಟ್ಟೆ, ಪಿಠಾರಿ, ಮೂಡೆ, ತೊಟ್ಟಿಲು ಕಾಗಡಿ, ಬಾನದ ಸಾಲು ಇತ್ಯಾದಿಗಳನ್ನಿಡುವುದು.

೧೦. **ಕೊಟ್ಟಿಗೆ ಮನೆ** : ಕೊಟ್ಟಿಗೆ ಮನೆಯನ್ನು ಐದು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಬಹುದು.

೧. ಪ್ರಾಣಿ ವಸತಿಯಲ್ಲಿ ಜಾನುವಾರುಗಳು ನಿಲ್ಲುವ ಮೇವಿನ ಗೋದಲಿಕೆ, ಕಲಗಚ್ಚು, ಬಾನಿ, ಹುಲ್ಲು ತುಂಬುವ ಮನೆ, ಇದರ ಹೊರಾಂಗಣದಲ್ಲಿ ಸವಾರಿಗಾಡಿ, ಟಾಂಗಾ, ಎತ್ತಿನಗಾಡಿ, ಸಾರೋಟು ಇತ್ಯಾದಿ ಇರುವುದು. ಮತ್ತೊಂದು ಭಾಗದಲ್ಲಿ ಕೃಷಿಗೆ ಸಂಬಂಧಪಟ್ಟಂತಹ ಎಲ್ಲಾ ಸಲಕರಣೆಗಳ ವಿಭಾಗಿಕ ಪ್ರದರ್ಶನ.

೧೧. **ಕಣದ ಮನೆ** : ಕಣದ ಮನೆಯಲ್ಲಿ ಎರಡು ಭಾಗವಾಗಿ ವಿಂಗಡಿಸಿಕೊಂಡು ಕಣ, ಹುಲ್ಲುಮೆದೆ, ಬಗ್ಗಡದ ಗುಂಡಿ ಇರುವುದು. ಕಣದ ಮನೆ ಸುತ್ತ ಬೇಲಿ, ಮುಳ್ಳು ಬೇಲಿ, ಬಿದಿರಿನ ಬೇಲಿ, ಕಳ್ಳಿಬೇಲಿ, ಕೊಣಮಾವು, ನಾಲ್ಕು ಕಡೆಗೆ ನಾಲ್ಕೂ ವಿಧದ ಬೇಲಿಗಳನ್ನು

ಮಾದರಿಯಾಗಿ ಬಳಸಬಹುದು (ಮುಳ್ಳು ಬೇಲಿ, ದಬ್ಬೆಬೇಲಿ, ಕಳ್ಳಿ ಬೇಲಿ, ಹಾಲುವಾಣ ಬೇಲಿ).

೧೨. **ಕೇರಿ ಮನೆ** : ಅಗಸರ ಕೇರಿ, ಸುಣ್ಣದ ಕೇರಿ, ಕುಂಬಾರ ಕೇರಿ, ಒಕ್ಕಲಿಗರ ಕೇರಿ, ಗಾಣಿಗೆರ ಕೇರಿ, ಮಗ್ಗದ ಕೇರಿ, ಮ್ಯಾದರ ಕೇರಿ, ಕಮ್ಮಾರಗೇರಿ, ಚಮ್ಮಾರಗೇರಿ, ಹಾರುವರ ಕೇರಿ,, ತೋಟಿ ತಳವಾರರು, ನೀರಗಂಟೆಗಳು, ಇವರೆಲ್ಲರಿಗೂ ಈ ಕೇರಿಗಳಲ್ಲಿ ಅವರುಗಳ ಪ್ರತಿಯೊಂದು ವಸತಿಯು ಸಂಕೇತವಾಗಿರುತ್ತದೆ ಮತ್ತು ಅಲ್ಲಿ ಪ್ರತಿಯೊಂದು ವೃತ್ತಿಯ ಪಾರಂಪರಿಕ ಉಡುಗೆ ತೊಡುಗೆಗಳೊಂದಿಗೆ ಮಾದರಿ ಗಂಡು ಹೆಣ್ಣುಗಳ ಗೊಂಬೆಗಳನ್ನು ಪ್ರದರ್ಶಿಸುವುದು.

೧೩. **ಬುಡಕಟ್ಟು ಹಟ್ಟಿ** : ಬುಡಕಟ್ಟಿನ ಹಟ್ಟಿಯಲ್ಲಿ ಎರಡು ಭಾಗಗಳಿದ್ದು ಒಂದು ಭಾಗದಲ್ಲಿ ಕರ್ನಾಟಕದ ಎಲ್ಲಾ ಬುಡಕಟ್ಟುಗಳ ವಸತಿ ಮಾದರಿಗಳು, ದಿನಬಳಕೆ ಸಾಧನಗಳು, ಉಡುಗೆ ತೊಡುಗೆಗಳು ಇತ್ಯಾದಿ. ಮತ್ತೊಂದು ಭಾಗದಲ್ಲಿ ಬೇಟೆಯ ಸಾಧನಗಳು, ಬೇಟೆಯ ಮಾದರಿಗಳು (ಹಳೆಬೇಟೆ, ಪ್ರಾಣಿ ಬೇಟೆ, ಮೀನು ಬೇಟೆ, ಜೇನುಬೇಟೆ ಇತ್ಯಾದಿ) ಇತ್ಯಾದಿಗಳಿರಬೇಕು.

೧೪. **ಕಟ್ಟೆಮನೆ** : ಕಟ್ಟೆಮನೆಯ ಮುಂಭಾಗದಲ್ಲಿ ವಿಶಾಲವಾದ ನ್ಯಾಯ ಪಂಚಾಯಿತಿ ಕಟ್ಟೆ ಇರುತ್ತದೆ. ಒಳಭಾಗದಲ್ಲಿ ಕಲಾವಿದರು, ವಿದ್ವಾಂಸರು, ಪ್ರವಾಸಿಗಳು ತಂಗಲು ಅನುಕೂಲವಾಗುವಂತೆ ಕೊಠಡಿಗಳು ಇರುವುದು. ೧೫. ಜಾನಪದ ಅರಿವಿನ ಮನೆ : ಅರಿವಿನ ಮನೆಯಲ್ಲಿ ಜಾನಪದ ಗ್ರಂಥಾಲಯವಿರಬೇಕು. ಕರ್ನಾಟಕ ಸಂಸ್ಕೃತಿಗೆ ಮತ್ತು ಸಮಾಜಕ್ಕೆ, ಬುಡಕಟ್ಟುಗಳಿಗೆ ಸಂಬಂಧಪಟ್ಟಂತೆ ಆಯ್ದ ಪ್ರಾತಿನಿಧಿಕ ಕೃತಿಗಳ ಗ್ರಂಥಾಲಯ, ಜಾನಪದ ಆಡಿಯೊ, ವಿಡಿಯೊ ಭಾಗ ಇರಬೇಕು. ಇದರಲ್ಲಿ ಜನಪದ ಗೀತ-ಸಂಗೀತ-ಕಲೆಗಳು-ಬುಡಕಟ್ಟುಗಳಿಗೆ ಸಂಬಂಧಪಟ್ಟ ಆಡಿಯೊ ವಿಡಿಯೊ ಸಿಡಿಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಜಾನಪದ ಮಾಹಿತಿ ಕೇಂದ್ರ ಇರಬೇಕು. ಇದರಲ್ಲಿ ಕರ್ನಾಟಕ ಜಾನಪದಕ್ಕೆ ಸಂಬಂಧಪಟ್ಟ ಸಮಗ್ರ ಮಾಹಿತಿ ಲಭ್ಯವಿರಬೇಕು. ಜಾನಪದ ಸಂಶೋಧನಾ ಕೇಂದ್ರ ಕಾರ್ಯ

ಪುರದ ಪುಣ್ಯ

ನಿರತವಾಗಿರಬೇಕು.

೧೬. **ಆಟದ ಮನೆ** : ಇದರಲ್ಲಿ ಎರಡು ಭಾಗವಿದ್ದು, ಆಟೋಟಗಳಿಗೆ ಸಂಬಂಧಪಟ್ಟ ಕಲಿಕೆ ಮತ್ತು ಪ್ರದರ್ಶನ ಭಾಗವಿರಬೇಕು. ಮತ್ತೊಂದು ಭಾಗದಲ್ಲಿ ಆಟೋಟಗಳಿಗೆ ಸಂಬಂಧಪಟ್ಟ ಸಾಧನ ಸಲಕರಣೆಗಳನ್ನು ಪ್ರದರ್ಶಿಸಬೇಕು. (ಅಣ್ಣೆ ಕಲ್ಲಾಟ, ಚೌಕಾಬಾರ, ಗಜ್ಜುಗ, ಪಗಡೆ, ಹಳ್ಳಗುಳಿಮನೆ, ಉಪ್ಪುಪುರ, ಬಳೆ ಚೂರಾಟ, ಇತ್ಯಾದಿ).

**17.** **ಹಸಮನೆ** : ಹಸೆಮನೆಯಲ್ಲಿ ಕರ್ನಾಟಕದ ಆಚರಣೆಗಳಿಗೆ, ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗೆ ಸಂಬಂಧಪಟ್ಟ ಹಲವು ಕೋಣೆಗಳಿದ್ದು ಇದರಲ್ಲಿ ನಾಮಕರಣ ಕೋಣೆ, ಒಸಗೆ ಕೋಣೆ, ಮುಟ್ಟಿನ ಮನೆ, ಹಸೆಮನೆ ಕೋಣೆ, ಧಾರೆಕೋಣೆ, ಪ್ರಸ್ತದ ಕೋಣೆ, ಹೆರಿಗೆ ಕೋಣೆ, ಬಾಣಂತಿ ಕೋಣೆ, ಸಾವಿನ ಮನೆ ಇತ್ಯಾದಿ ನಿರ್ಮಿಸಿ ಪ್ರದರ್ಶಿಸಬೇಕು.

೧೮. **ಚಿತ್ರದ ಮನೆ** : ಸಾಂಪ್ರದಾಯಿಕ ಗೋಡೆ ಚಿತ್ರಗಳು, ಮಾಳಿಗೆ ಚಿತ್ತಾರಗಳು, ಬಾಗಿಲುವಾಡದ ಚಿತ್ತಾರಗಳು, ಹಸೆಗೋಡೆ ಚಿತ್ತಾರಗಳು, ಮುಚ್ಚಿಗೆ ಚಿತ್ತಾರಗಳು, ಕನ್ನಡಿ ಚಿತ್ತಾರಗಳು, ಮಣಿ ಚಿತ್ತಾರಗಳು ಇತ್ಯಾದಿಗಳನ್ನು ಪ್ರದರ್ಶಿಸುವಂತಿರಬೇಕು.

೧೯. **ಸಸ್ಯ ಮತ್ತು ಬೆಳೆ ಮಾದರಿಗಳು** : ಉದ್ದ ರಸ್ತೆಗಳು ಮತ್ತು ಅಡ್ಡರಸ್ತೆಗಳ ಎರಡೂ ಬದಿಗಳಲ್ಲಿ ಔಷದಿ ಗಿಡಮೂಲಿಕೆ ಸಸ್ಯ ಮಾದರಿಗಳನ್ನು ಬೆಳೆಸಬೇಕು. ಊರ ಹೊರಗಿನ ವಿಶಾಲವಾದ (ಕೊಟ್ಟಿಗೆಯ ಹಿಂಭಾಗದಲ್ಲಿ ಬೆಳೆ ಮಾದರಿಗಳನ್ನು ಬೆಳೆಸುವಂತಿರಬೇಕು) ಬಯಲಿನಲ್ಲಿ ಆಲ, ಅರಳಿ ಸಂಪಿಗೆ, ಮುಂತಾದ ಮರಗಳನ್ನು ಬೆಳೆಸುವಂತಿರಬೇಕು.

೨೦. **ಮದ್ದಿನ ಮನೆ** : ಮುದ್ದಿನ ಮನೆಯಲ್ಲಿ ಎರಡು ಭಾಗಗಳಿದ್ದು, ಒಂದು ಭಾಗದಲ್ಲಿ ಜನಪದ ವೈದ್ಯಕ್ಕೆ ಸಂಬಂಧಪಟ್ಟಂತಹ ಎಲ್ಲಾ ವೈದ್ಯಕೀಯ ಸಾಧನ ಸಲಕರಣೆಗಳು, ಔಷಧಿಗಳು, ಗಿಡಮೂಲಿಕೆಗಳು, ಬೇರು, ನಾರುಗಳು, ದಬ್ಬೆ, ಎಣ್ಣೆ, ಉಡುವಿನ ಔಷಧಿ ಇತ್ಯಾದಿಗಳನ್ನು ಸಂಗ್ರಹಿಸಬೇಕು. ಮತ್ತೊಂದು ಭಾಗದಲ್ಲಿ ತಿಕ್ಕುವವರು, ಮೂಳೆ

ಸರಿಪಡಿಸುವವರು, ಪ್ರಾಣಿಗಳಿಗೆ ಉಪಚರಿಸುವವರು ಇತ್ಯಾದಿ ಜನಪದಚಿಕಿತ್ಸೆಯವರು ಇರಬೇಕು.

೧೦. **ಶಕುನದ ಮನೆ** : ಶಕುನದ ಮನೆಯಲ್ಲಿ ಗಿಳಿಶಾಸ್ತ್ರ ಕವಡೆ ಶಾಸ್ತ್ರ ಹಸ್ತ ಸಾಮುದ್ರಿಕೆಯವರು, ಕಣಿ ಹೇಳುವವರು, ಬುಡಬುಡಿಕೆಯವರು, ಸುಡುಗಾಡು ಸಿದ್ದರು, **ಜಲ** ಚಿಂತಾಮಣಿ ಶಾಸ್ತ್ರದವರು, ಸಾರುವಯ್ಯಗಳು ಮುಂತಾದವರು ಇರುತ್ತಾರೆ. ಅಂಜನ ನೋಡುವುದು ನೀರಿನ ಮೂಲವನ್ನು ಪತ್ತೆ ಹಚ್ಚುವುದು.

೧೧. **ಕಲಿಕೆ ಮನೆ** : ಗುರುಕುಲ ಪದ್ಧತಿ, ಓಚಯ್ಯನಮಠ, ಗುರು-ಶಿಷ್ಯ ಪರಂಪರೆಯಲ್ಲಿ ಜನಪದ ಕಲೆಗಳು, ನೃತ್ಯರೂಪಕಗಳ ತರಬೇತಿ, ವೃತ್ತಿ ತರಬೇತಿಗಳು (ಉದಾ : ಕಲಾ ಕೆತ್ತನೆ, ಪಾರಂಪರಿಕ ವೃತ್ತಿಗಳ ಕಲಿಕೆ).

೧೨. **ಸಂತೆ ಮಾಳ** ; ವ್ಯಾಪಾರ ಸಂಬಂಧಿ ವಿವಿಧ ಸಾಮಗ್ರಿ ಸಾಧನಗಳ ಸಂಗ್ರಹ (ಅಳತೆ ಸಾಧನಷಗಳು, ತೂಕದ ಬಟ್ಟುಗಳು, ಸಾಧನಗಳು, ಅಳೆಯುವ ತೂಗುವ ಮತ್ತಿತರ ಸಲಕರಣೆಗಳು) ಪ್ರದರ್ಶನ ವಿಭಾಗದಲ್ಲಿ ಸಂತೆ ಆಸಗಳು (ತರಕಾರಿ, ದವಸಧಾನ್ಯ, ಕರೀನು, ಸೀಗಡಿ ಅಸ್ತ ತಿಂಡಿ ತಿನಿಸು ಅಸ್ತ್ರಗಳು ಖಾನಾವಳಿಗಳು, ಪಾನೀಯ ಅಸ್ತ್ರಗಳು, ಮನರಂಜನಾ ಆಸಗಳು, ದನ, ಕುರಿ, ಕೋಳಿ ಆಸಗಳು, ಬೆಲ್ಲದ ಆಸ್ತ್ರ, ಬೆಣ್ಣೆ ಆಸ್ತಿ ಕಾಯಿ ಆಸ್ತಿ ಅಡಿಕೆ ಆಸ್ತಿ ಮಡಿಕೆ ಆಸ್ತಿ, ಹಗ್ಗದ ಆಸ್ತಿ ಇತ್ಯಾದಿ.

---

ಅಕೆಡೆಮಿಯ ವತಿಯಿಂದ ಈ ಯೋಜನೆಯನ್ನು ಸಿದ್ಧಪಡಿಸುವಲ್ಲಿ ಡಾ|| ಚಕ್ಕೆರೆ ಶಿವಶಂಕರ್ ಮತ್ತು ಡಾ|| ಸಂಧ್ಯಾರೆಡ್ಡಿ ಅವರ ನೆರವನ್ನು ಪಡೆದಿದ್ದೇನೆ.

ಜನಪದ ಸಾಹಿತ್ಯ : ಮೀಮಾಂಸಾ ಪರಿಕಲ್ಪನೆಯ ಇತಿಹಾಸದ ಜೊತೆಗೆ ನನ್ನ ಅಭಿಪ್ರಾಯವನ್ನು ದಾಖಲಿಸುವುದೇ ಈ ಟಿಪ್ಪಣಿಯ ಉದ್ದೇಶ. ಕನ್ನಡ ಸಾಹಿತ್ಯ ಚಿಂತನೆಯ ನಾಲ್ಕು ಪ್ರವೃತ್ತಿಗಳ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯ ಚರ್ಚೆಗೆ ಸಿಕ್ಕಿದೆ. ಆ ನಾಲ್ಕು ಪ್ರವೃತ್ತಿಗಳೆಂದರೆ ನವೋದಯ, ನವ್ಯ, ಬಂಡಾಯ ಮತ್ತು ದೇಶೀಯ. ಬಂಡಾಯ ಸಾಹಿತ್ಯ ಚಳುವಳಿಯ ನಂತರದ ಸಾಹಿತ್ಯ ಪ್ರವೃತ್ತಿಯನ್ನು ನಾನು ದೇಶೀಯ ಸಾಹಿತ್ಯ ಪ್ರವೃತ್ತಿ ಎಂದು ಕರೆಯುತ್ತೇನೆ. ಏಕೆಂದರೆ ಈ ಪ್ರವೃತ್ತಿಯ ಕೇಂದ್ರದಲ್ಲಿ ಒಂದು ಏಕಸಿದ್ಧಾಂತ ಇಲ್ಲ ಏಕ ಅಥವಾ ಕೆಲವು ಕವಿಗಳ ಮುಂದಾಳತ್ವ ಇಲ್ಲ. ಸಾಹಿತ್ಯ ಪ್ರವೃತ್ತಿ ಎಂಬುದು ಪ್ರತ್ಯೇಕ ಚಿಂತನೆಯಾಗಿ ಈಗ ಉಳಿದಿಲ್ಲ. ಅದರೊಳಗೆ ಸಂಸ್ಕೃತಿಯ ಅನೇಕ ಪ್ರವೃತ್ತಿಗಳು ಸೇರಿಕೊಂಡಿವೆ. ಸಾಕ್ಷರ ಚಿಂತನೆ, ಹಸಿರು ಚಿಂತನೆ, ಉಪಸಂಸ್ಕೃತಿ ಚಿಂತನೆ, ಸಮಸಂಸ್ಕೃತಿ ಚಿಂತನೆ ತಳ ಸಂಸ್ಕೃತಿ ಚಿಂತನೆ, ದಲಿತ ಸಂಸ್ಕೃತಿ ಚಿಂತನೆ ಹಾಗೂ ಜಾಗತಿಕ ಚಿಂತನೆಯ ಪ್ರವೃತ್ತಿಗಳು ಮುಖಾಮುಖಿಯಾಗಿವೆ. ಆದ್ದರಿಂದ ಸಾಹಿತ್ಯ ಪ್ರವೃತ್ತಿ ಎಂಬುದು ಸಾಂಸ್ಕೃತಿಕ ಚಟುವಟಿಕೆಯೂ ಆಗಿ ವಿಸ್ತಾರಗೊಂಡಿದೆ. ಈಗ ಒಬ್ಬ ಜವಾಬ್ದಾರಿಯುತ ಸಾಹಿತಿ, ಸಾಹಿತ್ಯ ಕುರಿತು ಮಾತನಾಡುತ್ತಾನೆ ಎಂದರೆ ಆತ ಈ ನೆಲದ ಸಂಸ್ಕೃತಿಯ ಅನನ್ಯತೆಯನ್ನು ಕುರಿತು ಮಾತನಾಡುತ್ತಿದ್ದಾನೆ ಎಂದು ತಿಳಿಯಬಹುದು.

ಈ ಹಿನ್ನೆಲೆಯಿಂದ ಜನಪದ ಸಾಹಿತ್ಯ ಚಿಂತನೆಯ ಇತಿಹಾಸವನ್ನು ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು.

**I. ಮೊದಲನೆಯ ಘಟ್ಟ : ಬಿ.ಎಂ.ಶ್ರೀ. ಮಾಸ್ತಿ : ಪ್ರೇರಣೆ - ಆಹ್ವಾನ**

(೧) 'ಜನವಾಣಿ ಬೇರು ಕವಿವಾಣಿ ಹೂವು' ಎಂಬುದು ಬಿ.ಎಂ. ಶ್ರೀಯವರ

ಜನಶೋಧನೆಯ ತತ್ವವಾದರೆ, (೨) ಕಲಿತವರ ಕವಿತೆಯದರಂತೆ ಈ ಕವಿತೆಯದೂ ಪ್ರತ್ಯೇಕವಾದ ಒಂದು ರಾಜ್ಯ' (ಪು.೯) ಇದು ಹಾಡುವ ಕೇಳುವ ಕೃತಿ, ಬಲ್ಲವರು ಹಾಡಿ ಸಹೃದಯರು ಕೇಳಿ ಅರ್ಥವಾಗುವ ಕವಿತೆ. ವಿದ್ಯಾವಂತರೆನ್ನುವ ನಾವು ಈ ಕವಿತೆಗೆ ಬಹುವೇಳೆ ಬಲ್ಲವರೂ ಅಲ್ಲ ಸಹೃದಯರೂ ಅಲ್ಲ'' (ಪು.೩, ೧೯೫೬ ಕರ್ನಾಟಕ ಜನಪದ ಸಾಹಿತ್ಯ) ಎಂಬುದು ಮಾಸ್ತಿಯವರ ಜನಪದ ಸಾಹಿತ್ಯ ಕುರಿತ ಅನನ್ಯತಾ ತತ್ವ ಚಿಂತನೆ. ಇದು ಬಹುದೂರ ಗಾಮಿಯಾದ ಚಿಂತನೆ.

**II. ಎರಡನೆಯ ಘಟ್ಟ : ಗಿರಡ್ಡಿ - ಸಿಪಿಕೆ ಮುಖಾಮುಖಿ**

ಇನ್ನೊಂದು ರೀತಿಯಲ್ಲಿ ಇದು ನವ್ಯ-ನವೋದಯ ಸಾಹಿತ್ಯ ಚಿಂತನೆಯ ಮುಖಾಮುಖಿ. ಗಿರಡ್ಡಿ ಗೋವಿಂದರಾಜ ಅವರು ಜನಪದ ಸಾಹಿತ್ಯವನ್ನು ಶುದ್ಧ ಸಾಹಿತ್ಯಕ ನೆಲೆಯಲ್ಲಿ ವಿಮರ್ಶಿಸ ಹೊರಟವರು ತಮ್ಮ ವಿಮರ್ಶೆಗೆ ತಾವೇ ಭಿನ್ನವಾಗಿ ನಿಂತು ಜನಪದ ಸಾಹಿತ್ಯದ ಸಾಂಸ್ಕೃತಿಕ ನೆಲೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಆ ಚಿಂತನೆಯನ್ನು ಕೆಳಗಿನಂತೆ ಕ್ರೋಢೀಕರಿಸಬಹುದು.

**ಸಾಹಿತ್ಯಕ ನೆಲೆಯಿಂದ ಜನಪದ ಸಾಹಿತ್ಯ :**

೧) ಜನಪದ ಕಾವ್ಯಕ್ಕೆ ಪ್ರತ್ಯೇಕವಾದ ಮಾನದಂಡಗಳಿವೆಯೆಂದು ನಾನು ಒಪ್ಪುವುದಿಲ್ಲ. ಅದರ ಶ್ರೇಷ್ಠತೆಯನ್ನು ಸಾಧಿಸಬೇಕಾದರೆ ಅದನ್ನು ಶ್ರೇಷ್ಠ ಕಾವ್ಯದೊಂದಿಗೆ ಇಟ್ಟೇ ನೋಡಬೇಕಾಗುತ್ತದೆ.

೨) ಜನಪದ ಕವಿಗಳು ಅಭ್ಯಾಸ ಮಾಡದೆ ಕಾವ್ಯ ರಚಿಸಿದರೆಂದು ಹೇಳುವುದು ಸರಿಯಲ್ಲ.

೩) ಕಾವ್ಯ ರಚನೆಗೂ ಸಾಕ್ಷರತೆಗೂ ಸಂಬಂಧವಿಲ್ಲ. ಸಾಕ್ಷರತೆ ಕವಿಗೆ ಒಂದು ಅನುಕೂಲವಾದೀತು, ಅನಿವಾರ್ಯವಲ್ಲ.

೪) ನಿರಕ್ಷರಿಗಳು, ಪಾಮರರು ರಚಿಸಿದ್ದು ಎನ್ನುವ ಕಾರಣಕ್ಕೆ ಅದನ್ನು ಪ್ರತ್ಯೇಕ ನೋಡಬೇಕೆಂಬುದು ನನ್ನ ನಿಲುವಲ್ಲ.

೫) ಮಾತಿನ ಲಯಗಳನ್ನು ಹಿಡಿಯುವ ಸೂಕ್ಷ್ಮ ಸಂವೇದಿತ್ವಕ್ಕೆ ಶಾಸ್ತ್ರೀಯ ಜ್ಞಾನವೇ ಬೇಕಾಗಿಲ್ಲ.

೬) ನಾಗರೀಕ ಕವಿಗಳಲ್ಲಿ ಕಾವ್ಯ ಹೇಗೆ ಜನ್ಮ ಪಡೆಯುತ್ತದೆಯೋ, ಜನಪದ ಕವಿಗಳಲ್ಲೂ ಹಾಗೆಯೇ ಸಂಭವಿಸುತ್ತದೆ.

**ಸಾಂಸ್ಕೃತಿಕ ನೆಲೆಯಿಂದ**

೧) ಕಾವ್ಯಾಸ್ವಾದ ಈಗಿನಂತೆ ಕೆಲವೇ ವ್ಯಕ್ತಿಗಳ ಏಕಾಂತ ಸಂತೋಷದ ಸಾಧನವಾಗಿರದೆ ಸಾಮಾಜಿಕ ಅವಶ್ಯಕತೆಯೂ ಆಗಿತ್ತು. ಬಿತ್ತುವಾಗ, ಕೊಯ್ಯುವಾಗ... ಅಷ್ಟೇಕೆ ದಿನ ನಿತ್ಯದ ಕುಟ್ಟುವಾಗ, ಬೀಸುವಾಗ, ಕೂಸು ಮಲಗಿಸುವಾಗ ಸಹ ಕಾವ್ಯ ಒಂದು ಉಪಯುಕ್ತ ವಸ್ತುವಾಗಿತ್ತು.

೨) ಕಾವ್ಯ ಅವರಿಗೆ ಕೇವಲ ವಿಲಾಸವಲ್ಲ ಮನರಂಜನೆಯಲ್ಲ ; ಭೂಮಿ ತಾಯಿಗೆ ಶಾಂತಿಯನ್ನುಂಟು ಮಾಡುವ, ಫಸಲನ್ನು ಹುಲುಸುಗೊಳಿಸುವ ಕ್ರಿಯಾಶೀಲವಾದ ಧಾರ್ಮಿಕ ಆಚರಣೆಯೂ ಹೌದು. ಆದರೆ ಈ ಪ್ರಸಂಗಗಳೆಲ್ಲ ವೈಯಕ್ತಿಕ ಏಕಾಂತದಲ್ಲಿ ಸಂಬಂಧಿಸಿರದೆ ಸಾಮೂಹಿಕ ಅವಶ್ಯಕತೆಯಲ್ಲಿ ಹುಟ್ಟಬೇಕಾಯಿತು.

(ಪ್ರಸಂಗಗಳೆಲ್ಲ ವೈಯಕ್ತಿಕ ಏಕಾಂತದಲ್ಲಿ ಸಂಬಂಧಿಸಿರದೆ ಸಾಮೂಹಿಕ ಅವಶ್ಯಕತೆಯಲ್ಲಿ ಹುಟ್ಟಬೇಕಾಯಿತು. (ಒತ್ತು ನನ್ನದು))

೩) ಮದುವೆಯ ಮನೆಗೆ ಭಜಂತ್ರಿ ಮೇಳ ಅವಶ್ಯವಾಗಿರುವಂತೆ ಕಾವ್ಯ ಜೀವನದ ಅನೇಕ ಕಾರ್ಯಗಳಿಗೆ ಅವಶ್ಯವಾಗಿರುತ್ತಿದ್ದ ಕಾಲ ಒಂದಿತ್ತು. (ಕುರ್ತಕೋಟಿಯವರಿಂದ ಉದ್ಧತ)

೪) ತನಗೆ ತನ್ನ ಜನಾಂಗಕ್ಕೆ ಅನಿಸಿದ್ದಕ್ಕೆ ಪ್ರಾಮಾಣಿಕವಾದ ಅಭಿವ್ಯಕ್ತಿಯನ್ನು ಕೊಡಲು ಅವನು ಯತ್ನಿಸಿದ್ದಾನೆ.

೫) ಜನಪದ ಕಾವ್ಯ ಒಂದು ನಿರುದ್ದಿಶ್ಯ ರಸಸೃಷ್ಟಿ ಎಂಬುದು ಕೆಲಮಟ್ಟಿಗೆ ನಿಜ.

೬) ಆಧುನಿಕ ಪ್ರಜ್ಞೆಯುಳ್ಳ ಯಾವ ಕವಿಯೂ ಜನಪದ ಕಾವ್ಯ ಪರಂಪರೆಯನ್ನು ಇದ್ದಕ್ಕಿದ್ದಂತೆ ಬಳಸಿಕೊಂಡು ಅದರ ಭಾಗವಾಗುವುದು ಸಾಧ್ಯವಾಗುವುದಿಲ್ಲ... ಒಂದು ಸಂಸ್ಕೃತಿಯಲ್ಲಿ ಭಾಗವಹಿಸದೆ ಅದರ ಸಾಹಿತ್ಯ ಪರಂಪರೆಯೊಂದನ್ನೇ ಸ್ವೀಕರಿಸಲಿಕ್ಕಾಗುವುದಿಲ್ಲ.

೭) ಈ ಜನ ಹೆಚ್ಚಾಗಿ ಪ್ರವೃತ್ತಿಗಳ ಮಟ್ಟದಲ್ಲಿ ಜೀವಿಸುವವರಾದ್ದರಿಂದ ಭಾವನೆಗಳ ಮೇಲೆ ಹೆಚ್ಚಿನ ಒತ್ತು ಬೀಳುತ್ತದೆ.

೮) ಸಮಾಜದ ವಿರುದ್ಧ ವ್ಯಕ್ತಿಯ ವೈಯಕ್ತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರಸಂಗಗಳನ್ನು ನಾವು ಜನಪದ ಸಾಹಿತ್ಯದಲ್ಲಿ ಕಾಣಲಾರೆವು.

೯) ಜನಪದ ಕಾವ್ಯದಲ್ಲಿ ವೈಚಾರಿಕತೆಯ ಅಂಶವೇ ಕಡಿಮೆಯಾಗಿದೆ.

೧೦) ಜನಪದ ಕಾವ್ಯದಲ್ಲಿ... ಬಂಡಾಯದ ಧ್ವನಿ ಕೇಳಿ ಬರುವುದೇ ಇಲ್ಲ.

ಸಿದ್ಧಗೊಂಡ ಸಾಹಿತ್ಯತತ್ವಗಳ ಮೂಲಕ ಜನಪದ ಸಾಹಿತ್ಯವನ್ನು ಪರೀಕ್ಷಿಸಿದಾಗ ಜನಪದ ಸಾಹಿತ್ಯ ಎರಡನೆಯ ಸ್ಥಾನಕ್ಕೆ ಸರಿಯುವುದು, ಸಾಂಸ್ಕೃತಿಕ ನೆಲೆಯಿಂದ ನೋಡಿದಾಗ ಜನಪದ ಸಾಹಿತ್ಯ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತಿರುವುದು ಮೇಲಿನ ಧೋರಣೆಯಿಂದ ಕಂಡು ಬರುತ್ತಿದೆ. ಒಬ್ಬ ಪಕ್ಕಾ ಸಾಹಿತಿ ಹಾಗೂ ಒಬ್ಬ ಸಮಾಜೋ - ಆರ್ಥಿಕ ಚಿಂತಕ ಸಾಹಿತ್ಯವನ್ನು ನೋಡುವ ಎರಡೂ ಭಿನ್ನ ಮನೋಧರ್ಮಗಳು ಇಲ್ಲಿ ಸ್ಪಷ್ಟವಾಗಿವೆ. ಇದರಿಂದ ಶಿಷ್ಟ ಸಾಹಿತಿಯ ಸಾಂಸ್ಕೃತಿಕ ನೆಲೆ ಯಾವುದು ಹಾಗೂ ಜನಪದ ಸಾಹಿತ್ಯದ ಸಾಂಸ್ಕೃತಿಕ ನೆಲೆ ಯಾವುದು ಎಂಬುದು ಗೊತ್ತಾಗುತ್ತದೆ. ಶಿಷ್ಟ ಸಾಹಿತ್ಯ -ಸಾಹಿತಿಯಲ್ಲಿ ಸಾಹಿತ್ಯಕ ನೆಲೆ ಪ್ರಧಾನವಾಗಿದ್ದರೆ ಜನಪದ ಸಾಹಿತ್ಯದಲ್ಲಿ ಸಂಸ್ಕೃತಿ ನೆಲೆ ಬಹಳ ಭದ್ರವಾಗಿರುವುದು ಸ್ಪಷ್ಟವಾಗುತ್ತಿದೆ. ಶಿಷ್ಟ ಸಾಹಿತ್ಯ ತತ್ವಗಳನ್ನು ಜನಪದ ಸಾಹಿತ್ಯಕ್ಕೂ ವಿಸ್ತರಿಸಲು ಹೊರಟ ಗಿರಡ್ಡಿಯವರು ಜನಪದ ಸಾಹಿತ್ಯದ ಮೂಲ ನೆಲೆಯನ್ನು ಗುರುತಿಸಿಕೊಂಡಂತೆ ತಮ್ಮ ಆರಂಭಿಕ ಬದ್ಧತೆಯಿಂದ ವಾಸ್ತವದ ಅರಿವಿಗೆ ಚಲಿಸುತ್ತಾರೆ.

ಜನಪದ ಸಾಹಿತ್ಯದ ಬಗ್ಗೆ ನಿರಂತರ ಬರೆಯುತ್ತ, ಅದರ ಬೆಂಬಲಕ್ಕೆ ನಿಲ್ಲುತ್ತ ಬಂದ ಸಿಪಿಕೆಯವರ ಅಭಿಪ್ರಾಯ ತುಂಬ ದೃಢವಾದುದು. ಅವರು ಹೇಳುತ್ತಾರೆ :

''ಜನಪದ ಕಾವ್ಯ ಶಿಷ್ಟ ಅಥವ ನಾಗರೀಕ ಕಾವ್ಯಕ್ಕಿಂತ ಶ್ರೇಷ್ಠವೆಂದು ವಾದಿಸಬೇಕಾಗಿಲ್ಲ. ಆದರೆ ತನ್ನ ಅತ್ಯುನ್ನತ ಸ್ತರದಲ್ಲಿ ಅದು ಮತ್ತಾವುದೇ ಕಾವ್ಯಕ್ಕಿಂತ ಕಡಿಮೆಯಿಲ್ಲ ಎಂಬುದು ನಿಸ್ಸಂದೇಹ ಸಂಗತಿ'' (ಪು, ೨೪, ೧೯೭೫, ಜನಪದ ಗೀತೆ). ''ಜನಪದ ಕಾವ್ಯ ಮೀಮಾಂಸೆ'' ಬರೆಯಲು ವೀರಪಣ ತೊಟ್ಟು ನಿಂತ ವೀರಣ್ಣ ದಂಡೆಯವರು "ಜನಪದ ಕಾವ್ಯ ಪ್ರಪಂಚದಲ್ಲಿ ಶಾಸ್ತ್ರಕಾರರ ಪ್ರತ್ಯೇಕ ಗುಂಪು ಇಲ್ಲ. ಜನಪದ ಕವಿಗಳು ಶಾಸ್ತ್ರವನ್ನು ಬಲ್ಲವರೆ ಹೊರತು, ಶಾಸ್ತ್ರಕಾರರಲ್ಲ. ಇಲ್ಲಿ ಅವರ ವಿಚಾರಗಳನ್ನೇ ಸೂಕ್ಷ್ಮವಾಗಿ ಗಮನಿಸಿ, ಭಾರತೀಯ ಕಾವ್ಯ ಮೀಮಾಂಸೆಯನ್ನು ಹಿನ್ನೆಲೆಗೆ ಇಟ್ಟುಕೊಂಡು, ಅವರು ಹೊಂದಿರುವ ಶಾಸ್ತ್ರಾಂಶಗಳ

ಪುರದ ಪುಣ್ಯ

ಆಧಾರದ ಮೇಲಿಂದಲೇ ಒಂದು ವಿಷಯದ ಸಾಧಾರ ಪರಿಕಲ್ಪನೆಯನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದೇನೆ'' (ಪು ೪, ೧೯೮೭) ಎನ್ನುತ್ತಾರೆ.

**III. ಮೂರನೆಯ ಘಟ್ಟ : ಕಂಬಾರ - ರಾಗೌ ಬೇರೊಂದು ನಿರ್ವಚನ**

ಕಂಬಾರರು ಸಾಹಿತ್ಯಕ ನೆಲೆಯಿಂದಲೆ ಜನಪದ ಸಾಹಿತ್ಯವನ್ನು ನೋಡುತ್ತಾರಾದರೂ ಅದನ್ನು ನಿಲ್ಲಿಸುವ ನೆಲೆ ಬೇರೆಯಾಗಿದೆ. ಅವರು ಅನ್ನುತ್ತಾರೆ :

'ಜನಪದ ಸಾಹಿತ್ಯ ಎಂದು ಹೇಳುವುದು ಬಹಳ ದುರ್ಬಲವಾದ ಅರ್ಥದಲ್ಲಿಯೇ ಹೊರತು ಶಿಷ್ಟ ಸಾಹಿತ್ಯದ ಅರ್ಥದಲ್ಲಿ ಅಲ್ಲ, ಯಾಕಂದರೆ ಎರಡರ ಮಾಧ್ಯಮಗಳು ಬೇರೆ ಬೇರೆ... ಮಾಧ್ಯಮಗಳೇ ಭಿನ್ನವಾದಾಗ ಸೂಕ್ಷ್ಮ ಹೋಲಿಕೆಗೆ ಅವಕಾಶವೆಲ್ಲಿದೆ?' (ಪು. ೨೮, ಸಿ.ಪಿ.ಕೆ.ಯವರ ಜನಪದ ಗೀತೆ ಕೃತಿಯಿಂದ ಉದ್ಧೃತ). ಜನಪದ ಸಾಹಿತ್ಯವನ್ನು ಸ್ವತಂತ್ರ ಅಸ್ತಿತ್ವದ ಸಾಹಿತ್ಯವಾಗಿ ನೋಡದ ಅವರು ಅದನ್ನು ಜನಪದ ಸಂಸ್ಕೃತಿಯ 'ಭೈ ಪ್ರಾಡೆಕ್ಟ್' ಎಂದು ಕರೆಯುತ್ತಾರೆ.

ರಾಗೌ ಅವರು ಜನಪದ ಸಾಹಿತ್ಯದ ಅಸ್ತಿತ್ವವನ್ನು ಶಿಷ್ಟ ಸಾಹಿತ್ಯದ ನೆರವಿನಿಂದ ಸಮರ್ಥಿಸುವುದಿಲ್ಲ. ಅವರು ''ಜನಪದ ಗೀತೆಯ ಶುದ್ಧ ಸಾಹಿತ್ಯಕ ಪರಿಶೀಲನೆ ಲಾಭದಾಯಕವಾಗುವುದಿಲ್ಲ. ಇಲ್ಲಿ ಸಾಹಿತ್ಯಕ ಮೌಲ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ, ಚಾರಿತ್ರಿಕ ಹಾಗೂ ಮನಶ್ಯಾಸ್ತ್ರೀಯ ಮೌಲ್ಯಗಳೇ ನಮ್ಮ ಗಮನ ಸೆಳೆಯುವಂಥವು'' (ರಾಗೌ : ಪು ೧, ಜನಪದ ಸಾಹಿತ್ಯ ರೂಪಗಳು ೧೯೭೮)

**IV. ನಾಲ್ಕನೆಯ ಘಟ್ಟ : ಹಿ. ಶಿ. ರಾಮಚಂದ್ರೇಗೌಡ ಮತ್ತು.. ಅನನ್ಯತೆಯ ಸಮರ್ಥನೆ**

ಮೈಸೂರು ವಿಶ್ವವಿದ್ಯಾಲಯದಲ್ಲಿ ೧೯೭೯ರಲ್ಲಿ ಹಾಗೂ ೧೯೯೪ರಲ್ಲಿ ಬಾಗಲಕೋಟೆಯಲ್ಲಿ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ್ದ ಯುವ ಕವಿಗಳ ಕಾವ್ಯ ಕಮ್ಮಟದಲ್ಲಿ ಮಂಡಿಸಿದ ಲೇಖನ, 'ಸಾಹಿತ್ಯತತ್ವಗಳು ಮತ್ತು ಜನಪದ ಸಾಹಿತ್ಯ'ದಲ್ಲಿ ನಾನು ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ.

೧) ಜನಪದ ಸಾಹಿತ್ಯ, ಸಾಹಿತ್ಯದ ಅನನ್ಯತೆಯಲ್ಲಿ, ಶಿಸ್ತಿನಲ್ಲಿ ಹಾಗೂ ಉದ್ದೇಶದಲ್ಲಿ ಸೃಷ್ಟಿಯಾಯಿತೆ?

೨) ಜನಪದ ಸಾಹಿತ್ಯ ರಚಿಸಿದವರು ಕವಿಗಳೆ?

೩) ಜನಪದ ಸಾಹಿತ್ಯವನ್ನು ಸಾಹಿತ್ಯ ಎಂದು ಕರೆಯುವಾಗ ಅದನ್ನು ಅದರ

ನೆಲೆಯಿಂದ ಹೊರಗೆ ತೆಗೆದಿದ್ದೇವೆಯೆ? ಇದು ಶಿಷ್ಟರೆಂಬ ನಮ್ಮ ಬಳಕೆ ದೃಷ್ಟಿಯ ಅಥವ ಸಂಪಾದನಾ ಮಾರ್ಗವೆ ಅಥವ ಸಾಹಿತ್ಯ ವ್ಯಸನವೆ ?

೪) ವಚನ ಚಳುವಳಿಯಂಥ ಆರ್ಥಿಕ-ಸಾಮಾಜಿಕ ಚಳುವಳಿ ಕನ್ನಡ ಸಾಹಿತ್ಯ ಇತಿಹಾಸದಲ್ಲಿ, ಮೊದಲಾಗಿ ವರ್ಗಸಾಹಿತ್ಯ ಚಿಂತನೆಯ ಪರಿಭಾಷೆಯ ಆಯುಧವನ್ನು ಶರಣಾಗಿಸಿದೆ.

೫) ಸಂಪನ್ಮೂಲ ಸಾಹಿತ್ಯ (resource literature) ವನ್ನು ಸಿದ್ಧವಸ್ತು ಸಾಹಿತ್ಯ (Product literature) ವಾಗಿ ನೋಡುವುದು ಮೂಲತಹ ತಪ್ಪುಗ್ರಹಿಕೆ. ಜನಪದ ಕಾವ್ಯ ಶಿಷ್ಟ ಕಾವ್ಯದಂತೆ ರಸ-ಧ್ವನಿಯ ಅನುಭೋಗಿ ಕಾವ್ಯವಲ್ಲ. ಅದು ಜೀವನವನ್ನು ಹಂಚಿಕೊಳ್ಳುವ ಆರ್ಥಿಕ-ಸಾಮಾಜಿಕ ಉತ್ಪತ್ತಿಯಾದ ಸಂಸ್ಕೃತಿ ಧ್ವನಿ.

೭) ಜನಪದ ಕಾವ್ಯ ಒಂದು ಪ್ರತ್ಯೇಕ ಅನನ್ಯತೆ.

೮) ಏಕ ಸೃಷ್ಟಿ ಮತ್ತು ನಿರಂತರ ಬಹುಸೃಷ್ಟಿ ಕಾವ್ಯಗಳ ಮಧ್ಯೆ ಸಮಾನತೆ ತತ್ವವನ್ನು ಪ್ರತಿಪಾದಿಸುವುದು ಅಸಹಜ.

೯) ಜನಪದ ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟಂತೆ ನಮ್ಮ ವರ್ಗಶಿಷ್ಟ ಹಾಗೂ ಆಧುನಿಕಶಿಷ್ಟಗಳ ಎಲ್ಲ ತತ್ವಗಳನ್ನು ನಿರಾಕರಿಸುವುದೆ ನಮ್ಮ ಹೊಸ ಮೌಲ್ಯ ಮಾಪನದ ಅಳತೆಗೋಲು ಎಂದು ಮೊದಲಾಗಿ ನಾನು ತಿಳಿಯುತ್ತೇನೆ.

೧೦) ಸಾಹಿತ್ಯ ಸೃಷ್ಟಿಯ ಅಪೇಕ್ಷೆಗಳಾದ ಯಶಸ್ಸು ಸಂಪಾನೆ, ಕೀರ್ತಿ, ದೈವಕೃಪೆ.

ನಮ್ಮ ಅನುಭವಗಳು ರೂಪುಗೊಳ್ಳುವುದು ಸಂಸ್ಕೃತಿಯ ಒಳಗಡೆಯಾದರೂ, ಈ ಅನುಭವಗಳು ವ್ಯಕ್ತಗೊಳ್ಳುವುದು ನಮ್ಮ ನಡುವೆ ಸಾಧ್ಯವಾಗುವ ಆರ್ಥಿಕ ಚಟುವಟಿಕೆಗಳಿಂದ. ನಮ್ಮ ಅನುಭವಗಳು ಹಾಗೂ ಅವುಗಳ ಫಲಿತವಾದ ಧ್ವನಿಗಳು ನಾವು ರೂಢಿಸಿಕೊಂಡ ಆರ್ಥಿಕ ಸಂರಚನೆ ಹಾಗೂ ಚೌಕಟ್ಟುಗಳೆ ಆಗಿರುತ್ತವೆ.

ಕೆಲವರಿಗೆ ದನ ತಿನ್ನುವುದೆಂದರೆ ಅನುಭವಗಳ ಹುಟ್ಟುವುದಿಲ್ಲ. ಅದನ್ನು ಆಸ್ವಾದಿಸುವ ಮಾತು ಸಾಧ್ಯವೇ ಇಲ್ಲ. ಇದು ಇಂಡಿಯಾದ ಆರ್ಥಿಕ ಚಟುವಟಿಕೆಯ ಮಿತಿಯನ್ನು ತಿಳಿಸುತ್ತದೆ. ಯಾಕೆಂದರೆ ದನದ ಮಾಂಸ ಒಂದು ವಲಯದ ಆರ್ಥಿಕ

ಚಟುವಟಿಕೆಯ ನಿಷೇಧವಾಗಿದೆ. ಇದೇ ದೇಶದಲ್ಲಿ ದನದ ಮಾಂಸದ ಬಿರ್‍ಯಾನಿ ಎಂದರೆ ಅಸಾಧಾರಣ ಅನುಭವಗಳೂ ಆಸ್ವಾದನೆಯ ಸಾಧ್ಯತೆಗಳೂ ಹುಟ್ಟಿಕೊಳ್ಳುತ್ತವೆ.

ಆಸ್ವಾದನೆ ಪವಿತ್ರವಲ್ಲ ಎಂದಾದರೆ (ಆಗಿದ್ದರೆ ಇರಲಿ) ನಮ್ಮ ಎಲ್ಲ ಅನುಭವ ಹಾಗೂ ಆಸ್ವಾದನೆಗಳು ನಮ್ಮ ಸಾಮಾಜಿಕ ವಲಯದ ಉತ್ಪಾದನೆ, ಅನುಭೋಗ ಹಾಗೂ ಪರಿಷ್ಕರಣೆಗೆ ಸಂಬಂಧಿಸಿರುತ್ತವೆ. ಲೋಕ ದೃಷ್ಟಿ ಸೇರಿದಂತೆ ನಮ್ಮ ಸಾಂಸ್ಕೃತಿಕ ಆಳತೆಗಳು, ಇಲ್ಲಿಂದಲೇ ನಿಷ್ಪನ್ನಗೊಳ್ಳುತ್ತವೆ. ನಮ್ಮ ಕಾವ್ಯ ಚಿಂತನೆ ಈ ವಲಯದ ವಿಶೇಷ ಮತ್ತು ಮಿತಿಗಳನ್ನು ಒಳಗೊಂಡೆ ಸೃಷ್ಟಿಯಾಗುತ್ತದೆ. ಒಂದು ಸೀಮಿತ ಭೌಗೋಳಿಕ ಚಾರಿತ್ರಿಕ ವಲಯದ ಒಳಗೆ ನಡೆಯುವ ಸಾಂಸ್ಕೃತಿಕ - ಸಾಹಿತ್ಯಕ ಚಟುವಟಿಕೆಯ ಫಲಶೃತಿ ಇದು. ಭಾರತೀಯ ಕಾವ್ಯ ಮೀಮಾಂಸೆ ಮತ್ತು ಅದರ ಪರಿಕರಗಳನ್ನು ತಿಳಿಯುತ್ತಾ ಹೋದಂತೆ ಈ ಅನುಭವ ನಮ್ಮ ಎದುರು ನಿಲ್ಲುತ್ತದೆ (ನಮ್ಮ ಬರಹದ ಸಾಹಿತ್ಯ ಚಿಂತನೆ ಕೂಡ ಒಂದು ವರ್ಗದ ಜನರ ಚಟುವಟಿಕೆ ಎಂಬುದನ್ನು ಕೂಡ ಇಲ್ಲಿ ದಾಖಲಿಸಿಕೊಳ್ಳಬಹುದು).

ನಮ್ಮ ಈ ಹೊತ್ತಿನ ಸಾಹಿತ್ಯ ಚಟುವಟಿಕೆ ಕೂಡ ಪಾರಂಪರಿಕ ಅಕ್ಷರ | ಅನುಕೂಲ ವರ್ಗದ ಚಟುವಟಿಕೆ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ನಮ್ಮ ಅನುಭವಕ್ಕೆ, ವಿವರಣೆಗೆ, ವಿಮರ್ಶೆಗೆ ಸಾಧ್ಯವಾದ ಪರಿಕರ ಹಾಗೂ ಫಲಶೃತಿಯನ್ನೇ ನಾವು ನಮ್ಮ ಈ ಕಾವ್ಯ ಸೃಷ್ಟಿಯಿಂದ ಬಯಸುತ್ತೇವೆ. ಅದು ನಮ್ಮ ಸಾಹಿತ್ಯ ಬದ್ಧತೆ ಎನಿಸಿಕೊಂಡಿದೆ.

ಕಾವ್ಯ, ಸಂಸ್ಕೃತಿಗೆ ನಾವು ಇಟ್ಟುಕೊಂಡ ಪುನರ್ ಚಿಂತನೆ ಎನ್ನುವುದಾದರೆ, ಅದು ನಮ್ಮ ಸಾಮಾಜಿಕ ಚರಿತ್ರೆಯ ಪುನರ್ ಚಿಂತನೆ ಕೂಡ ಆಗುತ್ತದೆ. ಈ ಅಂಶವನ್ನು ಕಾಲಕಾಲಕ್ಕೆ ಸಂಭವಿಸಿದ ಸಾಹಿತ್ಯ ಚಳುವಳಿಗಳು ಸ್ಪಷ್ಟಪಡಿಸುತ್ತವೆ.

ನಮಗೆ ಭವಿಷ್ಯವಾದಿ ಚಿಂತನೆ ಬೇಡವೆ ?

ನಾವು ಕೇವಲ ತಿಂದು ಕುಡಿಯುವ ಬಕಾಸುರರಾಗಬೇಕೆ ? ನಮಗೆ ಮನೋಲ್ಲಾಸ ಮಾತ್ರ ಕೊಡುವ ಸ್ಟ್ಯಾಟಿಕ್ ವರ್ಲ್ಡ್ ಸಾಕೆ ಅಥವಾ ಮನೋ ವಿಕಾಸಶೀಲ ಕಂಟಿನ್ಯೂ ವರ್ಲ್ಡ್ ಬೇಕೆ ? ಮನೋಲ್ಲಾಸ ಮಾತ್ರ ಬಯಸುವ ಜಗತ್ತು ಫಲಾನುಭವಿಗಳ ಜಗತ್ತು ಫಲಾನುಭವಿ ಸಮಾಜಕ್ಕೆ ಏನನ್ನೂ ಬಿಟ್ಟುಹೋಗದ ರಾಕ್ಷಸ. ಮನೋವಿಕಾಸ ಬಯಸುವ ಜೀವಿ ಪರಂಪರೆ ಹಾಗೂ ಪೀಳಿಗೆಗಳ ಬಗ್ಗೆ ಯೋಚಿಸುವ ನಿಜವಾದ ಮನುಷ್ಯ.

ನಾನು ಸಿನಿಮಾಗಳನ್ನು ಕೇವಲ ಮನೋಲ್ಲಾಸ ಮಾಧ್ಯಮಗಳು ಎಂದು ತಿಳಿದಿಲ್ಲ. ಕಲೆ ಯುದ್ಧವನ್ನು ಕೂಡ ಗೆಲ್ಲಬಲ್ಲದು. ಸಿನಿಮಾ ಕಲೆಗಳಲ್ಲಿ ನಾಯಕ ಸ್ಥಾನದಲ್ಲಿದೆ. ಸಿನೆಮಾ,

೧. ಈಗ ಜನಗಳ ಮಧ್ಯೆ ನಾಯಕತ್ವ ಕೊಡಬಲ್ಲುದು. ಈಗ ಜನರ ಹೃದಯದ ನಾಯಕರು ರಾಜಕಾರಣಿಗಳಲ್ಲ, ಸಿನೆಮಾ ನಾಯಕರು. ಅವರು ಕೆಡಬಾರದು.

9. ಸಿನೆಮಾ ಜಾತಿಯ ಹೊರಗೆ ಹಾಗೂ ಆಚೆಗೆ ಮನುಷ್ಯ ಸಂಬಂಧಗಳ ಬಗ್ಗೆ ಮಾತನಾಡುವ ಸಾಮರ್ಥ್ಯ ಹೊಂದಿದೆ. ಆದ್ದರಿಂದಲೇ ಪ್ರೇಕ್ಷಕ ಸಿನೆಮಾದಲ್ಲಿ ಪ್ರಮುಖವಾಗಿ ಪ್ರೇಮವನ್ನೇ ನಿರೀಕ್ಷಿಸುತ್ತಾನೆ. ಜಾತಿಯೊಳಗೆ ಇದನ್ನು ನಿರೀಕ್ಷಿಸುವುದಿಲ್ಲ.

೩. ಸಿನೆಮಾಕ್ಕೆ ಮಾರ್ಗದರ್ಶನ ಮಾಡುವ ಶಕ್ತಿ ಇದೆ. ಮಾರ್ಗದರ್ಶನ

ಪುರದ ಪುಣ್ಯ

ಎಂದರೆ ಗಟ್ಟಿಯಾದ ಧಾರ್ಮಿಕ, ಮತೀಯ ತತ್ತ್ವ ಅಲ್ಲ, ಹರಿಕಥೆ - ಶಿವಕಥೆಯೂ ಅಲ್ಲ. ಭವಿಷ್ಯವಾದಿ ಬದುಕಿಗೆ ಕೊಂಡಿಗಳನ್ನು ಸೇರಿಸುವುದು.

ಇದು ಸಾಧ್ಯವಾಗಬೇಕಾದರೆ ಸಿನೆಮಾ ಜನಪದೀಯ ಹಾಗೂ ಜನಪರವಾಗಿ ಯೋಚಿಸಬೇಕು. ಅಂದರೆ ಹೆಂಡ ಕುಡಿಸುವ ರೀತಿಯಲ್ಲಿ ಜನರ ಹತ್ತಿರ ಹೋಗುವುದಲ್ಲ. ಸಿನೆಮಾದಿಂದ ಕಲಿಯುವುದು ಅನೇಕ ಇದೆ ಎಂದು ಜನ ಸಿನೆಮಾಗಳಿಗೆ ಮುಗಿಬೀಳುವಂತಿರಬೇಕು. ಅಂಥ ಸವಾಲನ್ನು ಸಿನೆಮಾ ಕಥೆ, ಗೀತೆ, ಸಂಗೀತ, ಸಾಹಿತ್ಯ ಹಾಗೂ ನಿರ್ದೇಶನ ಮಾಡುವವರು ತೆಗೆದುಕೊಳ್ಳಬೇಕಾಗಿದೆ. ಇದನ್ನು ನಾನು ಜನ-ಜನಪದಗಳನ್ನು ಸೃಷ್ಟಿಸುವ ಪ್ರಕ್ರಿಯೆ ಎಂದು ಕರೆಯುತ್ತೇನೆ.

ಒಬ್ಬ ನಾಯಕನ ಮೂಲಕ ಸಿನೆಮಾ ಮಾಡುವ ಕೆಲಸ ಇದಲ್ಲ. ಒಂದು ಸಿಲ್ಲಿ ಟೇಸ್ಟ್ ಮೂಲಕವೂ ಅಲ್ಲ, ಒಂದು ಎಲೆಕ್ಷನ್ ಮಾಡುವುದಕ್ಕಿಂತ ಹೆಚ್ಚಿನ ಪರಿಣಾಮವನ್ನು ಒಂದು ಸಿನೆಮಾ ಮಾಡುವುದಾದರೆ ಜನ ಸಿನೆಮಾವನ್ನು ಆ ರೀತಿ ಬಯಸುವಂತೆ ಮಾಡುವುದಾದರೆ ಅದು ಜನಗಳ ಹೃದಯವನ್ನು ಅರಳಿಸುವ ಕೆಲಸವಾಗುತ್ತದೆ.

ಜನಪದ ಗೀತೆಗಳ ಹೆಸರಿನಲ್ಲಿ ಅಸಹ್ಯ ಗೀತೆಗಳು ಬರುತ್ತಿವೆ ಎಂಬ ಮಾತನ್ನು ಕೇಳಿದ್ದೆ. ಈ ಕುರಿತು ಕೆಲವು ಪತ್ರಿಕೆಗಳಲ್ಲಿ ವರದಿ ಹಾಗೂ ಲೇಖನಗಳು ಪ್ರಕಟವಾದವು. ನಾನು ಅಧ್ಯಕ್ಷನಾದಾಗ ಸಂದರ್ಶನಕ್ಕೆ ಬಂದ ಪತ್ರಿಕೆಯವರು ನಿಮ್ಮಲ್ಲಿ ಈ ಕುರಿತು ಏನು ಕಾರ್ಯಕ್ರಮವಿದೆ ಎಂದು ಪ್ರಶ್ನಿಸಿದ್ದರು. ಅವರ ವರದಿಯ ನಂತರ ಅನೇಕ ಹೆಣ್ಣುಮಕ್ಕಳು ನನಗೆ ಫೋನ್ ಮಾಡಿದರು. ''ನಾವು ಟೆಂಪೋಗಳಲ್ಲಿ ಪ್ರಯಾಣ ಮಾಡಲಾಗುತ್ತಿಲ್ಲ. ಅಂಗಡಿಯ ಬೀದಿಗಳಲ್ಲಿ ತಿರುಗಲಾಗುತ್ತಿಲ್ಲ... ಹೀಗೆ ನಾವು ಕುಸಿದು ಹೋಗುತ್ತಿದ್ದೇವೆ. ದುರಂತ ಎಂದರೆ ನಮ್ಮ ತಂದೆ, ತಮ್ಮ, ಅಣ್ಣ ಮತ್ತು ನಮ್ಮ ಸಹವಾಸಿಗಳೆ ಇಂಥ ಅಶ್ಲೀಲ ಕ್ಯಾಸೆಟ್ಟುಗಳ ಫಲಾನುಭವಿಗಳು. ಮಾತೃ ಹೃದಯದ ಜನಪದ ಗೀತೆಗಳ ಹೆಸರಿನಲ್ಲಿ ಇಂಥ ಕ್ಯಾಸೆಟ್ ಗಳು ಬರುತ್ತಿವೆ'' ಎಂದು ತಮ್ಮ ಅಳಲು ತೋಡಿಕೊಂಡರು.

ವೈಯಕ್ತಿಕವಾಗಿ ಈ ಬಗ್ಗೆ ಏನೂ ಮಾಡಲು ಸಾಧ್ಯವಾಗದ ನಾನು ಅಕಾಡೆಮಿಯ ಅಧ್ಯಕ್ಷ ಆದಮೇಲೆ ಮತ್ತೆ ಈ ಬಗೆಯ ಕ್ಯಾಸೆಟ್ಟುಗಳನ್ನು ಕೇಳಿದೆ. ಸಮಾನತೆ ಮತ್ತು ಸಹಬಾಳ್ವೆಗಾಗಿ ಹೋರಾಡುತ್ತಾ ಬಂದ ನನಗೆ ಈ ಹಾಡುಗಳನ್ನು ಕೇಳಿ ಮೈಕೈ ಪರಚಿಕೊಳ್ಳುವಂತಾಯಿತು. ಮನಸ್ಸು ತಳಮಳಗೊಂಡಿತು. ನೆತ್ತಿಗೇರಿದ ಸಿಟ್ಟು ತಳದ ಕೆಳಕ್ಕೆ ಇಳಿಯಿತು. ಇದಕ್ಕೆ ಉತ್ತರ ಕೊಡಬೇಕಾದುದು ಒಬ್ಬ ವ್ಯಕ್ತಿಯಲ್ಲ, ಒಂದು ಸಮಾಜ ಎನಿಸಿತು. ಮಾತು ತೆಗೆದರೆ ಸಿಟ್ಟಾಗುತ್ತದೆ. ಕೃತಿಯಲ್ಲಿ ಏನಾದರೂ ಮಾಡೋಣ ಎಂದು ನಿಮ್ಮಂಥ ಪ್ರಾಜ್ಞರನ್ನು ಜಾನಪದ ಅಕಾಡೆಮಿ ಸಂಪರ್ಕಿಸಿದೆ.

ಜನಪದ ಗೀತೆಗಳ ಹೆಸರಿನಲ್ಲಿ ಭಾರಿ ನಕಲಿ ಕ್ಯಾಸೆಟ್‌ಗಳು ಬರುತ್ತಿವೆ. ಅವು ತುಂಬಾ ಅಶ್ಲೀಲ, ಅಸಹ್ಯ ಮತ್ತು ಅವಾಂತರಕಾರಿಯಾಗಿವೆ. ನಮ್ಮ ಸಮಾಜದ ಗೌರವ

ಉಳಿಸಿಕೊಳ್ಳುವ ಕಾರಣಕ್ಕೆ ಇವುಗಳನ್ನು ನಕಲಿ ಕ್ಯಾಸೆಟ್ಟುಗಳು ಎಂದು ಕರೆದಿದ್ದೇವೆ. ನಕಲಿ ಎಂಬ ಒಂದು ಪರಿಕಲ್ಪನೆ ಎಲ್ಲ ಭಾಷೆ ಹಾಗೂ ಸಂಸ್ಕೃತಿಯಲ್ಲಿ ಇದೆ. ಅದು ಅಸಲಿಯನ್ನು ಸಮರ್ಥಸುವ ಹಾಗೂ ಬೆಳೆಸುವ ಒಂದು ಕ್ರಿಯಾಸೂಚಿ, ಎಲ್ಲ ಸಂಸ್ಕೃತಿಗಳಲ್ಲಿ ನಾಯಕ, ಪ್ರತಿನಾಯಕ ಹಾಗೂ ನಕಲಿ ನಾಯಕರುಗಳ ಪರಿಕಲ್ಪನೆ ಉಂಟು. ನಮ್ಮ ಈ ಅಶ್ಲೀಲ ಕ್ಯಾಸೆಟ್ಟುಗಳು ಎಲ್ಲರನ್ನೂ ಸಾಚಾ ನಕಲಿ ವ್ಯಕ್ತಿಗಳನ್ನಾಗಿಯೆ ಮಾಡುತ್ತಿವೆ. ಸಹ್ಯ ಅನ್ನುವಂಥದು ಇಲ್ಲಿ ಸೊನ್ನೆ. ಅಸಹ್ಯ ಎನ್ನುವಂಥದು ಮೌಲ್ಯ. ಈ ಬಗೆಯ ಹೇಸಿಗೆಯನ್ನು ನಾನು ಟಾಯಿಲೆಟ್‌ನಲ್ಲೂ ಕಂಡುಬಂದಿಲ್ಲ ಕ್ಷಮಿಸಬೇಕು.

ಈ ಕ್ಯಾಸೆಟ್ಟುಗಳ ಜಾಲವನ್ನು ಒಂದು ದೊಡ್ಡ ಖಳನಾಯಕ ಗ್ಯಾಂಗಿನ ಜಾಲ ಎಂದು ಕರೆಯಬಹುದು. ಜನಪ್ರಿಯತೆ ಹಾಗೂ ಜೊಲ್ಲು ನೆಕ್ಕುವ ಅಭಿರುಚಿಯ ಜನ ಇವುಗಳ ಉತ್ಪತ್ತಿಯಲ್ಲಿ ತೊಡಗಿರುವಂತೆ ಕಾಣುತ್ತದೆ. ಇಡೀ ಸಮಾಜದ ಶೀಲವನ್ನು ಮಾರಾಟ ಮಾಡಿ, ಸಂಪಾದನೆ ಮಾಡುವ ಶೀಲಕೋರರು ಇಲ್ಲಿದ್ದಾರೆ. ಹೆಣ್ಣಿನ ಒಂದು ಅಂಗವೆ ಇವುಗಳ : ಇವರ ಚಿಂತನೆಯ ಕೇಂದ್ರಬಿಂದು. ಅವುಗಳನ್ನು ಕೇಳುತ್ತಿದ್ದರೆ, ಮೈತುಂಬಾ ಅಸಹ್ಯ ಅಂಟಿಕೊಳ್ಳುತ್ತದೆ. ಮೈ ನಡುಕ ಶುರುವಾಗುತ್ತದೆ. ಇಲ್ಲಿ ಅಭಿರುಚಿ ಪಡೆಯುವ ಜನರೂ ಇದ್ದಾರೆ ಎಂದರೆ ಅವರ ಬಗ್ಗೆ ಏನು ಮಾತಾಡಬೇಕೆಂಬುದು ಗೊತ್ತಾಗುತ್ತಿಲ್ಲ.

ಈ ಕ್ಯಾಸೆಟ್ಟುಗಳಲ್ಲಿ ಹೆಣ್ಣು ಒಂದು ಮಾರಾಟದ ವಸ್ತು, ಬಳಸಬಹುದಾದ ಸಾಮಗ್ರಿ, ಅವಳ ಸುತ್ತ ಇರುವ ಎಲ್ಲ ಸಂಬಂಧಗಳನ್ನೂ ಕಡಿದುಹಾಕಲಾಗಿದೆ. ಆ ಮೂಲಕ ಅವಳನ್ನು ಸೆಕ್ಸ್ ವರ್ಕರ್ ಮಾಡುವ ಜಾಗತೀಕರಣ ಪರಿಕಲ್ಪನೆಯ ಪ್ರಭಾವ ಇದೆ. ಹಿಂದೆ ನಾವು ಹೆಣ್ಣನ್ನು ಅಬಲೆ ಮಾಡಿ ಗಂಡಿನ ವಶಕ್ಕೆ ಕೊಟ್ಟಿದ್ದೆವು. ಈಗ ಸೆಕ್ಸ್ ಡ್ಯೂಟಿಗೆ ನೇಮಿಸಿಕೊಂಡು ನಮ್ಮ ತಲೆಯನ್ನು ಖಾಲಿ ಗೋಣಿಚೀಲ ಮಾಡಿಕೊಳ್ಳಲು ಹೊರಟಂತಿದೆ.

ಜಾಗತಿಕ ಪ್ರಭುಗಳಿಗೆ ತಮ್ಮ ಸಂಸ್ಕೃತಿ ಹೊರತು, ಇತರೆಲ್ಲ ಸಂಸ್ಕೃತಿಗಳು ರಿಸೋರ್ ಅಥವಾ ಪ್ರಾಡಕ್ಟ್ ಆಂಥ್ರಪಾಲಜಿ ಮೂಲಕ, ಆರಂಭವಾದ ಜಾನಪದ ಅಧ್ಯಯನದ ಮೂಲಕ ಮೂರನೆಯ ಜಗತ್ತಿನ ಸಂಸ್ಕೃತಿಯ ವಿಶಿಷ್ಟವನ್ನೆಲ್ಲ ಹೊಸಾ ಜೋಕುಗಳ ಥರಾ ಈ ಜಾಗತಿಕ ಪ್ರಭುಗಳು ಅನುಭವಿಸಿದರು. ಈಗ ಇದೇ ಜಗತ್ತಿನ ಹೆಣ್ಣುಗಳನ್ನು ಸೆಕ್ಸ್ ವಿಶಿಷ್ಟತೆಗಳಾಗಿ ಅನುಭವಿಸುವ ಆತುರದಲ್ಲಿದ್ದಾರೆ. ಇಂಥ ಮಾನಸಿಕ ರೋಗಿಗಳ ಅಭಿರುಚಿಗೆ ಬಿದ್ದ ಸ್ಥಳೀಯ ಸಾಂಸ್ಕೃತಿಕ ಕ್ರಿಮಿನಲ್‌ಗಳು ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡುತ್ತಿದ್ದಾರೆ.

ಹೆಣ್ಣನ್ನು ಚಾಪ್ಸ್ ಮಾಡಿಕೊಂಡು ಚಪ್ಪರಿಸಲು ಹೊರಟಿರುವ ಇಂಥ ಕ್ರಿಮಿನಲ್‌ಗಳು ಜನಪದ ಗೀತೆಗಳನ್ನು ಮಾಧ್ಯಮ ಮಾಡಿಕೊಂಡಿರುವುದು ತಲ್ಲಣ ಹುಟ್ಟಿಸುವ ಸಂಗತಿ. ಇದು ಮರದಿಂದ ಹಣ್ಣು ತೆಗೆಯುವ ಕೆಲಸ ಅಲ್ಲ: ಬೇರು ಕತ್ತರಿಸುವ ಕೆಲಸ. ನೆನಪಿರಲಿ : ಜನಪದ ಗೀತೆ ಪೋಲಿಪದ ಅಲ್ಲ ಜನಪದ ಗೀತೆ ಸಂಸ್ಕೃತಿ ಮೌಲ್ಯ, ಜನಪ್ರಿಯ ಗೀತೆ ಮಾರುಕಟ್ಟೆ ಮೌಲ್ಯ; ಶಿಷ್ಟ ಗೀತೆ ಸಂರಕ್ಷಕ ಮೌಲ್ಯ. ಜನಪ್ರಿಯ ಗೀತೆಗಳು ಮಾರುಕಟ್ಟೆ ಮೌಲ್ಯ ಹಾಗೂ ಜನಪದ ಧಾಟಿಗಳನ್ನು ಬಳಸಿಕೊಂಡು, ಬೇಕಾದ ವಸ್ತು ಮಾರಾಟವಾಗುವವರೆಗೆ ಇದ್ದು ತೊಲಗುತ್ತವೆ. ಶಿಷ್ಟ ಗೀತೆಗಳು ಸಂರಕ್ಷಿತ ಗರತಿಯರಂತೆ ಕೋಣೆ ಸಂಸ್ಕೃತಿಯಲ್ಲಿ ಒಂದು ಮಾದರಿ ಅಥವಾ ಆದರ್ಶದ ಥರ ಇರುತ್ತವೆ. ಜನಪದ ಗೀತೆಗಳಾದರೂ ನಿತ್ಯ ಜೀವನವನ್ನು ಕುರಿತವು. ಜೀವನದ ಪ್ರೀತಿ, ವಿಶ್ವಾಸ, ಮಮತೆ, ಮಧುರ ಭಾವ, ಆತಂಕ, ಆನಂದ, ಉತ್ಸಾಹ, ಲವಲವಿಕೆ, ಜಟಾಪಟಿ, ಟೀಕೆ.... ಹೀಗೆ ಅದು ಭಾವನೆಗಳ ಜಗತ್ತು. ಅದನ್ನು ಒಡೆದರೆ ಮನುಷ್ಯ ಏರಿಯೊಡೆದ ಕೆರೆಯಂತೆ ಖಾಲಿಯಾಗುತ್ತಾನೆ. ಜನಪದ ಗೀತೆಗಳ ಹೆಸರಿನ ಅಶ್ಲೀಲ ಕ್ಯಾಸೆಟ್ಟುಗಳು ಹೀಗೆ ಮನುಷ್ಯ ಜೀವನದ ತಿರುಳನ್ನು ತಳಮಳಗಳನ್ನು, ಆನಂದ ಅಂತರಂಗವನ್ನು ಖಾಲಿ ಮಾಡುತ್ತಿವೆ.

ಹೀಗೆ ಹೇಳುವಾಗ ನನ್ನನ್ನು ಒಂದು ಚಿಂತನಾ ನೆಲೆಯಲ್ಲಿ ಫಿಕ್ಸ್ ಮಾಡಿಕೊಂಡು ಮಡಿ-ಮೈಲಿಗೆಯ ಪರಿಕಲ್ಪನೆಯ ರೀತಿಯಲ್ಲಿ ಮಾತನಾಡುತ್ತಿದ್ದೇನೆ ಎಂದು ಭಾವಿಸಬಾರದು. ಜಗತ್ತು ಸಂತೋಷದಿಂದ ಬದುಕಿರುವುದೇ ಹೆಣ್ಣನ್ನು ಹಲವು ವಿಧಗಳಲ್ಲಿ ವಿವರಿಸಿಕೊಳ್ಳುವ ಮೂಲಕ. ನಮ್ಮ ಕಾವ್ಯ, ಕತೆ, ಕಲೆ, ಪುರಾಣ, ಸೌಂದರ್ಯಚಿಂತನೆ, ಸಮಾಜ ಚಿಂತನೆ ಇವೆಲ್ಲ ಹೆಣ್ಣಿನ ವಿವರಣೆ ವಿಮರ್ಶೆಯ ಉತ್ಪನ್ನಗಳು. ಹಾಗೆ ವಿವರಿಸಿಕೊಳ್ಳುವಾಗ ಹೆಣ್ಣಿನ ನೆಲೆ-ಬೆಲೆ ಮತ್ತು ಬದುಕನ್ನು ಎತ್ತರಿಸುತ್ತಾ ಮತ್ತು ಗೌರವಿಸುತ್ತಾ ನಡೆದಿದ್ದೇವೆ. ಹೆಣ್ಣು ಮೂಲ ತಾಯಿಯಾಗಿ, ಭೂಮಿಯಾಗಿ, ಸೋದರಿಯಾಗಿ, ಸೃಷ್ಟಿಯಾಗಿ, ಸಂಸ್ಕೃತಿ ಸೃಷ್ಟಿ ಮತ್ತು ನಿರ್ವಾಹಕಿಯಾಗಿ ಚಿಂತಿಸಲ್ಪಟ್ಟಿದ್ದಾಳೆ. ಕೂಡು ಕ್ರಿಯೆಯಲ್ಲಿ ಸಂಗಾತಿ, ಸ್ನೇಹಿತೆ, ಪತ್ನಿ, ಮನೋರಮೆ....... ಆಗಿ ಸಮಾಜವನ್ನು ತುಂಬಿದ್ದಾಳೆ. ಹೆಣ್ಣು, ಭೂಮಿ, ನೀರು, ಗಾಳಿಯಂಥ ಸೃಜನಶೀಲ ಕ್ರಿಯೆಗಳನ್ನು ಮತ್ತೆ ಮತ್ತೆ ವಿವರಿಸಿಕೊಳ್ಳದ ವಿವೇಚಿಸಿಕೊಳ್ಳದ ಜೀವನ ಬರಡು ಎಂಬುದು ನಮಗೆಲ್ಲ ತಿಳಿದಿದೆ. ಆದರೆ ಆ ವಿವರಣೆ ಅಗ್ಗಿ ಅಲ್ಲ ; ಸೌಂದರ್ಯ ಮೀಮಾಂಸೆ. ಹೆಣ್ಣಿನಲ್ಲಿ ಅಂಥ ಸೌಂದರ್ಯ ಕಾಣದ ಕೇವಲ ಮಾಂಸದ ತುಂಡನ್ನೇ ಕಾಣುವ ಮೃಗಗಳು ಈ ಹೊತ್ತು ಸೃಜನಶೀಲ ಸಮಾಜವನ್ನು ಹರಾಜಿಗೆ ಇಡುತ್ತಿವೆ.

ಪುರದ ಪುಣ್ಯ

ಸಂಸ್ಕೃತಿಯ ನೆಲೆ ಕುಟುಂಬ; ಅದು ನೆಲೆ ನಿಲ್ಲುವುದು ಹೆಣ್ಣಿನ ಒಪ್ಪಿಗೆಯ ಮೂಲಕ. ಗಂಡಿನ ಒತ್ತಾಯ ಶುರುವಾದುದು ಸಾಂಸ್ಕೃತಿಕ ಮತ್ತು ರಾಜಕೀಯ ದಬ್ಬಾಳಿಕೆಯಿಂದ, ನಕಲಿ ಕ್ಯಾಸೆಟ್ಟು ಸಂಸ್ಕೃತಿ ಈ ಕುಟುಂಬ ವ್ಯವಸ್ಥೆಗೆ ತೀರಾ ವಿರುದ್ಧವಾಗಿದೆ. ಇವುಗಳೊಳಗೆ ಸಂಗಾತಿ, ಸತಿ ಎನ್ನುವವಳು ಕಾಣುವುದೇ ಇಲ್ಲ. ಒಬ್ಬನ ಹೆಂಡತಿ ಮತ್ತೊಬ್ಬನ ತೆವಲಾಗಿ ಮೆರೆದಿದ್ದಾಳೆ.. ಹೆಣ್ಣನ್ನು ಸೌಂದರ್ಯ, ಸಂಸ್ಕೃತಿಯಾಗಿ ವಿವರಿಸಿಕೊಳ್ಳಲಾಗದ ಗಂಡಿನ ದರಿದ್ರ ಮನಸ್ಸು ಇಲ್ಲಿದೆ. ಇದರಿಂದ ನನಗೆ,

೧. ಗಂಡುಗಳ ಗುಣಮಟ್ಟ ಇಳಿಯುತ್ತಿದೆಯೆ ?

೨. ಹೆಣ್ಣಿನ ವ್ಯಕ್ತಿತ್ವ ಹಾ ಅನನ್ಯತೆಯನ್ನು ನಿರಾಕರಿಸಲಾಗುತ್ತಿದೆಯೆ ?

೩.ಹೆಣ್ಣಿನೊಡನೆ ಸಂಯಮದಿಂದ ಸಂವಾದ ಮಾಡುವ ದಿಟ್ಟತನ ಅಥವಾ ಮುಕ್ತತೆ ಗಂಡಲ್ಲಿ ಸುಟ್ಟು ಹೋಗಿದೆಯೆ ?

೪. ಇಡೀ ಸಮಾಜ ಗಂಡಿನ ಕೇಂದ್ರಕ್ಕೆ ಬರುತ್ತಿದ್ದು, ಹೆಣ್ಣನ್ನು ತನ್ನ ವಶಕ್ಕೆ ಎತ್ತಿಹಾಕಿಕೊಳ್ಳುವ ಪ್ರಭು ಸಂಸ್ಕೃತಿ ನೆಲೆಗೊಳ್ಳುತ್ತಿದೆಯೆ ?

೫. ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ಬಂದ ಈ ಸಮಾಜ ಈಗ ವಸ್ತು ಪ್ರಭುತ್ವಕ್ಕೆ ಜಾರಿ, ಸಂಬಂಧಾತ್ಮಕವಲ್ಲದ ಸಾಮಗ್ರಿ ಜಗತ್ತನ್ನು ಸೃಷ್ಟಿಸುತ್ತಾ ಹೆಣ್ಣನ್ನು ಹೆಚ್ಚು ಬಳಕೆಯ ವಸ್ತುವಿನ ಲಿಸ್ಟ್‌ಗೆ ಸೇರಿಸುತ್ತಿದೆಯೆ ?

ಎಂಬ ಪ್ರಶ್ನೆಗಳು ಕಾಡುತ್ತಿವೆ. ಇಂಥ ಸಂದರ್ಭದಲ್ಲಿ ಸಾಂಸ್ಕೃತಿಕ ಜವಾಬ್ದಾರಿ ಇರುವ

೧. ಪ್ರಜ್ಞಾವಂತ ಏನು ಮಾಡಬಹುದು.

೨.ಸಮಾಜ ಏನು ಮಾಡಬಹುದು

೩.ಸರ್ಕಾರ ಏನು ಮಾಡಬಹುದು

ಎಂಬ ಬಗ್ಗೆ ತಿಳಿಯಲು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ಸಂವಾದ ಗೋಷ್ಠಿಯನ್ನು ಏರ್ಪಡಿಸಿದೆ. ಜಾನಪದದಲ್ಲಿ ಅಬ್ಬರ ಮಾಡುವ ಕಾರ್ಯಕ್ರಮಗಳನ್ನು ಯೋಚಿಸಲು ಬೇಕಷ್ಟು ಅವಕಾಶವಿದೆ. ಅಷ್ಟೇ ಮುಖ್ಯ, ಅಬ್ಬರದ ತಳದಲ್ಲಿ ಏನು ನಡೆದಿದೆ ಎಂಬುದನ್ನು ಪರಿಶೀಲಿಸುವುದು, ಅಂಥ ಪರಿಶೀಲನೆ ಈ ಪ್ರಯತ್ನ.

ಅಶ್ಲೀಲ ಅಥವಾ ನಕಲಿ ಜನಪದ ಗೀತೆಗಳ ತಡೆ ಕುರಿತಂತೆ ಯೋಚಿಸುವುದಕ್ಕೆ ಹಿಂದಿನ ಮಾರ್ಗದರ್ಶಿ ಉದಾಹರಣೆಯೊಂದನ್ನು ನಿಮ್ಮ ಗಮನಕ್ಕೆ ತರಬಯಸುತೇನೆ. ಕೆಲ ವರ್ಷಗಳ ಹಿಂದೆ ಬೆಂಗಳೂರು ಮೂಲದಿಂದ ಕರ್ನಾಟಕದ ಎಲ್ಲ ಕಡೆಗೆ ಹತ್ತಾರು ರತಿ ವಿಜ್ಞಾನಗಳೆಂಬ ಅಶ್ಲೀಲ ಪತ್ರಿಕೆಗಳು ಹೊರಡುತ್ತಿದ್ದವು. ಒಮ್ಮೆ ಸರ್ಕಾರ ಒಂದು ದಿನದ ಒಳಗೆ ಅವನ್ನು ಮುಟ್ಟುಗೋಲು ಹಾಕಿಕೊಂಡಿತು. ಈಗಿನ ಸರ್ಕಾರ ಸಾರ್ವಜನಿಕವಾಗಿ ಧೂಮಪಾನ ಮಾಡಬಾರದೆಂಬ ಸನ್ನಡತೆಯ ಕಾನೂನೊಂದನ್ನು ಜಾರಿಗೆ ತಂದಿದೆ. ಅದೇ ಸನ್ನಡತೆಗಾಗಿ ಹೆಣ್ಣಿನ ಶೀಲವನ್ನು ಹರಾಜು ಹಾಕಿ, ಕಾಸು ಮಾಡುತ್ತಿರುವ ಆಧುನಿಕ ಬ್ರಾಥಲ್ ಹೌಸ್‌ಗಳೆಂಬ ಕ್ಯಾಸೆಟ್ಟು ವ್ಯವಸ್ಥೆಗಳನ್ನು ಯಾಕೆ ಮುಚ್ಚಿಸಬಾರದು ?

ಜಗತ್ತೇ ವಸ್ತುವಾಗುತ್ತಿರುವ, ಸಂಸ್ಕೃತಿ ಸಾಹಿತ್ಯದ ಈ ಜಾಗತೀಕರಣ ಸಂದರ್ಭದಲ್ಲಿ ಹೆಣ್ಣನ್ನು ಜನಪದ ಗೀತೆಗಳ ಹೆಸರಿನಲ್ಲಿ ಮಾರುತ್ತಿರುವ ಹುಚ್ಚು ಚಲನೆಯನ್ನು ಒಂದು ಕಾನೂನು ಕ್ರಮದಿಂದ ತಡೆಯುವುದು ದುಸ್ಸಾಧ್ಯ ಎಂಬುದು ನಿಜ. ಆದರೆ, ಸಂಸ್ಕೃತಿಗೌರವ ಮತ್ತು ಸಂಪತ್ತಿನ ಗೌರವವನ್ನು ಒಟ್ಟೊಟ್ಟಿಗೆ ಕೊಂಡೊಯ್ಯಲು ಸಾಧ್ಯವಿಲ್ಲವೆ ? ಇದೆ ನನ್ನ ಈ ಹೊತ್ತಿನ ಸೋಪಜ್ಞ ಪ್ರಶ್ನೆ.

ಜಾನಪದ ಸಮಾಚಾರ ನಿಮ್ಮ ಕೈಲಿದೆ. ಜೂನ್ ೧೬ ರಿಂದ ಡಿಸೆಂಬರ್ ಕೊನೆ ೨೦೦೨ರ ವರೆಗಿನ ನಮ್ಮ ಆಲೋಚನೆಗಳ ಹಾಗೂ ಚಟುವಟಿಕೆಗಳ ಮಾಹಿತಿ ಇಲ್ಲಿದೆ. ಇದನ್ನು ಮಾಹಿತಿ ಅಷ್ಟೆ ಎಂದು ಹೇಳಲಾಗದು. ನಮ್ಮ ಸಂಸ್ಕೃತಿ ಹೊರಗಿನವರಿಗೆ ಮಾಹಿತಿ, ಜಾಗತಿಕ ಪ್ರಭುಗಳಿಗೆ ಸರಕು. ನಮಗೆ ಅದು ಜೀವನ. ಜಾನಪದವನ್ನು ಜೀವನವೆಂದು ಚಿಂತಿಸುವುದು, ಬದುಕುವುದು ಮತ್ತು ಅಗತ್ಯ ಬಿದ್ದಲ್ಲಿ ನಮ್ಮ ಜೀವನ ಹೇಗಿದೆ ಎಂಬ ಪರಿಶೀಲನೆಗಾಗಿ ಅದನ್ನು ಕ್ಷಣ ಹೊತ್ತು ದಾಖಲೆಯಾಗಿ ನೋಡುವುದು ನಡೆಯುತ್ತಿದೆ. ಸಂಗ್ರಹ ಹರಿವ ನೀರನ್ನು ಬೊಗಸೆಯಲ್ಲಿ ತುಂಬಿಕೊಂಡ ಹಾಗೆ.

ನಾವು ಇಲ್ಲಿಯವರೆಗೆ ಜಾನಪದದ ಬಗ್ಗೆ ಅಚ್ಚರಿಯ ಮಾತು ಆಡಿದ್ದೇವೆ. ಸಿರಿ-ಸಂಪತ್ತು; ಸಂಗ್ರಹ-ನಾಶ ಎಂದು ಹಳಹಳಿಸಿದ್ದೇವೆ. ಅದನ್ನು ಭೂತದಲ್ಲಿಟ್ಟು ಭೂತಗನ್ನಡಿಯಲ್ಲಿ ನೋಡಿದ್ದೇವೆ. ನಾನಲ್ಲ 'ಅವರು' ಜಾನಪದ ಎಂದಿದ್ದೇವೆ. ಮತ್ತೆ ನಾನು ನಾವು ಯಾವ ಬದನೆಕಾಯಿ ? ನಮ್ಮ ಕಥೆ ಎಂದರೆ ತಿನ್ನುವವರು ಇಟ್ಟುಕೊಂಡ ಥಿಯರಿ. ಶಕ್ತಿ ಕೇಂದ್ರಗಳು ಹಾಗೆ ಮಾತನಾಡಿದವಲ್ಲ, ನಮ್ಮನ್ನೆ ನಾವು ಕೋಡಂಗಿಗಳ ಥರ ನೋಡಿಕೊಳ್ಳುವಂತೆ, ಅದೇ ನಮಗೆ ಸುಖವೂ ಆಗಿತ್ತಲ್ಲ. ನಾಚಿಕೆ ಹುಟ್ಟಲಿ.

ಮತ್ತೊಂದು ವರಸೆ ಈಗ, ಜಾಗತೀಕರಣ ಬರುತ್ತ ಜಾನಪದ ಸಾಯುತ್ತಿದೆ ಅಂತ, ಉತ್ತರ ಕರ್ನಾಟಕದ ಎಂಬತ್ತು ಭಾಗ ಇರುವ ಕಡು ಬಡವರನ್ನು ಕೇಳಿ; ಜಾಗತೀಕರಣ ನಿಜವಾದರೆ ಅವರೆಲ್ಲ ಸಗಟು ಸಾಯಲೇಬೇಕು. ಸಾಯುತ್ತಾರಾ ? ಇದನ್ನು ಸಿದ್ಧಾಂತ ಅಥವಾ ವಾಸ್ತವ ಆಗಿ ತಿಳಿಯಬಹುದೆ ? ನಮ್ಮ ವಿದ್ಯಾವಂತರು,

ವಿದ್ವಾಂಸರು ಆಡಳಿತಗಾರರು, ನೌಕರರು, ರಾಜಕಾರಣಿಗಳು ತುಳಿಯುತ್ತಿರುವ ಸಾವಿನ ದಾರಿಯನ್ನು ಜನಪದರ ಸಾವೆಂದು ನಿರ್ವಚಿಸುತ್ತಿದ್ದೇವೆ. ಈ ನಮ್ಮ ಧೋರಣೆಯ ಮೈ ಮರವೆಯಲ್ಲಿ ಎಂಥ ಚಂದ ಓಲಾಡುತ್ತಿದ್ದೇವೆ.

'ಹೆಳವಿ ಹೆರಲಾದರೆ ನಿಗತ್ಗಂಡ್ಲು' - ಗಾದೆ. ಇದು ನಮ್ಮ ಸ್ಥಿತಿ. ನಮ್ಮೊಳಗಿಂದ ಸೃಷ್ಟಿಯಾಗದ ಬಡತನ ನಮಗೆ ನಾವು ಹೆಚ್ಚು ಹೆಚ್ಚು ಜನಪದರಾದಂತೆ ಜಾಗತೀಕರಣ ಹಿಂದೆ ಸರಿಯುತ್ತದೆ ಇಲ್ಲವೆ ಸೋಲುತ್ತದೆ. ಉದಾ : ಟಿ. ವಿ. ಇದೊಂದು ತಾಂತ್ರಿಕ ಪೆಟ್ಟಿಗೆ ಅಷ್ಟೆ, ಅದರೊಳಗೆ ಬೇರೆಯವರ ಪುರಾಣ ಹೇಳುತ್ತೀರೋ ಅಥವಾ ನಿಮ್ಮ ಕಥೆ ಹೇಳುತ್ತೀರೊ ಎಂಬುದು ನಿಮ್ಮ ಸೃಜನಶೀಲತೆಯ ಪ್ರಶ್ನೆ, ಟಿ.ವಿಯಲ್ಲಿ ಹುಡುಗನ ಚಡ್ಡಿ ಕನಸು ಕಾಣುವ ಹುಡುಗಿಯನ್ನು ಪ್ರದರ್ಶಿಸುತ್ತೀರೋ ಅಥವಾ ಬದುಕು ಕಾಣುವ ಕನಸು ಸೃಷ್ಟಿಸುತ್ತೀರೊ ಎಂಬುದು ದರಿದ್ರ ಅಥವಾ ಸೃಜನಶೀಲ ಮನಸ್ಸುಗಳ ಮಧ್ಯಮ ಆಯ್ಕೆಯಾಗಿರುತ್ತದೆ.

ಜಾನಪದ ನಮ್ಮೊಳಗೇ ಇದೆ; ಇಲ್ಲಾಂದರೆ ಸತ್ತಿದ್ದೀಯ ಎಂದು ಅರ್ಥ. ಅದನ್ನೇ ನಾವು ಮಾಡ ಹೊರಟಿರುವುದು ಮತ್ತು ಈ ಪುಸ್ತಕದಲ್ಲಿ ಹೇಳ ಹೊರಟಿರುವುದು. ಓದಿ, ಸಲಹೆ ನೀಡಿ, ನಮಸ್ಕಾರ.

ಬಹುತೇಕ ಜನ ಜಾನಪದ ಎಂದರೆ ಮತ್ತು ಜಾನಪದ ಅಕಾಡೆಮಿಯ ಕೆಲಸ ಎಂದರೆ ಜನಪದ ಕಲೆಗಳನ್ನು ಮೆರವಣಿಗೆ ಮಾಡುವುದು ಎಂದು ತಿಳಿದುಕೊಂಡಿದ್ದಾರೆ. ಇದಕ್ಕೆ ಕಾರಣವೂ ಇದೆ. ಜಾನಪದವೆಂಬುದು ಹಳ್ಳಿಯ ಸಾಮಗ್ರಿ. ಅದು ಹಳೆಯದು, ಅದು ವಾಸ್ತವ ಬದುಕಲ್ಲ. ಏನಿದ್ದರೂ ಹಿಂದಿನ ಕಾಲದ್ದು ಎಂಬ ತಪ್ಪು ತಿಳುವಳಿಕೆ. ಈ ತಪ್ಪು ತಿಳುವಳಿಕೆಗೂ ಒಂದು ಕಾರಣ ಇದೆ. ಆಧುನಿಕವೆಂಬುದೆಲ್ಲ ಹೊರದೇಶದಿಂದ ಬಂದ ಜ್ಞಾನ, ಅದರ ಫಲ ನಾಗರೀಕತೆ. ನಮ್ಮಲ್ಲಿ ನಗರಗಳು ಇರಲಿಲ್ಲ. ನಾವೇನಿದ್ದರೂ ಹಳ್ಳಿ ಪ್ರಧಾನ ಕೇಂದ್ರದಲ್ಲಿ ಬದುಕಿದವರು. ಈ ನಮ್ಮ ಹಳ್ಳಿಯ ಜ್ಞಾನ ವಿಜ್ಞಾನ ಅಲ್ಲ, ಅದೇನಿದ್ದರೂ ಮನರಂಜನೆಗೆ ಬೇಕಾದ ಕಲೆ ಎಂದುಕೊಂಡಿದ್ದಾರೆ.

ಬ್ರಿಟಿಷರ ಆಗಮನದ ಜೊತೆಗೆ ಕೈಗಾರಿಕಾ ಆಧುನಿಕತೆ ಬಂತು. ನಿಧಾನವಾಗಿ ನಾವು ಅದನ್ನು ಒಪ್ಪಿಕೊಂಡೆವು. ಆಧುನಿಕತೆಯ ಸಂಪೂರ್ಣ ಲಾಭ ದೊರೆತುದು ಸ್ವಾತಂತ್ರ ಬಂದ ನಂತರವೆ. ಆದರೆ ಈ ಐವತ್ತು ವರ್ಷಗಳ ಸುಖದಲ್ಲಿ ನಮ್ಮ ಅನೇಕ ಶತಮಾನಗಳ ಪರಂಪರೆಯನ್ನು ಮರೆತುಬಿಡುವುದೆ ? ನಮಗೊಂದು ನಮ್ಮದೆಂಬ ಬದುಕು ಇತ್ತು. ಆ ಸಂಸ್ಕೃತಿ ತನ್ನದೇ ಆದ ಜ್ಞಾನ-ವಿಜ್ಞಾನ ಹಾಗೂ ಕಲೆಗಳನ್ನು ಒಳಗೊಂಡಿತ್ತು ಎಂಬುದನ್ನೆಲ್ಲ ಯಾಕೆ ಮರೆತೆವು? ಒಂದು ಕಾರಣ ನಮ್ಮಲ್ಲಿದ್ದ ಜಾತಿ ಭೇದ ಹಾಗೆ ಮಾಡಿರಬಹುದು. ಆ ಕಾರಣಕ್ಕೆ ನಮ್ಮದೇ ಆದ ಒಂದು ಜ್ಞಾನ ಶೋಧ ಇತ್ತು ಎಂಬುದನ್ನೇ ಮರೆತುಬಿಡುವುದೆ? ಇದನ್ನು ಜ್ಞಾನದ ಮರೆವು ಎನ್ನೋಣವೆ ಅಥವಾ ಅಜ್ಞಾನದ ಕೇಡು ಎಂದು ತಿಳಿಯೋಣವೆ?

ಖಂಡಿತ ನಾವು ನಮ್ಮನ್ನು ತಿರಸ್ಕರಿಸಿಕೊಂಡು ಅನ್ಯವನ್ನು ಆರಾಧಿಸಿದ್ದೇವೆ.

ವಿಜ್ಞಾನ ಯಾವಕಡೆಯಿಂದ ಬಂದರೂ ಅದನ್ನು ಸ್ವಾಗತಿಸಲೇಬೇಕು. ವಿಜ್ಞಾನ ಸಾಮಗ್ರಿ ಶೋಧ ಹಾಗೂ ಅದರ ವಿಲೇವಾರಿಯ ಮೇಲೆ ಹರಡುತ್ತದೆ. ಜಗತ್ತಿನ ಬಹುಮುಖ್ಯ ಬದಲಾವಣೆಗಳನ್ನು ತಂದಿರುವುವು ತಂತ್ರಜ್ಞಾನ ಸಾಮಗ್ರಿಗಳೇ ಆಗಿವೆ. ನೇಗಿಲಿನ ಶೋಧ ಕೃಷಿ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ತಂದಿತು. ಬಟ್ಟೆಗಿರಣಿ ಶೋಧ ಹದಿನೆಂಟನೆಯ ಶತಮಾನದ ಇಂಗ್ಲೆಂಡನ್ನು ಬಹುವಾಗಿ ಪ್ರಭಾವಿಸಿತು. ಈಗ ಮಾಹಿತಿ ತಂತ್ರಜ್ಞಾನ ಕ್ರೋಢೀಕರಿಸುತ್ತಿದೆ. ಆದರೆ ಸಾಮಾಜಿಕ-ಸಾಂಸ್ಕೃತಿಕ ಜೀವನ ವಿಘಟನೆಗೊಳ್ಳುತ್ತಿದೆ. ಕುಟುಂಬ ಮಾತ್ರವೇ ಇವತ್ತಿನ ಒಂದು ಬಾಳಿಕೆಯಲ್ಲಿ ಸಾಮಾಜಿಕ ಘಟಕವಾಗಿದೆ. ದೊಡ್ಡ ಕುಟುಂಬ ಹಾಗೂ ಸಮಾಜಗಳು ಸಡಿಲಗೊಂಡಿವೆ, ಇಲ್ಲವೆ ದುರ್ಬಲವಾಗಿದೆ. ಈ ಕಾರಣಕ್ಕೆ ಸಮಾಜವನ್ನು ಪುನರ್ ಸಂಘಟಿಸುವ ತಂತ್ರಗಳನ್ನು ಹೊಸ ಜಗತ್ತು ಹುಡುಕುತ್ತಿದೆ.

ಫಿನ್ಲೆಂಡ್ ಎಂಬ ಒಂದು ಚಿಕ್ಕ ದೇಶ ತನ್ನ ರಾಜಕೀಯ ಆಸ್ತಿತ್ವವನ್ನು ಉಳಿಸಿಕೊಳ್ಳಲು ಅಲ್ಲಿನ ಜನಪದ ಮಹಾಕಾವ್ಯ ಕಲೇವಾಲಕ್ಕೆ ಮೊರೆಹೋಯಿತು. ಜರ್ಮನಿಯನ್ನು ಪುನರ್‌ಸಂಘಟಿಸಲು ಜೆ.ಬಿ ಹೆರಕ ಎಂಬ ತತ್ವಜ್ಞಾನದಿಂದ ನೀರಸವಾಗುತ್ತಿರುವ ಸಾಮಾಜಿಕ ಬದುಕಿಗೆ ಜೀವಕಳೆ ತುಂಬಲು ಇಂಗ್ಲೆಂಡಿನ ಡಬ್ಲ್ಯು.ಜೆ. ಥಾಮ್ಸ್ ಜಾನಪದ ಸಂಗ್ರಹಕ್ಕೆ ಕರೆ ನೀಡಿದ. ಸದಾ ಸಾಮಾಜಿಕ ಬದುಕನ್ನು ಛಿದ್ರಗೊಳಿಸಿಕೊಳ್ಳುತ್ತಿರುವ ಅತ್ಯಾಧುನಿಕ ಅಮೆರಿಕ 'ಜನಪದ ಜೀವನ' ಎಂಬ ಪರಿಕಲ್ಪನೆಯನ್ನು ಮುಂದೆ ಮಾಡಿ ಅಮೆರಿಕದವರು ಲವಲವಿಕೆಯ ಜೀವನ ನಡೆಸುವ ಮಾರ್ಗಕ್ಕಾಗಿ ಹುಡುಕಾಡಿದರು. ಅವರ ಹುಡುಕಾಟ ಈಗಲೂ, ಈ ಹೊತ್ತು ಕೂಡ ನಿರಂತರವಾಗಿ ನಡೆದಿದೆ. ಅವರು ಆದಿವಾಸಿ, ಅರೆ ಆದಿವಾಸಿ ಹಾಗೂ ಗ್ರಾಮ ಜೀವನ ಇನ್ನೂ ಭದ್ರವಾಗಿರುವ ದೇಶಗಳಿಗೆ ಹೋಗಿ ಆ ಜನರ ಬದುಕನ್ನೂ ಅನ್ನೋನ್ಯತೆಯನ್ನೂ ಅಧ್ಯಯನ ಮಾಡುತ್ತಿದ್ದಾರೆ. ಅಲ್ಲಿ ಸಿಗುವ ಸುಗಮ ಜೀವನದ ಸಂಬಂಧದ ನಿಯಮಗಳನ್ನು ಸ್ವೀಕರಿಸುತ್ತಿದ್ದಾರೆ.

ನಮ್ಮ ಕರಾವಳಿಯ ಬಂಟ ಜನಾಂಗದಲ್ಲಿ 'ಸಿರಿ'' ಎಂಬ ಆಚರಣೆ ಇದೆ. ಇದನ್ನು ಅಧ್ಯಯನ ಮಾಡಿದ ಅಮೆರಿಕದ ಪೀಟರ್ ಜೆ.ಕ್ಲಾಸ್ ಎಂಬ ಮಾನವಶಾಸ್ತ್ರಜ್ಞ ಇದು ಆ ಜನಾಂಗದಲ್ಲಿಯ ಹೆಣ್ಣು ಮಕ್ಕಳ ಸಾಂಸಾರಿಕ ಒತ್ತಡವನ್ನು ಪರಿಹಾರ ಮಾಡುವ ಒಂದು ಮಾನಸಿಕ - ಸಾಂಸ್ಕೃತಿಕ ಆಚರಣೆ ಎಂದು ವಿವರಿಸಿದ್ದಾರೆ. ಗಂಡಸರ ಹೊಡೆತಕ್ಕೆ ತತ್ತರಿಸುತ್ತಿರುವ ಹೆಣ್ಣು ಮಕ್ಕಳಿಗೆ ಇಲ್ಲಿ ಒಂದು ಸಂದೇಶವಿದೆ.

ಗಂಡ ಆಕಸ್ಮಿಕ ಅಲ್ಲ, ಆದರೆ ಗಂಡ ಹಿಂಸೆಯೂ ಆಗಬಾರದು. ಅದೇ ಸಂದರ್ಭದಲ್ಲಿ ಹೆಣ್ಣು ಸ್ವಾತಂತ್ರ್ಯದ ಹೆಸರಿನಲ್ಲಿ ಬೀದಿಗೆ ಬೀಳಬಾರದು.

ಯಾವುದಾದರೂ ಒಂದು ಶೋಧನೆಯನ್ನು ಹಾಳುಗೆಡಹಲು ದೊಡ್ಡ ತಂತ್ರವನ್ನೇನೂ ಹುಡುಕಬೇಕಾಗಿಲ್ಲ. ಆ ಶೋಧನೆಯನ್ನು ಜನಪ್ರಿಯಗೊಳಿಸಿದರೆ ಸಾಕು. ಅಷ್ಟರೊತ್ತಿಗೆ ಆ ಶೋಧ ಹಿಂದೆ ಸರಿಯುತ್ತದೆ. ಜಾನಪದಕ್ಕೂ ಬಂದ ಗತಿ ಈ ರೀತಿಯದು. ಜಾನಪದವನ್ನೆಲ್ಲ ಕಲೆ-ರಂಜನೆ ಎಂದು ಬಹಳ ಜನ ತಿಳಿದುಬಿಟ್ಟಿದ್ದಾರೆ. ಜಾನಪದದಲ್ಲಿ ಕಲೆಗಳು ಮಾತ್ರ ಇಲ್ಲ. ಅಲ್ಲಿ ಪಾರಂಪರಿಕವಾಗಿ ಶತಮಾನದಿಂದ ಶತಮಾನಕ್ಕೆ ಹರಿದು ಬಂದ ಅನೇಕ ಬಗೆಯ ಜ್ಞಾನ-ವಿಜ್ಞಾನ ಶೋಧ ಇದೆ. ಆಹಾರ, ಔಷಧಿ, ಆಭರಣ, ಉಡುಗೆ-ತೊಡುಗೆ, ಆರೋಗ್ಯ, ವಸತಿ ಮುಂತಾದ ಅಂಶಗಳನ್ನು ಕುರಿತ ಶೋಧನೆಗಳು ನಮ್ಮ ಜನಗಳ ಒಳಗೆ ಇವೆ. ಅವುಗಳನ್ನು ನಾವು ಅಭಿವೃದ್ಧಿಪಡಿಸಲಿಲ್ಲ, ಹೊರಗಡೆಯವರು ಅಭಿವೃದ್ಧಿಪಡಿಸಿ ಮಾರಿದ ವಸ್ತುಗಳನ್ನು ನಾವು ಬಳಸುತ್ತಿದ್ದೇವೆ. ಪಾನೀಯಗಳ ಒಂದು ಉದಾಹರಣೆ ಸಾಕು. ಕೋಕಾಕೋಲಾ ಮತ್ತು ಪೆಪ್ಸಿಯಂಥ ಪಾನೀಯಗಳನ್ನು ಮೀರಿಸುವ ಹಾಗೂ ಆರೋಗ್ಯಕರವಾದ ಪಾನೀಯಗಳು ನಮ್ಮ ಜನಪದರ ಮಧ್ಯೆ ಬಳಕೆಯಲ್ಲಿವೆ. ಅವುಗಳನ್ನು ನಾವು ಅಭಿವೃದ್ಧಿಪಡಿಸಲಿಲ್ಲ ಹಾಗೂ ಮಾರುಕಟ್ಟೆ ಮಾಡಲಿಲ್ಲ. ಹೊರಗಿನಿಂದ ಬಂದವರು ನಮ್ಮ ಚಲನಚಿತ್ರ ನಟರ ಮುಗ್ಧತೆ ಹಾಗೂ ಹಣದ ಆಸೆಯನ್ನು ದುರುಪಯೋಗ ಮಾಡಿಕೊಂಡು ಅವರ ಮುಖದ ಮೂಲಕ ತಮ್ಮ ಪಾನೀಯಗಳನ್ನು ಮಾರಾಟ ಮಾಡುತ್ತಿದ್ದಾರೆ. ನಮಗೆ ಸಿಕ್ಕಬೇಕಾದ ಉದ್ಯೋಗ ಹಾಗೂ ಬಂಡವಾಳವನ್ನು ಹೊರಗಿನ ಉದ್ಯಮಿಗಳು ದೋಚಿಕೊಂಡು ಹೋಗುತ್ತಿದ್ದಾರೆ.

ಜಾನಪದ ಜ್ಞಾನದಲ್ಲಿ ಈ ರೀತಿ ವಿಜ್ಞಾನ ಜ್ಞಾನವೂ ಇದೆ. ಹಾಗೆಯೇ ಕಲಾಜ್ಞಾನವೂ ಇದೆ. ದುಡಿದದ್ದನ್ನು ಹೇಗೆ ಬಳಸಬೇಕು, ಹಂಚಬೇಕು ಹಾಗೂ ಸಹಜೀವನ ನಡೆಸಬೇಕು ಎಂಬುದನ್ನು ಸಮಾಜ ಜ್ಞಾನ ಹೇಳುತ್ತದೆ. ಅಂಥ ಸಮಾಜ ಜ್ಞಾನವನ್ನೇ ನಾವು ಜಾನಪದ ಜ್ಞಾನ ಎಂದು ಕರೆಯುತ್ತೇವೆ. ಇಂಥ ಅನ್ಯೋನ್ಯ ಬದುಕನ್ನು ತಿಳಿಸಲೆಂದೇ ಜನಪದ ಕಲೆಗಳು ಹುಟ್ಟಿಕೊಂಡಿವೆ. ವ್ಯವಸ್ಥಿತ ಜೀವನವನ್ನು ತಿಳಿಸಿ ಹೇಳಲು ವಿಚಾರ-ಆಚಾರ, ಕಾನೂನು ಕಟ್ಟಳೆಗಳು ಶತಮಾನಗಳಿಂದ ಬಳಕೆಯಲ್ಲಿವೆ. ವ್ಯಕ್ತಿ ಹಾಗೂ ಸಮಾಜವನ್ನು ಉಳಿಸಿಕೊಂಡು ಹೋಗಲು ಎತ್ತಿ ಹಿಡಿಯುವ ನಂಬಿಕೆ-ವಿಚಾರ ಹಾಗೂ ಆಚಾರಗಳ ಸಂಖ್ಯೆ ಹೆಚ್ಚು ಎಂಬುದನ್ನು ಮರೆಯಲಾಗದು.

ಈಗ ನಾವು ಆಧುನಿಕತೆಯ ಜೊತೆಗೆ ಪಾರಂಪರಿಕ ಜನಪದ ಜೀವನದ ವಿಧಾನವನ್ನು ಸಹಯೋಗಗೊಳಿಸಬೇಕಾಗಿದೆ. ಕಲೆ ವಿಜ್ಞಾನ ಮೇಳವಿಸೆ ಜಸವು ಜನಜೀವನಕೆ ಮಂಕುತಿಮ್ಮ'' ಎಂಬ ಡಿ.ವಿ.ಜಿಯವರ ನುಡಿಸತ್ಯವನ್ನು ಸಾದರಪಡಿಸಬೇಕಿದೆ. ವಿಜ್ಞಾನ ಅತಿರೇಕಕ್ಕೆ ಹೋದರೆ ಅಮಾನವೀಯ ಆಗುತ್ತದೆ. ಇದಕ್ಕೆ ಅಣುಸಮರದ ಸಾಧ್ಯತೆಯನ್ನು ಉದಾಹರಣೆಯಾಗಿ ಕೊಡಬಹುದು. ಜನಪದ ಜೀವನವನ್ನು ಭಾವುಕವಾಗಿ ಅನುಸರಿಸಿದರೆ ಅದು ನಮ್ಮನ್ನು ಜಡತ್ವಕ್ಕೆ ತಳ್ಳುತ್ತದೆ. ಉತ್ತಮ ಜೀವನಕ್ಕೆ ಜಾನಪದ ಹಾಗೂ ವಿಜ್ಞಾನ ಒಟ್ಟಿಗೆ ಕೆಲಸ ಮಾಡಬೇಕಿದೆ. ಆ ಕಾರಣಕ್ಕಾಗಿಯೆ ಜನಸಾಮಾನ್ಯರ ಮಧ್ಯೆ ಇರುವ ಜನಪದ ಜೀವನದ ಶೋಧಗಳನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹೊರತೆಗೆಯಹೊರಟಿದೆ. ಜಾನಪದ ಮೆರವಣಿಗೆ ಅಲ್ಲ, ಅದು ನಿರಂತರ ಜ್ಞಾನ-ವಿಜ್ಞಾನದ ಶೋಧ. ಹಾಗೆಯೇ ಜಾನಪದ ಆಕಸ್ಮಿಕ ಹಾಗೂ ಆವಾಂತರಕಾರಿ, ವಿಜ್ಞಾನದ ವಿರೋಧಿ ಎಂಬುದನ್ನು ಸಾದರಪಡಿಸಲಾಗುತ್ತಿದೆ. ಈ ಹಿನ್ನೆಲೆಯಿಂದ ಜಾನಪದದಲ್ಲಿ ನಮಗೆ ಆಗತ್ಯ ಬೇಕಾದುದು ಏನಿದೆ? ಏನಿಲ್ಲ ಎಂಬುದನ್ನು ಹುಡುಕಲಾಗುತ್ತಿದೆ.

'ಸಿಡಿ' ಆಚರಣೆಯನ್ನು ಜಾನಪದ ಚಿಂತಕ ಮುಂದುವರೆಸಲು ಪ್ರೋತ್ಸಾಹಿಸುವುದಿಲ್ಲ, ಯಾಕೆಂದರೆ ಯಜಮಾನರು ಕಂಡವರ ಮಕ್ಕಳನ್ನು ಕಂಬಿಗೆ ಕಟ್ಟಿ ತಮ್ಮ ಪೂಜೆ ಪೂರೈಸಿಕೊಳ್ಳುವ ಕ್ರೂರ ನಡವಳಿಕೆ ಅದು. ಆದರೆ ಜಾನಪದ ತಜ್ಞ ನಿಜವಾದ ಸಿಡಿ ಎಂಬುದು ಕಂಡವರ ಮಕ್ಕಳನ್ನು ಕಂಬಿಗೆ ಕಟ್ಟುವ ಆಚರಣೆ ಆಗಿತ್ತೆ ಎಂಬುದನ್ನು ಶೋಧಿಸುತ್ತಾನೆ. ಹಾಗೆ ಶೋಧಿಸಿ ನೋಡಿದರೆ ಮೂಲತಃ ಸಿಡಿ ಆಚರಣೆ ನಮ್ಮ ಪೂರ್ವಿಕರು ಕಂಡುಕೊಂಡ ಸೂರ್ಯ ಆರಾಧನೆಯಾಗಿದೆ. ಸೂರ್ಯ ಸುತ್ತಿದಂತೆಲ್ಲ ಅವನ ಕಡೆಗೆ ಕೈ ಮುಗಿಯುತ್ತಾ ತಿರುಗುವ ಪದ್ಧತಿಯೆ 'ಸಿಡಿ' ಆಚರಣೆ. ಜಾತಿ ಹಾಗೂ ಪಾಳೇಗಾರರು ಅಸ್ತಿತ್ವಕ್ಕೆ ಬಂದ ಮೇಲೆ ಅವರು ಬಡವರು ಹಾಗೂ ದಲಿತರನ್ನು ತಮ್ಮ ಪೂಜೆಗಾಗಿ ಬಲಿಗಳನ್ನಾಗಿ ಬಳಸಿಕೊಂಡರು. ಇದರ ಅರ್ಥ - ಮೂಲ ಆಚರಣೆಗೆ ಸರಿಯಾಗಿದೆ. ಅಕ್ರಮ ಪ್ರವೇಶಿಗರಿಂದ ಅದರ ಅರ್ಥ ಹಾಳಾಗಿದೆ ಎಂದು ತಿಳಿಯಬೇಕು.

ಈ ಅವಧಿಯ (೨೦೦೧-೨೦೦೪) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹೆಚ್ಚಿನ ಮಟ್ಟದಲ್ಲಿ ಜನಪದ ಕಲಾಪ್ರಚಾರಕ್ಕಿಂತ ಜನಪದ ವೈಜ್ಞಾನಿಕ ಜೀವನ ಶೋಧದ ಕಡೆಗೆ ಒತ್ತು ನೀಡಿದೆ. ಆದ್ದರಿಂದಲೇ ಜನಪದ ಕಲಾ ಪ್ರಶಸ್ತಿಗಳನ್ನು

ಜಾನಪದ ಜ್ಞಾನ-ವಿಜ್ಞಾನ ಪ್ರಶಸ್ತಿಗಳು ಎಂದು ಕರೆದಿದೆ. ಒಂದು ಡೊಳ್ಳು ಕುಣಿತವನ್ನು ಕಲೆ ಎಂದು ಕರೆಯಬಹುದು. ಆದರೆ ಜಾನಪದ ವಾಸ್ತು, ಶಿಲ್ಪ, ಉಪಕರಣ ತಯಾರಿಕೆ. ನೀರು ಹುಡುಕುವ ತಂತ್ರಜ್ಞಾನ ಹಾಗೂ ಅನೇಕ ವೃತ್ತಿಗಳಲ್ಲಿ ಬಳಕೆಯಲ್ಲಿರುವ ತಂತ್ರಜ್ಞಾನವನ್ನು ಕೇವಲ ಕಲೆ ಎಂದು ಕರೆಯಲಾಗದು. ಜಾನಪದ ಅನೇಕ ಏಕಗಳ ಒಂದು ಸಂಯುಕ್ತ ಜ್ಞಾನ ಮಾರ್ಗ,

ಜುಲೈ. ೨, ೨೦೦೨ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ೨೦೦೧ನೇ ಸಾಲಿನ ಜಾನಪದ ಜ್ಞಾನ-ವಿಜ್ಞಾನ ಪ್ರಶಸ್ತಿಗಳನ್ನು ಕರ್ನಾಟಕದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್.ಎಂ. ಕೃಷ್ಣ ಅವರು ವಿತರಿಸುತ್ತಿದ್ದಾರೆ. ಹೈಟೆಕ್ ಜ್ಞಾನದ ಮುಖ್ಯಮಂತ್ರಿಗಳು ಲೋಟೆಕ್ ಜ್ಞಾನದ ಪ್ರತಿಭೆಗಳನ್ನು ಗೌರವಿಸುತ್ತಿರುವುದು ಭಾರತದ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಆಧುನಿಕ ಜ್ಞಾನ ಸಂಘರ್ಷದ ಒಂದು ಸನ್ನಿವೇಶವಾಗಿದೆ. ಇದರ ಅರ್ಥ ಪಾರಂಪರಿಕ ಜ್ಞಾನ-ವಿಜ್ಞಾನವನ್ನು ಅಭಿವೃದ್ಧಿ ಹಾಗೂ ಉದ್ಯಮದ ಕಡೆಗೆ ಚಲಿಸುವಂತೆ ಮಾಡುವುದಾಗಿದೆ. ಉದ್ಯಮ ಎಂದರೆ ದೋಚುವ ವ್ಯವಹಾರ ಎಂದೇನೂ ತಿಳಿಯಬೇಕಾಗಿಲ್ಲ. ಕಳೆದುಹೋಗುತ್ತಿರುವ ಉದ್ಯೋಗಗಳನ್ನು ಸೃಷ್ಟಿಸುವ ಒಂದು ಮಾರ್ಗ ಎಂದು ತಿಳಿಯಬೇಕು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಈ ಸಾರಿಯ ಪ್ರಶಸ್ತಿ ಪಡೆದವರ ವಿಶಿಷ್ಟತೆಯನ್ನು ಗಮನಿಸಬೇಕು. ಕೋಲಾರದ ಕೋನಿಗ ಹನುಮ ಎಂಬುವರ ವೀರಕಥಾನಕ ಹಾಡುಗಾರಿಕೆಗೆ ಪ್ರಶಸ್ತಿ ನೀಡಲಾಗಿದೆ. ಈ ವೀರಕಥನಗಳು ತೆಲುಗು ಭಾಷೆಯಲ್ಲಿವೆ. ಆ ಕಲಾವಿದ ಕರ್ನಾಟಕದವನು. ಆಂಧ್ರ ಅವನನ್ನು ಕರ್ನಾಟಕದವನು ಎಂದು ಗುರುತಿಸದು. ಕರ್ನಾಟಕ ಆತ ತೆಲುಗು ಕಲಾವಿದ ಎಂದು ನಿರಾಕರಿಸಲಾಗದು. ಕೋಲಾರದಲ್ಲಿ ಕನ್ನಡ-ತೆಲುಗು ಅಣ್ಣ ತಮ್ಮ ಭಾಷೆಗಳು ಅಥವಾ ಸಂಸ್ಕೃತಿಗಳು, ಈ ಹಿನ್ನೆಲೆಯಲ್ಲಿ ಕೋನಿಗ ಹನುಮನನ್ನು ಗೌರವಿಸಲಾಗುತ್ತಿದೆ. ಶ್ರೀಮತಿ ಸರಸ್ವತಿ ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯವರು. ಅವರು ಜನಪದ ಅಡುಗೆ ಮತ್ತು ಪಾನೀಯಗಳ ತಯಾರಿಕೆಯಲ್ಲಿ ಅಸಾಧಾರಣ ನೈಪುಣ್ಯ ಹೊಂದಿದ್ದಾರೆ. ಅವರ ರುಚಿಗಳನ್ನು ಅಭಿವೃದ್ಧಿಪಡಿಸಿದರೆ ನಮ್ಮ ರುಚಿಗಳನ್ನು ವಿಶ್ವ ಮಾರುಕಟ್ಟೆಗೆ ಒಯ್ಯಬಹುದು. ತುಮಕೂರಿನ ಶ್ರೀ ಕರಿಯಣ್ಣ ಶೆಟ್ಟಿಗೆ ಪ್ರಶಸ್ತಿ ನೀಡಲಾಗಿದೆ. ಈತ ಬಹುಮುಖ ಜನಪದ ಜನಪದ ತಂತ್ರಜ್ಞಾನ ಉಳ್ಳವನು. ಮಾಟಮಂತ್ರವನ್ನು ಬಲ್ಲ, ಮುಖವಾಡಗಳ ತಯಾರಿಕೆ ಮಾಡಬಲ್ಲ, ದೇವಸ್ಥಾನಗಳ

ವಿನ್ಯಾಸವನ್ನು ಮಾಡಬಲ್ಲ, ಕುಶಲಕಲಾ ವಸ್ತುಗಳನ್ನು ತಯಾರು ಮಾಡಬಲ್ಲ. ಈತನೊಬ್ಬ ವ್ಯಕ್ತಿ ಅಲ್ಲ ; ಒಂದು ಆಶ್ಚರ್ಯ. ಧಾರವಾಡದಿಂದ ಶ್ರೀ ಗೋವಿಂದ ಬಾದಗಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈತನೊಬ್ಬ ಜಾನಪದ ಮನೋಶಾಸ್ತ್ರಜ್ಞ ಎಂದು ಹೇಳಬಹುದು. ಅವನು ಬಳಸುವ ಭಾಷೆಯನ್ನು ಕನ್ನಡ ಸಾಹಿತಿಗಳು ಹಾಗೂ ಭಾಷಾಶಾಸ್ತ್ರಜ್ಞರು ವಿಶೇಷವಾಗಿ ಗಮನಿಸುವುದಿದೆ.

ದೇಶೀಯ ವೈದ್ಯ ಪದ್ಧತಿಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಜನವೈದ್ಯ ಹಾಗೂ ಪಶುವೈದ್ಯ ಹೀಗೆ ಇಬ್ಬರಿಗೆ ಪ್ರಶಸ್ತಿಯನ್ನು ನೀಡಲಾಗಿದೆ. ಜನರಿಗೆ ವೈದ್ಯ ಮಾಡುವ ಬೀದರ ಜಿಲ್ಲೆಯ ಪರೆಪ್ಪ ಆ ಕಡೆ ತುಂಬಾ ಹೆಸರು ಪಡೆದಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶ್ರೀ ಹೆಚ್.ಎಸ್. ಶ್ರೀಕಂಠಯ್ಯನವರು ಪಶುವೈದ್ಯರಾಗಿ ಅತ್ಯಂತ ಜನಪ್ರಿಯ ಹಾಗೂ ರೈತರಿಗೆ ಬಂಧು ಎಂಬ ಮಟ್ಟಿಗೆ ಖ್ಯಾತಿಗೆ ಪಾತ್ರರಾಗಿದ್ದಾರೆ. ಹಚ್ಚೆ ಅಲಂಕಾರವೂ ಹೌದು, ವೈದ್ಯವೂ ಹೌದು. ಉತ್ತರ ಕರ್ನಾಟಕದಲ್ಲಿ ಅಕ್ಯುಪ್ರೆಶರ್ ಜ್ಞಾನವಾಗಿ ಬಳಕೆಯಲ್ಲಿದೆ. ಅಲ್ಲಿಯ ಹೆಣ್ಣುಮಕ್ಕಳು ಇದನ್ನು ಗಂಭೀರವಾಗಿ ಪ್ರಯೋಗ ಮಾಡುತ್ತಾ ಬಂದಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿಯೂ ಅಕ್ಯುಪ್ರೆಷರ್ ಹಾಗೂ ಶೃಂಗಾರ ಕಲೆಯಾಗಿ ಬಳಕೆಯಲ್ಲಿದೆ. ಬುಡಕಟ್ಟಿನ ಹೆಂಗಸರು ಪೀಡೆ-ಪಿಶಾಚಿಗಳನ್ನು ಓಡಿಸುವ ಶಕ್ತಿಯಾಗಿ ಹಚ್ಚೆಯನ್ನು ಬಳಸುತ್ತಾರೆ. ಹಚ್ಚೆ ವೆಂಕಟಮ್ಮ ಎಂಬಾಕೆಗೆ ಈ ಸಾರಿ ಅವಳ ಈ ಬಗೆಯ ನೈಪುಣ್ಯವನ್ನು ಗಮನಿಸಿ ಪ್ರಶಸ್ತಿ ನೀಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಾಳಯ್ಯ ವಿಶೇಷವಾಗಿ ಮರಣ ಗೀತೆಗಳನ್ನು ಹಾಡುತ್ತಾನೆ. ಪಾಶ್ಚಾತ್ಯ ಜಗತ್ತಿನಲ್ಲಿ ಜನಪದ ಮರಣ ಗೀತೆಗಳ ಪ್ರಕಾರ ವ್ಯಾಪಕವಾಗಿ ಆಸ್ತಿತ್ವದಲ್ಲಿದೆ. ನಮ್ಮ ಪಕ್ಕದ ರಾಜ್ಯ ತಮಿಳುನಾಡಿನಲ್ಲಿ ಹಾಗೂ ಗುಜರಾತ್‌ನಲ್ಲಿ ಕೆಲ ವರ್ಗದವರು ಮರಣ ಗೀತೆಗಳನ್ನು ಹಾಡುವುದರಲ್ಲಿ ಪರಿಣತರು. ನಮ್ಮ ನಾಡಿನಲ್ಲಿ ಇರುವ ಕಾಳಯ್ಯ ಆ ಕ್ಷೇತ್ರದಲ್ಲಿ ಅನೇಕರ ದುಃಖದಲ್ಲಿ ಭಾಗಿಯಾದ ಹಾಡುಗಾರ. ಅವನನ್ನು ಗುರುತಿಸಿ ಈ ಸಾರಿ ಪ್ರಶಸ್ತಿ ನೀಡಲಾಗಿದೆ. ಚಿತ್ರದುರ್ಗ ಜಿಲ್ಲೆಯಿಂದ, ಗೊಲ್ಲರಲ್ಲಿ ವಿಶೇಷವಾಗಿ ಪ್ರಚಲಿತವಿರುವ ಕೋಲಾಟವನ್ನು ಗಮನಿಸಿ, ಆ ಕ್ಷೇತ್ರದಲ್ಲಿ ಪರಿಣತನಾದ ಚಿತಯ್ಯನಿಗೆ ಪ್ರಶಸ್ತಿ ನೀಡಲಾಗಿದೆ.

ಜಾನಪದ ತಜ್ಞರ ಕ್ಷೇತ್ರದಲ್ಲಿ ಡಾ|| ಸಿದ್ದಲಿಂಗಯ್ಯ, ವಿಲಿಯಂ ಮಾಡ್ತಾ ಹಾಗೂ ಡಾ|| ಶ್ರೀರಾಮ ಇಟ್ಟಣ್ಣನವರ ಗುರುತಿಸುವಂಥ ಕೆಲಸ ಮಾಡಿದ್ದಾರೆ. ಕವಿ

ಸಿದ್ದಲಿಂಗಯ್ಯ ಅವರ ಗ್ರಾಮದೇವತೆಗಳ ಕುರಿತು ಅಧ್ಯಯನ ಕರ್ನಾಟಕ ಜಾನಪದದಲ್ಲಿ ಅಪೂರ್ವ ಕೆಲಸ. ಡಾ|| ವಿಲಿಯಂ ಮಾಡ್ತಾ ಅವರು ಜಾನಪದ ವಿಶ್ಲೇಷಣೆಯಲ್ಲಿ ಅದ್ವಿತೀಯ ಹೆಸರು. ಇಟ್ಟಣ್ಣನವರ ಸದಾ ಜಾನಪದಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು.

ನಾಲ್ಕು ಜನ ಜಾನಪದ ಪ್ರವರ್ಧಕರಿಗೆ ಈ ಬಾರಿ ಪ್ರಶಸ್ತಿ ನೀಡಲಾಗಿದೆ. ಶ್ರೀ ಎಂ.ಟಿ. ಜಯಣ್ಣ ಅವರು ಬೆಂಗಳೂರು ಆಕಾಶವಾಣಿಯಲ್ಲಿ ಇದ್ದುಕೊಂಡು ಜಾನಪದ ಸಂಬಂಧಿ ಕಾರ್ಯಕ್ರಮ ಯೋಜನೆ ಹಾಗೂ ಪ್ರಸಾರಕ್ಕೆ ತುಂಬಾ ಮಹತ್ವ ಕೊಟ್ಟು ಕೆಲಸ ಮಾಡಿದ್ದಾರೆ. ಡಾ|| ಎಲ್.ಜಿ. ಸುಮಿತ್ರ ಅವರದು ಜಾನಪದ ಕ್ಷೇತ್ರದಲ್ಲಿ ಅವಿಸ್ಮರಣೀಯವಾದ ಸಾಧನೆ. ಜನಪದ ಸಂಗೀತದ ಬಗ್ಗೆ ಅವರು ಮಹಾಪ್ರಬಂಧ ರಚಿಸಿದ್ದಾರೆ. ಆ ನಿಟ್ಟಿನಲ್ಲಿ ಅವರದು ನಿರಂತರ ಕಾರ್ಯಶೀಲತೆ. ದಾವಣಗೆರೆಯ ಶ್ರೀ ಜಿ. ಮಹಾಂತೇಶ ಜನಪದ ಗೀತೆಗಳ ಹುಚ್ಚನ್ನು ಮೈಮನಕೆಲ್ಲ ಆಹ್ವಾನಿಸಿಕೊಂಡವರು. ಅವರ ಜನಪದ ಗೀತೆಗಳ ಹಾಡುಗಾರಿಕೆ ಕರ್ನಾಟಕದ ಎಲ್ಲ ಜಾನಪದ ಅಭಿಮಾನಿಗಳನ್ನು ಎಚ್ಚರಿಸಿದೆ, ಸಂತೋಷಪಡಿಸಿದೆ. ಶ್ರೀ ಅಪ್ಪಗೆರೆ ತಿಮ್ಮರಾಜು ಅಪ್ರತಿಮ ಜನಪದ ಗೀತಗಾಯಕರು. ಕರ್ನಾಟಕ ಹಾಗೂ ಅಮೆರಿಕೆಯಲ್ಲೂ ಕನ್ನಡ ಜನಪದ ಮನಸ್ಸುಗಳನ್ನು ಹುಚ್ಚೆಬ್ಬಿಸಿದವ.

ಜಾನಪದ ಸಂಘಟನೆಗಾಗಿ ಪ್ರೊ. ತಿ.ಭ. ಸೊಲಬಕ್ಕನವರ - ಹಾವೇರಿ ಇವರಿಗೆ ೨೦೦೧ರ ಪ್ರಶಸ್ತಿ ನೀಡಲಾಗಿದೆ. ದೊಡ್ಡಾಟ ಸಂವರ್ಧನೆಗಾಗಿ ಹೊಲ ಮನೆ ಮಾರಿಕೊಂಡ ಮಹಾತ್ಮ ಇವರು. ಈಗಲೂ ನಿರಂತರ ದೊಡ್ಡಾಟದ ಹೊಸ ಪ್ರಯೋಗದಲ್ಲಿ ತೊಡಗಿರುವ ಸೊಲಬಕ್ಕನವರ ಕರ್ನಾಟಕ ಜನಪದ ರಂಗಭೂಮಿಗೆ ಒಂದು ವರ.

ಸಂಸ್ಕೃತಿಯೊಳಗೆ ಧರ್ಮ, ಅರ್ಥ, ಕಾಮ ಮತ್ತು ಸಮಸ್ತ ಜೀವನ ಸೇರಿಕೊಳ್ಳುತ್ತದೆ. ಒಂದೊಂದು ಸಂಸ್ಕೃತಿಯೂ ತನ್ನದೇ ಆದ ಧರ್ಮ, ತತ್ತ್ವ, ಅರ್ಥ ವ್ಯವಸ್ಥೆ, ಜೀವನ ಹೊಂದಾಣಿಕೆಯ ಕ್ರಮವನ್ನು ಹೊಂದಿರುತ್ತದೆ. ಆ ಕಾರಣವಾಗಿಯೆ ಯೂರೋಪಿನ ಸಂಸ್ಕೃತಿಗಿಂಥ ಭಾರತದ ಸಂಸ್ಕೃತಿ ಭಿನ್ನ, ಯೂರೋ ಸಂಸ್ಕೃತಿ ಹೊರಗಿನದು ಅದನ್ನು ಅನಾಮತ್ ಎತ್ತಿಹಾಕಿಕೊಂಡು ನಾವು ಆಧುನಿಕರಾಗಲು ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಜಗತ್ತಿನಲ್ಲಿ ಈ ರೀತಿಯ ಬಹು ಸಂಸ್ಕೃತಿಗಳು ಇರುವುದರಿಂದ ಜೀವನ ವೈವಿಧ್ಯಪೂರ್ಣವಾಗಿದೆ. ಈ ವೈವಿಧ್ಯತೆಯನ್ನು ನಾವು ಒಂದೊಂದು ಬಗೆಯ ವೈಶಿಷ್ಟ್ಯತೆ ಎಂದು ಕರೆಯುತ್ತೇವೆ. ಇದು ಅನೇಕ ಶತಮಾನಗಳ ಶೋಧ. ಇದನ್ನು ನಾವು ಸಂಸ್ಕೃತಿ ಪರಂಪರೆ ಎಂದು ಕರೆಯುತ್ತೇವೆ.

ಭಾರತವೂ ಆಡಳಿತಾತ್ಮಕವಾಗಿ ಒಂದು ದೊಡ್ಡ ಸಂಸ್ಕೃತಿ ಪ್ರದೇಶ ಮತ್ತು ದೇಶವಾಗಿದೆ. ಈ ಆಡಳಿತ ಸಂಸ್ಕೃತಿಯೊಳಗೆ ನೂರಾರು ಜೀವನ ಸಂಸ್ಕೃತಿಗಳಿವೆ. ಇವೆಲ್ಲ ಅನೇಕ ಶತಮಾನಗಳಲ್ಲಿ ತಮ್ಮದೆ ಭಾಷೆ, ನಂಬಿಕೆ, ನಡವಳಿಕೆ, ವಿಚಾರ- ಆಚರಣೆಗಳನ್ನು ಉಳಿಸಿಕೊಂಡು ಬಂದಿವೆ. ಇಂಥ ವೈವಿಧ್ಯ ಸಂಸ್ಕೃತಿಗಳು ಇರುವುದರಿಂದ ಜನರು ಅಲ್ಲಲ್ಲಿ ತಮ್ಮ ತಮ್ಮ ಸಂಸ್ಕೃತಿಯನ್ನು ನಂಬಿಕೊಂಡು ಹಾಗೂ ನಡೆದುಕೊಂಡು ಬದುಕುತ್ತಿದ್ದಾರೆ. ಭಾರತದಲ್ಲಿ ಏಕ ಸಂಸ್ಕೃತಿಯೊಂದೇ ಇದ್ದಿದ್ದರೆ ಅವರೆಲ್ಲ ಡೆಲ್ಲಿ ಸಿಂಹಾಸನದ ಕಡೆಗೆ ದಂಡೆತ್ತಿ ಬರುತ್ತಿದ್ದರು. ಸಿಂಹಾಸನ ಯಾರಿಗೂ ಸಿಗುತ್ತಿರಲಿಲ್ಲ. ಒಬ್ಬರ ತಲೆಗಳು ಮತ್ತೊಬ್ಬರಿಗೆ ಸಿಗುತ್ತಿದ್ದವು ಅಷ್ಟೆ.

ಬಹು ಸಂಸ್ಕೃತಿಗಳು ಬಹುಜನರು ನೆಮ್ಮದಿಯಿಂದ ಇರಲು ಅವಕಾಶ ಕಲ್ಪಿಸುತ್ತವೆ. ಜನರು ಮಹಾ ದಂಗೆಕೋರರೂ ಆಗದಂತೆ ನೋಡಿಕೊಳ್ಳುತ್ತವೆ. ಬಹು

ಸಂಸ್ಕೃತಿಗಳು ಎಂದೂ ಜನರ ತಲೆಗೆ ಕೈಹಾಕಿಲ್ಲ. ಅನಗತ್ಯ ದೇಶ ದರೋಡೆ ಕೆಲಸಕ್ಕೆ ಕೈ ಹಾಕಿಲ್ಲ. ಯಾವುದೇ ದೇಶದಲ್ಲಿ ದಂಗೆ, ದರೋಡೆ, ಯುದ್ಧಗಳು ಆಗಿದ್ದರೆ ತಮ್ಮದೇ ಶ್ರೇಷ್ಠ ಸಂಸ್ಕೃತಿ ಅನ್ಯರದು ಕೆಳ ಸಂಸ್ಕೃತಿ ಎಂಬ ಪ್ರಭುತ್ವವಾದಿಗಳಿಂದ.

ಈಗ ಭಾರತ ಏಕ ಸಂಸ್ಕೃತಿಯ ಮೆರವಣಿಗೆ, ಅತಿ ಆಕಾಂಕ್ಷೆ, ಸ್ವಾರ್ಥದಿಂದ ಇಡೀ ದೇಶವನ್ನು ತಲ್ಲಣಗೊಳಿಸಿದೆ. ಏಕತೆಯ ಹೆಸರಿನಲ್ಲಿ ಅನೇಕತೆಗಳನ್ನು ತುಳಿಯಲು ಇಲ್ಲವೆ ತಿರಸ್ಕರಿಸಲು ಹೊರಟಿದೆ. ಇದರಿಂದ ದೇಶದ ಭದ್ರತೆಗೆ ಧಕ್ಕೆ ಬಂದಿದೆ. ಈಗ ಬಹುಸಂಸ್ಕೃತಿಗಳ ಅನನ್ಯತೆ ಹಾಗೂ ವಿಶಿಷ್ಯತೆಗಳನ್ನು ನಾವು ಎತ್ತಿ ಹೇಳಬೇಕಿದೆ. ಅವು ವಿವಿಧತೆಯನ್ನು ಉಳಿಸುವ ನಿಷ್ಠೆಯನ್ನು ಬೆಳೆಸಬೇಕಾಗಿದೆ. ವಿಶಿಷ್ಟತೆಯ ಅಸ್ತಿತ್ವ ಹಾಗೂ ನಿಷ್ಠೆಯ ಅಗತ್ಯತೆಯನ್ನು ಒತ್ತಿ ಹೇಳವುದೇ ಬಹುಮುಖಿ ಸಂಸ್ಕೃತಿಯ ಉದ್ದೇಶವಾಗಿದೆ.

ನಾವು ಚಿತ್ರದುರ್ಗದಲ್ಲಿ ೪, ೫ನೇ ಮೇ ೨೦೦೨ರಂದು ಬೇರೆ ಬೇರೆ ಜನವರ್ಗಗಳ ಕಲೆಗಳನ್ನು ಆಹ್ವಾನಿಸುತ್ತಿದ್ದೇವೆ, ಪ್ರದರ್ಶನಕ್ಕೆ ಒಡ್ಡುತ್ತಿದ್ದೇವೆ. ಆ ಕಲೆಗಳ ಒಳಗೆ ಹಿಂದೆ ಬೇಕಾದುದು ಹಾಗೂ ಈಗ ಬೇಕಾಗಿರುವುದು ಏನಿದೆ ಎಂಬುದನ್ನು ಹುಡುಕಲು ಸಂವಾದಗಳನ್ನು ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ಜನಾಂಗ ಹಾಗೂ ಅವರ ಕಲೆ, ಬದುಕು ಈ ದೇಶಕ್ಕೆ ಕಾಣಿಕೆ ನೀಡಿವೆ. ಅವರ ಭೌತಿಕ ಹಾಗೂ ಬೌದ್ಧಿಕ ಶ್ರಮದ ಮೇಲೆ ಈ ದೇಶ ಎದ್ದು ನಿಂತಿದೆ ಎಂಬುದನ್ನು ಹೇಳ ಹೊರಟಿದ್ದೇವೆ. ವಿವಿಧ ಸಂಸ್ಕೃತಿಗಳು ಅಪರಾಧವಲ್ಲ ಅನಿವಾರ್ಯ ಎಂಬುದನ್ನು ಸಾದರಪಡಿಸುವವರಿದ್ದೇವೆ.

ಕರ್ನಾಟಕದಲ್ಲಿ ಬಹು ಸಂಸ್ಕೃತಿಯ ಬಗ್ಗೆ ಮೊದಲಿನಿಂದಲೂ ಚಿಂತಿಸುತ್ತಾ ಬಂದ ಪ್ರೊ.ಹಿ.ಶಿ. ರಾಮಚಂದ್ರೇಗೌಡ, ಬಂಜಗೆರೆ ಜಯಪ್ರಕಾಶ್, ಮೊಗಳ್ಳಿ ಗಣೇಶ, ಪ್ರೊ.ಹಿ.ಚಿ. ಬೋರಲಿಂಗಯ್ಯ, ಡಾ|| ಚಕ್ಕೆರೆ ಶಿವಶಂಕರ್, ಶ್ರೀ ಮಂಜುನಾಥ ಬೇವಿನಕಟ್ಟಿ, ಆರ್.ಜಿ.ಹಳ್ಳಿ ನಾಗರಾಜ್, ಡಾ|| ರಾಘವೇಂದ್ರ ಪಾಟೀಲ, ಶ್ರೀಮತಿ ಸುಜಾತಾ ಕುಮಟಾ ಇವರನ್ನು ಕಲೆ ಹಾಗೂ ಕಲಾವಿದರೊಡನೆ ಸಂವಾದಿಸಲು ಆಹ್ವಾನಿಸುತ್ತಿದ್ದೇವೆ. ಜನಪದ ಕಲೆಗಳು ಕೇವಲ ಮನರಂಜನೆಗೆ ಇರುವ ಪ್ರದರ್ಶನಗಳಲ್ಲ, ಅವು ನಮ್ಮ ಪರಂಪರೆಯ ಜೀವನವನ್ನು ಕುರಿತು ಹೇಳುತ್ತಿದ್ದಾನೆ ಮತ್ತು ಮುಂದೆ ಇಂಥ ಕಲೆಗಳು ಜನರ ಮಧ್ಯೆ ಮಾತನಾಡುವುದರಿಂದ ದೇಶದ ಏಕತೆ ಹಾಗೂ ಬಹುತ್ವ ಉಳಿಯುತ್ತದೆ ಎಂಬುದನ್ನು ಸಮಾಜದ ಮುಂದೆ ಸಾದರಪಡಿಸುತ್ತಿದ್ದೇವೆ.

**ನಮ್ಮ ಮೂರು ವರ್ಷದ ಜಾನಪದ ನೀತಿ**

**(ಅಕಾಡೆಮಿಗಾಗಿ ತಯಾರಿಸಿದ ಯೋಜನೆ)**

---

೧. ಜಾನಪದವನ್ನು ಒಂದು ಸ್ವದೇಶಿ ಪರ್ಯಾಯ ಜ್ಞಾನ-ವಿಜ್ಞಾನ ಎಂದು ಪರಿಗಣಿಸಿ ಪ್ರೋತ್ಸಾಹಿಸುವುದು.

9. ಜಾನಪದ : ಪಳಿಯುಳಿಕೆ, ಜೀವಂತ ಪಳಿಯುಳಿಕೆ ಮಾತ್ರವಲ್ಲ, ಬಹುಜನರ, ಬಹುಸಂಸ್ಕೃತಿಗಳ ಜೀವಂತ ಜೀವನ ವಿಜ್ಞಾನ ಎಂಬುದನ್ನು ಸಾದರಪಡಿಸುವುದು.

೩. ಜಾನಪದ ಪಡೆದದ್ದು (accquired), ಬಳಸಿದ್ದು (used) ಮತ್ತು ಸಂವಹನಿಸಿದ್ದು (transmitted) ಎಂದು ವಿದ್ವಾಂಸರು ತಿಳಿಸಿರುವಂತೆ ಅದು ಇವತ್ತಿನ ಅವಶ್ಯಕತೆ ಎಂಬುದನ್ನು ದೃಢಪಡಿಸುವುದು ಹಾಗೂ ಅಭಿವೃದ್ಧಿಗೆ ಒಳಪಡಿಸುವುದು.

೪. ಜನಪದ ಸಂಸ್ಕೃತಿಯಿಂದಲೇ ಈ ಜಾತಿ ವೈಷಮ್ಯದ ಭಾರತ ರಕ್ತಪಾತವಿಲ್ಲದೆ ಉಳಿದು ಬಂದಿದೆ ಎಂಬುನ್ನು ಸಾದರಪಡಿಸುವುದು.

ಹೇಗೆಂದರೆ; ಜಾನಪದ ಬಹುಮತ ಹಾಗೂ ಬಹುಸಂಸ್ಕೃತಿಗಳ ಅನನ್ಯತೆ ಮತ್ತು ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತದೆ. ಇದರಿಂದ ಭಿನ್ನಮತ ಅಥವಾ ಧೋರಣೆ ಇಟ್ಟುಕೊಂಡು ಬದುಕಬಹುದು ಎಂಬುದನ್ನು ಸಾದರಪಡಿಸುತ್ತದೆ.

೫. ಜೀವನದಲ್ಲಿ ಪಾರಸ್ಪರಿಕತೆ ಎಂಬ ಸೌಹಾರ್ದ ಜೀವನ ಸಂಸ್ಕೃತಿ ಹಾಗೂ ಜೀವನ ವಿಧಾನ ಏನು ಮತ್ತು ಹೇಗೆ ಎಂಬುದನ್ನು ನಮ್ಮ ಕಾರ್ಯಕ್ರಮಗಳ ಮೂಲಕ ತೋರಿಸುವುದು.

**ಉದಾ : ನೀ ನನಗಿದ್ದರೆ ನಾ ನಿನಗೆ**

**ನೆನಪಿರಲಿ ನುಡಿ ನಮ್ಮೊಳಗೆ.....**

ಎಂದು ಒಂದು ಕನ್ನಡ ಪದ್ಯದಲ್ಲಿ ಧಿಮಾಕಿನ ಕುದುರೆಗೆ ಬಡಕತ್ತೆ ಹೇಳುತ್ತದೆ.

**ಕರ್ನಾಟಕ ಜನತೆಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕರೆ :**

---

ಪ್ರಿಯ ಮಾನ್ಯ ಮಂತ್ರಿಗಳೆ, ಮಾನ್ಯ ಅಧಿಕಾರಿಗಳೆ, ಮಾನ್ಯ ಧನಿಕರೆ, ಎಲ್ಲ ಸುಸಂಸ್ಕೃತ ಸುಜನರೆ

೧. ನಿಮ್ಮ ಮನೆಯ ನಾಮಕರಣ, ಮದುವೆ, ಸೋಬನ, ಉಪನಯನಗಳಂಥ ಶುಭ ಸಮಾರಂಭಗಳಿಗೆ ಕನಿಷ್ಠ ಮೂರು ಜನಪದ ಕಲಾತಂಡಗಳನ್ನು ಕರೆಸಿರಿ, ಪ್ರದರ್ಶನ ಏರ್ಪಡಿಸಿರಿ. ಸಂಭಾವಣೆ ನೀಡಿ ಗೌರವಿಸಿರಿ. ನಮ್ಮ ಜನಪದ ಕರ್ನಾಟಕದ ಘನತೆಯನ್ನು ಹೆಚ್ಚಿಸಿರಿ.

೨. ಸ್ಥಳೀಯ ಪಾನೀಯಗಳನ್ನು ಬಳಸಿ ಹಾಗೂ ಸಮಕಾಲೀನ ಸಂದರ್ಭಕ್ಕೆ ಅಭಿವೃದ್ಧಿಪಡಿಸುವ ಪಣ ತೊಡಿ.

೩. ಮಾತೃ ಸ್ವಭಾವದ ಜಾನಪದ ಕರುಳ ಸಂಸ್ಕೃತಿಯನ್ನು ಉಳಿಸಿ, ಯುದ್ಧಗಳನ್ನು ತಪ್ಪಿಸಿ. ನಿಮ್ಮ ಸಾಧಕ ತಂದೆ ತಾಯಿಗಳ ಹೆಸರಿನಲ್ಲಿ ಒಂದು ಜನಪದ ಕಲಾಪ್ರದರ್ಶನ ಏರ್ಪಡಿಸಿ,

೪. ಜಾಗತಿಕ ಸಂಸ್ಕೃತಿಯನ್ನು ಸ್ವೀಕರಿಸಿ, ಅದರೆ ಅದನ್ನು ನಿಮ್ಮದಾಗಿಸಿಕೊಳ್ಳಿ; ಅದರ ಗುಲಾಮರಾಗುವುದು ಮಾತ್ರ ಬೇಡ.

೫. ಯಾವುದೇ ದೃಶ್ಯ-ಶ್ರವ್ಯ ಮಾಧ್ಯಮ ಅಪರಾಧವಲ್ಲ; ಅದನ್ನು ನಮ್ಮದು ಮಾಡಿಕೊಳ್ಳಿ, ನಿಮ್ಮಲ್ಲಿ ಜೀರ್ಣಿಸಿಕೊಳ್ಳಿ.

ಈಗಿನ ನಮ್ಮ ಅವಧಿಯ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜನಪದ ಕಲಾವಿದರನ್ನು, ಜಾನಪದ ವಿದ್ವಾಂಸರನ್ನು ಅಟ್ಟಕ್ಕೇರಿಸಿ ವೈಭವಿಸುವ ಕೆಲಸ ಮಾಡುವುದಿಲ್ಲ. ಅವರು ನೆಲದ ಮೇಲೆ ನಡೆದಾಡಬೇಕು, ನೆಲೆನಿಲ್ಲಬೇಕು.

**ಸಾಂದರ್ಭಿಕ ಕಾರ್ಯಕಮಗಳು :**

೧. ಮಮತೆಯ ಕುಡಿ : ಮಕ್ಕಳ ಜಾನಪದ ಅಧ್ಯಯನ ಹಾಗೂ ಪ್ರದರ್ಶನ,

ಶಾಲೆಗಳಿಗೆ ಹೋಗಿ,

9. ಜನಪದ ಗೀತೆಗಳ ಹೆಸರಿನಲ್ಲಿ ಅಶ್ಲೀಲ ಸಾಹಿತ್ಯ ಬರುತ್ತಿರುವ ಬಗ್ಗೆ ಸಂವಾದ. ೩. ಪ್ರತಿ ತಾಲ್ಲೂಕು, ನಗರಗಳಲ್ಲಿ ಹುಟ್ಟಿಕೊಂಡಿರುವ ಜನಪದ ಗೀತೆಗಳ ಹಾಡುಗಾರರ ಸಮಾವೇಶ; ಸಂವಾದ.

೪. ಅಂತರರಾಜ್ಯ ವಿಚಾರ ಸಂಕಿರಣ : ಹಂಪೆ, ವಾರಂಗಲ್, ವಡಗರ, ಕಾಸರಗೋಡು.

೫.. ಕಾಲೇಜಿಗೊಂದು ಕಾರ್ಯಕ್ರಮ.

೬. ಪಾರ್ಕಿಗೊಂದು ಕಥೆ

೭. ರಾಜಕೀಯ ಜಾನಪದ : ಹೊಸ ಜೀವನಾನುಭವ ಹಾಗೂ ಸಾಮಾನ್ಯ ಜನತೆ.

೮. ಜನಪದದಲ್ಲಿ ದೇವರು ಮತ್ತು ಪ್ರಾರ್ಥನೆ; ಮನಶ್ಯಾಸ್ತ್ರೀಯ ಹಿನ್ನೆಲೆಯ ಶೋಧ

೯. ಪುಷ್ಪ ಜಾನಪದ

೧೦, ಕೀಟ ಜಾನಪದ

೧೧. ಜನಪದರ ಬೀಜ ಪರಿಕಲ್ಪನೆ ಮತ್ತು ಜಾಗತೀಕರಣ.

೧೨. ಪ್ರವಾಸೋದ್ಯಮ ಜಾನಪದ : ಗೋವಾ ಕನ್ನಡಿಗರ ಸಂದರ್ಭದಲ್ಲಿ

೧೩. ಭಾಷಾ ಸಂಘರ್ಷ ಮತ್ತು ಜಾನಪದ ಕಾಸರಗೋಡು.

೧೪. ರಾಜಧಾನಿ ಜಾನಪದ : ದೆಹಲಿಯಲ್ಲಿ ಇರುವ ಕನ್ನಡಿಗರ ಬದುಕು ಕುರಿತು.

೧೫. ಜನಪದ ಸ್ಪರ್ಧೆಗಳ ಪುನರುಜೀವನ ಮತ್ತು ಪ್ರಯೋಗ : ಸಂವಾದ

**ಬಿಡಿ ಕಾರ್ಯಕ್ರಮಗಳು :**

೧. ಜಾನಪದ ಸಂಘ ಸಂಸ್ಥೆಗಳೊಡನೆ ಸಹಯೋಗ ಕಾರ್ಯಕ್ರಮ

9. ಬೇರೆ ಬೇರೆ ಸಂಘ-ಸಂಸ್ಥೆಗಳ ಕರೆಯ ಮೇಲೆ ಸಾಂದರ್ಭಿಕ ಕಾರ್ಯಕ್ರಮಗಳನ್ನು ಯೋಜಿಸುವುದು.

**ಮೂರು ವರ್ಷದ ಕಾರ್ಯಕ್ರಮಗಳು : ನಿರಂತರ**

೧. ಆದಿದಿನೋತ್ಸವ

೨. ಜಾನಪದ ಸೌಹಾರ್ದ

೩. ಜನಪದ ಕಲಾಚಿಂತನೆ ಮತ್ತು ಅಭಿವೃದ್ಧಿ

೪. ಜನಪದ ಜ್ಞಾನ-ತಂತ್ರಜ್ಞಾನ ಶೋಧನೆ ಹಾಗೂ ಪರ್ಯಾಯ ಮಾರುಕಟ್ಟೆ





ಯೋಜನೆ. ಮೊದಲ ವರ್ಷ : ಪಾನೀಯಗಳು ಮತ್ತು ಶಾವಿಗೆ ಬಗ್ಗೆ

ಎರಡನೆಯ ವರ್ಷ : ಊಟ ಉಪಚಾರ.

೫. ಜನಪದ ಸಂಸ್ಕೃತಿ ಮತ್ತು ಜನನಾಯಕತ್ವ ಶೋಧ

೬. ಜಾನಪದ ದೃಶ್ಯ - ಶ್ರವ್ಯ ದಾಖಲೀಕರಣ - ಡಿಜಿಟಲೈಸೇಷನ್

೭. ಮಾತೃ ಆಚರಣೆ, ಮಾತೃ ಸಂಸ್ಕೃತಿಯ ಶೋಧ ಹಾಗೂ ಯುದ್ಧ ವಿರೋಧಿ ಚಿಂತನೆ ಬೆಳೆಸುವುದು.

೮. ಜಾನಪದ ಕರ್ನಾಟಕ ಎಂಬ ಜನಪದ ಸಂಸ್ಕೃತಿ ಬಿಂಬಿಸುವ ಧಾರಾವಾಹಿ ಬಗ್ಗೆ ಯೋಜನೆ.

೯. ಜಾತ್ರೆ - ಹಬ್ಬ - ಆಚರಣೆಗಳ ಪ್ರಾತ್ಯಕ್ಷಿಕೆ, ವೀಕ್ಷಕ ಅಧ್ಯಯನ : ನಮ್ಮ ಜನಗಳ ಭಾವ - ಸ್ವಭಾವ ಪರಿಚಯ.

೧೦. ಸೌಮ್ಯ ಪ್ರಕಾರಗಳ ಪುನರುಜೀವನ ಮತ್ತು ಪ್ರದರ್ಶನ ವ್ಯವಸ್ಥೆ, ಉದಾ : ಜನಪದ ಕಥೆ, ಒಗಟು ಇತ್ಯಾದಿ.

೧೧. ಹಿರಿಯ ಜನಪದ ಕಲಾವಿದರ ವಿಡಿಯೋ ಮಾಲೆ.

೧೨. ಕರ್ನಾಟಕ ಜನಪದ ಮಹಾಕಾವ್ಯಗಳ ಪರಿಸರ ಸಂಸ್ಕೃತಿಯ ಶೋಧ - ಚಿಂತನೆ ಹಾಗೂ ಡಿಜಿಟಲೈಜೇಷನ್.

**ಕೂಡು ಕಾರ್ಯಕ್ರಮ ಯೋಜನೆ : ಸಾಂದರ್ಭಿಕ ಕಾರ್ಯಕ್ರಮಗಳು :**

೧. ಜನಪದ ಸಂಗೀತ-ಶಿಷ್ಟ ಸಂಗೀತ : ರಸ ಚಿಂತನ ಕಾರ್ಯಕ್ರಮ - ಕರ್ನಾಟಕ ಸಂಗೀತ ನೃತ್ಯ ಆಕಾಡೆಮಿಯ ಸಹಯೋಗದೊಡನೆ.

9. ಜನಪದ ನಾಟಕಗಳ ಪರಿಸ್ಥಿತಿ ಮತ್ತು ಪ್ರಯೋಗ-ಕರ್ನಾಟಕ ನಾಟಕ ಅಕಾಡೆಮಿಯ ಸಹಯೋಗದೊಡನೆ.

೩. ಜನಪದ ಸಾಹಿತ್ಯ - ಶಿಷ್ಟ ಸಾಹಿತ್ಯ - ಸಮಕಾಲೀನ ಅಪೇಕ್ಷೆ ಮತ್ತು ವಿಮರ್ಶೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದೊಡನೆ.

೪. ಕರ್ನಾಟಕ ಜಾನಪದಕ್ಕೆ ಮುಸ್ಲಿಂ ಜಾನಪದದ ಕೊಡುಗೆ : ಕೊಡು-ಕೊಳ್ಳುವಿಕೆ - ಕರ್ನಾಟಕ ಉರ್ದು ಅಕಾಡೆಮಿಯ ಸಹಯೋಗದೊಡನೆ.





೫. ಜನಪದ ಚಿತ್ರಕಲೆ : ಸಮಕಾಲೀನ ಕಲಾಮಾಧ್ಯಮದ ಮೇಲೆ ಮೂಡಿರುವ ಪ್ರಭಾವ : ಸಂವಾದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಹಯೋಗದೊಡನೆ.

೬. ಮಾಧ್ಯಮವಾಗಿ ಜಾನಪದ : ಕರ್ನಾಟಕ ಪತ್ರಿಕಾ ಅಕಾಡೆಮಿಯ ಸಹಯೋಗದೊಡನೆ.

ಜುಲೈ ೨, ೨೦೦೨ರಂದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೨೦೦೧ನೇ ಸಾಲಿನ ಜಾನಪದ : ಜ್ಞಾನ-ವಿಜ್ಞಾನ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಿದೆ.

ಜಾನಪದವೆಂದರೆ ಪುರಾತನ ಕಾಲದ ಪಳಯುಳಿಕೆ ಎಂದು ಹೇಳುವ ಕಾಲವೊಂದಿತ್ತು. ಇದು ೧೮ನೇ ಶತಮಾನದ ದಿಢೀರ್ ಆಧುನಿಕತೆ ಮಾಡಿದ ಕೆಲಸ. ತನ್ನ ಶೋಧನೆ ಮಾತ್ರ ವೈಜ್ಞಾನಿಕತೆ, ಹಿಂದಿನದೆಲ್ಲವೂ ಅವೈಜ್ಞಾನಿಕ ಎಂದು ಅದು ಘೋಷಿಸಿತು. ಇದು ಆಧುನಿಕ ವಿಜ್ಞಾನದ ಫಲವನ್ನು ದೊಡ್ಡ ಪ್ರಮಾಣದಲ್ಲಿ ಅನುಭವಿಸಬೇಕೆಂಬ ದುರಾಸೆಯ ಉದ್ಯಮಪತಿಗಳು ಮಾಡಿದ ಕೆಲಸ, ಸಾಮಾಜಿಕ ಬೆಳವಣಿಗೆ ಎಲ್ಲ ಕಾಲದಲ್ಲೂ ಇದ್ದೇ ಇರುತ್ತದೆ. ಹಾಗೆ ನೋಡಿದರೆ ೧೦ನೆಯ ಶತಮಾನಕ್ಕೆ ಹೋಲಿಸಿದರೆ ೧೧ನೆಯ ಶತಮಾನ ಆಧುನಿಕ. ೧೫ನೆಯ ಶತಮಾನಕ್ಕೆ ಹೋಲಿಸಿದರೆ ೧೬ನೆಯ ಶತಮಾನ ಆಧುನಿಕ. ಒಂದು ಶತಮಾನಕ್ಕಿಂತ ಇನ್ನೊಂದು ಶತಮಾನ ಭಿನ್ನವಾಗಿರುತ್ತದೆ. ಇದಕ್ಕೆ ಕಾರಣ ಸಮಾಜದಲ್ಲಿ ಆಗುವ ಸಹಜ ಬೆಳವಣಿಗೆ.

೧೮ನೆಯ ಶತಮಾನದ ಆಧುನಿಕರು ಮಾಡಿದ ಅಬ್ಬರದಿಂದ ಆ ಹಿಂದಿನ ಶತಮಾನಗಳ ಸಾಧನೆಯೆಲ್ಲ ಬೇಡವಾದ ಪಳಯುಳಿಕೆ ಅನ್ನಿಸಿಕೊಂಡದ್ದು ಒಂದು ಸಾಮಾಜಿಕ ದುರಂತ. ಈ ತಪ್ಪು ತಿಳುವಳಿಕೆ ಹಾಗೂ ತಪ್ಪು ಪ್ರಚಾರವನ್ನು ಸರಿಪಡಿಸಲೆಂದೆ ಜೀವನವನ್ನು ಸಮಗ್ರವಾಗಿ ನೋಡುವ ಜಾನಪದವೆಂಬ ಅಧ್ಯಯನ ವಿಷಯ ಹುಟ್ಟಿಕೊಂಡಿತು.

ಜಾನಪದದಲ್ಲಿ ಸಾಮಾಜಿಕ ವಸ್ತುವನ್ನು ಒಳಗೊಂಡ ನೃತ್ಯವೂ ಇದೆ. ವೈಜ್ಞಾನಿಕ

ವಸ್ತುವನ್ನು ಒಳಗೊಂಡ ಆಚರಣೆಯೂ ಇದೆ. ಸೋಮನ ಕುಣಿತ ಒಂದು ಜನಪದ ನೃತ್ಯ. ಈ ಸೋಮನ ಕುಣಿತಗಳಲ್ಲಿ ಹಣೆಯ ಮೇಲೆ ಮೂರು ನಾಮ ಹಾಕಿದ, ಮೂರು ವಿಭೂತಿಗೆರೆಗಳನ್ನು ಹಾಕಿದ ಹಾಗೂ ಕಪ್ಪು ಮುಖದ ಸೋಮಗಳಿವೆ. ಇವುಗಳಲ್ಲಿ ಒಂದು ಶ್ರೀವೈಷ್ಣವ ಸಂಪ್ರದಾಯವನ್ನೂ, ಮತ್ತೊಂದು ಶೈವ ಸಂಪ್ರದಾಯವನ್ನೂ ಹಾಗೂ ಕರಿಸೋಮವು ಕಪ್ಪು ಜನರನ್ನೂ ಪ್ರತಿನಿಧಿಸುತ್ತದೆ. ಈ ಮೂರು ಸೋಮಗಳು ತಾಯಿಯಾದ ಗ್ರಾಮದೇವತೆಯ ಮುಂದೆ ನೃತ್ಯ ಮಾಡುತ್ತವೆ. ಆ ಮೂಲಕ ಧರ್ಮ ಸಾಮರಸ್ಯವನ್ನು ಎತ್ತಿಹಿಡಿಯುತ್ತವೆ.

ಹಿಮ್ಮಡಿ ತೊಳೆಯದೆ ಹೊರಗಿನಿಂದ ಮನೆ ಪ್ರವೇಶಿಸಬೇಡ ಎಂದು ನಮ್ಮ ಹಿರಿಯರು ನಂಬಿಕೆ ಮಾಡಿದ್ದಾರೆ. ಹಾಗೆ ಮಾಡದಿದ್ದರೆ ದೆವ್ವ ಹಿಮ್ಮಡಿ ಮೂಲಕ ಹತ್ತುತ್ತವೆ ಎನ್ನುತ್ತಾರೆ. ನಿಜಸಂಗತಿ ಎಂದರೆ ಹಿಮ್ಮಡಿಯಲ್ಲಿ ಶೇಖರವಾಗಿರಬಹುದಾದ ಕೊಳಕನ್ನು ತೊಳೆದುಕೊಂಡು ಬರಲಿ ಎಂಬುದೆ ಸದುದ್ದೇಶ. ಅಂದರೆ ಜಾನಪದ ಆರೋಗ್ಯ ವಿಜ್ಞಾನವನ್ನು ಹೇಳುತ್ತದೆ ಎಂದಾಯಿತು. ಹೀಗೆ ಜಾನಪದದೊಳಗೆ ಕಲೆ, ವಿಜ್ಞಾನ, ವೈದ್ಯ, ವಿಚಾರ, ಪಾಕ, ಆಭರಣ ವಿನ್ಯಾಸ, ಉಡುಗೆ-ತೊಡಗೆ, ಶೃಂಗಾರ ವಿನ್ಯಾಸ, ಕಾನೂನು-ಕಟ್ಟಲೆ ಈ ಎಲ್ಲವೂ ಬರುತ್ತವೆ. ಆದ್ದರಿಂದ ಸಮಗ್ರ ಪಾರಂಪರಿಕ ಜ್ಞಾನವನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುತ್ತಾ ಬರುತ್ತಿರುವ ಈ ಜಾನಪದ ವಿಷಯದ ಪ್ರಶಸ್ತಿಗಳನ್ನು ಜಾನಪದ ಜ್ಞಾನ-ವಿಜ್ಞಾನ ಪ್ರಶಸ್ತಿಗಳು ಎಂದು ನಾವು ಕರೆದಿದ್ದೇವೆ. ಈ ಜಾನಪದ ಕ್ಷೇತ್ರದಲ್ಲಿ ಲಕ್ಷ ಸಂಖ್ಯೆಯಲ್ಲಿ ಈ ಸಾಮಾನ್ಯ ತಜ್ಞರು ಇದ್ದಾರೆ. ಇವರಲ್ಲಿ ಆಯ್ದುಕೊಂಡು ೨೦೦೧ನೆಯ ವರ್ಷದ ಆಯ್ಕೆಯಾಗಿ ಜನಪದ ಕಲೆ, ವೈದ್ಯ, ಕಸೂತಿ ಇತ್ಯಾದಿಗಳಿಗೆ ಸಂಬಂಧಿಸಿದ ೨೮ ಕಲಾತಜ್ಞರು, ಜಾನಪದದಲ್ಲಿ ಅಧ್ಯಯನ ಮಾಡಿದ ಮೂರು ಜನ ತಜ್ಞರು, ಜಾನಪದವನ್ನು ಪ್ರಚಾರ ಪ್ರಸಾರದ ಮೂಲಕ ಅಭಿವೃದ್ಧಿಪಡಿಸಿದ ನಾಲ್ವರಿಗೆ, ಒಬ್ಬರು ಸಂಘಟಕರು ಹಾಗೂ ನಾಲ್ಕು ಜನ ವಿಶೇಷ ಜಾನಪದ ಕೃತಿಗಳನ್ನು ಹೊರತಂದವರಿಗೆ, ಒಟ್ಟು ೪೦ ಮಂದಿಗೆ ಪ್ರಶಸ್ತಿ ನೀಡಲಾಗುತ್ತಿದೆ.

ಇಂಗ್ಲೆಂಡ್ ಮೂಲದಿಂದ ೧೮ನೇ ಶತಮಾನದಲ್ಲಿ ಹುಟ್ಟಿದ ವಿಜ್ಞಾನವನ್ನು ದಿಢೀರ್ ವಿಜ್ಞಾನ ಎಂದು ಕರೆಯುತ್ತೇವೆ. ಅದು ಸಾಂಪ್ರದಾಯಿಕ ಜ್ಞಾನ-ವಿಜ್ಞಾನವನ್ನು ತಲೆಕೆಳಗು ಮಾಡಿಬಿಟ್ಟಿತು. ಸಾಂಪ್ರದಾಯಿಕ ಜ್ಞಾನ-ವಿಜ್ಞಾನಗಳು ಮೂಲೆಗುಂಪಾದವು.

ತಾವು ಹೊಸ ವಿಧಾನಕ್ಕೆ ಹೋಲಿಸಿದರೆ ಕೀಳು ಎಂಬ ಹಿಂಜರಿಕೆಯನ್ನು ಬೆಳೆಸಿಕೊಂಡವು.

ಈಗ ಆಧುನಿಕ ವಿಜ್ಞಾನ ಸಾಮಗ್ರಿ ವಿಜ್ಞಾನ. ಅದು ನಮ್ಮ ಭೌತಿಕ ಸಂಪತ್ತನ್ನು ತುಂಬಲಾರದು ಎಂಬ ತಿಳುವಳಿಕೆ ಮೂಡುತ್ತಿದೆ. ಆಧುನಿಕ ಔಷಧ ಪದ್ಧತಿಯೊಂದೇ ಸಾಲದು. ಅದು ಕುಸಿದುಬಿದ್ದರೆ ಜನರನ್ನು ರಕ್ಷಿಸುವ ಮಾರ್ಗ ಇಲ್ಲವಾಗುತ್ತದೆ. ಆದ್ದರಿಂದ ಪರಂಪರೆಯಲ್ಲಿ ಇರುವ ನಾನಾ ರೀತಿಯ ಔಷಧ ಪದ್ಧತಿಗಳನ್ನು ಪರಾಯವಾಗಿ ಬೆಳೆಸಬೇಕೆಂಬ ಅಪೇಕ್ಷೆ ಅಮೆರಿಕ ದೇಶದ ಕಡೆಯಿಂದಲೇ ಆರಂಭವಾಗಿದೆ.

ಆಧುನಿಕ ವಿಜ್ಞಾನದಿಂದ ಅನೇಕ ವಿಚಾರಪಂಥಗಳು ಹುಟ್ಟಿಕೊಂಡಿರುವುದೇನೊ ನಿಜ. ಆದರೆ ಆಂತರಿಕ ಸಂಬಂಧ, ಆಂತರಿಕ ಧರ್ಮ, ಅನೇತ್ರತೆಗಳೆಂಬ ಮಾನವೀಯ ಮೌಲ್ಯಗಳು ವ್ಯಕ್ತಿ ಪರಮಾಧಿಕಾರ ಹಾಗೂ ಪರಮಾಪೇಕ್ಷೆಯಿಂದ ಮೂಲೆಗೆ ಸರಿಯುತ್ತಿವೆ. ಆಧುನಿಕ ವಿಜ್ಞಾನ ಭೌತಿಕ ವಸ್ತುವೊಂದನ್ನು ಘಟಕಗಳಲ್ಲಿ ಒಡೆದು ವಿಶ್ಲೇಷಿಸುವಂತೆ ಸಮಾಜವನ್ನೂ ಛಿದ್ರದಲ್ಲಿ ನೋಡುವ ಪರಿಪಾಠ ಬೆಳೆಯುತ್ತಿರುವುದು ಆತಂಕಕಾರಿಯಾದ ಸಂಗತಿಯಾಗಿದೆ. ಆಧುನಿಕ ಜ್ಞಾನ ಎಲ್ಲವನ್ನು ಭಾಗ ಭಾಗ ಮಾಡಿನೋಡಲು ಯತ್ನಿಸುತ್ತದೆ. ಪಾರಂಪರಿಕ ಜ್ಞಾನ, ಸಮಾಜವನ್ನು ಅಖಂಡವಾಗಿ ನೋಡುವುದನ್ನು ಹೇಳುತ್ತದೆ. ಜಾನಪದದ ಮುಖ್ಯ ಉದ್ದೇಶವೂ ಅಖಂಡತೆಯ ಮೂಲಕ ಜಗತ್ತನ್ನು ನೋಡುವುದಾಗಿದೆ.

ಯಾವುದನ್ನು ನಾವು ಪ್ರಥಮ ಜಗತ್ತು ಎಂದು ಕರೆಯುತ್ತೇವೆಯೋ ಅವು ಜಗತ್ತಿನ ದೇಶಗಳಾದ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಮುಂತಾದವು ಜನಪದವೆಂಬ ಪರಂಪರಾಗತ ವಿಷಯದೊಳಗೆ ಅನೇಕ ಶತಮಾನಗಳಿಂದಲೂ ಉಳಿದು ಬಂದಿರುವ ರೆಸಿಸ್ಟೆಂಟ್ ಮಾದರಿಯ ಉತ್ಪತ್ತಿಗಳ ಪುನರ್ ಸೃಷ್ಟಿ, ಪುನರ್ಮಾದರೀಕರಣ, ಪುನರ್ಸಂಯೋಜನೆಗೆ ತೊಡಗಿವೆ. ಇರುವುದನ್ನು ಹಂಚಿಕೊಳ್ಳಲು ಮಾತ್ರ ಪೈಪೋಟಿ ಮಾಡುತ್ತಿರುವ ನಾವು ಈ ಪರಂಪರೆಯೊಳಗೆ ಇರುವ ಜ್ಞಾನ-ವಿಜ್ಞಾನ ಮಾದರಿಗಳ ಪುನರ್ ಬಳಕೆಗೆ ಸಿದ್ಧವಾಗಬೇಕಾಗಿದೆ. ಜನರನ್ನು ಹೊರಗಿನ ವಸ್ತು-ಸಾಮಗ್ರಿಗಳನ್ನು ತಂದು ಸಾಕಲು ಸಾಧ್ಯವಾಗುವುದಿಲ್ಲ. ಜನರೇ

ಸಮಕಾಲೀನ ಅವಶ್ಯಕತೆಗಳನ್ನು ಲಭ್ಯವಿರುವ ದೇಶೀಯ ಸಂಪನ್ಮೂಲಗಳಿಂದ ಅಭಿವೃದ್ಧಿಪಡಿಸಿಕೊಳ್ಳಬೇಕು. ಆ ದೇಶೀಯ ಸಂಪನ್ಮೂಲವೆಂಬುದೇ ಜಾನಪದ ಜ್ಞಾನ.

ಈ ಹೊತ್ತು ಜಾನಪದ ಜ್ಞಾನ-ವಿಜ್ಞಾನ ಪ್ರಶಸ್ತಿಯನ್ನು ನೀಡುವ ಮೂಲಕ ನಮ್ಮ ನಾಡಿನ ದೇಶೀಯ ಮೂಲ ಜ್ಞಾನಿಗಳನ್ನು ಗೌರವಿಸುತ್ತಿದ್ದೇವೆ. ಅವರನ್ನು ಅವರ ಜ್ಞಾನವನ್ನು ಬಳಸಿಕೊಂಡು ಅಭಿವೃದ್ಧಿಪಡಿಸಿಕೊಂಡು, ಉದ್ಯಮಶೀಲರಾಗಲು ಕರ್ನಾಟಕದ ಜನತೆಗೆ ಕರೆ ನೀಡುತ್ತಿದ್ದೇವೆ.

ಇದು ನಮ್ಮ ಸಂಪ್ರತಿ ಸಮಾಚಾರ, ಎರಡನೆಯದು. ಮರೆತು ಹೋಗುವುದಕ್ಕಲ್ಲ ; ಮನನ ಮಾಡುವುದಕ್ಕೆ ಮುಂದಿನ ಜಾನಪದ ದಾರಿಯನ್ನು ಹುಡುಕಿಕೊಳ್ಳುವುದಕ್ಕೆ, ನಾವು ಜಾನಪದರು ಎಲ್ಲೋ ಒಂದು ಕಡೆ ಬಂದು ನಿಂತಂತೆ ಅನಿಸುತ್ತಿಲ್ಲವೆ ನಿಮಗೆ, ಕಾರಣವೇನು?

ಜಾನಪದ ಮೆರವಣಿಗೆಗಳಲ್ಲಿ ಮಾಯವಾಗುತ್ತಿದೆಯೇ ಅಥವ ಜನ ಜಾನಪದವೆಂದರೆ ಇಷ್ಟೇ ಎಂದುಕೊಂಡುಬಿಟ್ಟರಾ? ನಾವು, ಜಾನಪದ ವಿದ್ವಾಂಸರು ಸೆಮಿನಾರಿನಲ್ಲಿ ಸಂವಾದದಲ್ಲಿ ಮಾತು ಕೊಚ್ಚುವುದೇ ಜಾನಪದವೆಂದುಕೊಂಡು ಕೂತು ಬಿಟ್ಟೆವಾ... ಜಾನಪದದಲ್ಲಿ ಎಷ್ಟೊಂದು ಅಬ್ಬರ, ಲವಲವಿಕೆ ಇತ್ತು ಜಾನಪದದಲ್ಲಿ ಕೆಲಸ ಮಾಡುವುದೆಂದರೆ ಬೀಗುತ್ತಿದ್ದೆವಲ್ಲ ! ಒಂದು ಸ್ಪೆಷಲ್ ಕೆಟಗರಿ ಆಫ್ ಜನ ಎಂದುಕೊಳ್ಳುತ್ತಿದ್ದೆವಲ್ಲ... ಈಗ ಕಾಮಾಲೆ ಕಾಯಿಲೆಗೆ ಬಿದ್ದವರಂತೆ ಹಾಗೆ ಅನಿಸದಿದ್ದರೆ ಸಂತೋಷ.

ನಮ್ಮ ಜಾನಪದಕ್ಕೆ ಜೀವ ತುಂಬಿದ ರಾಷ್ಟ್ರೀಯವಾದಿಗಳಿಗೆ, ಭಾಷಾವಾದಿಗಳಿಗೆ, ಸಂಸ್ಕೃತಿ ಚಿಂತಕರಿಗೆ, ಹೆಚ್ಚಾಗಿ ಸಾಹಿತಿ ಸಹೃದಯರಿಗೆ ನಮ್ಮ ನಮನ ಹೇಳಬೇಕು. ಜಾನಪದವನ್ನು ನಮ್ಮ ಸಾಹಿತಿ ಚಿಂತಕರು ಕಂಕುಳಿಗೆ ಕೂರಿಸಿಕೊಳ್ಳದಿದ್ದರೆ ಅದು ಎಲ್ಲಿರುತ್ತಿತ್ತೋ... ಈಗಲೂ ಬಹುಜನ ಅವರೇ ನಮಗೆ ಹಾಲು ಕುಡಿಸಿ ಪೋಷಿಸುತ್ತಿದ್ದಾರೆ. ನಾವು ಮಾತ್ರ ಕಂಕುಳಿಂದ ಕೆಳಗಿಳಿಯುತ್ತಿಲ್ಲ.

ಜಾನಪದ 'ಸಂಗ್ರಹ ಜ್ಞಾನ' ಎಂಬ ತಿಳುವಳಿಕೆಯಿಂದ ಬಹುತೇಕ ಜಾನಪದ ಚಿಂತಕರು ಆಚೆಗೆ ಬರಲೇ ಇಲ್ಲ. ಪಾಶ್ಚಾತ್ಯರು ರೆಫರೆನ್ಸ್ಸಾಗಿ ನಮ್ಮ ಜಾನಪದವನ್ನು

ಸಂಗ್ರಹಿಸಿದರು. ನಾವು ನಮ್ಮ ಸಮಾಧಿಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಜಾನಪದ ಸಂಗ್ರಹ ಮಾಡಿದೆವು. ಆ ಸಮಾಧಿ ಧ್ವನಿಯಿಂದ ನಮ್ಮ ಆದರ್ಶವನ್ನು ಜೀವನ ಸಂದೇಶವನ್ನೂ ಕಂಡುಕೊಳ್ಳಲು ಬಯಸಿದೆವು. ಭಾರತದ ಜೀವನ ವಿಧಾನವೇ ಒಂದು ಥರ ಸಮಾಧಿ ಜೀವನ. ಈಗಲೂ ಅದರದೇ ತಕರಾರು, ಅಲ್ಲವೆ ?

'ಜಾತಿ ಧರ್ಮ' ದವರು ಜಾತಿ ಸಂಹಿತೆ ಬದುಕೆಂದು ತಿಳಿದರು. ಇವರ ಹೊರಗೆ ಇದ್ದ ಜನ ಜಾನಪದವನ್ನು ಜೀವನವಾಗಿ ಬದುಕಿದರು. ಪಾಶ್ಚಾತ್ಯರು ಜಾನಪದ ಒಂದು ಕಚ್ಚಾ ಸಾಮಗ್ರಿ. ಅದು ಈ ಹೊತ್ತು ಸಿದ್ಧ ವಸ್ತು ಅಲ್ಲ, ಅದರಿಂದ ನಿಮ್ಮ ಬದುಕು ಬರದು ಎಂದರು. ನಾವು ಅದನ್ನೇ ಒಪ್ಪಿಕೊಂಡೆವು ಮತ್ತು ಅಪ್ಪಿಕೊಂಡೆವು. ಇದು ಮಾರ್ವಾಡಿ ಭಾಷೆ, ನಿಮ್ಮ ಹಳೆಯ ವಸ್ತುವನ್ನು ಮಾರಿ ನಮ್ಮಲ್ಲಿರುವ ಹೊಸ ವಸ್ತುಗಳನ್ನು ಕೊಳ್ಳಿರಿ ಎಂಬಂತೆ. ಆದ್ದರಿಂದಲೇ ಹೊರದೇಶಗಳಿಗೆ ನಮ್ಮ ನೈಸರ್ಗಿಕ ಕಚ್ಚಾ ಸಾಮಗ್ರಿಯನ್ನು ರಫ್ತು ಮಾಡುವಂತೆ ನಮ್ಮ ಜಾನಪದವನ್ನು ರಫ್ತು ಮಾಡುತ್ತಿದ್ದೇವೆ. ರಫ್ತು ಮಾಡುವ ಅಭಿವೃದ್ಧಿ ಸಿದ್ಧಾಂತ ಓಬೀರಾಯನ ಕಾಲದ್ದು. ನಮ್ಮದೇ ವಸ್ತು ನಮ್ಮದೆ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಅನ್ಯ ದೇಶಗಳ ದೊರೆಯುತ್ತದೆ. ಈಗಿನ ಮಾರುಕಟ್ಟೆ ಲಿ ದಾರಾಳ ತತ್ವವೇ ಇದಕ್ಕೆ ಕಾರಣ. ನಮಗೆ ಕೊರತೆ ಬಿದ್ದರೂ ನಮಗೆ ಬೇಕಾದ ವಸ್ತುವನ್ನು ಕಡಿಮೆ ಬೆಲೆಗೆ ಹೊರದೇಶಕ್ಕೆ ರಫ್ತು ಮಾಡಬೇಕು. ಈ ಮೂಲಕ ಹೆಚ್ಚಿನ ರಫ್ತು ಇರುವ ದೇಶ ಎನಿಸಿಕೊಳ್ಳಬೇಕು. ನಮ್ಮ ಜಾನಪದವೂ ಇದೇ ತತ್ವಕ್ಕೆ ಬದ್ಧವಾಗಿದೆ. ಆದ್ದರಿಂದಲೇ ನಾವು ಜಾನಪದ ವಿಧ್ವಂಸಕರು ಫಾರಿನರ್‌ಗಾಗಿ, ಫಾರಿನ್ ಮೆಚ್ಚಿಸಲು (ಓಸ್ಕರ) ಕೆಲಸ ಮಾಡುತ್ತೇವೆ. ಜಾನಪದ ನಿರ್ವಚನ ಮಾಡುವಾಗ ಜನರಿಂದ ಜನರಿಗಾಗಿ ಜನರಿಗೋಸ್ಕರ ಎಂದು ಬೊಗಳೆ ಬಿಡುತ್ತೇವೆ. ನಾವು ಹೇಳುವುದು ನಮಗೇ ಅರ್ಥವಾಗಿಲ್ಲ. ಜನ ಎಂದರೆ ಯಾರು? ವೆಚ್ಚಿಸಬೇಕಾದವರೊ ಅಥವಾ ಸ್ವಯಂ ಬದುಕಬೇಕಾದವರೋ ?

ಜಾನಪದ 'ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ' ಎಂಬ ತತ್ವದಲ್ಲಿ ಪಳಯುಳಿಕೆ ತತ್ವ ಇಲ್ಲ. ಜನ - ಜನಪದ ಅಭಿವೃದ್ಧಿ ಚಿಂತನೆ ಇದೆ. ಜನರಿಂದ ಪಡೆದ ಜಾನಪದವನ್ನು ಜನರಿಗೆ ತಲುಪಿಸುವ ಕೆಲಸ ಈಗ ಆಗಬೇಕಿದೆ. ಜಾನಪದವನ್ನು ಜನರಿಗೆ ತಲುಪಿಸುವುದು ಎಂದರೇನು? ಜನಪದರು ಹತ್ತನೆಯ ಶತಮಾನಕ್ಕೆ ಹುಟ್ಟಿಸಿಕೊಂಡ ಕೂಸನ್ನು ಇಪ್ಪತ್ತೊಂದನೆಯ ಶತಮಾನಕ್ಕೆ ತಲುಪಿಸುವುದಲ್ಲ. ಹತ್ತನೆಯ

ಶತಮಾನದ ಆ 'ಹುಟ್ಟು' ಅರ್ಧ ಗೋರಿಯಲ್ಲಿದೆ, ಮತ್ತರ್ಧ ಈ ಹೊತ್ತಿನ ನಮ್ಮ ನಡವಳಿಕೆಯಲ್ಲಿದೆ. ಆ ಹತ್ತನೆಯ ಶತಮಾನದ ಗೋರಿಯ ವಸ್ತು ಈವತ್ತೂ ಇದೆ ಎಂದರೆ ಅದನ್ನು ಆ ಮಣ್ಣಿನೊಳಗೇ ಉಳಿಸಬೇಕು ಅಥವಾ ಆ ಮಣ್ಣಿನಿಂದ ಈವತ್ತಿನ ಸತ್ವವಾಗಿ ಮೊಳಕೆಯೊಡೆಸಬೇಕು. ಜೀವಂತ ಇನ್ನರ್ಧಕ್ಕೆ ಈ ಶತಮಾನದ ಆಶಯವನ್ನು ಧಾರೆ ಎರೆದು ಸಮಕಾಲೀನ ಹುಟ್ಟನ್ನು ನಿರ್ಮಿಸಬೇಕು. ಇದು ಜನರಿಂದ ಜನರಿಗೆ ತಲುಪಿಸುವ ಪ್ರಕ್ರಿಯೆ. ಆದ್ದರಿಂದ ಜಾನಪದ ಚಿಂತಕ ಸದಾ ಜಾನಪದ ಪ್ರಕ್ರಿಯೆ (Folklore Process) ಯಲ್ಲಿ ಇರಬೇಕು, ಜಾನಪದ ಪಠ್ಯ (Folklore text) ದಲ್ಲಿ ಅಲ್ಲ. ಇದು ಜಾನಪದದ ನೆಲೆ ಮತ್ತು ನಿಲುವು. ಆದ್ದರಿಂದಲೇ ನಾನು ಪ್ರಕ್ರಿಯಾ ಜಾನಪದ ಚಿಂತಕ (Process Folklorist) ಎಂದು ಗುರುತಿಸಿಕೊಳ್ಳುತ್ತೇನೆ. ಹಾಗೆ ಗುರುತಿಸಿಕೊಂಡವನು ಜಾನಪದದ ಎಲ್ಲ ಕಾಲದಲ್ಲೂ ಸ್ಥಳದಲ್ಲೂ ಸೃಜನಶೀಲನಾಗಿರುತ್ತಾನೆ. ಹೀಗಿದ್ದಲ್ಲಿ ಒಬ್ಬ ಜಾನಪದ ವಿದ್ವಾಂಸ ದಲಿತ ಚಳುವಳಿ, ಪರಿಸರ ಚಳುವಳಿ, ರೈತ ಚಳುವಳಿ, ಸಾಕ್ಷರತಾ ಚಳುವಳಿ ಮತ್ತು ಎಲ್ಲ ಬಗೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕಸಾಯಿಖಾನೆಗೆ ಹೊಡೆಯುವ ಮುದಿ ಎಮ್ಮೆಯಾಗಬೇಕಾಗುತ್ತದೆ. ಪಾಶ್ಚಾತ್ಯ ಅನುಕರಣೆಗೆ ಗಂಟು ಬಿದ್ದು ನಮ್ಮ ಕೆಲವು ಜಾನಪದ ವಿದ್ವಾಂಸರು ಈ ಬಗೆಯ ಕಸಾಯಿಖಾನೆ ಸರಕುಗಳಾಗಿ ಹೋಗಿದ್ದಾರೆ. ನಮ್ಮ ಜಾನಪದದ ಸಂಗ್ರಹ, ಸಂಘಟನೆ ಮತ್ತು ಅಭಿವೃದ್ಧಿಗೆ ಮಾರಕವಾಗಿದ್ದಾರೆ. ಹೀಗೆ ನಾನು ಹೇಳುತ್ತಿರುವುದು ಟೀಕೆಗಾಗಿ ಅಲ್ಲ, ಅಭಿವೃದ್ಧಿಯ ಚಿಂತನೆಯ ಕುದಿತದಿಂದ. ಒಂದು ಕಾಲದಲ್ಲಿ ಕಣ್ಣು ಮುಚ್ಚಿಕೊಂಡು ಎತ್ತ ಕೈಬೀಸಿದರೂ ಒಬ್ಬ ಜಾನಪದ ಸಂಗ್ರಾಹಕ, ಸಂಘಟಕ ಇಲ್ಲವೆ ವಿದ್ವಾಂಸ ಸಿಗುತ್ತಿದ್ದ. ಈಗ ಅಂಥ ಪರಿಸ್ಥಿತಿ ಇಲ್ಲವಲ್ಲ ಎಂಬ ಆತಂಕ ಉಂಟಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡು ಹೊಸ ಅರಿವಿನ ಬರದಲ್ಲಿರುವ 'ಕಂಬಾರರು' ಇನ್ನು ಕೆಲವೇ ದಿನಗಳಲ್ಲಿ ಜಾನಪದ ವಿದ್ವಾಂಸರ ಸಂಖ್ಯೆ ಮುಗಿದು ಹೋಗುತ್ತದೆ ಎಂದು ಕೂಗೆಬ್ಬಿಸುತ್ತಿದ್ದಾರೆ. ಜೀವನವನ್ನು ಮತ್ತು ಅದರ ಉತ್ಪತ್ತಿ ಜಾನಪದವನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಗ್ರಹಿಸದ ಯಾರಾದರೂ ಇಂಥ ಮಾತುಗಳನ್ನು ಹೇಳಬಹುದು. ಇರಲಿ, ಬಿಡಿ.

ಈಗ ನಮ್ಮ ಅಕಾಡೆಮಿಯ ನಿಲುವೇನು? ಅದನ್ನೇ ನಾವು ಈ ಸಮಾಚಾರ ಸಂಚಿಕೆಯ ವಿವಿಧ ಘಟ್ಟಗಳಲ್ಲಿ ಹೇಳುತ್ತಾ ಹೋಗಿದ್ದೇವೆ. 'ಜಾನಪದ ನಮಗೆ

ಪಳಯುಳಿಕೆ, ಜೀವಂತ ಪಳಯುಳಿಕೆ ಮತ್ತು ಜೀವಂತ ಬದುಕು' ಹಾಗಲ್ಲದಿದ್ದರೆ ನಾವು ಸತ್ತು ಹೋಗಿದ್ದೇವೆ ಎಂದು ಅರ್ಥವಲ್ಲವೆ. ಜಾನಪದ ಪಳಯುಳಿಕೆ ಎನ್ನುವವರು ಸ್ವಯಂ ಸಾವನ್ನು ಘೋಷಿಸಿಕೊಂಡಂತೆ, ಜೀವಂತ ಪಳಯುಳಿಕೆ ಎನ್ನುವವರು ಅರ್ಧ ಸತ್ತು ಅರ್ಧ ಬದುಕಿದಂತೆ. ಜಾನಪದವನ್ನು ಹರಿಯುವ ಕಾಲಗಳಲ್ಲಿ ಗ್ರಹಿಸುವವನು ಮಾತ್ರ ಜಾನಪದ ಜೀವಂತ ಪ್ರಕ್ರಿಯೆ ಎಂದು ತಿಳಿಯುತ್ತಾನೆ ಹಾಗೂ ಜೀವನ ಅಭಿವೃದ್ಧಿಯಲ್ಲಿ ಜಾನಪದ ಹುಟ್ಟುತ್ತಿರುವುದನ್ನು ಕಾಣುತ್ತಾನೆ.

ಈ ದೇಶದ ಪ್ರಧಾನಿಯಾದ ಮಾತ್ರಕ್ಕೆ ಹೆಚ್.ಡಿ. ದೇವೇಗೌಡ ಕೆಂಟಕಿ ಚಿಕನ್ ತಿಂದು ಬದುಕಲಿಲ್ಲ. ತನ್ನ ಆಹಾರವಾದ ಮುದ್ದೆಯನ್ನು ಹಳ್ಳಿಯ ಗುಡಿಸಲಿನಿಂದ ದೆಹಲಿಯ ಅಶೋಕ ಹೋಟೆಲಿಗೆ ವಿಸ್ತರಿಸಿದರು. ಅತ್ಯಂತ ಆಧುನಿಕ ಮತ್ತು ಮೇಧಾವಿಯಾದ ಈಗಿನ ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅಮೆರಿಕಾದ ಆಹಾರವನ್ನು ತಿನ್ನುತ್ತಿಲ್ಲ, ಅವರೊಳಗೆ ಒಬ್ಬ ಮಂಡ್ಯನ್ ಇದ್ದೇ ಇದ್ದಾನೆ, ಈಗ ನೀವು ಊಟ ಮಾಡುತ್ತಿರುವ ಆಹಾರ ಯಾವ ಶತಮಾನದ್ದು? ಅದನ್ನು ಹಳೆಯದು ಎಂದು ತೀರ್ಮಾನ ಕೊಟ್ಟುಬಿಡುತ್ತೀರಾ? ಹಾಗಿದ್ದಲ್ಲಿ ಈಗ ಬದುಕುತ್ತಿರುವ ನೀವು ಯಾವ ಕಾಲದವರು?

ಏರುಮುಖ ಅಭಿವೃದ್ಧಿ ಸಿದ್ಧಾಂತಗಳ ಘೀಳಿನಲ್ಲಿ ನರಳುವವರಿಗೆ ಅಕ್ಕ ಪಕ್ಕದಲ್ಲಿ ಜನ ಇದ್ದಾರೆ, ಜನ ಸಂಸ್ಕೃತಿ ಇದೆ ಎಂದು ಗೊತ್ತಾಗುವುದಿಲ್ಲ. ಸಮತಲದಲ್ಲಿ ಇರುವವರೆಲ್ಲ ಹಿಂದೆ ಬಿದ್ದವರಂತೆ ಕಾಣುತ್ತಾರೆ. ಆಕಾಶದಲ್ಲಿ ಹಾರಾಡುತ್ತ ನೆಲವನ್ನು ನೋಡಿದಂತೆ. ಜಾನಪದವನ್ನು ಸಮತಲ ಚಿಂತನೆಯಿಂದ ನೋಡಬೇಕು. ಆಗ ನಿಮಗೆ ಅಮೆರಿಕ, ಜಪಾನ್, ಫ್ರಾನ್ಸ್, ಟಾಟಾ, ಬಿರ್ಲಾ, ಅಂಬಾನಿ, ನಾರಾಯಣಮೂರ್ತಿ ಮಾತ್ರ ಕಾಣಿಸುವುದಿಲ್ಲ, ಇನ್ನೂ ಅಲೆಮಾರಿಗಳಾಗಿ ಒಂದು ಜೀವನ ಪದ್ಧತಿ ಉಳಿಸಿಕೊಂಡಿರುವವರು, ಬಹು ಸಂಖ್ಯಾತರಿಂದ ಅಂಚಿಗೆ ತಳ್ಳಲ್ಪಟ್ಟವರು, ಅಂಚಿನಿಂದ ಸೂರ್ಯನ ಬೆಳಕಿನ ಕಡೆಗೆ ಬೆಳೆಯಲು ಉಸಿರು ತುಂಬಿಕೊಳ್ಳುತ್ತಿರುವವರೂ.. ಹೀಗೆ ಜನ ಅನ್ನುವವರು ಮತ್ತ ಜೀವನ ಅನ್ನುವುದು ಕಾಣುತ್ತದೆ.

ಇದನ್ನೇ ಸಂಸ್ಕೃತಿಯ ಒಳಗಿನಿಂದ ಜೀವನವನ್ನು ಕಟ್ಟಿಕೊಳ್ಳುವುದು ಅನ್ನುತ್ತಾರೆ. ಸಂಸ್ಕೃತಿ ಎಂಬುದು ನಂಬಿಕೆ ಮತ್ತು ನಡವಳಿಕೆ ಮಾತ್ರ ಅಲ್ಲ. ಅದು ಜ್ಞಾನವೂ ಹೌದು; ವಿಜ್ಞಾನದ ನೆಲೆಯೂ ಹೌದು. ನಮ್ಮ ಹಲವು ವರ್ಗ, ಪಂಥ, ಪಂಗಡಗಳಿಗೆ

ನಿಲುಕುವ ವಿಜ್ಞಾನ ಮತ್ತು ತಂತ್ರಜ್ಞಾನ ದಕ್ಕುವುದು ಈ ಜನಪದ ಸಂಸ್ಕೃತಿಯೊಳಗಿಂದ ಮತ್ತೆ ಮತ್ತೆ ಹುಟ್ಟಿ ಬರುವುದರಿಂದ ನಿಮಗೆ ಕಷ್ಟ ಬಂದಾಗ ಶ್ರೀ ಕೃಷ್ಣನನ್ನು 'ಸಂಭವಾಮಿ ಯುಗೇ ಯುಗೇ' ಅನ್ನಬೇಡಿ. ಆ ಸ್ಥಾನದಲ್ಲಿ ನೀವು ಹುಟ್ಟಿ ಮತ್ತು ನಿಮ್ಮ ಸಂಸ್ಕೃತಿಯನ್ನು ಹುಟ್ಟಿಸಿ. ಅಲ್ಲಿ ಜಾನಪದ ಸದಾ ಹಸಿರಾಗಿರುತ್ತದೆ. ನಮ್ಮ ಈ ಹೊತ್ತಿನ ಅಕಾಡೆಮಿಯ ಸಮಾಚಾರ ಇದನ್ನೇ ಹೇಳುತ್ತದೆ.

ಇಲ್ಲಿ ವಿಶೇಷ ವ್ಯಕ್ತಿತ್ವಗಳು ನಿಮಗೆ ಎದುರಾಗುತ್ತವೆ. ಅವು ಆಧುನಿಕರನ್ನು ಎದುರಿಸಲಾರವು, ಪ್ರೀತಿಸುತ್ತವೆ. ಅಬ್ಬರ ಮಾಡಲಾರವು, ಮುದುರಿಕೊಳ್ಳುತ್ತವೆ. ಹೀಗೇಕೆ ಎಂದು ಕೇಳುವಿರಿ. ನಾಗರೀಕರ ಗದ್ದಲ ಅವರ ಶಬ್ದಗಳನ್ನು ಮರೆಸುತ್ತಿವೆ, ಆರ್ಭಟ ಅವರನ್ನು ತಣ್ಣಗಾಗಿಸುತ್ತಿವೆ. ತಾವು ಹಳ್ಳಿಯವರು, ತಮಗೇನು ತಿಳಿಯದು ಎಂಬ ಹೊಸ ಲೋಕರೂಢಿಯನ್ನು ಅವರು ರೂಢಿಸಿಕೊಂಡು ಬಿಟ್ಟಿದ್ದಾರೆ. ಆ ಮೂಲಕ ಬೆಳೆಯುತ್ತಿರುವ ಅನುಕೂಲಗಳ ಕಡೆಗೆ ಬೆನ್ನು ಮಾಡಿದ್ದಾರೆ.

ನಾವು ವಿದ್ಯಾವಂತರು, ಅದರ ಫಲಾನುಭವಿಗಳಾದ ನಾಗರೀಕರು ಅವರನ್ನು ಹಾಗೆ ಮುದ್ದೆ ಮಾಡಿದ್ದೇವೆ, ಸಾಂಸ್ಕೃತಿಕ ನಿದ್ದೆಗೆ ಬೀಳಿಸಿದ್ದೇವೆ.

ಹಳ್ಳಿಯೊಂದು ಎಷ್ಟು ಶತಮಾನ ಬದುಕಿದೆ! ನಗರ ಈಗ ಮೊಮ್ಮಗ. ಆದರೆ ಅಜ್ಜನಿಗೆ ಮೊಮ್ಮಗ ಕೆಮ್ಮು ಕಲಿಸುವ ಪರಿಸ್ಥಿತಿ ಉಂಟಾಗಿದೆ. ಇದು ನಮ್ಮದೇ ಅವಿವೇಕ, ಜ್ಞಾನ ದುತ್ತನೆ ಸಿಗುವ ಮಾರುಕಟ್ಟೆ ಮಾಲು ಎಂದು ತಿಳಿದುಕೊಂಡಿರುವುದೇ, ಹಿಂದಿನ ಜ್ಞಾನದಿಂದ ಕಡಿದುಕೊಂಡ ಕಾಚಗಳಾಗಿರುವುದೇ ಇದಕ್ಕೆ ಕಾರಣ.

ನೆನಪಿರಲಿ : ಇಲ್ಲಿರುವವರೆಲ್ಲ ನಮ್ಮ ಗುರುಗಳು, ಮಹಾನ್ ಗುರುಗಳು. ಶತಮಾನಗಳನ್ನು ಅರಿತ ಗುರುಗಳು, ಅನೇಕ ಶತಮಾನಗಳನ್ನು ತಂದು ನಮಗೆ ಒಪ್ಪಿಸಿ ಬರಿಗೈ ಆಗಿರುವವರು ಅಥವ ಅವರನ್ನು ನಾವು ಬರಿಗೈ ಮಾಡಿದ್ದೇವೆ.

ಈ ನೆಲದಲ್ಲಿ ಬೇರು ಬಿಟ್ಟು ಬದುಕಿರುವವನು ಇವರನ್ನು ಹಿಂದಿನವರು ಎಂದು ಎಂದೂ ಭಾವಿಸಲಾರ. ಒಂದು ಅಭಿವೃದ್ಧಿ ದೇಶದಲ್ಲಿ ಮೂರು ಕಾಲಗಳು ಒಟ್ಟಿಗೆ

ಬದುಕುತ್ತಿರುತ್ತವೆ. ಹಿಂದುಳಿದ ದೇಶದಲ್ಲಿ ಮಾತ್ರ ಭೂತ ಮತ್ತು ವರ್ತಮಾನಗಳು ಒಡಕೊಂಡಿರುತ್ತವೆ, ಭವಿಷ್ಯ ಮಲಗಿರುತ್ತದೆ.

ನಮ್ಮ ಅಕಡೆಮಿಯ ಚಿಂತನೆ ನಿರಂತರ ಪರಂಪರೆಯ ಜೊತೆಗೆ ನಡೆದಿದೆ. ಜಾನಪದ ಕೇವಲ ಕಲೆ ಅಲ್ಲ, ಅದು ನಮ್ಮ ದೊಡ್ಡ ಸಮಾಜದ ಎಲ್ಲ ಬಗೆಯ ಜ್ಞಾನ ಮತ್ತು ವಿಜ್ಞಾನ. ಆದ್ದರಿಂದಲೇ ಈ ಎಲ್ಲ ಸಾಧಕರನ್ನು ನಾವು ಜಾನಪದ ತಜ್ಞರು ಎಂದು ಕರೆದಿದ್ದೇವೆ. ಹಾಗೆಯೇ ನಮ್ಮ ಅಕಡೆಮಿಯ ಪ್ರಶಸ್ತಿಗಳನ್ನು ಜಾನಪದ ಜ್ಞಾನ-ವಿಜ್ಞಾನ ಪ್ರಶಸ್ತಿಗಳು ಎಂದು ಕರೆದಿದ್ದೇವೆ. ಇವರ ಸಂಖ್ಯೆ ಅಪಾರ.

ಆದರೆ ನಮಗೆ ಇರುವ ಸೌಲಭ್ಯಗಳು ಬೇರೆ ಅಕಡೆಮಿಗಳಿಗೆ ಹೋಲಿಸಿದರೆ ತೀರಾ ಕಡಿಮೆ. ಯಾಕೆಂದರೆ, ನಮ್ಮದು ಕೂಡು ಕುಟುಂಬ, ಆಧುನಿಕ ಕುಟುಂಬದಂತೆ ಸಣ್ಣ ಕುಟುಂಬ ಅಲ್ಲ. ಸಾವಿರಾರು ಕಲಾವಿದರು, ಕುಶಲಕರ್ಮಿಗಳು, ಜನಪದ ಅಲ್ಲ, " ವೈದ್ಯರು, ಪಾಕತಜ್ಞರು ಈಗಾಗಲೇ ಎಪ್ಪತ್ತು ದಾಟಿದ್ದಾರೆ. ಅವರೆಲ್ಲ ಸಹಜವಾಗಿಯೆ ಪ್ರಶಸ್ತಿಗೆ ಕೋರಿಕೆ ಸಲ್ಲಿಸುತ್ತಾರೆ. ಅವರ ಬೇಡಿಕೆ ಪೂರೈಸಲಾರದ್ದಕ್ಕೆ ನಮ್ಮ ಕರುಳು ಕರಗುತ್ತವೆ, ಅಪರಾಧ ಭಾವನೆ ಹುಟ್ಟುತ್ತದೆ. ಆದರೆ ಏನು ಮಾಡುವುದು? ವಿಚಾರವಂತರ ಪೋಸು ಮಾಡಿ ನೀವು ನಿಮಗೆ ಬೇಕಾದುದನ್ನು ನಿಮ್ಮ ನಡುವಿನ ಸಮಾಜದಲ್ಲಿ ಸೃಷ್ಟಿಸಿಕೊಳ್ಳಿ ಎಂದು ಬಿಡಬಹುದು. ಆದರೆ ಅಷ್ಟಕ್ಕೆ ನಮ್ಮ ಹಾಗೂ ನಮ್ಮ ಸಮಾಜದ ಜವಾಬ್ದಾರಿ ಮುಗಿದಂತೆ ಆಗುತ್ತದೆಯೆ ? ಈ ಜನಪದರೆಂಬ ನಮ್ಮ ಮಹಾಪಿತೃಗಳ ಋಣವನ್ನು ತೀರಿಸುವುದೆಂತು! ದೇವರೇ...!!! ನಮಗೊಂದು ಒಳ್ಳೆಯ ಮನಸ್ಸು ಕೊಡು.

ಮನುಷ್ಯನ ಮೈ ಚರ್ಮದ ಮೇಲೆ ಚಿತ್ರವಾಗಿ ಕಂಗೊಳಿಸುವ ಹಚ್ಚೆಯು ಗ್ರಾಮೀಣ ಭಾರತದ ಸೌಂದರ್ಯ ಮೂಲ ಜನಪದ ಚಿತ್ರಕಲೆ. ಜಗತ್ತಿನ ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾದ ಈಜಿಪ್ಷಿಯನ್ ಜನಸಮುದಾಯದಲ್ಲಿ ಕ್ರಿ. ಪೂ. ೨೦೦೦ ಕ್ಕೂ ಹಿಂದೆಯೇ ಹಚ್ಚೆ ಹಾಕಿಸಿಕೊಳ್ಳುವುದು ರೂಢಿಯಲ್ಲಿತ್ತು ಎಂದರೆ ಅದರ ಪ್ರಾಚೀನತೆಯ ಅರಿವಾಗುತ್ತದೆ. ಸೂರ್ಯಾರಾಧಕ ಸಂಸ್ಕೃತಿಯ ಕಲಾ ಮಾಧ್ಯಮವಾಗಿದ್ದ ಹಚ್ಚೆಯು ಕ್ರಮೇಣ ಜಗತ್ತಿನಲ್ಲೆಡೆ ವ್ಯಾಪಿಸಿತು.

ಭಾವನಾತ್ಮಕತೆ, ಧಾರ್ಮಿಕ ನಂಬಿಕೆಗಳ ಫಲವಾಗಿ ರೂಪುಗೊಂಡ ಹಚ್ಚೆ ಕಲೆಯು ದಿನಗಳೆದಂತೆ ಸೌಂದರ್ಯವರ್ಧನೆ, ಆರೋಗ್ಯಪಾಲನೆ, ಸ್ನೇಹದ ಸಂಕೇತವಾಗಿ, ಪ್ರೀತಿ ಕುರುಹಾಗಿ ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಂಡಿತು. ಹಿರಿಯರು - ಕಿರಿಯರಿಗೆ, ಗಂಡ ಹೆಂಡತಿಗೆ, ತಾಯಿ-ಮಗಳಿಗೆ, ಗೆಳೆಯ - ಗೆಳತಿಗೆ ಪ್ರೀತಿ ಹಾಗೂ ನೆನಪಿನ ಸಂಕೇತವಾಗಿ ಹಚ್ಚೆ ಹಾಕಿಸುತ್ತಿದ್ದರು.

ಹಚ್ಚೆಯಲ್ಲಿ ಅನೇಕ ವಿಧದ ಸುಂದರ ವಿನ್ಯಾಸಗಳಿವೆ. ಗೌರಿ ಗದ್ದಿಗೆ, ಸೀತೆ ಸೆರಗು, ಗೌರಿ ಮುಡಿ, ಸೀತೆ ತುರುಬು, ತೇರು, ವೃಂದಾವನ, ಆರೆದಿಂಗಳು, ಚಿಕ್ಕಸಾಲು, ಬಟ್ಟು, ನಕ್ಷತ್ರ ಇತ್ಯಾದಿ. ತಳ ಸಂಸ್ಕೃತಿಗೆ ಸೇರಿದ ಕೊರಮರು, ಬೆಸ್ತರು, ಬೇಡರು, ಕಿಳ್ಳೇಕ್ಯಾತರು, ಮೇದರು, ಜೋಗೇರು, ಒಡ್ಡರು, ಕುರುಬರು, ಗೊಂದಲಿಗರು, ಜಾತಿಗಾರರು ಮುಂತಾದವರು ಹಚ್ಚೆ ಹಾಕುವುದರಲ್ಲಿ ಪರಿಣಿತರು. ಅದರಲ್ಲೂ ಕೊರಮರ ಹೆಂಗಸರಂತೂ ಹಚ್ಚೆ ಹುಯ್ಯುವುದರಲ್ಲಿ ಮತ್ತು ಹಚ್ಚೆ ಸಂಬಂಧಿ ಹಾಡುಗಳನ್ನು ಹಾಡುವುದರಲ್ಲಿ ನಿಷ್ಣಾತರು.

ಪುರದ ಪುಣ್ಯ

ಹಚ್ಚೆ ಜಾತ್ಯಾತೀತವಾದ ಕಲೆ. ಬಹುತೇಕ ಎಲ್ಲಾ ಜನಾಂಗಗಳಲ್ಲೂ ಹಚ್ಚೆ ಹಾಕಿಸುತ್ತಾರೆ. ಸೂಜಿಯ ದಿಂಡು, ಕಪ್ಪಿನ ಕುಡಿಕೆ, ಚಿತ್ರ ಬರೆಯುವ ಕಡ್ಡಿ ಇವುಗಳ ಮೂಲಕ ಕೊರಮರು ನಾನಾ ವಿನ್ಯಾಸಗಳ ಹಚ್ಚೆಯನ್ನು ಬಿಡಿಸುತ್ತಾರೆ. ಹಚ್ಚೆ ಹಾಕಿಸಿದವರು, ಹಾಡು ಕಲಿಸಿದವರು ಮತ್ತು ಹಸುಮಕ್ಕಳಿಗೆ ಹುಯ್ಯುವವರು ಸತ್ತಿಗೆಯ ನೆರಳಲ್ಲಿ ಬರುತ್ತಾರೆಂಬ ನಂಬಿಕೆ ಜನಪದರಲ್ಲಿದೆ.

ಸಾಮಾನ್ಯವಾಗಿ ಹಚ್ಚೆಗಳನ್ನು ದೇಹದ ಹೊರಭಾಗಗಳಿಗೆ ಹಾಕುತ್ತಾರೆ. ಮುಖ, ಕೊರಳು, ಕೈ, ಎದೆ, ಬೆನ್ನು, ಕಾಲು, ಗದ್ದ, ಭುಜ, ರಟ್ಟೆ ಮುಂತಾದ ಕಡೆಗಳಲ್ಲಿ ಹಚ್ಚೆಗಳನ್ನು ಹುಯ್ದಿಕೊಳ್ಳುವುದು ರೂಢಿ. ಸೌಂದರ್ಯವರ್ಧನೆಯಂತೆ, ಆರೋಗ್ಯ ಪರಿಪಾಲನೆಯಲ್ಲಿಯೂ ಹಚ್ಚೆಯ ಪಾತ್ರ ವಿಶಿಷ್ಟವಾದುದು. ವೈದ್ಯಕೀಯ ಚಿಕಿತ್ಸೆಯ ದೃಷ್ಟಿಯಿಂದಲೂ ಹಚ್ಚೆ ಹಾಕಿಸಿಕೊಳ್ಳುವುದು ಕಂಡುಬರುತ್ತದೆ. ಮಕ್ಕಳಾಗದ ಹೆಂಗಸರಿಗೆ, ಪದೇ ಪದೇ ಗರ್ಭಪಾತಕ್ಕೆ ಒಳಗಾಗುವ ಹೆಂಗಸರಿಗೆ, ಸಂಧಿವಾತದ ರೋಗಗಳಿಗೆ, ಸರ್ಪಹುಣ್ಣಿಗೆ, ನರರೋಗಕ್ಕೆ, ಅಜೀರ್ಣಕ್ಕೆ, ಅರತಲೆಶೂಲೆಗೆ, ತೊನ್ನುರೋಗ ಇತ್ಯಾದಿಗಳ ನಿವಾರಣೆಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಚ್ಚೆ ಹುಯ್ದಿಕೊಳ್ಳುತ್ತಾರೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುವುದು ಫ್ಯಾಷನ್ನಾಗಿ ಪರಿಣಮಿಸಿದೆ. ಆದರೆ ಭಾರತದಲ್ಲಿ ಈ ಕಲೆ ನಶಿಸುತ್ತಾ ಬಂದಿದೆ. ಕರ್ನಾಟಕದ ಸಂದರ್ಭಕ್ಕೆ ಬಂದರಂತೂ ಉದರ ನಿಮಿತ್ತವಾಗಿ ಈ ಕಲೆಯನ್ನು ಅಷ್ಟಿಷ್ಟು ಉಳಿಸಿಕೊಂಡು ಬಂದಿರುವವರಿದ್ದಾರೆ. ಇವರೆಲ್ಲರೂ ತಳ ಸಂಸ್ಕೃತಿಗೆ ಸೇರಿದವರಾಗಿದ್ದು, ದಿನಗಳೆದಂತೆ ಇವರೊಂದಿಗೆ ಇವರ ಪಾರಂಪರಿಕ ಸೌಂದರ್ಯಮೂಲ ಚಿತ್ರಕಲೆಯು ಕಣ್ಮರೆಯಾಗುವುದರಲ್ಲಿ ಸಂದೇಹವಿಲ್ಲ.

ಆದಕಾರಣ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಈ ಸುಂದರ ಹಚ್ಚೆ ಕಲೆಯನ್ನು ಉಳಿಸಿ ಬೆಳೆಸುವ ಸಲುವಾಗಿ ಸ್ಥಳೀಯ ಜ್ಞಾನ ತಂತ್ರಜ್ಞಾನ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಯೋಜನೆಯೊಂದನ್ನು ರೂಪಿಸಿದ್ದು, ಅದರ ವಿವರಗಳು ಕೆಳಕಂಡಂತಿವೆ.

ಈ ಯೋಜನೆಯನ್ನು ಎರಡು ಹಂತಗಳಲ್ಲಿ ನಿರ್ವಹಿಸಲಾಗುವುದು. ಮೊದಲನೆಯ ಹಂತವು ಕಲೆಯನ್ನು ಕುರಿತಾದ ತರಬೇತಿ ಕಮ್ಮಟವಾದರೆ, ಎರಡನೆಯದು ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುವುದಾಗಿರುತ್ತದೆ.

**ಮೊದಲನೆಯ ಹಂತ :**

ಅ. ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಬಳಿ ಸ್ಥಾಪಿಸಿರುವ ಜಾನಪದ ಲೋಕದಲ್ಲಿ ೭ ದಿನಗಳ ಕಮ್ಮಟವೊಂದನ್ನು ಏರ್ಪಡಿಸಲಾಗುವುದು. ಹಚ್ಚೆ ಹೊಯ್ಯುವ ಸುಮಾರು ೫೦ ಮಂದಿ ತಳ ಸಂಸ್ಕೃತಿಗಳಿಗೆ ಸೇರಿದ ತರುಣಿಯರನ್ನು ಕರೆಸಿ ಅವರ ಕಲೆಯ ನೆಲೆ ಮತ್ತು ಹಿನ್ನೆಲೆಯನ್ನು ಪರಿಚಯ ಮಾಡಿಕೊಳ್ಳಲಾಗುವುದು. ಹಚ್ಚೆ ಕಲೆಯ ಸ್ವರೂಪ ಮತ್ತು ವೈವಿಧ್ಯತೆಯ ಬಗ್ಗೆ ಮೂಲ ಕಲಾವಿದರಿಂದ ಸಮಗ್ರ ಮಾಹಿತಿ ಪಡೆಯುವುದು.

ಆ. ನುರಿತ ಚಿತ್ರ ಕಲಾವಿದರುಗಳನ್ನು ಕಮ್ಮಟಕ್ಕೆ ಆಹ್ವಾನಿಸಿ, ಅವರುಗಳಿಂದ ಹೊಸ ಹಚ್ಚೆ ಚಿತ್ರಗಳನ್ನು ವಿನ್ಯಸಿಸಿ, ಸಮಕಾಲೀನ ಯುವ ಯುವತಿಯರ ಬೇಡಿಕೆಗೆ ಅನುಗುಣವಾಗಿ ಹಚ್ಚೆ ಬಿಡಿಸುವುದನ್ನು ಮೂಲ ಕಲಾವಿದರುಗಳಿಗೆ ಕಲಿಸಿಕೊಡಲಾಗುವುದು.

**ಎರಡನೆಯ ಹಂತ :**

ಅ. ಬೆಂಗಳೂರು, ಮೈಸೂರು, ಮಂಡ್ಯ, ತುಮಕೂರು, ಇವೇ ಮೊದಲಾದ ನಗರಗಳಲ್ಲಿರುವ ಶಾಲಾ ಕಾಲೇಜುಗಳಿಗೆ, ಸಂಘ ಸಂಸ್ಥೆಗಳಿಗೆ ಪತ್ರ ಬರೆದು ಕಮ್ಮಟದಲ್ಲಿ ತರಬೇತಾದ ಹಚ್ಚೆ ಕಲಾವಿದರ ಸೇವೆಯನ್ನು ಬಳಸಿಕೊಳ್ಳಲು ಕೋರಲಾಗುವುದು. ಹಚ್ಚೆ ಕಲಾವಿದರು ಪ್ರತೀ ಕಾಲೇಜು, ಸಂಘ ಸಂಸ್ಥೆಗಳು, ಸಾರ್ವಜನಿಕ ಇಲಾಖೆಗಳ ಬಳಿ ಹೋಗಿ ಆಸಕ್ತರಿಗೆ ಹಚ್ಚೆಯನ್ನು ಹಚ್ಚಿ ಸಂಭಾವನೆ ಪಡೆಯುವರು. ಪ್ರಾರಂಭಕ್ಕೆ ಒಂದು ವಾರ ಮಾತ್ರ ಬೆಂಗಳೂರಿನಲ್ಲಿ ಈ ಕಾರ್ಯ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು. ಅನಂತರದ ದಿನಗಳಲ್ಲಿ ಈ ಕಲೆ ಮತ್ತು ನಿರಂತರವಾಗಿ ನಡೆಯುವಂತೆ ಉದ್ಯೋಗ ಯೋಜನೆಯು ನೋಡಿಕೊಳ್ಳಲಾಗುವುದು.

ಆದಿ ದಿನೋತ್ಸವ ಎಂದರೇನು ?

ಆದಿಯಿಂದ ನಮ್ಮ ಪೂರ್ವಿಕರು ಹಾಗೂ ಕಾಲಾನಂತರಗಳಲ್ಲಿ ನಮ್ಮ ಹಿರೀಕರು ಶೋಧಿಸಿದ ಅಡುಗೆ-ಉಡುಗೆ, ವಸ್ತ್ರವಿನ್ಯಾಸ, ಅಲಂಕರಣ, ಚಿತ್ರಕಲೆ, ವಾಸ್ತುಕಲೆ, ಶಿಲ್ಪಕಲೆ, ಕರಕುಶಲಕಲೆ, ಗುಡಿಕೈಗಾರಿಕೆ, ವೈದ್ಯ, ಪಾನೀಯ, ಸಂಗೀತ, ಸಾಹಿತ್ಯ, ನೃತ್ಯ, ನಾಟಕ, ಆಟ, ಸಂಜ್ಞೆ-ಸಂಕೇತ, ಪ್ರಾರ್ಥನೆ,ಹರಕೆ, ಶಾಪ, ಮಾಂತ್ರಿಕನುಡಿ, ಕೃಷಿ, ಧರ್ಮ, ಆಚರಣೆ, ಪಾರಂಪರಿಕ ವಸ್ತುಜ್ಞಾನ, ಸಸ್ಯಜ್ಞಾನ, ಬೀಜಜ್ಞಾನ, ರಸಜ್ಞಾನ-ಇಂಥ ವಿವಿಧ ಬಗೆಯ ಜ್ಞಾನ ಶಾಖೆಗಳನ್ನು ತೆರೆದಿಡುವುದು, ಪ್ರಯೋಗಿಸುವುದು, ಹಾಗೂ ಅವುಗಳ ಸತ್ಯಾ-ಸತ್ಯತೆಯನ್ನು ಶೋಧಿಸಿ ಬಳಕೆಗೆ ತರುವುದು ಈ ಪ್ರದರ್ಶನ ಮತ್ತು ಆಚರಣೆಯ ಉದ್ದೇಶ. ಆ ಮೂಲಕ ಕರ್ನಾಟಕದ್ದು ಹಾಗೂ ಭಾರತದ್ದು ಎಂಬ ಪಾರಂಪರಿಕ ಶೋಧನೆ ಏನು ಎಂಬುದನ್ನು ಕಂಡುಕೊಳ್ಳುವುದು. ಈ ಹೊತ್ತಿಗೆ ಅವುಗಳ ಪ್ರಸ್ತುತತೆಯ ಬಗ್ಗೆ ತಿಳಿಯುವುದು. ಆಧುನಿಕ ಜ್ಞಾನ ನಮಗೆ ಏನೆಲ್ಲವನ್ನೂ ಕೊಟ್ಟಿರುವ ಹಾಗೆ ನಮ್ಮದೇ ಪರಂಪರೆ ಅನೇಕ ಕಾಲಗಳ ಅಳವಿನಲ್ಲಿ ತನ್ನದೆನ್ನುವುದನ್ನು ಸೃಷ್ಟಿಸಿತ್ತು ಮತ್ತು ಬಹುಕಾಲ ನಾವು ಅದನ್ನು ಅನುಭವಿಸಿದೆವು ಹಾಗೂ ಅನುಸರಿಸಿದೆವು ಎಂಬುದನ್ನು ಗಮನಕ್ಕೆ ತರುವುದು. ಹೊರಗಿನ ಆಧುನಿಕ ತಂತ್ರಜ್ಞಾನವು ನಮ್ಮದೆಂಬುದರ ಬಗ್ಗೆ, ನಮ್ಮ ಅನುಭವದ ಬಗ್ಗೆ, ಅಭಿರುಚಿ ಮತ್ತು ರುಚಿಯ ಬಗ್ಗೆ, ನಮ್ಮ ಕಲಾವಿನ್ಯಾಸದ ಬಗ್ಗೆ ಒಂದು ಬಗೆಯ ಮರವೆ ಅಥವಾ ವಿಸ್ಮೃತಿಯನ್ನು ಉಂಟು ಮಾಡಿದೆ. ನಮ್ಮನ್ನು ನಾವು ತಿರಸ್ಕರಿಸಿಕೊಂಡು ಅನ್ಯವನ್ನು ಆಪ್ಯಾಯಮಾನವಾಗುವಂತೆ ಮಾಡಿದೆ. ಆಧುನಿಕತೆ ಅಪರಾಧವಲ್ಲ; ಅದೂ ಒಂದು ಬಗೆಯ ಶೋಧನೆ ಹಾಗೂ ಜೀವನ ಕ್ರಮ. ಅದು ಯೂರೋಕೇಂದ್ರಿತ ಜ್ಞಾನ ಪದ್ಧತಿ. ಅಂಥ ಜೀವನಕ್ರಮಗಳು ಹಾಗೂ ಜ್ಞಾನ ಪದ್ಧತಿಗಳು ಹಲವಾರು

ಶತಮಾನಗಳಿಂದ ಉಳಿದುಬಂದಿವೆ. ನಮ್ಮ ಭಾರತ ಹಾಗೂ ಕರ್ನಾಟಕದಲ್ಲೂ ಅಂಥದೊಂದು ಪಾರಂಪರಿಕ ಜ್ಞಾನ ಸಬಲತೆ ಇದೆ. ಅದನ್ನು ನಾವೀಗ ಕಂಡುಕೊಳ್ಳಬೇಕು ಎಂಬುದರ ಉದ್ದೇಶವೆ ಆದಿ ದಿನೋತ್ಸವ ಕಾರ್ಯಕ್ರಮ. ನಮ್ಮ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಇಂಥದೊಂದು ಪ್ರದರ್ಶನ ಏರ್ಪಡಿಸಬೇಕೆಂಬ ಅಪೇಕ್ಷೆ ನಮ್ಮದು.

ಮೊದಲಾಗಿ ನಮ್ಮ ರಾಜಧಾನಿ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ಏರ್ಪಡಿಸಬೇಕೆಂಬುದು ನಮ್ಮ ಆಲೋಚನೆ. ರಾಜಧಾನಿಯಲ್ಲಿ ಏಕೆಂದರೆ : ಇಲ್ಲಿಂದ ಇಂಥ ಹೊಸ ಚಿಂತನೆ ಹೊರಟರೆ ಕರ್ನಾಟಕದ ಬೇರೆ ಬೇರೆ ಕೇಂದ್ರಗಳು ಇದನ್ನು ಗಮನಿಸುತ್ತವೆ, ಗೌರವಿಸುತ್ತವೆ ಹಾಗೂ ಸ್ವೀಕರಿಸುತ್ತವೆ. ಬೆಂಗಳೂರು ಈಗ ರಾಜಕೀಯ ರಾಜಧಾನಿ ಮಾತ್ರವಲ್ಲ ನಾಗರೀಕತೆಯ ರಾಜಧಾನಿ, ಹೈಟೆಕ್ ಎಂಬ ಇಲ್ಲಿಯ ತಂತ್ರಜ್ಞಾನ ನಮ್ಮ ಪರಂಪರೆಯ ತಂತ್ರಜ್ಞಾನವನ್ನು ಗಮನಿಸಲಿ ಎಂಬ ಉದ್ದೇಶವೂ ನಮಗಿದೆ.

ಜಾಗತೀಕರಣದ ಸಂದರ್ಭದಲ್ಲಿ ಸ್ಥಳೀಯ ಸರ್ಕಾರಗಳು ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸುವ ಸ್ಥಿತಿಯಲ್ಲಿ ಇಲ್ಲ. ಬಹುತೇಕ ವಿದ್ಯಾವಂತರು ಸ್ವಂತ ಉದ್ಯೋಗಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಆದಕಾರಣ ನಮ್ಮ ಸಂಪನ್ಮೂಲಗಳನ್ನು ಹುಡುಕಿಕೊಂಡು ಅವುಗಳ ಅಭಿವೃದ್ಧಿಗೆ ಹಾಗೂ ಮಾರುಕಟ್ಟೆಗೆ ಪ್ರಯತ್ನಿಸಬೇಕಾಗುವುದು. ಈಗ ಹೊಸ ಉದ್ಯೋಗಗಳನ್ನು ಕಂಡುಕೊಳ್ಳಲು ಜಾನಪದ ಜ್ಞಾನ-ಸಂಪತ್ತು ಬಹುದೊಡ್ಡ ಸಂಪನ್ಮೂಲ. ಅದನ್ನು ತೆರೆದಿಡುವುದೇ ಆದಿ ದಿನೋತ್ಸವ ಕಾರ್ಯಕ್ರಮದ ಉದ್ದೇಶ.

ಪ್ರತಿಯೊಂದು ಜಿಲ್ಲಾಡಳಿತದ ಸಹಕಾರ ಹಾಗೂ ನೆರವಿನೊಂದಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇಂಥ ಪ್ರದರ್ಶನಗಳನ್ನು ಏರ್ಪಡಿಸುತ್ತದೆ. ಈ ಉತ್ಸವಕ್ಕೆ ಪಾರಂಪರಿಕ ಜ್ಞಾನದ ತಜ್ಞರನ್ನಲ್ಲದೆ ಕೈಗಾರಿಕೋದ್ಯಮಿಗಳು, ಸಂಶೋಧನಾ ವಿಜ್ಞಾನಿಗಳು, ವಿಚಾರವಂತರು, ಧರ್ಮ ಸಮನ್ವಯಕಾರರು ಹಾಗೂ ಬೇರೆ ಬೇರೆ ಕ್ಷೇತ್ರದ ಗಣ್ಯರನ್ನು ಕರೆಸಿ ಅವರಿಂದ ಮಾರ್ಗದರ್ಶನ ಪಡೆಯಲಾಗುವುದು.

ಮಾನವನ ಸಾಂಸ್ಕೃತಿಕ ಶೋಧ ಮತ್ತು ವಿಜ್ಞಾನ ಶೋಧದ ಜೊತೆಗೆ ಪರಿಸರ ಸಂರಕ್ಷಣೆಯ ಸಂಗತಿಗಳನ್ನು ಆ ಮೂಲಕ ಮಾನವ ಜೀವನವನ್ನು ಸಹ್ಯ ಹಾಗೂ

ದೀರ್ಘಕಾಲೀನ ಮಾಡುವ ವಿಚಾರಗಳನ್ನು ಮಂಡಿಸಲಾಗುವುದು. ಈ ಪ್ರದರ್ಶನದ ಜೊತೆಗೆ ಪಾರಂಪರಿಕ ಜ್ಞಾನದ ಪ್ರಸ್ತುತತೆ ಕುರಿತು ಚಿಂತನ ಗೋಷ್ಠಿಗಳನ್ನು ಇಟ್ಟುಕೊಳ್ಳಲಾಗುವುದು.

ಪಾರಂಪರಿಕ ಜ್ಞಾನದ ಪ್ರದರ್ಶನ, ಅಭಿವೃದ್ಧಿ ಹಾಗೂ ಉದ್ಯೋಗ ಸೃಷ್ಟಿಯ ಹೊಸ ಸಾಧ್ಯತೆಗಳನ್ನು ಹುಡುಕುವ ಈ ಕಾರ್ಯಕ್ರಮಕ್ಕೆ ಸರ್ಕಾರವು ವಿಶೇಷ ಧನಸಹಾಯ ನೀಡಬೇಕೆಂದು ಕೋರಲಾಗುವುದು. ಜಾನಪದ ಎಂಬುದು ಕೇವಲ ಮನರಂಜನೆ, ಕಲಾ ಉತ್ಸವ, ಕಲಾವಿದರ ಮೆರವಣಿಗೆ ಎಂಬ ಸೀಮಿತ ಅಭಿಪ್ರಾಯದಿಂದ ಜಾನಪದವನ್ನು ವಾಸ್ತವ-ವಿಶಾಲ ಜಗತ್ತಿನ ಕಡೆಗೆ ಕೊಂಡೊಯ್ಯುವುದು ಜಾನಪದ ಅಕಾಡೆಮಿಯ ಕರ್ತವ್ಯವಾಗಿದೆ ಎಂಬುದನ್ನು ಮಂಡಿಸಲಾಗುವುದು.

ಆಧುನಿಕ ಜ್ಞಾನ-ವಿಜ್ಞಾನದ ಜೊತೆಗೆ ಪಾರಂಪರಿಕ ಜ್ಞಾನ-ವಿಜ್ಞಾನವನ್ನು ಅಭಿವೃದ್ಧಿಪಡಿಸಿ ಜೋಡಿಸುವುದು ಮತ್ತು ಆ ಮೂಲಕ ಹೊಸ ಉದ್ಯೋಗ ಸೃಷ್ಟಿಗೆ ಅನುವು ಮಾಡಿಕೊಡುವುದು ಈ ಕಾಠ್ಯಕ್ರಮದ ಪರಮ ಉದ್ದೇಶವಾಗಿದೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಈ ದೇಶ ಜಾತಿ-ಮತ-ಧರ್ಮಗಳ ತಾರತಮ್ಯ ಇಟ್ಟುಕೊಂಡೂ ರಕ್ತಪಾತವಿಲ್ಲದೆ ಉಳಿದು ಬಂದಿರುವುದಕ್ಕೆ ಜನಪದ ಸಂಸ್ಕೃತಿಯೇ ಕಾರಣ. ಜನಪದ ಸಂಸ್ಕೃತಿಗೆ ಮತ ಎಂಬುದು ಒಂದು ಅಭಿಪ್ರಾಯವೇ ಹೊರತು, ಉನ್ಮಾದ ಅಥವಾ ಪರರ ಮೇಲೆ ಬಳಸುವ ಆಯುಧ ಅಲ್ಲ, ಆ ಕಾರಣದಿಂದ ಬಹುದೊಡ್ಡ ಜಾತಿ ಧರ್ಮಗಳ ಕೆಳಗೆ ಬಹಳ ಶತಮಾನಗಳಿಂದ ಬಹಳ ಜನಪದಗಳು ಹಾಗೂ ಸಂಸ್ಕೃತಿಗಳು ಹುಟ್ಟಿ-ಬೆಳೆದು-ಉಳಿದುಕೊಂಡಿವೆ. ದೊಡ್ಡ ಧರ್ಮಗಳು ಹುಟ್ಟಿ, ಭಾರಿ ಯುದ್ಧ ಮಾಡಿ, ಸಾಮ್ರಾಜ್ಯ ಕಟ್ಟಿ ಗೆದ್ದಿವೆ ಹಾಗೂ ಸೋತಿವೆ, ಕೆಲವೊಮ್ಮೆ ಮಣ್ಣುಗೂಡಿವೆ. ನಮ್ಮ ಜನಪದ ಸಮಾಜದ ತೆಂಡೆ, ಬಳಿ, ಗೆದ್ದೆ, ಕುಲ, ದಾಯಾದಿ, ವಾವೆ, ಕೋವೆ...... ಎಂಬ ವ್ಯವಸ್ಥೆಗಳು ಸಣ್ಣ ಪುಟ್ಟ ಜಗಳಗಳ ಮಧ್ಯೆ ನಿರಂತರ ಮಾನವ ಸಂಬಂಧವನ್ನು ಉಳಿಸಿಕೊಂಡು ಬಂದಿವೆ. ಈ ಜನಪದ ಧರ್ಮಗಳ ಮೂಲ ತಿರುಳು ಸೌಹಾರ್ದ, ನೀ ನನಗಿದ್ದರೆ ನಾ ನಿನಗೆ 'ನೀನು ಬದುಕು ಮತ್ತು ಬೇರೆಯವರನ್ನೂ ಬದುಕಲು ಬಿಡು' ಎಂಬುದೇ ಅವುಗಳ ಪರಮೋದ್ದೇಶ ಮತ್ತು ಪರಮ ಶ್ರೇಷ್ಠ ಮೌಲ್ಯ. ಇಂಥ ನಿತ್ಯ ಸತ್ಯಗಳನ್ನು ಪ್ರತಿಯೊಂದು ಸಣ್ಣ ಪುಟ್ಟ ಮತ್ತು ದೊಡ್ಡ ಜನಪದಗಳು ಉಳಿಸಿಕೊಂಡು ಬಂದಿವೆ.

ಈ ಹೊತ್ತಿನ ಸಂದರ್ಭದಲ್ಲಿ ನಾವು ಸಣ್ಣ ಕಾರಣಕ್ಕೆ ಬೇರೆಯಾಗುವ, ದೂರನಿಲ್ಲುವ, ಜಗಳವಾಡುವ ಅಥವಾ ಕತ್ತಿಮಸೆಯುವ ಆತಂಕಕ್ಕೆ ಒಳಗಾಗಿದ್ದೇವೆ. ಈಗ ವಣನೂರು, ಹುಬ್ಬಳ್ಳಿ ಮುಂತಾದ ಕಡೆ ನಡೆದ ಘಟನೆಗಳು, ಈ ಹಿಂದೆ ಇಂಥದೇ ಘಟನೆಗಳು ನಮ್ಮ ರಾಜ್ಯದ ಶಾಂತಿ-ಸೌಹಾರ್ದ ಬದುಕಿಗೆ ಭಂಗ ತಂದಿವೆ. ಈ ಥರದ ಘಟನೆಗಳನ್ನು ತಪ್ಪಿಸುವ ಕಾರಣಕ್ಕೆ ಮೊದಲೆ ತಿಳುವಳಿಕೆ ಮೂಡಿಸುವುದು

ಅತ್ಯಗತ್ಯವಾಗಿದೆ. ಸದಾ ಬೇರೆಯಾಗಲು, ಭಿನ್ನವಾಗಲು ಅಥವಾ ಕಲಹಕ್ಕೆ ನಿಲ್ಲಲು ಹೊರಡುವ ಇಂಥ ಜನಕ್ಕೆ ನಮ್ಮ ಜನಪದಗಳ ಸೌಹಾರ್ದ ತತ್ತ್ವ ಅತ್ಯಗತ್ಯವಾಗಿದೆ. ನಾವು ಒಟ್ಟುಗೂಡಿ ಬದುಕೋಣ' ಎಂಬುದನ್ನು ತಿಳಿಯ ಹೇಳಬೇಕು.

ಈ ಕಾರಣದಿಂದ ಪ್ರತಿಯೊಂದು ಜನವರ್ಗದಲ್ಲಿ ಇರುವ ಶ್ರೇಷ್ಠ ಮೌಲ್ಯಗಳೆಂಬ ವಿಶಿಷ್ಟ ಅಂಶಗಳನ್ನು ಗುರುತಿಸಲಾಗುವುದು. ಜೊತೆ ಜೊತೆಯಲ್ಲಿಯೆ ಎರಡೂ ಸಮಾಜಗಳಲ್ಲಿ ಸಮಾನವಾಗಿರುವ ಆಶಯಗಳನ್ನು ಪರಿಶೀಲಿಸಲಾಗುವುದು. ವಿಶಿಷ್ಟ ಹಾಗೂ ಸಮಾನ ಅಂಶಗಳೆರಡೂ ಮುಖ್ಯ. ಅವು ಇರುವುದರಿಂದಲೇ ಸಮಾಜ ಇರುತ್ತಾ, ಬದಲಾಗುತ್ತಾ ಹೋಗುತ್ತದೆ ಎಂಬುದನ್ನು ಹೇಳಬೇಕಾಗುತ್ತದೆ. ನಿಮ್ಮಲ್ಲಿರುವ ವಿಶಿಷ್ಟ ಸಂಸ್ಕೃತಿ ಅಂಶಗಳನ್ನು ಉಳಿಸಿಕೊಳ್ಳಿ, ಇತರರಲ್ಲಿರುವ ವಿಶಿಷ್ಟ ಸಾಂಸ್ಕೃತಿಕ ಅಂಶಗಳನ್ನು ಉಳಿಸಲು ಬಿಡಿ. ಹಾಗೂ ಇಬ್ಬರಿಗೂ ಸಮಾನವಾಗಿರುವ ಅಂಶಗಳಿಂದ ಆ ಮೂಲಕ ಜನರ ಬದುಕನ್ನು ಸಹ್ಯಗೊಳಿಸುವುದು ಮತ್ತು ಸೌಹಾರ್ದಯುತವಾಗಿ ನಡೆದು ಹೋಗುವುದನ್ನು ಪ್ರೇರೇಪಿಸಲಾಗುವುದು. ಈ ಕಾರಣಕ್ಕಾಗಿ ಜಾನಪದ ಸೌಹಾರ್ದ ಎಂಬ ಕಾರ್ಯಕ್ರಮಗಳನ್ನು ಮೂರು ವರ್ಷಗಳಲ್ಲಿ ವಿವಿಧ ಸ್ಥಳಗಳಲ್ಲಿ ಕೆಳಕಂಡ ಐದು ಘಟ್ಟಗಳಲ್ಲಿ ನಡೆಸಲಾಗುವುದು.

**ಭಾಷಿಕ ಸಂಸ್ಕೃತಿಗಳು**

**ಅಂತರ ರಾಜ್ಯ**

**ಘಟ್ಟ ೧**

೧) ಕನ್ನಡ - ತೆಲುಗು ಜಾನಪದ ಸೌಹಾರ್ದ

೨) ಮಲಯಾಳಂ - ಕನ್ನಡ ಜಾನಪದ ಸೌಹಾರ್ದ

೩) ಕನ್ನಡ - ತಮಿಳು ಜಾನಪದ ಸೌಹಾರ್ದ

೪) ಮರಾಠಿ - ಕನ್ನಡ ಜಾನಪದ ಸೌಹಾರ್ದ

**ಅಂತರ್ ಸಂಸ್ಕೃತಿ ವರ್ಗಗಳು**

**ಒಳದೇಶೀಯ**

**ಘಟ್ಟ ೨**

೧) ಕನ್ನಡ - ಉರ್ದು ಜಾನಪದ ಸೌಹಾರ್ದ

೨) ಹಿಂದಿ - ಕನ್ನಡ ಜಾನಪದ ಸೌಹಾರ್ದ

೩) ಕನ್ನಡ - ಸಂಸ್ಕೃತ ಜಾನಪದ ಸೌಹಾರ್ದ

೪) ತುಳು - ಕನ್ನಡ ಜಾನಪದ ಸೌಹಾರ್ದ

೫) ಕೊಡವ - ಕನ್ನಡ ಜಾನಪದ ಸೌಹಾರ್ದ

**ಪಂಥೀಯ ಜನವರ್ಗಗಳು**

**ಒಳಪಂಥೀಯ**

**ಘಟ್ಟ ೩**

೧) ವೈದಿಕ - ದ್ರಾವಿಡ ಜಾನಪದ ಸೌಹಾರ್ದ

೨) ಶೈವ - ವೀರಶೈವ ಜಾನಪದ ಸೌಹಾರ್ದ

೩) ಬ್ರಾಹ್ಮಣ - ಶೂದ್ರ ಜಾನಪದ ಸೌಹಾರ್ದ

೪) ಬ್ರಾಹ್ಮಣ - ಪಂಚಮ ಜಾನಪದ ಸೌಹಾರ್ದ, ಅಜ೩೧.೮

೫) ಪಂಚಮ - ಶೂದ್ರ ಜಾನಪದ ಸೌಹಾರ್ದ

**ತಳ ಜನಾಂಗ**

**ಘಟ್ಟ ೪**

೧) ಕೃಷಿಕ - ಕುಶಲಕರ್ಮಿ ಜಾನಪದ ಸೌಹಾರ್ದ

೨) ಕೃಷಿಕ - ಕೂಲಿ ಜಾನಪದ ಸೌಹಾರ್ದ

೩) ಕುಶಲಕರ್ಮಿ - ಕೂಲಿ ಜಾನಪದ ಸೌಹಾರ್ದ

೪) ವೃತ್ತಿ - ಅಲೆಮಾರಿ ಜಾನಪದ ಸೌಹಾರ್ದ

೫) ಶಿಷ್ಟ - ಅಪರಾಧಿ ಜನವರ್ಗದ ಸೌಹಾರ್ದ (ಉದಾ: ಕಳ್ಳರು, ಕೊರವರು)

## ಬುಡಕಟ್ಟು ಜನಾಂಗ

**ಘಟ್ಟ ೫**

೧) ವೃತ್ತಿ - ಬುಡಕಟ್ಟು ಜನರ ಜಾನಪದ ಸೌಹಾರ್ದ

೨) ಬುಡಕಟ್ಟು - ಅಪರಾಧಿ ಬುಡಕಟ್ಟು ಜಾನಪದ ಸೌಹಾರ್ದ



ಪುರದ ಪುಣ್ಯ

೩) ಅಲೆಮಾರಿ - ಬುಡಕಟ್ಟು ಜಾನಪದ ಸೌಹಾರ್ದ

೪) ಅಂತರ ಬುಡಕಟ್ಟು ಜಾನಪದ ಸೌಹಾರ್ದ

೫) ಅಂತರ್ ರಾಜ್ಯ-ರಾಷ್ಟ್ರ ಬುಡಕಟ್ಟು ಜಾನಪದ ಸೌಹಾರ್ದ

ಈ ಕಾರ್ಯಕ್ರಮ ವಿಶಾಲವಾದ ಅರ್ಥದಲ್ಲಿ ಸರ್ಕಾರದ್ದೂ ಹೌದು. ಪ್ರಜೆಗಳು ಸೌಹಾರ್ದದಿಂದ ಬದುಕಲು ಬೇಕಾದ ಅಂಶಗಳನ್ನು ಈ ಚರ್ಚೆ, ಸಂವಾದ ಹಾಗೂ ಗೋಷ್ಠಿಗಳು ಗುರುತಿಸುತ್ತವೆ ಮತ್ತು ಪ್ರೇರೇಪಿಸುತ್ತವೆ.

**ಕಾರ್ಯಕ್ರಮ ಯೋಜನೆ :**

ಈಗಾಗಲೇ ಘರ್ಷಣೆ, ಗಲಭೆ ಅಶಾಂತಿಯಿಂದ ಕೂಡಿರುವ ಸ್ಥಳಗಳಲ್ಲಿ ಎಲ್ಲಾ ಜನವರ್ಗಗಳ ಸಹಕಾರದಿಂದ, ಅದರಲ್ಲೂ ಪ್ರತಿಯೊಂದು ವರ್ಗಗಳ ಮುಖಂಡರ ನೆರವು ಹಾಗೂ ಸಹಕಾರದಿಂದ ಸ್ಥಳೀಯವಾಗಿ ವಿಚಾರ ಮಂಡನೆ, ಸಂವಾದ, ಮಾತುಕತೆ ಮೂಲಕ ಅವರವರಲ್ಲಿ ಇರುವ ಮಹತ್ವದ ಸಾಂಸ್ಕೃತಿಕ ಅಂಶಗಳನ್ನು ಎತ್ತಿ ತೋರಿಸಿ, ಅವರ ಪರಂಪರೆ, ಚರಿತ್ರೆ ಹಾಗೂ ಸಂಸ್ಕೃತಿಯ ಬಗ್ಗೆ ಅಭಿಮಾನ, ಸಂತೋಷ ಉಂಟಾಗುವಂತೆ ಮಾಡುವುದು. ಇತರರಲ್ಲೂ ಇಂಥವು ಇರುವುದನ್ನು ತೋರಿಸಿಕೊಡುವುದು. ಕೊನೆಯಲ್ಲಿ ಒಂದು ಸೌಹಾರ್ದ ಅಥವಾ ಸ್ನೇಹಕೂಟ ಏರ್ಪಡಿಸಿ ಸಂತೋಷವನ್ನು ಹಂಚಿಕೊಳ್ಳುವುದು.

**ಲೇಖನಗಳ ಸಂದರ್ಭ**

---

**೧. ಸಂಸ್ಕೃತಿ ಸೋರುತಿದೆ**

ಹಾಸನ ಜಿಲ್ಲಾ ಸಾಂಸ್ಕೃತಿಕ ವೇದಿಕೆಯಲ್ಲಿ ೨೦೦೧.

**೨. ನಮ್ಮ ಹಣತೆಗಳೇಕೆ ಉರಿಯುತ್ತಿಲ್ಲ**

ಜಾನಪದ ಗ್ರಹಿಕೆಗೆ ಮುನ್ನುಡಿ, ೨೦೦೪.

**೩.ತಾವಿನಿಂದ**

ಜಾನಪದ ಗ್ರಹಿಕೆಯಲ್ಲಿ ನನ್ನ ಜಾನಪದ ಗ್ರಹಿಕೆಯಾಗಿದೆ, ೨೦೦೪.

**೪. ಪುರದ ಪುಣ್ಯ**

ಜಾನಪದ ಜ್ಞಾನ-ವಿಜ್ಞಾನ ಶೋಧ ಕೃತಿಗಳಿಗೆ ಮುನ್ನುಡಿಯಾಗಿ, ೨೦೦೩.

**೫.ಬಹು ಸಂಸ್ಕೃತಿಯ ಚಿಂತನ ನೆಲೆಗಳು**

ಚಿತ್ರದುರ್ಗ ಬೃಹನ್ಮಠದೊಡನೆ ಆಯೋಜಿಸಿದ ಕಾರ್ಯಕ್ರಮದಲ್ಲಿ ೨೦೦೩.

**೬.ಅಲೆಮಾರಿಗಳು : ಇರವು ಮತ್ತು ಅರಿವು**

ಬೀದರ್‌ನಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಏರ್ಪಡಿಸಿದ ದೇಶೀ ಸಮ್ಮೇಳನದಲ್ಲಿ ಆಶಯ ಭಾಷಣ.

**೭.ಜನಪದ ನಾಯಕತ್ವ**

ನಯನ ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣ, ೨೦೦೩.

ಪುರದ ಪುಣ್ಯ

**೮. ಜನರಿಗಾಗಿ ಪಾನೀಯ**

ಹೊನ್ನಾವರದಲ್ಲಿ ನಡೆದ ಜನಪದ ಪಾನೀಯಗಳು ಕಮ್ಮಟದ ಆಶಯ ಭಾಷಣ, ೨೦೦೧.

**೯.ಆಧುನಿಕ ಸಂದರ್ಭದಲ್ಲಿ ಜಾನಪದ ದೇವತೆಗಳ ಅನಿವಾರ್ಯತೆ**

ಚಾಮರಾಜನಗರ ವಿಚಾರ ಸಂಕಿರಣದಲ್ಲಿ ಆಶಯ ಭಾಷಣ, ೨೦೦೪.

**೧೦. ನಮ್ಮ ಮನೆಯೊಳಗೆ ಜ್ಞಾನದ ಸದ್ದು ಕೇಳುತ್ತಿದೆ**

ಚಿತ್ರದುರ್ಗದಲ್ಲಿ ನಡೆದ 'ಜಾತಿ, ಮತ ಮತ್ತು ಧರ್ಮದ ಹಿನ್ನೆಲೆಯಲ್ಲಿ ಜನಪದ ಮಹಾಕಾವ್ಯದ ನಾಯಕರು' ಎಂಬ ವಿಚಾರ ಸಂಕಿರಣದ ಆಶಯ ಭಾಷಣ, ೨೦೦೪.

**೧೧. ಮಾನಸಿಕ ಸ್ವಾಸ್ಥ್ಯ ಮತ್ತು ಜನಪದ ಸಂಗೀತ**

ಆಕಾಶವಾಣಿ ಬೆಂಗಳೂರಿನಲ್ಲಿ, ೨೦೦೩.

**೧೨. ನೋವು ಆದಾಗ 'ಅಮ್ಮಾ'**

ದಾವಣಗೆರೆಯಲ್ಲಿ ನಡೆದ ಅಮ್ಮ ಮತ್ತು ಯುದ್ಧ ವಿಚಾರ ಸಂಕಿರಣದಲ್ಲಿ ಉದ್ಘಾಟನಾ ಭಾಷಣ, ೨೦೦೪.

**೧೩. ಒಂದೆ ಚಿತ್ತದಿಂ ನೆನೆದು**

ಜಾನಪದ ತಲೆಮಾರು ಕೃತಿಗಳಿಗೆ ಮುನ್ನುಡಿ, ೨೦೦೩.

**೧೪. ನಮ್ಮೂರು**

ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರಕ್ಕೆ ಜಾನಪದ ವಿಭಾಗಕ್ಕೆ ತಯಾರಿಸಿಕೊಟ್ಟ ಯೋಜನೆ, ೨೦೦೪.

**೧೫. ಜನಪದ ಕಾವ್ಯ ಮೀಮಾಂಸೆ**

ಶಿವಮೊಗ್ಗದಲ್ಲಿ ನಡೆದ ಜನಪದ ಕಾವ್ಯ ಮೀಮಾಂಸೆ ವಿಚಾರ ಸಂಕಿರಣದಲ್ಲಿ ಆಶಯ ನುಡಿ, ೨೦೦೩,

**೧೬. ಸಿನಿಮಾ ಮತ್ತು ಜಾನಪದ ಪರಿಕಲ್ಪನೆ**

ಬೆಂಗಳೂರಿನ ನಯನ ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಆರಂಭಿಕ ನುಡಿ, ೨೦೦೨.

೧೭. ನಕಲಿ ಜನಪದ ಗೀತೆಗಳ ಕ್ಯಾಸೆಟ್ ಸಂವಾದ

ನಯನದಲ್ಲಿ ನಡೆದ ಈ ವರ್ಷದ ಮೊದಲ ಕಾರ್ಯಕ್ರಮದಲ್ಲಿ ಆರಂಭಿಕ ನುಡಿ, ೨೦೦೧.





**೧೮. ಜಾನಪದ ನಮ್ಮೊಳಗೇ ಇದೆ**

**೧೯. ಜಾನಪದವೆಂಬುದು ಮೆರವಣಿಗೆಯೆ**

ಹಾವೇರಿಯಲ್ಲಿ ನಡೆದ ಬಯಲಾಟ ಕಮ್ಮಟದ ಆಶಯ ನುಡಿ, ೨೦೦೧.

**೨೦. ಬಹು ಸಂಸ್ಕೃತಿ ಉತ್ಸವ ಏಕೆ – ಹೇಗೆ ?**

ಬಸವಕೇಂದ್ರ ಮುರುಘಾಮಠದಲ್ಲಿ ನಡೆದ ಕಾರ್ಯಕ್ರಮ, ೨೦೦೨.

**೨೧. ನಮ್ಮ ಮೂರು ವರ್ಷದ ಜಾನಪದ ನೀತಿ**

ಜಾನಪದ ಅಕಾಡೆಮಿಗಾಗಿ ತಯಾರಿಸಿದ ನೀತಿ-ನಿರೂಪಣೆ, ೨೦೦೪.

**೨೨. ಜಾನಪದ - ಜ್ಞಾನ - ವಿಜ್ಞಾನ ಪ್ರಶಸ್ತಿಗಳ ಕುರಿತು**

ಜಾನಪದ ಕಲಾಪ್ರಶಸ್ತಿಗಳು ಎಂದಿದ್ದ ಪರಿಕಲ್ಪನೆಯನ್ನು ಬದಲಾಯಿಸಿದಾಗ, ೨೦೦೨.

**೨೩. ನೀವೇನ ಹೇಳುವಿರಿ**

ಜಾನಪದ ಸಮಾಚಾರಕ್ಕೆ ಬರೆದ ನುಡಿ, ೨೦೦೨.

**೨೪. ದೇವರೇ... !!! ನಮಗೊಂದು ಒಳ್ಳೆಯ ಮನಸ್ಸು ಕೊಡು**

ಜಾನಪದ ಪ್ರಶಸ್ತಿ ಪುರಸ್ಕೃತರ ಪುಸ್ತಕಕ್ಕೆ ಬರೆದ ಮಾತುಗಳು, ೨೦೦೦.

**೧೫. ಹಚ್ಚೆ: ಕಲೆ ಮತ್ತು ಉದ್ಯೋಗ**

ಜಾನಪದ ಲೋಕ ಸಂಸ್ಥೆಯಲ್ಲಿ ನಡೆದ ಹಚ್ಚೆ ಕಮ್ಮಟ ಕುರಿತು, ೨೦೦೧.

**೧೬. ಆದಿ ದಿನೋತ್ಸವ**

ಶ್ರೀಮತಿ ಮೋಟಮ್ಮ ಅವರು ೧೯೯೯ಕ್ಕೆ ಮೊದಲು ಶಾಸಕಿ ಅಲ್ಲದಿದ್ದ ಸಂದರ್ಭದಲ್ಲಿ ನಡೆಸಿದ ಉತ್ಸವದ ಕಾರ್ಯ ಯೋಜನೆಯಿಂದ ಪ್ರೇರಿತವಾದ ಕಾರ್ಯಯೋಜನೆಯ ಆಶಯ.

**೧೭. ಪ್ರಾದೇಶಿಕ ಚಿಂತನೆ**

೨೦೦೨ ಗುಲಬರ್ಗಾದಲ್ಲಿ ನಡೆದ ಚಿಂತನ ಗೋಷ್ಠಿಯಲ್ಲಿ ಇಟ್ಟ ವಿಚಾರ.

**೧೮. ಜಾನಪದ ಸೌಹಾರ್ದ**

೨೦೦೨ ಸರ್ಕಾರಕ್ಕೆ ಸಲ್ಲಿಸಿದ್ದ ವಿನೂತನ ಕಾರ್ಯಯೋಜನೆಯ ಚಿಕ್ಕ ದಾಖಲೆ.

ಜಾನಪದ ಸಮಜೀವನ ಸಮರಸ ಜೀವನ; ಸರ್ವರಿಗೂ ಸಮಾನವಾದ ಸಾಮಾನ್ಯವೆಂಬ ಸಾರ್ವತ್ರಿಕ ಜೀವನ.

ನಮ್ಮ ನಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿ ನಾವು ಬೀದಿಗೆ ಬಿದ್ದಿದ್ದೇವೆ. ಒಳಕ್ಕೆ ಸರಿದರೆ; ಜಾತಿ ಎತ್ತಿ ಎದೆಗೆ ಒದೆಯುತ್ತಿದೆ. ಅಸ್ಪೃಶ್ಯತೆ ಸೃಜನಶೀಲತೆಯನ್ನು ಕೊಂದು ಕೂಗಿದೆ. ಎಲ್ಲರೆದೆಯಲ್ಲೂ ಅನುಮಾನ: ಈ ಪಕ್ಕದವನನ್ನು ನಂಬಬಹುದೆ ? ಆವರು - ಇವರಲ್ಲಿ ನಮ್ಮವರು ಯಾರಿದ್ದಾರೆ ? ಬಿಡುಗಡೆಗೆ ಒಳದಾರಿಗಳು ಇಲ್ಲ. ಆಳದ ಪ್ರೀತಿಯೂ ಇಲ್ಲ. ಭೌತವಿಜ್ಞಾನ ನಮ್ಮನ್ನು ಹೊರಗಿನಿಂದ ಒಡೆದರೆ, ಜಾತಿ ಜ್ಞಾನ ನಮ್ಮನ್ನು ಒಳಗಿನಿಂದ ಒಡೆದಿದೆ. ನಮ್ಮಲ್ಲಿ ಮನುಷ್ಯರು ಇಲ್ಲವಾಗುತ್ತಿದ್ದಾರೆ. ನಮ್ಮದೆಂಬ ಸಮಾಜ ಅಸ್ತಿತ್ವಕ್ಕೆ ಕೂಡುತ್ತಿಲ್ಲ. ನಮ್ಮದೆಂಬ ಸಂಸ್ಕೃತಿ ನಮ್ಮನ್ನು ಕಾಡುತ್ತಿಲ್ಲ. ಅನ್ಯದ ಮಾತೇ ನಮ್ಮ ಮಾತು, ಅನ್ಯದ ಜ್ಞಾನವೆ ನಮ್ಮ ಜ್ಞಾನವಾಗಿ ನಮ್ಮ ಹಣತೆಗಳನ್ನು ಹತ್ತಿಸಿಕೊಳ್ಳಲಾಗಿಲ್ಲವಲ್ಲ ! ನಮ್ಮ ಪುಣ್ಯ ಏನೆಂದು ಹೇಳಿಕೊಳ್ಳೋಣ ?

ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - 560 002